ಅನುಭಾವ ಮಂಟಪ – ಚಾರಿತ್ರಿಕ ನೆಲೆಗಳು

ಡಾ. ಬಸವರಾಜ ಬಲ್ಲೂರ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮

ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಅನುಭಾವ ಮಂಟಪ;ಚಾರಿತ್ರಿಕ ನೆಲೆಗಳು

ಡಾ. ಬಸವರಾಜ ಬಲ್ಲೂರ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

ANUBHAVA MANTAPA ;CHARITRIKA NELEGALU
by : **Dr. Basavaraja Ballura**
Published by : **Kannada Sahitya Parishat**
Pampa Mahakavi Road, Chamarajapet, Bangalore - 560018
Pages : viii + 144 Price : Rs. **45=00 : 2006**

ಪ್ರಥಮ ಮುದ್ರಣ : ೨೦೦೬
ಪ್ರತಿಗಳು : ೧೫೦೦
ಬೆಲೆ : ನಲವತ್ತೈದು ರೂಪಾಯಿಗಳು

ಬೀದರಿನಲ್ಲಿ ನಡೆದ ಅಖಿಲ ಭಾರತ ೭೨ನೇ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಕಟಣೆ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಖಿಲ ಭಾರತ ೭೨ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಬೀದರ
ಸ್ವಾಗತ ಸಮಿತಿ

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ, ಅಧ್ಯಕ್ಷರು
ಶ್ರೀ ಮೆರಾಜುದ್ದೀನ ಪಟೇಲ, ಹಿರಿಯ ಉಪಾಧ್ಯಕ್ಷರು.
ಶ್ರೀ ನರಸಿಂಗರಾವ ಸೂರ್ಯವಂಶಿ, ಲೋಕ ಸಭಾ ಸದಸ್ಯರು
ಶ್ರೀ ಬಂಡೆಪ್ಪ ಖಾಶೆಂಪೂರ, ಶಾಸಕರು
ಶ್ರೀ ಮುನೀಶ ಮೌದ್ಗಿಲ್, ಪ್ರಧಾನ ಸಂಚಾಲಕರು
ಶ್ರೀ ಕೆ.ಎಲ್. ಸುಧೀರ, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು
ಶ್ರೀ ಆ್ಯಂಟನಿ ಮೆಂಡೋನ್ಸಾ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ಚೆನ್ನಬಸಪ್ಪ ಹಾಲಹಳ್ಳಿ, ಕೋಶಾಧ್ಯಕ್ಷರು
ಶ್ರೀ ಡಾ. ಜಗನ್ನಾಥ ಹೆಬ್ಬಾಳೆ, ಪ್ರಧಾನ ಕಾರ್ಯದರ್ಶಿಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿ ಸದಸ್ಯರು

ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ), ಬೆಂಗಳೂರು
ಶ್ರೀ ಜರಗನಹಳ್ಳಿ ಶಿವಶಂಕರ್, ಬೆಂಗಳೂರು
ಡಾ. ಎಚ್. ಜಯಮ್ಮ ಕರಿಯಣ್ಣ, ಬೆಂಗಳೂರು
ಶ್ರೀ ಪುಂಡಲೀಕ ಹಾಲಂಬಿ, ಬೆಂಗಳೂರು
ಶ್ರೀ ಶ್ರ.ದೇ ಪಾರ್ಶ್ವನಾಥ, ಬೆಂಗಳೂರು-೫೦.
ಶ್ರೀ ಎಸ್. ರಾಮಲಿಂಗೇಶ್ವರ (ಸಿಸಿರಾ), ಬೆಂಗಳೂರು ಗ್ರಾಮಾಂತರ
ಶ್ರೀ ಎನ್.ಎಸ್. ರಾಮಪ್ರಸಾದ್, ಕೋಲಾರ
ಶ್ರೀ ಆರ್.ಎಸ್. ಸದಾನಂದ, ತುಮಕೂರು
ಶ್ರೀ ಕೆ.ಎಂ. ವೀರೇಶ್, ಚಿತ್ರದುರ್ಗ
ಶ್ರೀ ಎಸ್.ಎಚ್. ಹೂಗಾರ್, ದಾವಣಗೆರೆ
ಶ್ರೀ ಡಿ. ಮಂಜುನಾಥ, ಶಿವಮೊಗ್ಗ
ಶ್ರೀ ಮಾನಸ, ಮೈಸೂರು
ಶ್ರೀ ಮಲೆಯೂರು ಗುರುಸ್ವಾಮಿ, ಮೈಸೂರು
ಶ್ರೀ ಹೆಚ್.ವಿ. ಜಯರಾಂ, ಮಂಡ್ಯ
ಶ್ರೀ ಟಿ.ಪಿ. ರಮೇಶ್, ಕೊಡಗು
ಶ್ರೀ ಎಚ್.ಬಿ. ರಮೇಶ್, ಹಾಸನ

ಶ್ರೀ ಎಚ್. ವಿ. ಶ್ರೀವತ್ಸ ಹುಲಸೆ, ಚಿಕ್ಕಮಗಳೂರು
ಶ್ರೀ ಎಸ್. ಪ್ರದೀಪ ಕಲ್ಕೂರ, ದಕ್ಷಿಣ ಕನ್ನಡ
ಶ್ರೀ ಯು. ಚಂದ್ರಶೇಖರ ಹೊಳ್ಳ, ಉಡುಪಿ
ಶ್ರೀ ಮೋಹನ ಬಸವನಗೌಡ ಪಾಟೀಲ, ಬೆಳಗಾವಿ
ಶ್ರೀ ಬಿ.ಎಂ. ಪಾಟೀಲ, ಬಿಜಾಪುರ
ಶ್ರೀ ವಿಶ್ವನಾಥ ಕಾ. ವಂಶಾಕೃತಮಠ, ಬಾಗಲಕೋಟೆ
ಶ್ರೀ ಮಧು ವೆಂಕಾರೆಡ್ಡಿ, ಧಾರವಾಡ
ಶ್ರೀ ಆ.ಸಿ. ಹಿರೇಮಠ, ಹಾವೇರಿ
ಪ್ರೊ. ಕೆ.ಬಿ. ತಳಗೇರಿ, ಗದಗ
ಶ್ರೀ ರೋಹಿದಾಸ ನಾಯಕ, ಉತ್ತರಕನ್ನಡ
ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ
ಡಾ. ಜಗನ್ನಾಥ ಹೆಬ್ಬಾಳೆ, ಬೀದರ
ಶ್ರೀ ಕ.ಮ. ಪುರದ, ರಾಯಚೂರು
ಶ್ರೀ ಶೇಖರಗೌಡ ಮಾಲಿಪಾಟೀಲ, ಕೊಪ್ಪಳ
ಶ್ರೀ ನಿಷ್ಠಿ ರುದ್ರಪ್ಪ, ಬಳ್ಳಾರಿ
Sri H.B.L. Rao, Navi Mumbai
Sri I.V. Bhatta, Kasaragod
Sri C. Ramaswamy, Chennai
Sri H. Ramachandrappa, Ananthpura
ಧರ್ಮದರ್ಶಿ ಹರಿಕೃಷ್ಣ ಪುನರೂರು, ದಕ್ಷಿಣ ಕನ್ನಡ
ಡಾ. ಕಮಲಾ ಹಂಪನಾ, ಬೆಂಗಳೂರು
ನಿರ್ದೇಶಕರು, ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು
ಶ್ರೀಮತಿ ಭಾನು ಮುಷ್ತಾಕ್, ಹಾಸನ
ಶ್ರೀ ರಫಾಯಲ್ ರಾಜ್, ಬೆಂಗಳೂರು
ಡಾ. ಎಲ್. ಹನುಮಂತಯ್ಯ, ಬೆಂಗಳೂರು
ಡಾ. ಕರೀಗೌಡ ಬೀಚನಹಳ್ಳಿ, ಬಳ್ಳಾರಿ
ಡಾ. ಸಿದ್ಧಲಿಂಗಯ್ಯ, ಬೆಂಗಳೂರು

ಅಧ್ಯಕ್ಷರ ನುಡಿ

ಕಳೆದ ತೊಂಬತ್ತು ವರ್ಷಗಳಿಂದ ನಾಡು-ನುಡಿ-ಸಂಸ್ಕೃತಿಯ ರಕ್ಷಣೆ ಮತ್ತು ವಿಕಾಸಕ್ಕಾಗಿ ಬದ್ಧ ಕಂಕಣವಾಗಿರುವ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ತು. ಪಂಚಕೋಟಿ ಕನ್ನಡಿಗರ ಏಕೈಕ ಪ್ರಾತಿನಿಧಿಕ ಸಂಸ್ಥೆಯಾಗಿರುವ ಪರಿಷತ್ತು ಕನ್ನಡ ಬದುಕಿನ ಬಹುಮುಖೀ ಆಯಾಮಗಳಿಗೆ ಆಲೋಚನೆ- ಅಕ್ಷರ- ಕ್ರಿಯೆಗಳ ಮೂಲಕ ಸ್ಪಂದಿಸುತ್ತಲೇ ಬಂದಿದೆ.

ಪುಸ್ತಕ ಪ್ರಕಟನೆ, ಪರಿಷತ್ತು ನಿರಂತರವಾಗಿ ನಡೆಸಿಕೊಂಡು ಬಂದಿರುವ ಮುಖ್ಯ ಚಟುವಟಿಕೆಗಳಲ್ಲೊಂದು. ಸೃಜನಶೀಲ ಕೃತಿಗಳಲ್ಲದೆ ಸೃಜನೇತರ ವಲಯದ- (ಅಂದರೆ, ವ್ಯಾಕರಣ, ನಿಘಂಟು, ಚರಿತ್ರೆ, ಸಮಾಜ ವಿಜ್ಞಾನ, ಮನೋವಿಜ್ಞಾನ, ಪರಿಶೋಧನೆ, ತತ್ವವಿಚಾರ, ಶಾಸನಶಾಸ್ತ್ರ, ಮಾಹಿತಿ ತಂತ್ರಜ್ಞಾನ, ವಿಮರ್ಶೆ, ಜಾನಪದ, ಸಂಶೋಧನ, ಪತ್ರಿಕೋದ್ಯಮ... ಹೀಗೆ) ಹಲವಾರು ಜ್ಞಾನಕ್ಷೇತ್ರಗಳು ಸಾವಿರಾರು ಕೃತಿಗಳ ರೂಪದಲ್ಲಿ ಕನ್ನಡ ಕುಲಕೋಟಿಯನ್ನು ತಲಪುತ್ತಲೇ ಇವೆ. ಎಲ್ಲ ಬಗೆಯ ಅಭಿವ್ಯಕ್ತಿಗಳಿಗೂ ಕನ್ನಡ ಭಾಷೆಯನ್ನು ಸಿದ್ಧಗೊಳಿಸುವುದು ನಮ್ಮ ಪ್ರಮುಖ ಉದ್ದೇಶ.

ಜನವರಿ ೨೦೦೬ ರಲ್ಲಿ ಬೀದರಿನಲ್ಲಿ ನಡೆಯಲಿರುವ ೭೨ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ, ಸೃಜನೇತರ ಕ್ಷೇತ್ರಗಳಿಗೆ ಸಂಬಂಧಿಸಿದ ೭೨ ಪುಸ್ತಕಗಳನ್ನು ಮುದ್ರಿಸಿ ಪ್ರಕಟಿಸುವುದೆಂದು ನಮ್ಮ ಪ್ರಕಟನಾ ಸಮಿತಿ ತೀರ್ಮಾನಿಸಿತು. ಈ ಯೋಜನೆಯ ಅನುಷ್ಠಾನಕ್ಕೆ ವಿಶೇಷ ಆರ್ಥಿಕ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ ನಾವು ಕೃತಜ್ಞರು. ಈ ಕೃತಿಯ ಲೇಖಕರಿಗೆ ನಾವು ಆಭಾರಿ. ಅಚ್ಚುಕಟ್ಟಾಗಿ ಮುದ್ರಿಸಿದ ನಮ್ಮ ಬಿ.ಎಂ.ಶ್ರೀ. ಅಚ್ಚುಕೂಟದ ಸಿಬ್ಬಂದಿಗೆ, ಮುಖಪುಟ ವಿನ್ಯಾಸದ ಕಲಾವಿದರಿಗೆ ನಮ್ಮ ವಂದನೆಗಳು.

ಚಂದ್ರಶೇಖರ ಪಾಟೀಲ (ಚಂಪಾ)
ಅಧ್ಯಕ್ಷರು

ಲೇಖಕರ ಮಾತು

ವಚನಕಾರರು ಈ ದೇಶದಲ್ಲಿ ಮೊಟ್ಟಮೊದಲ ಬಾರಿಗೆ ಪ್ರಜಾಸತ್ತಾತ್ಮಕವಾಗಿ ನಡೆದು ನುಡಿದವರು. ಅನುಭಾವ ಮಂಟಪದ ಮೂಲಕ ಪ್ರಜಾಪ್ರಭುತ್ವದ ಬೀಜಗಳನ್ನು ಬಿತ್ತಿ ಸ್ವಾತಂತ್ರ್ಯ, ಸಮಾನತೆ ಹಾಗೂ ಸಹೋದರತ್ವದ ನೆಲೆಯಲ್ಲಿ ಮಾನವ ಹಕ್ಕುಗಳನ್ನು ಪ್ರತಿಪಾದಿಸಿದವರು. ದುಡಿಮೆಯನ್ನು ದೈವತ್ವಕ್ಕೆ ಏರಿಸಿ, ಕಾಯ ದೇಗುಲವನ್ನಾಗಿ ವ್ಯಕ್ತಿತ್ವದ ವಿವೇಚನೆಗೆ ಹರಿಕಾರರಾದವರು, ಅನುಭಾವ ಮಂಟಪದ ಶರಣರು. ಕಾಲ ಎಂಥ ಮೌಲ್ಯಗಳನ್ನು ಒರೆಗೆ ಹಚ್ಚುವ ಸಾಮರ್ಥ್ಯ ಪಡೆದಿದೆ. ಅನುಭಾವ ಮಂಟಪವು ಪ್ರತಿಪಾದಿಸಿದ ಮೌಲ್ಯಗಳಿಗೆ ಇಂದಿಗೂ ಮುಸುಕು ಬಂದಿಲ್ಲ. ೧೨ನೆ ಶತಮಾನಕ್ಕಿದ್ದ ಪ್ರಸ್ತುತತೆಯೇ ಇಂದಿನ ಬದುಕಿಗೂ ಅನಿವಾರ್ಯವೆನಿಸುತ್ತಿದೆ. ಇಂತಹ ವಚನಕಾರರ ಕುರಿತು ಏನಾದರೂ ಕೆಲಸ ಮಾಡಬೇಕೆಂಬ ಅಪೇಕ್ಷೆ ಬಂದಾಗ ಅನುಭಾವ ಮಂಟಪದತ್ತ ಓದಿನ ಆಸಕ್ತಿ ಮೂಡಿಸಿದ ಗುಲ್ಬರ್ಗಾದ ಶ್ರೀ ಶರಣಬಸವೇಶ್ವರ ಸಂಸ್ಥಾನದ ಮಹಾದಾಸೋಹ ಪೀಠಾಧಿಪತಿಗಳಾದ ಪೂಜ್ಯ ಡಾ|| ಶರಣ ಬಸವಪ್ಪ ಅಪ್ಪ ಅವರಿಗೂ, ನನ್ನ ಸಾಹಿತ್ಯ-ಸಾಂಸ್ಕೃತಿಕ ಕೃಷಿಗೆ ನಿರಂತರ ಪ್ರೋತ್ಸಾಹ ನೀಡುತ್ತಿರುವ ಭಾಲ್ಕಿ ಹಿರೇಮಠ ಸಂಸ್ಥಾನದ ಪರಮ ಪೂಜ್ಯ ಶ್ರೀ ಬಸವಲಿಂಗ ಪಟ್ಟದೇವರಿಗೂ, ಗದುಗಿನ ತೋಂಟದಾರ್ಯ ಮಠದ ಶ್ರೀಗಳಾದ ಡಾ|| ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರಿಗೂ ನನ್ನ ಅನಂತ ನಮನಗಳಿರುತ್ತವೆ.

ಈ ಕೃತಿರಚನೆಗೆ ಮುಖ್ಯ ಕಾರಣೀಕರ್ತರೆಂದರೆ, ನನ್ನ ವಿದ್ಯಾಗುರುಗಳು ಮತ್ತು ಬೀದರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆದ ಡಾ. ಜಗನ್ನಾಥ ಹೆಬ್ಬಾಳೆಯವರು. ನಾನವರ ವಿದ್ಯಾರ್ಥಿಯಾದರೂ ಕೂಡ, ಅತ್ಯಂತ ವಾತ್ಸಲ್ಯದಿಂದ ನನ್ನ ಬೆಳವಣಿಗೆಯ ಹಿಂದೆ ನಿಂತು ಪ್ರೋತ್ಸಾಹಿಸುತ್ತಿದ್ದಾರೆ. ಅವರಿಗೆ ನಾನೆಂದೂ ಕೃತಜ್ಞನಾಗಿದ್ದೇನೆ.

ಬೀದರನಲ್ಲಿ ಜರುಗುತ್ತಿರುವ ಅಖಿಲ ಭಾರತ ೭೨ನೆ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗಾಗಿ ಹೊರಬರುತ್ತಿರುವ ೭೨ ಪುಸ್ತಕಗಳ ಪೈಕಿ, ''ಅನುಭಾವ ಮಂಟಪದ ಚಾರಿತ್ರಿಕ ನೆಲೆಗಳು'' ಎಂಬ ನನ್ನ ಈ ಕೃತಿಯನ್ನು ಆಯ್ಕೆ ಮಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪ್ರೊ. ಚಂದ್ರಶೇಖರ ಪಾಟೀಲ (ಚಂಪಾ) ಅವರಿಗೂ, ಪರಿಷತ್ತಿನ ಎಲ್ಲಾ ಪದಾಧಿಕಾರಿಗಳಿಗೂ, ಸಿಬ್ಬಂದಿಯವರಿಗೂ ಮತ್ತು ಪುಸ್ತಕ ಆಯ್ಕೆ ಸಮಿತಿಯ ಎಲ್ಲ ಸದಸ್ಯರಿಗೂ ನಾನೆಂದೂ ಕೃತಜ್ಞನಾಗಿರುವೆ.

ಡಾ. ಬಸವರಾಜ ಬಲ್ಲೂರ

ಅನುಭವ ಮಂಟಪ : ಅನುಭಾವ ಮಂಟಪ

'ಅನುಭಾವ ಮಂಟಪ'ವೆಂಬ ಹೆಸರು ರೂಢಿಯಲ್ಲಿ 'ಅನುಭವ ಮಂಟಪ' ಎಂದೇ ಆಗಿರುವುದು. ನೀಲಾಂಬಿಕೆಯ ವಚನದಲ್ಲಿಯೂ ಕೂಡ ಅದು 'ಅನುಭವ ಮಂಟಪ' ವೆಂದೇ ಇದೆ. ಆದರೆ 'ಅನುಭಾವ'ವೆಂಬ ಪದಕ್ಕಿರುವ ಅರ್ಥವ್ಯಾಪ್ತಿ-ಮಹತ್ವ 'ಅನುಭವ' ಎಂಬ ಪದಕ್ಕಿಲ್ಲ. ಆದರೆ ಶರಣರು ಪ್ರಪಂಚದಲ್ಲಿದ್ದು ಪಾರಮಾರ್ಥ ಗೆದ್ದವರಾದ್ದರಿಂದ ಅನುಭವ ಲೌಕಿಕ, ಅನುಭಾವ ಅಲೌಕಿಕವೆಂದು ಅರ್ಥೈಸುವುದು ಇಲ್ಲಿನ ಉದ್ದೇಶವಲ್ಲ. ಜನಭಾಷೆಯ ರೂಢಿಯಲ್ಲಿ ''ಅನುಭವ'' ವೆಂಬ ಪದವೇ ಇದೆ. ಇದು ಆಡುನುಡಿಯ ವ್ಯತ್ಯಾಸ ಅಷ್ಟೇ. ಸಾಮಾನ್ಯವಾಗಿ ಉಳಿದ ವಚನಕಾರರ ವಚನಗಳಲ್ಲಿ ''ಅನುಭವ'' ಎಂಬ ಪದದ ಬಳಕೆ ಇಲ್ಲ. ''ಅನುಭವ'' ಎಂಬ ಪದವು ಭೀಮಕವಿಯ ಬಸವಪುರಾಣ (೬೧-೭೫)ದಲ್ಲಿ ಮತ್ತು ಚನ್ನಬಸವಣ್ಣನವರ ವಚನ (ಸ.ವ.ಸಂ. ೩-೪೭೫, ಪು. ೧೩೩೨)ದಲ್ಲಿ ಬಂದಿದೆ ಯಾದರೂ ಅದು 'ಅನುಭಾವ' ಎಂಬ ಅರ್ಥದಲ್ಲೇ ಬಳಕೆಯಾಗಿದೆ.

ಹೀಗೆ ವಚನಕಾರರು ಸತ್ಯದ ಸಾಕ್ಷಾತ್ಕಾರವನ್ನು ಅನುಭಾವವೆಂದು ಕರೆದು, ದೇವರು, ಧರ್ಮ, ಆಧ್ಯಾತ್ಮಗಳಿಗಿಂತ ಅನುಭಾವ ದೊಡ್ಡದೆಂದು ನಂಬಿದ್ದರಿಂದ; ಇಲ್ಲಿ ಅನುಭಾವ ಮಂಟಪವೆಂಬ ಪದ ಬಳಸಲಾಗಿದೆ. ಏಕೆಂದರೆ ಅನುಭಾವಕ್ಕೆ ನಿಯಮಗಳಿಲ್ಲ, ಸೀಮೆಗಳಿಲ್ಲ, ಆಕಾರಗಳಿಲ್ಲ. ಆದರೆ ಸಂಘ ಸಂಸ್ಥೆಗಳಿಗೆ ನಿಯಮ ಸಹಿತವಾದ ಸೀಮೆಗಳಿರುತ್ತವೆ. ಅದಕ್ಕಾಗಿಯೇ ಶರಣರು ಸಂಘಗಳನ್ನು ಕಟ್ಟದೆ ಸ್ವಾತಂತ್ರ್ಯ, ಸಮಾನತೆ, ಸಹೋದರತ್ವದ ಪ್ರತೀಕದ, ಕಾಯಕನಿಷ್ಠರ ಅನುಭಾವ ಮಂಟಪವನ್ನು ಕಟ್ಟಿದ್ದಾರೆ.

ಪರಿವಿಡಿ

ಭಾಗ ಒಂದು : ಅನುಭಾವಮಂಟಪದ ಅಸ್ತಿತ್ವದ ನೆಲೆಗಳು

ಭಾಗ ಎರಡು : ಅನುಭಾವಮಂಟಪದ ತೌಲನಿಕತೆ

ಪ್ರಸ್ತಾವನೆ

ಹಿಂದಣ ಹೆಜ್ಜೆಯನರಿತಲ್ಲದೆ ನಿಂದ ಹೆಜ್ಜೆಯನರಿಯಬಾರದು ಎಂಬ ಅಲ್ಲಮನ ಮಾತು, ಜಾಗತೀಕರಣದ ಬಲವಾದ ಗಾಳಿ ಬೀಸುತ್ತಿರುವ ಮತ್ತು ಇಡೀ ಜಗತ್ತು ಭಯೋತ್ಪಾದನೆ-ಭ್ರಷ್ಟಾಚಾರಗಳಿಂದ ನಲುಗುತ್ತಿರುವ ಇಂದಿನ ಸಂದರ್ಭದಲ್ಲಿ ತುಂಬ ಪ್ರಸ್ತುತವಾಗಿದೆ. ವರ್ತಮಾನವೆನ್ನುವುದು ಭೂತ ಮತ್ತು ಭವಿಷ್ಯತ್ತಿನ ಕೊಂಡಿಯಾಗಿದ್ದು, ಭೂತವು ವರ್ತಮಾನದ ಮತ್ತು ಭವಿಷ್ಯತ್ತಿನ ಬದುಕಿಗೆ ಬೇಕಾಗುವ ಬೆಳಕಿನ ಕಿರಣವೂ ಆಗಿದೆ. ಆ ಬೆಳಕಿನ ಕಿರಣಗಳ ಮೂಲಕ ನಮ್ಮ ಬದುಕನ್ನು ಕಟ್ಟುವ ಕ್ರಿಯೆ ನೆರವೇರಬೇಕಾಗಿದೆ. ಅಂಥ ಆಶಾವಾದದ ಹಿನ್ನೆಲೆಯಲ್ಲಿ ಅನುಭಾವಮಂಟಪ ಕುರಿತ ಚರ್ಚೆ ಎಂದಿಗಿಂತ ಇಂದು ಪ್ರಸ್ತುತವೆನಿಸುತ್ತದೆ.

ಅನುಭಾವ ಮಂಟಪವೆಂದರೆ, ಅದೊಂದು ಧಾರ್ಮಿಕ ಅಥವಾ ಆಧ್ಯಾತ್ಮಿಕ ವೇದಿಕೆ ಎಂಬ ಗ್ರಹಿಕೆಗಳೇ ಹೆಚ್ಚಾಗಿವೆ. ವಾಸ್ತವವಾಗಿ ಹಾಗಲ್ಲ. ಅದು ಶ್ರೇಷ್ಠ ಶಿವಾನುಭವಿಗಳು ಸೇರಿ ನಡೆಸಿದ ಸಂಸ್ಥೆಯಾಗಿದ್ದರಿಂದ ಹಾಗನಿಸಬಹುದು. ಆದರೆ ಅನುಭಾವ ಮಂಟಪದ ಆದ್ಯತೆ ಇದ್ದುದು ಆದರ್ಶ ಸಮಾಜವೊಂದನ್ನು ಕಟ್ಟುವುದು. ಆ ಮೂಲಕ ಎಲ್ಲರ ಕೈಗಳಿಗೆ ಕೆಲಸ ಕೊಟ್ಟು ಎಲ್ಲರಿಗೂ ''ಅರಿವು'' ಬರುವಂತೆ ನೋಡಿಕೊಂಡು, ಎಲ್ಲರಿಗೂ ಮಾತು ಕಲಿಸಿದ್ದು ಎಲ್ಲರಲ್ಲಿ ವಿಚಾರವಾದವನ್ನು ಬಿತ್ತಿರುವುದು ಮತ್ತು ಅವುಗಳ ಮೂಲಕ ಹೊಸ ಮೌಲ್ಯಗಳನ್ನು ಹುಟ್ಟು ಹಾಕಿದ್ದು ಅನುಭಾವ ಮಂಟಪ. ಹಾಗಾಗಿ ಅನುಭಾವ ಮಂಟಪ ಇಂದಿನ ಹಲವಾರು ಸಮಸ್ಯೆಗಳಿಗೆ ಪರಿಹಾರ ಸೂತ್ರವಾಗಿ ಕಂಡುಬರುತ್ತದೆ. ಹಾಗಂತ ಎಲ್ಲ ಸಮಸ್ಯೆಗಳ ಪರಿಹಾರಸೂತ್ರವಲ್ಲ. ಅಲ್ಲದೆ ಅನುಭಾವ ಮಂಟಪ ಹಳೆಯದು ಎಂದು ಅದರ ಬಗ್ಗೆ ಉದಾಸೀನತೆ ತಾಳುವುದೂ ಅಲ್ಲ. ಅದನ್ನು ಒಂದು ಮಾನಸಿಕ ದೂರದಲ್ಲಿ ನಿಂತು ನೋಡಬೇಕು. ಆಗ ಮಾತ್ರ ಅದರ ಅನನ್ಯತೆಯ ಅರಿವಾಗುತ್ತದೆ. ಅನುಭಾವ ಮಂಟಪ ಹುಟ್ಟುಹಾಕಿದ ಮೌಲ್ಯಗಳು ಜೀವಪರವಾಗಿವೆ. ಅವು ನಮ್ಮ ಮೂಲಭೂತ ಅವಶ್ಯಕತೆಗಳಾದ ಅನ್ನ, ಅರಿವೆ, ಆಶ್ರಯ, ಅರಿವು ಮತ್ತು ಔಷಧ ಎಲ್ಲರಿಗೂ ದಕ್ಕುವಂತೆ ಮಾಡುತ್ತವೆ. ಆ ಮೂಲಕ ಇಡೀ ಜಗತ್ತು ಶಾಂತಿ, ನೆಮ್ಮದಿ ಮತ್ತು ಪ್ರೀತಿಯ ನೆಲೆಯಲ್ಲಿ ಬದುಕಲು ಸಾಧ್ಯವಾಗಿಸುತ್ತವೆ. ಏಕೆಂದರೆ ಬಹುತೇಕ ಯಾವದೇ ಸಮಾಜೋ-ಧಾರ್ಮಿಕ ಸಂಘಟನೆಗಳು, ದರ್ಶನಗಳು, ತತ್ವ ಮತ್ತು ಸಿದ್ಧಾಂತಗಳು ತುಂಬಿಕೊಡದಂತಹ ಆತ್ಮಸ್ಥೈರ್ಯ ಹಾಗೂ ಜೀವನ ಪ್ರೀತಿ ತುಂಬಿ

ಕೊಡುವುದು ಅನುಭಾವ ಮಂಟಪದ ಮುಖ್ಯ ಕಾಳಜಿಯಾಗಿತ್ತು. ಇಂಥ ಮಹತ್ವದ ಅನುಭಾವಮಂಟಪ ಕಟ್ಟಿದವರು ೧೨ನೆ ಶತಮಾನದ ಬಸವಾದಿ ಶರಣರು.

ಇಂಥ ಮಹತ್ವದ ಅನುಭಾವ ಮಂಟಪದ ಅಸ್ತಿತ್ವವೇ ಇಲ್ಲವೆಂದು ಕಪಟರಾಳ ಕೃಷ್ಣರಾಯರು ಸೊಲ್ಲೆತ್ತಿದಾಗ ರೆ. ಉತ್ತಂಗಿ ಚನ್ನಪ್ಪನವರು 'ಅನುಭಾವ ಮಂಟಪದ ಐತಿಹಾಸಿಕತೆ' ಎಂಬ ಸಂಶೋಧನಾತ್ಮಕವಾದ ಲೇಖನಗಳನ್ನು ಬರೆದು ಅನಂತರ ಅವುಗಳನ್ನು ಪುಸ್ತಕ ರೂಪದಲ್ಲಿ ತಂದು, ಕಪಟರಾಳ ಕೃಷ್ಣರಾಯರಿಗೆ ಉತ್ತರಿಸಿದರು. ಇದೆಲ್ಲ ಪತ್ರಿಕೆಗಳ ಮೂಲಕ ನಡೆದ ಚರ್ಚೆಗಳು. ಅವುಗಳನ್ನೆಲ್ಲ ಅವಲೋಕಿಸಿದರೆ ಅವು ವೈಯಕ್ತಿಕ ಕಾರಣಕ್ಕಾಗಿ ನಡೆದ ಚರ್ಚೆಗಳಂತೆ ಕಾಣುತ್ತವೆ. ಆದ್ದರಿಂದ ಅನುಭಾವ ಮಂಟಪದ ಅಸ್ತಿತ್ವವನ್ನು ನಿರಾಕರಿಸಲು ಸಾಧ್ಯವಿಲ್ಲ. ಏನೇ ಆಗಲಿ, ರೆ. ಚನ್ನಪ್ಪ ಉತ್ತಂಗಿಯವರ ಕೃತಿ ಚಾರಿತ್ರಿಕವಾಗಿ ಮಹತ್ವದ್ದಾಗಿದೆ. ಅದರ ಮುಂದುವರಿಕೆಯಾಗಿ ಈ ಕೃತಿಯನ್ನು ಗ್ರಹಿಸಬಹುದಾಗಿದೆ.

ಅನಂತರದಲ್ಲಿ ಅನುಭಾವ ಮಂಟಪ ಕುರಿತು ಎಚ್. ತಿಪ್ಪೇರುದ್ರಸ್ವಾಮಿ, ಪಿ. ಎಸ್. ಮಹಾದೇವಯ್ಯನವರೂ ಒಂದೊಂದು ಕಿರುಹೊತ್ತಿಗೆಯನ್ನು ತಂದರು. ಇಂಗ್ಲಿಷಿನಲ್ಲಿ ರೆ. ಉತ್ತಂಗಿಯವರೆ Anubhava Mantapa (the heart of the lingayath religion) ಹಾಗೂ ಅದರ ಕನ್ನಡದ ಆವೃತ್ತಿ 'ಅನುಭವ ಮಂಟಪ' (ಲಿಂಗಾಯತ ಧರ್ಮದ ಹೃದಯ) ಎಂಬ ಕಿರುಹೊತ್ತಿಗೆಗಳನ್ನು ತಂದರು. ಇತ್ತೀಚೆಗೆ ಡಾ. ಎಸ್.ಎಂ. ಹಿರೇಮಠ ಅವರು 'ಅನುಭಾವ ಮಂಟಪ ದರ್ಶನ' ಎಂಬ ಕೃತಿಯನ್ನು ರಚಿಸಿದ್ದಾರೆ. ಪ್ರಸಾರಾಂಗದ ಉಪನ್ಯಾಸ ಮಾಲಿಕೆಯಲ್ಲಿ ಡಾ. ಶಶಿಕಲಾ ಮೊಳ್ದಿಯವರ 'ಅನುಭವ ಮಂಟಪದ ಶಿವಶರಣೆಯರು' ಎಂಬ ಕಿರುಕೃತಿ ಕೂಡ ಬಂದಿದೆ. ಇವನ್ನು ಬಿಟ್ಟರೆ, ಅನುಭಾವ ಮಂಟಪ ಕುರಿತು ಬಿಡಿ ಲೇಖನಗಳು ಪ್ರಕಟವಾಗಿವೆ.

ಯಾವುದೇ ದರ್ಶನವಾಗಲಿ, ಸಿದ್ಧಾಂತವಾಗಲಿ ಒಮ್ಮಿಂದೊಮ್ಮೆಲೆ ಹುಟ್ಟಲಾರದು. ಒಮ್ಮೆಲೆ ಹುಟ್ಟುವ ಸಿದ್ಧಾಂತಗಳಿಗೆ ಹೆಚ್ಚಿನ ಅರ್ಥಸಾಧ್ಯತೆಗಳೂ ಇರಲಾರವು. ಹಾಗಾಗಿ ಒಬ್ಬರು ಮಾಡಿದ ಕೆಲಸ ಕಾರ್ಯಗಳನ್ನು ಮತ್ತೊಬ್ಬರು ಮುಂದುವರೆಸಬೇಕಾಗುವುದು. ಹೊಸ ಅರ್ಥದ ಹುಡುಕಾಟಕ್ಕೆ ಇದು ಅನಿವಾರ್ಯ. ಅದನ್ನೇ ನಾವು 'ಚಾರಿತ್ರಿಕ ಪ್ರಜ್ಞೆ' ಎಂದು ಕರೆಯುತ್ತೇವೆ. ಆದ್ದರಿಂದ ಅನುಭಾವ ಮಂಟಪ ಕುರಿತ ಇದುವರೆಗೆ ಕೆಲ ಪುಸ್ತಕಗಳು ಬಂದರೂ ಈ ಕೃತಿ ರಚನೆಗೆ ಕೈಹಾಕಿರುವೆ. ಹಾಗಂತ ಇದು ಪರಿಪೂರ್ಣ ಸರಿ ಎಂದು ಹೇಳುತ್ತಿಲ್ಲ. ಅಲ್ಲದೆ ಇದು ನೆಗೆಟಿವ್ ಕೂಡ ಅಲ್ಲ. ಜ್ಞಾನದ ಸಾಲಿನಲ್ಲಿ ಇದು ಪ್ರಯತ್ನದ ಹೆಜ್ಜೆಯಾಗಿ ಈ ಕೃತಿಯ ಮೊದಲ ಭಾಗ ಬರೆದಿರುವೆ.

೧. ಪ್ರವೇಶ

ವಿದ್ಯೆ ವಿನಯವನ್ನು ಬೆಳೆಸುತ್ತದೆ, ವಿನಯ ಸಂಸ್ಕೃತಿಯ ಹುಟ್ಟಿಗೆ ನೆರವಾಗುತ್ತದೆ. ಹಾಗಾಗಿ ''ವಿಶ್ವ ಸಂಸ್ಕೃತಿಗೆ ಭಾರತೀಯ ಸಂಸ್ಕೃತಿಯೇ ಗುರು'' ಎಂಬ ಅಗ್ಗಳಿಕೆಯ ವಿಚಾರ ಹುಸಿಯಲ್ಲ, ಇಲ್ಲಿ ವಿದ್ಯೆ-ವಿನಯ ಸಂಸ್ಕೃತಿಗೆ ಕೊರತೆಯಿಲ್ಲ. ಈ ಮಾತನ್ನು ಸಮರ್ಥಿಸುವಾಗ ಭಾರತೀಯ ಪರಂಪರೆಯಲ್ಲಿ ಸಾಮಾಜಿಕ ಸಾಮರಸ್ಯಗಳು ಧರ್ಮ ಸಮನ್ವಯತೆ, ಸತ್ಯ-ನಿಷ್ಠೆಯ ಪ್ರಾಯೋಗಿಕತೆಗಳು, ಸಹಿಷ್ಣತೆ ಹಾಗೂ ಮಾನವೀಯತೆಯ ಅನುಕಂಪದ ತುಡಿತಗಳು ಕಾಲಮಾನಕ್ಕೆ ತಕ್ಕಂತೆ ಸ್ಪಂದಿಸುತ್ತಲೇ ರಕ್ತಗತವೆಂಬಂತೆ ಇಲ್ಲಿನ ಜನಮನದಲ್ಲಿ ಹರಿದು ಬಂದಿವೆ. ಇವಕ್ಕೆ ಆದಿಕವಿ ಪಂಪನಲ್ಲಿ ಸಮರ್ಥನೆ ದೊರೆಯುತ್ತದೆ. ಪಂಪನು ಕನ್ನಡಿಗರು ವೀರರು, ತ್ಯಾಗಿಗಳು, ಭೋಗಿಗಳು, ಯೋಗಿಗಳು, ಗೇಯಪ್ರಿಯರು, ಅಲಂಪುಳ್ಳ ವರು, ಇಂಪುಳ್ಳವರು, ಹಾಗೂ ಗೊಟ್ಟಿಪ್ರಿಯರು ಎಂದಿದ್ದಾನೆ. ಪಂಪ ಹೇಳಿದ ಈ ಮಾತುಗಳು ಕನ್ನಡಿಗರ ಉನ್ನತ ಮೌಲ್ಯಗಳೂ ಹೌದು. ಈ ಮಾತುಗಳು ಎಂತಹವರ ಮನಸನ್ನು ಸೂರೆಗೊಳಿಸದೇ ಇರವು. ಅಂತೆಯೇ ಹೊರಗಿನವರು ಇಲ್ಲಿ ನೆಲೆಸಲು ಸಾಧ್ಯವಾಗಿರಬೇಕು. ಕನ್ನಡಿಗರು ರಸಿಕರೆಂಬ ಮಾತಿನೊಂದಿಗೆ ಗೊಟ್ಟಿ (ಗೋಷ್ಠಿ) ಪ್ರಿಯರೂ ಎಂಬ ಮಾತನ್ನು ಸೇರಿಸಿದ್ದಾನೆ. ಇದಕ್ಕೆ ಪೂರಕವಾಗಿಯೇ ೧೨ನೆ ಶತಮಾನದಲ್ಲಿ ಅನುಭಾವ ಗೋಷ್ಠಿಗಾಗಿ ಅನುಭಾವಮಂಟಪದ ರಚನೆಯಾಗಿದ್ದು ಚಾರಿತ್ರಿಕ ಮಹತ್ವವಾಗಿದೆ. ಬಸವಾದಿ ಶರಣರಿಂದ ಬಸವಕಲ್ಯಾಣದಲ್ಲಿ ರೂಪಿತವಾದ ಆ ಅನುಭಾವ ಮಂಟಪ ಧಾರ್ಮಿಕತೆಗೆ ಹಾಗೂ ವೈಚಾರಿಕತೆಗಳ ಸಮನ್ವಯಕ್ಕೆ ರಚನಾತ್ಮಕ ಆಂದೋಲನವಾಗಿ, ಇಡೀ ವಿಶ್ವಕ್ಕೆ ಮಾದರಿಯ ಚಳುವಳಿಯಾಗಿ ರೂಪು ತಳೆಯಿತು. ಶೋಷಣೆಯ ವಿರುದ್ಧ ಆಮೂಲಾಗ್ರ ಬದಲಾವಣೆ ತಂದ ಈ ಸಂಸ್ಥೆ, ಸಾಮಾಜಿಕ ಸಮತೆ, ಸದಾಚಾರ, ಶಾಂತಿ, ಚಿತ್ತಶುದ್ಧತೆಗಳೊಂದಿಗೆ, ಸಹಬಾಳ್ವೆಯನ್ನು, ಸ್ವಾತಂತ್ರ್ಯವನ್ನು ತಂದುಕೊಟ್ಟಿತ್ತು. ಪುರುಷನಷ್ಟೇ ಸ್ತ್ರೀಯರೂ ವಿಪ್ರನಷ್ಟೇ ಅಂತ್ಯಜನು, ಅರಸನಂತೇ ಪ್ರಜೆಗಳೂ, ಸಮಾಜೋ-ಧಾರ್ಮಿಕ ಬದುಕಿನ ಪಾಲುದಾರರಾದುದು ಅಪೂರ್ವದ ಸಂಗತಿ. ದೇವಭಾಷೆಯೆಂದು ಖ್ಯಾತಿಪಡೆದ ಸಂಸ್ಕೃತದ ಬದಲು ಅನುಭಾವಮಂಟಪದ ಮೂಲಕ ಆಡುಭಾಷೆಯಾದ ಕನ್ನಡದಲ್ಲಿ ಸಾಹಿತ್ಯಕೃಷಿ ಆರಂಭವಾಯಿತು. ಲಿಂಗಭೇದ, ವರ್ಗಭೇದ, ವರ್ಣಭೇದವಿಲ್ಲದೆ

ಜನಸಮುದಾಯದ ಎಲ್ಲರ ಅಭಿವ್ಯಕ್ತಿಯಾಗಿ ಭಾಷೆ ರೂಪು ತಳೆಯಿತು. ಆ ಮೂಲಕ ಜನಪರ ನಿಲುವುಗಳಿಗೆ ಹೊಸ ಆಯಾಮ ಬಂದಿತು. ಅಂತೆಯೇ ಆ ಕಾಲದ ಜನ ಸಾಮಾನ್ಯರ ಸಾಂಸ್ಕೃತಿಕ ಬದುಕಿಗೆ ಚಾಲನೆ ದೊರಕಿತು. ಮನುಷ್ಯನ ಬದುಕನ್ನು ಊರ್ಧ್ವಮುಖಕ್ಕೆ ಒಯ್ಯುವಲ್ಲಿ, ವ್ಯಷ್ಟಿಯಿಂದ ಸಮಷ್ಟಿಯ ಬೆಳವಣಿಗೆಯ ಹಿನ್ನೆಲೆ ಯಲ್ಲಿ ಇಡೀ ಆಂದೋಲನ ಕ್ರಿಯಾತ್ಮಕವಾಗಿ ದುಡಿಯಲು ಅನುಭಾವಮಂಟಪ ಕಾಲದ ಅವಶ್ಯಕತೆಯಾಗಿ ರಚನೆಯಾಯಿತು. ಆದ್ದರಿಂದ ಅನುಭಾವಮಂಟಪ ಅಂದಿನ ಒಟ್ಟಾರೆ ಸಾಂಸ್ಕೃತಿಕ ನೆಲೆಗಳನ್ನು ಒಳಗೊಳ್ಳುವಂತಾಯಿತು. ಆದ್ದರಿಂದಲೇ ಅನುಭಾವಮಂಟಪ ಮನುಕುಲದ ಚರಿತ್ರೆಯಲ್ಲಿ ಮೊದಲ ಸಮಾಜೋ-ಧಾರ್ಮಿಕ ಸಂಸತ್ತು ಎಂಬ ಹೆಸರಿಗೆ ಕಾರಣವಾಯಿತು.

ಪ್ರತಿವ್ಯಕ್ತಿಯ ಮಹತ್ವ, ಸಾಮರ್ಥ್ಯವನ್ನು ಎಚ್ಚರಿಸಿ ಗುರುತಿಸಿದ ಅನುಭಾವ ಮಂಟಪದ ಚೈತನ್ಯವಲಯವು, ಸಾಮಾಜೀಕರಣದ ಅಂಗವಾಗಿ ಇಂತಹ ಸಾಮರ್ಥ್ಯವುಳ್ಳ ವ್ಯಕ್ತಿ-ವ್ಯಕ್ತಿಗಳ ನಡುವಿನ ಸೇತುವೆಯಾಗಿ ಸಂಘಟನೆಯ ಮಾದರಿ ಯಾಗಿ ನಿಲ್ಲುತ್ತದೆ.

****

೧.೧ ಚರಿತ್ರೆ ಮತ್ತು ಕಲ್ಯಾಣ (ಬಸವಕಲ್ಯಾಣ)

೧.೧.೧. ಚಾರಿತ್ರಿಕ ಹಿನ್ನೆಲೆ :

ಇಂದಿನ ಬದುಕು ನಾಳೆಯ ಚರಿತ್ರೆಯಾಗುತ್ತದೆ. ಅದನ್ನೇ ನಾವು ಇತಿಹಾಸವೆಂದು ಕರೆಯುತ್ತೇವೆ. ಇಲ್ಲಿ ಇತಿಹಾಸವೆಂದರೆ ಕೇವಲ ಭೂತದ ಸಂಗತಿಗಳ ದಾಖಲೆ ಮಾತ್ರ ಅಲ್ಲ; ಮನುಷ್ಯನ ಅನುಭವ, ತಿಳುವಳಿಕೆ ಮತ್ತು ಬದುಕಿದ ರೀತಿಯ ಎಳೆ ಎಳೆಗಳ ಬಿಡಿ ಸಂಗತಿಗಳಲ್ಲಿ ಒಂದರೊಳಗೊಂದು ಬೆರೆತು ಹೋಗಿರುವುದು ಆಗಿರುತ್ತದೆ. ಆದರೆ ಅವು ಯಾವುದೂ ಒಮ್ಮುಖವಾಗಿರುವುದಿಲ್ಲ. ಕಾಲ, ದೇಶ, ಪರಿಸರದ ಹಿನ್ನೆಲೆಯಲ್ಲಿ ಏರುಪೇರುಗಳಾಗುವುದು ಸಹ ಚರಿತ್ರೆಯು ಒಡಲೊಳಗಿನ ಮುಖ್ಯ ಅಂಶವಾಗಿದೆ ಏಕೆಂದರೆ ಬದಲಾವಣೆ ಇಲ್ಲದ ಸರಳ ರೇಖೆ ಎಂದೂ ಚರಿತ್ರೆ ಎನಿಸಿಕೊಳ್ಳದು. ಹಾಗೆ ಅದು ಇರುವುದಿಲ್ಲ ಕೂಡ. ಈ ಹಿನ್ನೆಲೆಯಲ್ಲಿ ಮಧ್ಯಯುಗದ ಚರಿತ್ರೆಯ ಕೆಲ ಪ್ರಮುಖ ಎಳೆಗಳಲ್ಲಿ ಕರ್ನಾಟಕ ಚರಿತ್ರೆಯ ಕಲ್ಯಾಣ (ಕಲ್ಯಾಣ ಪುರ)ದ ಸಮಕಾಲೀನತೆಯ ಮೇಲೆ ಆಂಶಿಕ ಬೆಳಕು ಚೆಲ್ಲುವ ಒಂದು ಸಣ್ಣ ಪ್ರಯತ್ನ ಇಲ್ಲಿ ಮುಖ್ಯವೆನಿಸಿದೆ.

ಪಶ್ಚಿಮದ ಆಳ್ವಿಕೆಯ ಮೂಲಕ ಆರ್ಥಿಕ ಲೂಟೀಕರಣ ನಡೆಯಿತು. ಆದರೂ ಸ್ವಾತಂತ್ರ್ಯ ದೊರಕಿಸಿಕೊಳ್ಳಲು, ಜಗತ್ತಿನೊಂದಿಗೆ ಸಂಪರ್ಕ ವಿಸ್ತರಿಸಿಕೊಳ್ಳಲು ಮತ್ತು ನಮ್ಮ ಜ್ಞಾನ-ಶಿಸ್ತುಗಳನ್ನು ರೂಪಿಸಿಕೊಳ್ಳಲು ಈ ಆಳ್ವಿಕೆ ಹೊಸಪಾಠ ಕಲಿಸಿದೆ. ಆ ಮೂಲಕವೇ ಸಾಮರಸ್ಯ ಮತ್ತು ರಾಜಕೀಯ ಐಕ್ಯತೆಯ ಪಾಠ ಕಲಿತದ್ದರಿಂದ ಇಂದು ನಾವೆಲ್ಲರೂ ಒಗ್ಗಟ್ಟಿನಲ್ಲಿದ್ದಂತೆ ಕಂಡುಬರುತ್ತದೆ. ಇದು ವಸಾಹತುಶಾಹಿಗಿಂತ ಮೊದಲು ಇರಲಿಲ್ಲವೆಂದೇ ಹೇಳಬೇಕು. ಭಾರತೀಯತೆಯೆನ್ನುವುದು ಕೇವಲ ಭೌಗೋಳಿಕ ಮತ್ತು ಸಾಂಸ್ಕೃತಿಕ ಆಳ್ವಿಕೆ ಮಾತ್ರ ಆಗಿತ್ತು. ಇಂದಿನಂತೆ ರಾಷ್ಟ್ರೀಯತೆ ಎನ್ನುವ ಅರ್ಥದಲ್ಲಿ ಅಲ್ಲ. ಇಂದು ರಾಷ್ಟ್ರೀಯತೆ ಎನ್ನುವದು ಹಲವಾರು ಪ್ರಾಂತ, ಭಾಷೆ, ಧರ್ಮ, ಸಮಾಜ ಮತ್ತು ಸಂಸ್ಕೃತಿಯನ್ನೊಳಗೊಂಡ ಅಖಂಡತೆಯೆಂದು ಅರ್ಥೈಸಲ್ಪಡುತ್ತಿದೆ. ಇದು ಮೊದಲಿರಲಿಲ್ಲ ಮತ್ತು ಅದು ವಸಾಹತುಶಾಹಿಯ ಆಳ್ವಿಕೆಯ ಮೂಲಕ ಐಕ್ಯತಾಭಾವ-ಬದುಕು ಕಟ್ಟಲು ಸಾಧ್ಯವಾಯಿತು.

ರಾಷ್ಟ್ರೀಯತೆಯ ಅರ್ಥದಲ್ಲಿ ಭಾರತೀಯ ವಿಘಟನೆಗೆ ಹಲವಾರು

ಕಾರಣಗಳೂ ಇದ್ದವು. ಸಾಮಂತರ, ಅರಸರ ಮತ್ತು ಚಕ್ರವರ್ತಿಗಳ ಆಳ್ವಿಕೆಯಲ್ಲಿ ಹಂಚಿಹರಿದು ಹೋಗಿದ್ದು, ಸಾಂಸ್ಕೃತಿಕ ಅಸ್ತಿತ್ವವು ಮೇಲ್ವರ್ಗದವರ ಸಂಸ್ಕೃತಿಯನ್ನು ಮಾತ್ರ ಪ್ರತಿಬಿಂಬಿತವಾಗುವಂತೆ ನೋಡಿಕೊಂಡಿದೆ. ಪ್ರತಿ ಸಾಮಂತಅರಸ ಹಾಗೂ ಚಕ್ರವರ್ತಿಗಳಿಗೆ ತನ್ನ ಹಾಗೂ ತನ್ನ ಸಾಂಸ್ಕೃತಿಕ ಅಸ್ತಿತ್ವಕ್ಕಾಗಿ ನಿರಂತರ ಹೋರಾಟ ಅನಿವಾರ್ಯವಾಗಿತ್ತು. ಅದು ಪುನರ್ ಸಂಘಟನೆಗಳ ಹುಟ್ಟುವಿಕೆಗೆ ಕಾರಣವಾಗುತ್ತಿದ್ದುದರಿಂದ ಸ್ಥಳೀಯ ವಿಘಟನೆಗಳಿಗೆ ಆಸ್ಪದ ನೀಡಿದಂತಾಗುತ್ತಿತ್ತು. ಈ ಪುನರ್ ಸಂಘಟನೆಯ ಖರ್ಚುವೆಚ್ಚಗಳಿಗೆ ಕೆಳವರ್ಗದವರ ಶ್ರಮಮೂಲದ ಉತ್ಪಾದನೆ ಅವಲಂಬಿಸಿತ್ತು. ಇನ್ನು ಕೆಳವರ್ಗದವರು ''ಯಾವ ಅರಸು ಬಂದರೂ ರಾಗಿ ಬೀಸೋದು ತಪ್ಪಲ್ಲ'' ಎನ್ನುವ ನೆಲೆಯಲ್ಲಿ ತಮ್ಮ ತಮ್ಮ ಮೂಲಭೂತ ಅವಶ್ಯಕತೆಗಳ ಈಡೇರಿಕೆಗಾಗಿ ದಿನನಿತ್ಯದ ದುಡಿಮೆಯ ಹೋರಾಟಕ್ಕೆ ಒಳಗಾಗಬೇಕಿತ್ತು. ಕೆಲವೊಂದು ಸಲ ಬಿಟ್ಟಿ ದುಡಿಮೆ ಅನಿವಾರ್ಯವಾಗಿತ್ತು. ಈ ಅಸಮಾನ ಆರ್ಥಿಕ ಹಂಚಿಕೆಯ ಒಳಬೇರುಗಳು ಚರಿತ್ರೆಯ ಪ್ರತಿರೋಧಿ ನೆಲೆಯ ಚಾಲಕ ಶಕ್ತಿಗಳಾಗಿ ಕೆಲಸ ಮಾಡಿದವು.

೧.೧.೨. ರಾಜಕೀಯ ಸ್ಥಿತ್ಯಂತರ :

ಮಧ್ಯಯುಗದ ಭಾರತೀಯ ಚರಿತ್ರೆ ಹಲವಾರು ಸ್ಥಿತ್ಯಂತರಗಳಿಂದ ಕೂಡಿದ್ದು ರಾಜಕೀಯ ಸಾಮರಸ್ಯವು ಭಾರತೀಯ ನೆಲೆಯಲ್ಲಿ ಇರಲೇ ಇಲ್ಲ. ಇದಕ್ಕೆ ಪ್ರಮುಖ ಕಾರಣವೆಂದರೆ, ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ಭಾರತೀಯ ಆಳರಸರು ಆಂತರಿಕವಾಗಿ ಸಹಯೋಗದಿಂದಿರದೆ, ನಿರಂತರವಾಗಿ ಪರಸ್ಪರ ಕಲಹ ಆಕ್ರಮಣಗಳಲ್ಲಿ ತೊಡಗಿದ್ದು; 'ಇಬ್ಬರ ನ್ಯಾಯ ಮೂರನೆಯವನಿಗೆ ಆಯ' ಎಂಬಂತೆ ಪರಕೀಯರ ದಾಳಿಗಳಿಗೆ ಆಹ್ವಾನ ನೀಡಿದಂತಾಗಿತ್ತು. ಭಾರತದ ಚಕ್ರವರ್ತಿಗಳ ಮೇಲೆ, ಅಖಂಡ ಭಾರತದ ಮೇಲಿನ ರಾಜಕೀಯ (ಘಜ್ನಿ ಕಾಲ ೧೦೨೪) ದಾಳಿಯಿಂದಾಗಿ ಉತ್ತರ ಭಾರತದ ದೆಹಲಿಯ ಸುಲ್ತಾನರ ಆಳ್ವಿಕೆಯ ಚಕ್ರಾಧಿಪತ್ಯಕ್ಕೆ ಒಳಗಾಗುವಂತೆ ಮಾಡಿತು. ನಂತರ ಅದೇ ಪುನರಾವರ್ತನೆಯೆಂಬಂತೆ ಮತ್ತೆ ಘೋರಿ (೧೧೭೫) ಸಮಗ್ರ ಭಾರತದ ಮೇಲೆ ದಾಳಿ ಮಾಡಿದ.

ಈ ಎರಡೂ ಮುಸ್ಲಿಂ ದಾಳಿಗಳು ಬಹುತೇಕ ಉತ್ತರಭಾರತದ ಮೇಲೆ ಹೆಚ್ಚು ಪರಿಣಾಮಕಾರಿಯಾದ್ದರಿಂದ ಇಡೀ ಉತ್ತರ ಭಾರತೀಯ ಸಮಾಜೋ ರಾಜಕೀಯ ಬದುಕಿನ ತಲ್ಲಣದಿಂದ ನಮ್ಮ ಸಾಂಸ್ಕೃತಿಕ ಅಸ್ತಿತ್ವವೆಲ್ಲ ಅಸ್ತವ್ಯಸ್ತಗೊಂಡಿತು (ಇಲ್ಲಿ ಆರಂಭವಾದ ಪರಕೀಯ ಆಳ್ವಿಕೆಯು ಅನೇಕ ಶತಮಾನಗಳವರೆಗೆ ಚಾಚಿಕೊಂಡಿತು).

೧.೧.೩. ದಕ್ಷಿಣಭಾರತ :

ಉತ್ತರ ಭಾರತಕ್ಕೆ ಹೋಲಿಸಿದರೆ ದಕ್ಷಿಣ ಭಾರತದ ಚರಿತ್ರೆಯ ಸಾಂಸ್ಕೃತಿಕ ನೆಲೆಗಳು ಎಂದಿಗೂ ಆಶಾದಾಯಕವಾಗಿಯೇ ಇವೆ. ಅದರಲ್ಲಿ "ಕರ್ನಾಟಕ ಇತಿಹಾಸದ '೮' ಮತ್ತು '೧೪'ನೆ ಶತಮಾನಗಳ ನಡುವಣ ಅವಧಿಯು 'ಕರ್ನಾಟಕ ಬಲ'ವು ಉತ್ಸಾಹಯುತ ಪ್ರಶಂಸೆಗಳನ್ನು ಗಳಿಸುವಂತಹ ಶಕ್ತಿ ಪ್ರದರ್ಶನದ ಮತ್ತು ಯಶಸ್ಸಿನ ಸಂದರ್ಭಗಳಿಂದ ತುಂಬಿದೆ".[1] ಆದರೆ ಇಲ್ಲಿ ಸಹ ಅಧಿಕಾರ ಅಸ್ತಿತ್ವದ ಹಿನ್ನೆಲೆಯಲ್ಲಿ ಆಂತರಿಕ ವೈಮನಸ್ಸುಗಳು ಹಲವಾರು ಪ್ರಾಂತಭೇದಗಳಿಗೆ ಎಡೆ ಮಾಡಿಕೊಟ್ಟಿದೆ. ಹಾಗಾಗಿ ಮಧ್ಯಕಾಲದಲ್ಲಿ ದಕ್ಷಿಣ ಭಾರತದ ಆಳ್ವಿಕೆಯ ಅಧಿಕಾರವು ಆಂಧ್ರದಲ್ಲಿ ಕಾಕತೀಯರು, ತಮಿಳುನಾಡಿನಲ್ಲಿ ಚೋಳರು, ಉತ್ತರ ಕರ್ನಾಟಕದಲ್ಲಿ ಯಾದವ (ಸವುಣ)ರು, ದಕ್ಷಿಣ ಕರ್ನಾಟಕವು ಹೊಯ್ಸಳ ಮತ್ತು ಚಾಳುಕ್ಯರಲ್ಲಿ ಹಂಚಿಹೋಗಿತ್ತು.

೧.೧.೪. ಚಾಳುಕ್ಯರು :

ದಕ್ಷಿಣ ಭಾರತದಲ್ಲಿ ಕರ್ನಾಟಕದ ಪ್ರಮುಖ ಪ್ರಭಾವಿ ಅರಸು ಮನೆತನ ವೆಂದರೆ ಚಾಳುಕ್ಯರದು ಒಂದೆ. ಈ ಚಾಳುಕ್ಯರು ಸು. ೬ನೆ ಶತಮಾನದಿಂದ ೧೨ನೆ ಶತಮಾನದವರೆಗೆ ಆಳ್ವಿಕೆ ಮಾಡಿದರು.

ಬದಾಮಿ ಚಾಳುಕ್ಯರು (ದಕ್ಷಿಣ ಕರ್ನಾಟಕದ ಬದಾಮಿಯನ್ನು ರಾಜಧಾನಿ ಯಾಗಿ) ಮತ್ತು ಕಲ್ಯಾಣ ಚಾಳುಕ್ಯರು (ಉತ್ತರ ಕರ್ನಾಟಕದ ಇಂದಿನ ಬೀದರ ಜಿಲ್ಲೆಯ ಬಸವಕಲ್ಯಾಣ, ಅಂದಿನ 'ಕಲ್ಯಾಣ' (ಕಲ್ಯಾಣಪುರ) ಮತ್ತು ವೆಂಗಿಯ ಚಾಳುಕ್ಯರು ರಾಜ್ಯಭಾರ ಮಾಡಿದ್ದಾರೆ. ಇವರಲ್ಲಿ ಬದಾಮಿಯ ಚಾಳುಕ್ಯರು ಮತ್ತು ಕಲ್ಯಾಣದ ಚಾಲುಕ್ಯರೆ ಇಲ್ಲಿ ಚಾರಿತ್ರಿಕವಾಗಿ ಮುಖ್ಯರಾಗುತ್ತಾರೆ.

ಕಲ್ಯಾಣದ ಚಾಲುಕ್ಯರು :

೨ನೆ ತೈಲಪನಿಂದ ಆರಂಭವಾದ ಈ ಮನೆತನವು ಬದಾಮಿ ಚಾಲುಕ್ಯರಿಂದ ಬೇರ್ಪಟ್ಟು ಕಲ್ಯಾಣಪುರವನ್ನೇ ತಮ್ಮ ರಾಜಧಾನಿಯಾಗಿ ಪಡೆದುದರಿಂದ ಆ ಮನೆತನವನ್ನು ಕಲ್ಯಾಣದ ಚಾಳುಕ್ಯರೆಂದು ಕರೆಯಲಾಗಿದೆ. ಆದರೂ ಕಲ್ಯಾಣ ಚಾಳುಕ್ಯರ ಮೂಲ ಬದಾಮಿಯೇ ಆಗಿದೆ ಎಂಬುದಕ್ಕೆ ಶಾಸನ ಹಾಗೂ ಸಾಹಿತ್ಯಕೃತಿ ಗಳಲ್ಲಿ ಆಧಾರವಿದೆ. ಕಲ್ಯಾಣ ಚಾಲುಕ್ಯರ ಪ್ರಭುತ್ವದ ಹಿತಾಸಕ್ತಿ ಹಾಗೂ ಆಶೋತ್ತರ ಗಳು ಕನ್ನಡದ ದೇಸೀಯತೆಯ ಮೌಲ್ಯಗಳಿಂದ ರೂಪ ಪಡೆದ ಅವರ ಆಳ್ವಿಕೆ,

ಕವಿರಾಜಮಾರ್ಗಕಾರ ವರ್ಣಿಸಿದ ಗಡಿಗಳ ಮೇಲೆಯೇ ಕೇಂದ್ರೀಕೃತವಾಗಿದೆ. ಅಲ್ಲದೆ ಈ ಪ್ರದೇಶಗಳೊಂದಿಗೆ ನಿರ್ದಿಷ್ಟ ಭಾಷಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಮೀಕರಣಗಳು ನಡೆದಿವೆ. ಇವರ ಆಳ್ವಿಕೆಯು ಅತ್ಯಂತ ಪ್ರಬಲ ಹಾಗೂ ಮುಖ್ಯ ಅರಸನೆಂದರೆ ಆರನೇ ವಿಕ್ರಮಾದಿತ್ಯ. ಇವನ ಆಳ್ವಿಕೆಯು ಅತ್ಯಂತ ಸಮೃದ್ಧಿಯ ಕಾಲ ವಾಗಿತ್ತು ಎಂದು Orientlistರು ಅಭಿಪ್ರಾಯ ಪಟ್ಟರೆ, ಬಿಲ್ಹಣನು ಸುಖಿ (ಆನಂದ) ರಾಜ್ಯವಾಗಿತ್ತೆಂದು ವಿವರಿಸುವನು. ಆಸ್ಥಾನ ಪಂಡಿತನಾದ ವಿಜ್ಞಾನೇಶ್ವರ ತನ್ನ ಮಿತಾಕ್ಷರ ಕೃತಿಯಲ್ಲಿ

''ನಾಸೀ ದಸ್ತಿ ಭವಿಷ್ಯತೆ ಕ್ಷಿತಿತತೀಕಲ್ಯಾಣಕಲ್ಪಂಪುರಂ।
ನೋದ್ರಷ್ಟಃ ಶ್ರುತಏವವಾಕ್ಷಿತಿಪತಿಃ ಶ್ರೀವಿಕ್ರಮಾರ್ತೋಪಮಃ॥''[2]

ಎಂದಿದ್ದಾನೆ.

ಅಂದರೆ ಈ ಭೂಮಿಯ ಮೇಲೆ ಕಲ್ಯಾಣದಂತಹ ಮತ್ತೊಂದು ನಗರ ಈ ಹಿಂದೆ ಇರಲಿಲ್ಲ, ಇಂದೂ ಇಲ್ಲ, ಮುಂದೆಯೂ ಇರುವುದಿಲ್ಲ. ವಿಕ್ರಮಾದಿತ್ಯನಂಥ ಚಕ್ರವರ್ತಿ ಪ್ರಪಂಚದಲ್ಲಿ ಬೇರೆ ಯಾರೂ ಇಲ್ಲ ಎಂದು ಅರ್ಥ. ಈ ಮಾತುಗಳು ಅತಿಶಯೋಕ್ತಿ ಎನಿಸಿದರೂ ಸತ್ಯಕ್ಕೆ ಸಮೀಪವಾಗಿವೆ. ಸಾಂಸ್ಕೃತಿಕವಾಗಿ ೬ನೆಯ ವಿಕ್ರಮಾದಿತ್ಯನ ಕೊಡುಗೆ ಅಪಾರ. ''ಸಂಖ್ಯಾದೃಷ್ಟಿಯಿಂದ ಪ್ರಪಂಚದಲ್ಲಿಯೇ ಅಧಿಕ ಶಾಸನ ಬರೆಸಿದ ಚಕ್ರವರ್ತಿಯಿತ. ಸಾವಿರಕ್ಕೂ ಮೇಲ್ಪಟ್ಟಿರುವ ಇವನ ಶಾಸನ ಗಳಲ್ಲಿ ಆ ಕಾಲದ ರಾಜಕೀಯ, ಆಡಳಿತಾತ್ಮಕ, ಧಾರ್ಮಿಕ, ಸಾಮಾಜಿಕ ಮೊದಲಾದ ವಿಷಯಗಳು ತುಂಬಿ ನಿಂತಿವೆ.''[3] ಇದರಿಂದ ವಿಕ್ರಮಾದಿತ್ಯನ ಘನತೆ ವಿದಿತವಾಗುತ್ತದೆ.

ನಂತರ ಬಂದ ಸೋಮೇಶ್ವರನು ಅಸಮರ್ಥನಾಗಿದ್ದನು. ಇವನ ಮಗ ಇಮ್ಮಡಿ ಜಗದೇಕಮಲ್ಲ (೧೧೩೮-೪೯) ಕಾಲವಾದನು. ಮುಂದೆ ೩ನೆಯ ತೈಲಪ (೧೧೪೯-೬೨) ಅಧಿಕಾರ ವಹಿಸಿಕೊಂಡನು. ಆದರೆ ತೈಲಪನು ಸಹ ಹೇಳುವಷ್ಟು ದಕ್ಷ-ಶ್ರೇಷ್ಠ ಆಡಳಿತಗಾರನಾಗಿರಲಿಲ್ಲ. ಈತನ ದೌರ್ಬಲ್ಯದ ಸದುಪಯೋಗವನ್ನು ಪಡೆದ ಕಲಚೂರಿಗಳು ಪ್ರಬಲರಾಗಲು ಸಾಧ್ಯವಾಯಿತು.

೧.೧.೫. ಕಲಚೂರಿಗಳು :

ಕಲ್ಯಾಣಿ ಚಾಲುಕ್ಯರ ಪ್ರಮುಖ ಸಾಮಂತ ಅರಸರಲ್ಲಿ ಒಬ್ಬರಾದ ಕಲಚೂರಿ ಗಳು ಕರ್ನಾಟಕದಲ್ಲಿ ೧೨ನೆ ಶತಮಾನದ ಆರಂಭದಲ್ಲಿ ಬೆಳಕಿಗೆ ಬಂದರು. ಸ್ವತಂತ್ರ ವಾಗಿ ಅತ್ಯಂತ ಅಲ್ಪಾವಧಿಯ ಆಳ್ವಿಕೆ ಮಾಡಿದ ಇವರು ರಾಜಕೀಯ, ಸಾಮಾಜಿಕ,

ಧಾರ್ಮಿಕ, ಆರ್ಥಿಕ, ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಬದಲಾವಣೆಗೆ ಕಾರಣರಾದರು. ದುರಂತವೆಂದರೆ ಸಮರ್ಥ ನಾಯಕತ್ವದ ಆಳ್ವಿಕೆ ನೀಡಲು ಇವರಿಗೆ ಸಾಧ್ಯವಾಗಲಿಲ್ಲ. ಆದ್ದರಿಂದ ಇವರ ರಾಜಕೀಯ ವ್ಯವಸ್ಥೆಯ ರೂಪುರೇಷೆಗಳೇ ಬದಲಾದವು.

ಕಲಚೂರಿಗಳು ಸಹ ಸುವರ್ಣ ವೃಷಭ (ಚಿನ್ನದ ಗೂಳಿ) ಲಾಂಛನ ಹೊಂದಿದ್ದ ಮಧ್ಯಪ್ರದೇಶದ ಕಟಚೂರಿಗಳಂತೆ ಇವರೂ ಸೂರ್ಯಚಂದ್ರರ ಮೂಲದವರೆಂದು ಹೇಳಿಕೊಳ್ಳುತ್ತಾರೆ (ಇವರ ಲಾಂಛನದಲ್ಲಿ ಚಂದ್ರಾರ್ಕರಿರುವುದು ಗಮನಿಸಬೇಕು ನೋಡಿ : ಕಲಚೂರಿಗಳ ಲಾಂಛನ). ಮೊದಲು ಮಂಗಲವೇಢ (ಮಹಾರಾಷ್ಟ್ರದ ಸೋಲಾಪುರ ಜಿಲ್ಲೆ) ರಾಜಧಾನಿಯಾಗಿ ಮಾಡಿಕೊಂಡು ನಂತರ ಕಲ್ಯಾಣಕ್ಕೆ ಬಂದರು (ಇಂದಿನ ಬೀದರ ಜಿಲ್ಲೆಯ ಬಸವಕಲ್ಯಾಣ).

ಕಲಚೂರಿಗಳಲ್ಲಿ ಅತ್ಯಂತ ಪ್ರಮುಖ ಅರಸ ೨ನೆಯ ಬಿಜ್ಜಳ. ಇವನು ಮೊದಲು ಚಾಲುಕ್ಯರಲ್ಲಿ ಮಹಾಮಾಂಡಲಿಕನಾಗಿದ್ದು, ೨ನೆಯ ತೈಲಪನನ್ನು ಕ್ಷಿಪ್ರ ಕ್ರಾಂತಿಯಿಂದ ಕೆಳಗಿಳಿಸಿ ಸ್ವತಂತ್ರ ಚಕ್ರವರ್ತಿಯಾದನು. ಬಹುಶಃ ಚಾರಿತ್ರಿಕ ಗತಿ ತಾರ್ಕಿಕತೆಯೆಂದರೆ ಇದೇ ಇರಬಹುದು. ಕಾಲಮಾನದ ಬದಲಾವಣೆಯೇ ಚರಿತ್ರೆ ಅಲ್ಲವೇ? ಆದರೆ ಈ ಬದಲಾವಣೆಯ ಮಧ್ಯದ ರಾಜಕೀಯ, ಸಮಾಜೋ-ಧಾರ್ಮಿಕ ಸ್ಥಿತ್ಯಂತರಗಳಿಂದ ಕಲೆ-ಸಾಹಿತ್ಯದಲ್ಲಿ ಅಗಾಧ ಬದಲಾವಣೆಗಳಾದವು.

ಹೊಸ ಅಧಿಕಾರ ಒಪ್ಪಿಕೊಳ್ಳುವ ಸಂಕ್ರಮಣ ಸ್ಥಿತಿಯ ಅಸ್ತವ್ಯಸ್ತತೆ ರೂಪುಗೊಳ್ಳುವ ಮಧ್ಯದಲ್ಲಿ ಒಂದಿಷ್ಟು ಸಂಘರ್ಷ ಆದರೊಡಲಿನಿಂದಲೇ ಬರುತ್ತ, ಹೊಸದೊಂದು ಸಂಘಟನೆ ಹುಟ್ಟುಹಾಕುವುದು ಸಾಮಾಜಿಕ ಅನಿವಾರ್ಯವಾಗಿಬಿಡುತ್ತದೆ. ತತ್ಕಾಲೀನ ಸಂಘಟನೆಯ ಆಶಯ ಮತ್ತು ಸಮಾಜದ ಕರೆಯ ಫಲಶ್ರುತಿಯಾಗಿ ಸಾಮಾಜಿಕ ಮೌಲ್ಯಗಳನ್ನು ಪುನಃ ಕಟ್ಟುವ, ರೂಪಿಸುವ ಯತ್ನಗಳು ಜರುಗುತ್ತವೆ. ಅವಕ್ಕೆ ಸಮೂಹದ ಒಲವು ಇರುತ್ತದೆ. ಅಂಥ ಸಂಘಟನೆಯಾಗಿ ರೂಪು ಪಡೆದಿದ್ದು ಕಳಚೂರಿ ಬಿಜ್ಜಳನ ಮಂತ್ರಿಯಾಗಿದ್ದ ಬಸವಣ್ಣನ ಮೂಲಕ. ಸಂಘಟನೆಯನ್ನು ಅನುಭಾವ ಮಂಟಪವಾಗಿ ಬಸವಣ್ಣ ಸಮರ್ಥರೀತಿಯಲ್ಲಿ ರೂಪಿಸಿದ್ದು, ಬಿಜ್ಜಳ ಮಂಗಳವೇಡೆಯಿಂದ ಕಲ್ಯಾಣಕ್ಕೆ ಬಂದು ಅದನ್ನು ರಾಜಧಾನಿಯಾಗಿಸಿಕೊಂಡು ಆಳಲು ಆರಂಭಿಸಿದಾಗ ಎಂದು ಧಾರಾಳವಾಗಿ ಹೇಳಬಹುದು.

೧.೧.೬. ಕಲ್ಯಾಣ :

ಕಲ್ಯಾಣವೆಂಬ ಹೆಸರು ಅನಂತವನ್ನು ತುಂಬಿಕೊಡುವ ಧೀಮಂತ ಪಾರಿಭಾಷಿಕ ಪದ. ಇದು ಅಭಿವೃದ್ಧಿಯ (progressive) ಉನ್ನತಿಯ ಸಂವಾದಿಪದವಾಗಿದೆ.

ಇನ್ನೊಬ್ಬರಿಗೆ ಒಳ್ಳೆಯದನ್ನು ಮಾಡುವುದೇ ಕಲ್ಯಾಣವಾಗಿರೋದರಿಂದ ಇದೊಂದು ಮನೋಧರ್ಮವೂ ಹೌದು, ಗುಣಧರ್ಮವೂ ಹೌದು. ಹೀಗೆ ಕಲ್ಯಾಣಕ್ಕೆ ಶಾಬ್ದಿಕ ಮಹತ್ವವಿದ್ದರೆ ಚಾರಿತ್ರಿಕವಾಗಿ ರಾಮಾಯಣ-ಮಹಾಭಾರತದ ಕಾಲದಿಂದಲೂ ಈ ಊರಿಗೆ ಮಹತ್ವವಿದೆ. ಮುಂದೆ ಚಾಳುಕ್ಯರು, ಕಳಚೂರ್ಯರು ಕಲ್ಯಾಣವನ್ನೇ ರಾಜಧಾನಿಯಾಗಿ, ಆಳ್ವಿಕೆ ಮಾಡಿದರಿಂದ ಅದಕ್ಕೆ ಖ್ಯಾತಿ ಬಂದಿರುವುದು. ಅಲ್ಲದೆ ಮಧ್ಯಕಾಲೀನ ಸಂದರ್ಭಕ್ಕೆ ಬಸವಾದಿ ಶರಣರ ಸಾಮಾಜಿಕ-ಧಾರ್ಮಿಕ ಚಳುವಳಿಯ ಮೂಲಕ ಅನೇಕ ಜನರನ್ನು ಇದು ಆಕರ್ಷಿಸುವಂತೆ ಮಾಡಿ ದೇಶ-ವಿದೇಶದಿಂದ ಸಾವಿರಾರು ಜನರನ್ನು ಬರಮಾಡಿಕೊಂಡಿದರಿಂದ ಇದಕ್ಕೆ ಮತ್ತಷ್ಟು ಮೆರಗು ಬಂತು. ಅಂತಹ ಕಲ್ಯಾಣದ ಮಹಾತ್ಮ್ಯೆಯನ್ನು ಚೆನ್ನಬಸವಣ್ಣ ವರ್ಣಿಸಿದ್ದಾನೆ.

''ಸ್ವಸ್ತಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮತ್ ಕಲ್ಯಾಣಪುರದ ಮಹಾತ್ಮ್ಯ ಎಂತೆಂದಡೆ :
ವಿಸ್ತರಿಸಿ ಪೇಳುವೆನು, ಎಲ್ಲಾ ಶಿವಗಣಂಗಳು ಕೇಳಿ ಕೃತಾರ್ಥರಾಗಿರಯ್ಯ.
ಹದಿನಾಲ್ಕು ಭುವನಕ್ಕೆ ಕಳಸವೆಂದೆನಿಸುವ ರುದ್ರಲೋಕವೇ ಮರ್ತ್ಯಕ್ಕಿಳಿತಂದು,
ಕಲ್ಯಾಣವೆಂಬ ಪುರವಾಗಿ ಹುಟ್ಟಿತು ನೋಡಿರಯ್ಯ !
ಅಲ್ಲಿ ಸತ್ಯರು ಸಾತ್ವಿಕರು ನಿತ್ಯರು ನಿಜೈಕ್ಯರು ಮಹಾಜ್ಞಾನಿಗಳು
ಪರಮಶಿವಯೋಗಿಗಳು ಶಿವಾನುಭಾವಸಂಪನ್ನರು ಶಿವಲಿಂಗಪ್ರಾಣಿಗಳು
ಶಿವಪ್ರಸಾದಪಾದೋದಕಸಂಬಂಧಿಗಳು ಶಿವಾಚಾರವೇದ್ಯರು ಶಿವಾಗಮಸಾಧ್ಯರು
ಶಿವಸಮಯಪಕ್ಷರುಗಳಲ್ಲದೆ ಮತ್ತಾರು ಅಲ್ಲಿಲ್ಲ ನೋಡಿರಯ್ಯಾ
ಪಾಪಿಗಳು ಕೋಪಿಗಳು ಅಸತ್ಯರು ಅನಾಚಾರಿಗಳು ಹೋಗಬಾರದು ಕಲ್ಯಾಣವ
ಮೀರಿ ಹೊಕ್ಕೆಹೆವೆಂಬವರಿಗೆ ಬಾಳ ಬಾಯಧಾರೆ ನೋಡಿರಯ್ಯಾ
ಆ ಕಲ್ಯಾಣ ಅಗಮ್ಯ ಅಗೋಚರ ನೋಡಿರಯ್ಯ
ಆ ಮಹಾಕಲ್ಯಾಣದ ವಿಸ್ತೀರ್ಣ ತಾನೆಂತೆಂದಡೆ :
ಹನ್ನೆರಡು ಯೋಜನ ಪರಿಪ್ರಮಾಣದ ವಿಸ್ತೀರ್ಣ ಪಟ್ಟಣಕ್ಕೆ
ಮುನ್ನೂರರವತ್ತು ಬಾಗಿಲವಾಡ
ಆ ಬಾಗಿಲಿಂಗೆ ನೂರ ಐವತ್ತೈದು ವಜ್ರದ ಹಾರೆಯ ಕದಂಗಳು
ಇನ್ನೂರ ಇಪ್ಪತ್ತೈದು ಕಲುಗೆಲಸದ ದ್ವಾರಪಟ್ಟಕ್ಕೆ
ನಾನೂರ ಐವತ್ತು ಸುವರ್ಣದ ಕೆಲಸದ ಕದಂಗಳು,

ಅಲ್ಲಿ ನೂರ ಹದಿನೈದು ಚೋರಗಾಡಿ
ಅವಕ್ಕೆ ನೂರ ಹದಿನೈದು ಮೊಳೆಯ ಕದಂಗಳು
ಇಪ್ಪತ್ತು ಬಾಗಿಲು ಆಳ್ಸರಿಯೊಳಗಿಪ್ಪವಾಗಿ ಅವಕ್ಕೆ ಕದಂಗಳಿಲ್ಲ
ಆ ಪಟ್ಟಣಕ್ಕೆ ಬಳಸಿ ಬಂದ ಕೋಂಟೆ ನಾಲ್ವತ್ತೆಂಟು ಯೋಜನ ಪರಿಪ್ರಮಾಣ
ಬಾಹತ್ತರ (ನಿಯೋಗಿಗಳ) ಮನೆ ಲಕ್ಷ; ಮಂಡಳಿಕರ ಮನೆ ಲಕ್ಷ;
ಸಾಮಾಂತರ ಮನೆ ಲಕ್ಷ; ರಾಯ ರಾವುತರ ಮನೆಯೊಳಡಗಿದ
ಮನೆಗಳಿಗೆ ಲೆಕ್ಕವಿಲ್ಲ
ದ್ವಾದಶ ಯೋಜನ ವಿಸ್ತೀರ್ಣದ ಸೂರ್ಯವೀಧಿ ನೂರಿಪ್ಪತ್ತು;
ದ್ವಾದಶ ಯೋಜನದ ಸೋಮವೀಧಿ ನೂರಿಪ್ಪತ್ತೈದು
ಅದರಿಂ ಮಿಗಿಲಾದ ಒಳಕೇರಿ ಹೊರಕೇರಿಗೆ ಗಣನೆಯಿಲ್ಲ
ಆ ಪಟ್ಟಣದೊಳಗೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶಿವಾಲಯ
ಆ ಶಿವಾಲಯಂಗಳಿಗೆ ಮುಖ್ಯವಾದ ತ್ರಿಪುರಾಂತಕದೇವರ ಶಿವಾಲಯ
ಮುನ್ನೂರರವತ್ತು ಪದ್ಮಪತ್ರ ತೀವಿದ ಸರೋವರಗಳು
ಎರಡು ಲಕ್ಷವು ಎಂಬತ್ತೈದು ಸಾವಿರದ ಏಳು ನೂರೆಪ್ಪತ್ತು
ದಾಸೋಹದ ಮಠಂಗಳು
ಆ ದಾಸೋಹದ ಮಠಂಗಳಿಗೆ ಮುಖ್ಯವಾದ
ಬಸವರಾಜದೇವರ ಮಠದ ವಿಸ್ತೀರ್ಣವೆಂತೆಂದಡೆ;
ಯೋಜನವರಿಯ ಬಿನ್ನಣದ ಕಲುಗೆಲಸದ ಪೌಳಿ;
ಅತಿ ಸೂಕ್ಷ್ಮದ ಕುಸುರಿಗೆಲಸದ ದ್ವಾರವಟ್ಟವೈದು
ಅವಕ್ಕೆ ಪಂಚಾಕ್ಷರಿಯ ಶಾಸನ
ಮಿಸುನಿಯ ಕಂಬದ ತೋರಣಗಳಲ್ಲಿ ರುದ್ರಾಕ್ಷಿಯ ಸೂಸಕ
ಆ ಬಾಗಿಲುವಾಡದಲ್ಲಿ ಒಪ್ಪುತಿರ್ಪವಯ್ಯಾ
ನಂದಿಯ ಕಂಬದ ಧ್ವಜ ಉಪ್ಪರಗುಡಿ ಪತಾಕೆ ವ್ಯಾಸಧ್ವಜ ಒಪ್ಪುತಿರ್ಪವಯ್ಯ
ಆ ಮಧ್ಯದಲ್ಲಿ ಬಸವರಾಜದೇವರ ಸಿಂಹಾಸನದ ವಿಸ್ತೀರ್ಣದ ಪ್ರಮಾಣು
ಸಹಸ್ರಕಂಭದ ಸುವರ್ಣದುಪ್ಪರಿಗೆ ಆ ಮನೆಗೆತ್ತಿದ ಹೊನ್ನಕಳಸ ಸಾವಿರ
ಗುರುಲಿಂಗ ಜಂಗಮಕ್ಕೆ ಪಾದಾರ್ಚನೆಯ ಮಾಡುವ ಹೊಕ್ಕರಣೆ

ನಾಲ್ಕು ಪುರುಷಪ್ರಮಾಣದ ಘಾತ
ಅಲ್ಲಿ ತುಂಬಿದ ಪಾದೋದಕದ ತುಂಬನುಚ್ಚಲು
ಬೆಳೆವ ರಾಜಶಾಲಿಯ ಗದ್ದೆ ಹನ್ನೆರಡು ಕಂಡುಗ
ಆ ಯೋಜನವರಿಯ ಬಿನ್ನಾಣದ ಅರಮನೆಯ ವಿಸ್ತೀರ್ಣದೊಳಗೆ
ಲಿಂಗಾರ್ಚನೆಯ ಮಾಡುವ ಮಠದ
ಕಟ್ಟಳೆ ಲಕ್ಷದ ಮೇಲೆ ತೊಂಬತ್ತಾರು ಸಾವಿರ
ಇನ್ನು ಬಸವರಾಜದೇವರು ಮುಖ್ಯವಾದ ಅಸಂಖ್ಯಾತರ ಮಠಂಗಳು
ಆ ಕಲ್ಯಾಣದೊಳಗೆ ಎಷ್ಟು ಎಂದಡೆ ;
ಹನ್ನೆರಡು ಸಾವಿರ ಕಟ್ಟಳೆಯ ನೇಮದ ಭಕ್ತರ ಮಠಂಗಳು
ಇಪ್ಪತ್ತೆಂಟು ಸಾವಿರ ಮಹಾಮನೆಗಳು ;
ಹತ್ತು ಸಾವಿರ ನಿತ್ಯನೇಮಿಗಳ ಮಠಂಗಳು ;
ಪದಿನೈದು ಸಾವಿರ ಚಿಲುಮೆಯಗ್ಗವಣಿಯ ವ್ರತಸ್ಥರ ಮಠಂಗಳು ;
ಐದು ಸಾವಿರ ವೀರವ್ರತನೇಮಿಗಳ ಕಟ್ಟಳೆಯ ಮಠಂಗಳು ;
ಹನ್ನೆರಡು ಸಾವಿರ ಅಚ್ಚಪ್ರಸಾದಿಗಳ ಮಠಂಗಳು,
ಒಂದು ಸಾವಿರ ಅರವತ್ತು ನಾಲ್ಕು ಶೀಲಸಂಪನ್ನರ ಮಠಂಗಳು
ನಿತ್ಯ ಸಾವಿರ ಜಂಗಮಕ್ಕೆ ಆರೋಗಣೆಯ ಮಾಡಿಸುವ ದಾಸೋಹಿಗಳ
ಮಠಂಗಳು, ಮೂವತ್ತೆರಡು ಸಾವಿರ
ನಿತ್ಯ ಐನೂರ ಜಂಗಮಕ್ಕೆ ಒಲಿದು ದಾಸೋಹವ ಮಾಡುವ
ಸತ್ಯಸದಾಚಾರಿಗಳ ಮಠಂಗಳು ಐವತ್ತೆಂಟು ಸಾವಿರ ;
ನಿತ್ಯ ಸಾವಿರದೈನೂರು ಜಂಗಮಕ್ಕೆ ಒಲಿದು ದಾಸೋಹವ ಮಾಡುವ
ದಾಸೋಹಿಗಳ ಮಠಂಗಳು ಹನ್ನೊಂದು ಸಾವಿರ ;
ನಿತ್ಯ ಅವಾರಿಯಿಂದ ಮಾಡುವ
ಮಾಟಕೂಟದ ಸದ್ಭಕ್ತರ ಮಠಂಗಳು ಒಂದು ಲಕ್ಷ ;
ಜಂಗಮಸಹಿತ ಸಮಯಚಾರದಿಂದ ಲಿಂಗಾರ್ಚನೆಯ ಮಾಡುವ
ಜಂಗಮಭಕ್ತರ ಮಠಂಗಳು ಎರಡು ಸಾವಿರದೇಳ್ನೂರೆಪ್ಪತ್ತು ;
ಅಂತು ಎರಡು ಲಕ್ಷವು ಎಂಬತ್ತೈದು ಸಾವಿರದ ಏಳುನೂರೆಪ್ಪತ್ತು

ಇಂತಪ್ಪ ಅಸಂಖ್ಯಾತರಿಗೆ ಮುಖ್ಯವಾಗಿ ರುದ್ರಲೋಕದಿಂದಿಳಿತಂದ
ಪ್ರಮಥಗಣಂಗಳ ಮಠಂಗಳು ಏಳುನೂರೆಪ್ಪತ್ತು
ಇಂತೀ ಮಹಾಪ್ರಮಥರಿಗೆ ಪುರಾತರಿಗೆ ಅಸಂಖ್ಯಾತ
ಮಹಾಗಣಂಗಳಿಗೆ ಪ್ರಮಥ ನಾಯಕನಾಗಿ,
ಏಕಮುಖ, ದಶಮುಖ, ಶತಮುಖ, ಸಹಸ್ರಮುಖ,
ಲಕ್ಷಮುಖ, ಕೋಟಿಮುಖ, ಅನಂತಕೋಟಿಮುಖನಾಗಿ
ಭಕ್ತರಿಗೆ ಒಡನಾಡಿಯಾಗಿಪ್ಪನು ಸಂಗನಬಸವಣ್ಣ
ಜಗದಾರಾಧ್ಯ ಬಸವಣ್ಣ, ಪ್ರಮಥಗುರು ಬಸವಣ್ಣ,
ಶರಣಸನ್ನಿಹಿತ ಬಸವಣ್ಣ, ಸತ್ಯಸಾತ್ವಿಕ ಬಸವಣ್ಣ
ನಿತ್ಯನಿಜೈಕ್ಯ ಬಸವಣ್ಣ, ಷಟ್‌ಸ್ಥಲಸಂಪನ್ನ ಬಸವಣ್ಣ,
ಸರ್ವಾಚಾರಸಂಪನ್ನ ಬಸವಣ್ಣ, ಸರ್ವಾಂಗಲಿಂಗ ಬಸವಣ್ಣ,
ಸುಜ್ಞಾನಭರಿತ ಬಸವಣ್ಣ, ನಿತ್ಯಪ್ರಸಾದ ಬಸವಣ್ಣ,
ಸಚ್ಚಿದಾನಂದಮೂರ್ತಿ ಬಸವಣ್ಣ, ಸದ್ಯೋನ್ಮುಕ್ತಿರೂಪ ಬಸವಣ್ಣ
ಅಖಂಡಪರಿಪೂರ್ಣ ಬಸವಣ್ಣ, ಅಕಾಯಚರಿತ್ರ ಬಸವಣ್ಣ,
ಅಸಾಧ್ಯ ಸಾಧಕ ಬಸವಣ್ಣ, ಅಭೇದ್ಯಭೇದಕ ಬಸವಣ್ಣ
ಅನಾಮಯಮೂರ್ತಿ ಬಸವಣ್ಣ
ಮಹಾಮನೆಯ ಮಾಡಿದಾತ ಬಸವಣ್ಣ
ರುದ್ರಲೋಕವ ಮರ್ತ್ಯಲೋಕಕ್ಕೆ ತಂದಾತ ಬಸವಣ್ಣ,
ಶಿವಾಚಾರದ ಘನವ ಮೆರೆದಾತ ಬಸವಣ್ಣ
ಇಂತಹ ಬಸವಣ್ಣನ ಭಕ್ತಿಯನು ಒರೆದೊರೆದು ನೋಡುವ
ಪ್ರಜ್ವಲಿತವ ಮಾಡುವ ಅಶ್ವಪತಿ, ಗಜಪತಿ, ನರಪತಿರಾಯ
ರಾಜಾಧಿರಾಜ ಬಿಜ್ಜಳರಾಯನೂ ಆ ಬಸವಣ್ಣನೂ ಆ ಕಲ್ಯಾಣಪಟ್ಟಣದೊಳಗೆ
ಸುಖಸಂಕಥಾವಿನೋದದಿಂದ ರಾಜ್ಯಂಗೆಯುತ್ತಿರಲು
ಆ ಕಲ್ಯಾಣದ ನಾಮವಿಡಿದು ವಿವಾಹಕ್ಕೆ ಕಲ್ಯಾಣವೆಂಬ ನಾಮವಾಯಿತು.
ಲೋಕದೊಳಗೆ ಕಲ್ಯಾಣವೇ ಕೈಲಾಸವೆನಿಸಿತ್ತು.
ಇಂತಪ್ಪ ಕಲ್ಯಾಣದ ದರುಶನವ ಮಾಡಿದಡೆ ಭವಂ ನಾಸ್ತಿ

ಇಂತಪ್ಪ ಕಲ್ಯಾಣವ ನೆನೆದಡೆ ಪಾಪಕ್ಷಯ,
ಇಂತಪ್ಪ ಕಲ್ಯಾಣದ ಮಹಾತ್ಮೆಯಂ ಕೇಳಿದಡೆ
ಕರ್ಮಕ್ಷಯವಹುದು, ಮೋಕ್ಷ ಸಾಧ್ಯವಹುದು,
ಇದು ಕಾರಣ, ಕೂಡಲಚೆನ್ನ ಸಂಗಮದೇವಾ
ನಿಮ್ಮ ಭಕ್ತ ಬಸವಣ್ಣನಿದ್ದ ಠಾವೆ ಮಹಾಕಲ್ಯಾಣವೆಂದರಿದು
ದಿವ್ಯಶಾಸನವ ಬರೆದು ಪಠಿಸಿದ ಕಾರಣ
ಎನ್ನ ಭವಂ ನಾಸ್ತಿಯಾಯಿತಯ್ಯಾ'' [4]

ಹೀಗೆ ಕಲ್ಯಾಣವು ಕಲ್ಯಾಣ ಮನೋಧರ್ಮ ಹೊಂದಿ, ಸಕಲ ಜೀವರಾಶಿಗಳಿಗೆ 'ದಯೆ' ತೋರಿದ್ದು ಅನುಭಾವಮಂಟಪದ ಮೂಲಕ.

****

೧.೨ ಕಲ್ಯಾಣದಲ್ಲಿ ಅನುಭಾವ ಮಂಟಪ

ತನ್ನ ಸಮಕಾಲೀನ ಅಸ್ತವ್ಯಸ್ತವಾದ ಬದುಕನ್ನು ವ್ಯವಸ್ಥಿತಗೊಳಿಸುವುದು ಸಾಮಾಜಿಕ ಅನಿವಾರ್ಯವಾದಾಗ, ಪರಿಸ್ಥಿತಿಗೆ ಅನುಕೂಲವಾದ ವ್ಯಕ್ತಿಯನ್ನು ಸಾಮಾಜಿಕ ರೂಪುರೇಷೆಗಳನ್ನು ಕಾಲ ತನ್ನಷ್ಟಕ್ಕೆ ತಾನೇ ರೂಪಿಸಿಕೊಳ್ಳುತ್ತದೆ. ಅದು ಜನತೆಯ ಆಶಯವೂ ಆಗಿರುತ್ತದೆ. ಅದಕ್ಕೆ ತಕ್ಕ ವ್ಯಕ್ತಿಯಾಗಿ ಬಸವಣ್ಣನ ವ್ಯಕ್ತಿತ್ವ ಆ ಕಾಲದ ಪರಿಸರ ರೂಪಿಸಿರುವುದು ಚಾರಿತ್ರಿಕವಾಗಿ ಮಹತ್ವದ ಸಂಗತಿ.

ಆದರೆ ಶ್ರೇಣೀಕೃತ ಭಾರತೀಯ ಸಾಮಾಜಿಕ ವ್ಯವಸ್ಥೆಯಲ್ಲಿ ನಾಯಕನಾಗಬೇಕಾದವನ ಮೂಲದ ಬಗ್ಗೆ ಪ್ರಶ್ನೆಗಳು ಬಂದಾಗ ನಾಯಕನಾಗಬೇಕಾದವನು ಕೆಳಸ್ತರದವನಾಗಿರಬೇಕು, ಮೇಲುಸ್ತರದವನಾಗಿರಬೇಕು ಎನ್ನುವಲ್ಲಿ ಎರಡು ವಾದಗಳಿವೆ. ಒಂದು ಮೇಲುಸ್ತರದ ವ್ಯಕ್ತಿಯಾಗಿರಬೇಕು ಎಂಬುದು ಆಲಿವರ್ ಕಾಕ್ಸನ ವಾದ. ''ನೀಗ್ರೋಗಳನ್ನು ಒಗ್ಗೂಡಿಸಿ ಅವರನ್ನು ಬಿಳಿಯರ ಹಿಡಿತದಿಂದ ಬಿಡುಗಡೆ ಮಾಡಿಸಬಲ್ಲ ನಾಯಕ ಅನಿವಾರ್ಯವಾಗಿ ಬಿಳಿಯನೇ ಆಗಬೇಕಾಗುತ್ತದೆ. ಈ ಬಿಳಿಯ ತನ್ನನ್ನು ತಾನು ಕರಿಯರ ಜೊತೆ ಏಕೀಕರಿಸಿಕೊಳ್ಳುವುದರಿಂದ ತಮಗಿಂತ ಶ್ರೇಷ್ಠನಾದ ಆ ಬಿಳಿಯನ ತ್ಯಾಗವನ್ನು ಕರಿಯರು ಮೆಚ್ಚುತ್ತಾರೆ. ತಮ್ಮ ನಾಯಕನಾಗಿ ಒಪ್ಪಿಕೊಳ್ಳಲು ಅವರು ಹಿಂಜರಿಯರು. ಉಳಿದ ಬಿಳಿಯರು ತಮ್ಮವನೇ ಒಬ್ಬನು ಕರಿಯರ ನಾಯಕನಾಗಿರುವಾಗ ಕರಿಯರ ಬೇಡಿಕೆ, ಧ್ಯೇಯ, ಉದ್ದೇಶಗಳನ್ನು (cause) ಸಹಾನುಭೂತಿಯಿಂದ ಪರಿಶೀಲಿಸಲು ಸಿದ್ಧರಾಗುತ್ತಾರೆ.'' [5]

ಎರಡನೆಯದು ಕೆಳವರ್ಗದವನೇ ನಾಯಕನಾಗಬೇಕು ಎನ್ನುವುದು. (ದಲಿತ ಬರೆದದ್ದು ಮಾತ್ರ ದಲಿತ ಸಾಹಿತ್ಯ, ಸ್ತ್ರೀಯರು ಬರೆದದ್ದು ಮಾತ್ರ ಸ್ತ್ರೀವಾದಿ ಸಾಹಿತ್ಯ) ವಾಸ್ತವವಾಗಿ ಮೇಲ್ವರ್ಗದ ಮೂಲಕ ಬಂದವನು ಎಷ್ಟರ ಮಟ್ಟಿಗೆ ಕೆಳವರ್ಗದವನ ಮನೋವಲಯವನ್ನು ಇಳಿಯಬಲ್ಲವನಾಗಿರುತ್ತಾನೆ. ಅವನ ಮೌಲ್ಯ ಸಂವೇದನೆ, ತುಡಿತಗಳೇ ಮೇಲ್ವರ್ಗದ ನಾಯಕ ನಿಜವಾಗಿ ಪ್ರಾಮಾಣಿಕ ನೆಲೆಯಲ್ಲಿ ಕೆಳವರ್ಗದವರನ್ನು ಅರ್ಥೈಸಿಕೊಂಡಾಗಲೂ ಅವನನ್ನು ನಾಯಕನೆಂದು ಒಪ್ಪಿಕೊಳ್ಳಬಹುದೆ? ಎಂಬ ಪ್ರಶ್ನೆಗಳು ಬುದ್ಧ-ಬಸವ, ಗಾಂಧೀಜಿಗಳ ವಿಚಾರದಲ್ಲಿ ಕಾಕ್ಸನ ನಿಲವು ನಿಜವಾದರೂ, ಯೇಸು, ಅಂಬೇಡ್ಕರ್ ಮತ್ತು ಸ್ಪಾರ್ಟಾಕಸ್‌ರ ವಿಷಯದಲ್ಲಿ ಅರ್ಥಗ್ರಹಿಕೆಗಳು ವ್ಯತ್ಯಾಸಗೊಂಡಿವೆ. ಸ್ಪಾರ್ಟಾಕಸ್‌ನ ಹೋರಾಟ ವಿಫಲವಾಗಿ ಸಹಕಾರ

ದಿಂದ ವಂಚಿತನಾದ. ಆದರೆ ಕೆಳವರ್ಗದಿಂದಲೇ ಬಂದ ಯೇಸು, ಅಂಬೇಡ್ಕರ್ ಸಹಕಾರ ಪಡೆದರು; ಯಶಸ್ವಿಯಾದರು. ಇದಕ್ಕೆ ಸಾಮಾಜಿಕ ಸಂದರ್ಭಗಳೂ ಉತ್ತರಿಸಬೇಕು. ''ಸ್ಪಾರ್ಟಕಸ್ ಬರುವುದು ರಾಜಶಾಹಿ-ಪುರೋಹಿತಶಾಹಿಗಳ ಹಿಡಿತವಿರುವ ಸಾಮಾಜಿಕ ಸಂದರ್ಭದಲ್ಲಿ. ಅವನ ದಂಗೆಯನ್ನು ರೋಮ್ ಸಾಮ್ರಾಜ್ಯ ಬಹಳ ನಿರ್ದಯತೆಯಿಂದ ಹೊಸಕಿ ಹಾಕುತ್ತದೆ. ಇದಕ್ಕೆ ಕಾರಣ ನಾಯಕನ ಹೋರಾಟಕ್ಕೆ ಅನುಯಾಯಿಗಳು ಸ್ಪಂದಿಸದಿರುವುದು ಮತ್ತು ನಾಯಕ ನಾದವನು ಸುತ್ತಲಿನ ಪರಿಸರದಿಂದ ಮೇಲೇಳದಂತೆ ಪ್ರಭುತ್ವ ಹಾಗೂ ಧರ್ಮಾಧಿ ಕಾರಿಗಳು ತುಳಿದದ್ದು.''[6] ಆದರೆ ಅಂಬೇಡ್ಕರ್ ಬರುವುದು ರಾಜಸತ್ತೆಯ ಹಾಗೂ ವೈದಿಕಶಾಹಿಯ ನಿಸ್ತೇಜಕಾಲದಲ್ಲಿ. ಆದ್ದರಿಂದ ಯಶಸ್ಸು ಸಾಧ್ಯವಾಯಿತು.

ಬುದ್ಧ-ಬಸವ, ಗಾಂಧಿ ಮೇಲ್ವರ್ಗದಿಂದಲೇ ಬಂದವರಾಗಿದ್ದು, ಯಶಸ್ಸು ಪಡೆಯಲು ಕಾರಣವಾದವು. ಅವರು ಕೆಳವರ್ಗದವರ ಮನೋವಲಯಕ್ಕೆ ಇಳಿದದ್ದು ಆಯಾ ಕಾಲಸಂದರ್ಭಕ್ಕೆ ಸಮಾಜವೂ ಆ ನೆಲೆಯಲ್ಲಿ ಪಕ್ವವಾಗಿರುವುದು.

ಸಮಕಾಲೀನ ಪಕ್ವತೆ ಮತ್ತು ಪ್ರಜ್ಞೆಗಳೆರಡೂ ಬಸವಣ್ಣನಿಗೆ ಸಹಾಯಕವಾಗಿ ನಿಂತಿರುವುದರಿಂದ ಸಂಘಟನೆಗೆ ಸಾಮಾಜಿಕ ಬಲ ಬಂದರೆ, ಕೆಳವರ್ಗದವರ ನೆಳಲನ್ನು ಸಹಿಸಿಕೊಳ್ಳದ ಸಂದರ್ಭದಲ್ಲಿ ಬಸವಣ್ಣ ಅವರನ್ನು ಅಪ್ಪಿಕೊಳ್ಳುವ ಮೂಲಕ ತನ್ನ ಸಂಘಟನೆಗೆ ಕೆಳವರ್ಗದ ನೈತಿಕ ಬೆಂಬಲ ಗಳಿಸುತ್ತಾನೆ.

ತಾತ್ವಿಕ ರೂಪುರೇಷೆಗಳನ್ನು ರಚಿಸಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವದ ಪಾತಳಿಯ ಮೇಲೆ ವೇದಿಕೆಯೊಂದನ್ನು ರಚಿಸಿ, ಸಾಂಸ್ಕೃತಿಕ ಬಲ ಪಡೆದನು. ಯಾವುದೇ ಭೇದ-ಭಾವವಿಲ್ಲದೇ ಎಲ್ಲರ ವಿಚಾರಗಳಿಗೆ ಮನ್ನಣೆ ಬರುವಂತೆ ಮಾಡಿದ್ದು ಕಲ್ಯಾಣದ ಅನುಭಾವಮಂಟಪದ ಮೂಲಕ. ಹಾಗಾಗಿ ಅನುಭಾವ ಮಂಟಪಕ್ಕೆ ಅತ್ಯಂತ ಮಹತ್ವದ ಸ್ಥಾನವಿದೆ.

೧.೨.೧. ಅನುಭಾವಮಂಟಪದ ಹಿನ್ನೆಲೆ :

ಈ ಜಗತ್ತು ಹಲವಾರು ವಿಷಯಗಳನ್ನು ತನ್ನ ಒಡಲಲ್ಲಿ ಹೊದ್ದುಕೊಂಡು ಬಂದಿದ್ದು, ಕಾಲ ಕಾಲದ ಅವಶ್ಯಕತೆಗಳನ್ನು ಅದು ಪೂರೈಸುತ್ತಲೇ ಬಂದಿದೆ. ನಿಸರ್ಗದ ಕೂಸಾದ ಮನುಷ್ಯ ಈ ಸೃಷ್ಟಿಯ ನಿಗೂಢಗಳನ್ನು ಗ್ರಹಿಸಲು ನಿರಂತರ ಜಿಜ್ಞಾಸೆಗೆ ಒಳಗಾಗಿದ್ದಾನೆ. ಮೂಲತಃ ಸಾಂಘಿಕನಾದ ಮನುಷ್ಯ ಆದಿಮ ಸ್ಥಿತಿಯಲ್ಲಿ ಅನನ್ಯವಾಗಿದ್ದು ಜನಸಂಖ್ಯೆ ಬೆಳೆದಂತೆ, ಅವನು ಗಣಗಳನ್ನು ಕಟ್ಟಿಕೊಂಡನು. ಆ ಗಣಕ್ಕೆ ಶಕ್ತಿ ಹೊಂದಿದವನು ನಾಯಕನಾದನು. ಆ ಮೂಲಕ ಹಲವಾರು ಪ್ರವೃತ್ತಿಗಳ ಹುಟ್ಟಿಗೆ ಕಾರಣನಾದ. ಪ್ರವೃತ್ತಿಗಳು ವೃತ್ತಿಗಳ ಹುಟ್ಟುಕೊಳ್ಳುವಿಕೆಗೆ ನೆರವಾಗಿ ವೃತ್ತಿ

ಮೂಲಕ ಸಾಮಾಜಿಕ ವರ್ಗಗಳು ಹುಟ್ಟಿಕೊಂಡವು. ಹಾಗೆ ನೋಡಿದರೆ ನಮ್ಮ ಜೀವನ ವಿಧಾನವಾದ ವರ್ಣವ್ಯವಸ್ಥೆಯ ಆರಂಭವಾಗಲಿ, ಜೀವನಶೈಲಿಗೆ ಬಂದೊದಗಿದ ಕಟ್ಟುಪಾಡಿನ ಸಂಹಿತೆಯಾಗಲೀ ವೇದಗಳಿಂದಲೇ ಮೊದಲಾದವು. ವೇದಪೂರ್ವದಲ್ಲಿ ಸಾಮಾಜಿಕ ವಿಘಟನೆಗಳು ಇರಲಿಲ್ಲ. ವೇದೋತ್ತರದಲ್ಲಿ ಶ್ರೇಣೀಕೃತ ಸಮಾಜ ರಚನೆಯಾದಾಗ, ಸಾಮಾಜಿಕ ವರ್ಣಗಳು ಹುಟ್ಟಿದ್ದವು. ಹೀಗೆ ಏಕಕೋಶ ಜೀವಿಯಿಂದ ಆರಂಭವಾದ ಜೀವಜಗತ್ತು ಇಂದು ಮಿಲಿಯನ್ ಜೀವರಾಶಿಗಳಾಗಿ ಬೆಳೆದಿದೆ (ಪುರಾಣ ಮೂಲದಿಂದ ೮೪ ಲಕ್ಷ ಜೀವರಾಶಿಗಳು). ವೈವಿಧ್ಯಮಯವಾಗಿ ತನ್ನ ಹರವನ್ನು ಚಾಚಿಕೊಂಡಿದೆ. ಈ ಹರವು ರೂಪಿತವಾಗುತ್ತಿದ್ದಂತೆ, ಉತ್ತಮವಾದ ಆದರ್ಶ ಸಮಾಜವೊಂದು ರೂಪಿಸಲೇಬೇಕೆಂಬ ಹಟವು ಮನುಷ್ಯನಲ್ಲಿ ಹುಟ್ಟಿಕೊಂಡಿತು. ಅಂಥ ಆದರ್ಶ ಸಮಾಜವನ್ನು ಕಟ್ಟುವುದೆಂದರೆ, 'ಸತ್ಯ'ವನ್ನು ಹುಟ್ಟು ಹಾಕುವುದೆಂದೇ ಅರ್ಥ. ಆದರೆ ಸಮಾಜವು ಹುಟ್ಟಿಕೊಂಡಿನಿಂದ ಅದು ಹಲವಾರು ವೈರುಧ್ಯತೆಗಳನ್ನು, ದ್ವಂದ್ವತೆಗಳನ್ನು ರೂಢಿಸಿಕೊಂಡು ಬಂದಿರುವುದರಿಂದ ಆದರ್ಶ ಸಮಾಜವೊಂದು ರೂಪು ತಾಳುವುದು ಇಂದಿಗೂ ಅಪೂರ್ಣವಾಗಿಯೇ ಇದೆ. ಇದರ ಹಿಂದಿರುವ ಸಂಘರ್ಷವು ಮಾನವನ ಜ್ಞಾನದ ಭಾಗವೇ ಆಗಿದೆ. ಸಮಾಜದ ಉನ್ನತಿಯಲ್ಲಿ ಮಾನವನ ಉನ್ನತಿಗಳು ಅಡಗಿದೆ ಏಕೆಂದರೆ ಮಾನವ ಸಮಾಜ ಜೀವಿ. ಆದುದರಿಂದಲೇ ಮಾನವನ ಆಲೋಚನಾ ಕ್ರಮಗಳು, ಅವನ ವೈಚಾರಿಕ ಚಿಂತನೆಗಳು ಸಾಮಾಜಿಕ ಮಿತಿಗಳನ್ನು ದಾಟಲಾರವು. ಆದ್ದರಿಂದ ಆದರ್ಶ ಮಾನವನಿಂದ ನಿರ್ಮಾಣವಾದ ಆದರ್ಶ ಸಮಾಜ ತನ್ನಷ್ಟಕ್ಕೆ ತಾನೇ ರೂಪು ಪಡೆಯುತ್ತದೆ. ಆದರ್ಶ ಸಮಾಜವೊಂದನ್ನು ರೂಪಿಸುವ ಮೂಲಕ ಸತ್ಯವನ್ನು ಕಂಡುಕೊಳ್ಳುವ ಹೋರಾಟದಲ್ಲಿಯೂ ಸಹ ಮನುಷ್ಯ ಹೊಂದಿದ ಕುತೂಹಲಗಳು ವೈರುಧ್ಯದ ನೆಲೆಗಳನ್ನು ರೂಪಿಸಿ ಬಿಡುತ್ತದೆ.

ಇಲ್ಲಿನ 'ಸತ್ಯ'ವೆಂಬ ಪರಿಕಲ್ಪನೆಯು ವಾಸ್ತವದಲ್ಲಿ ''ಅನುಭಾವ''ವೇ ಆಗಿದೆ. ಸತ್ಯದ ಅನ್ವೇಷಣೆಗೆ ಒಂದು ಸಾಂಘಿಕ ಬಲ ಬೇಕು. ಇನ್ನೊಂದು, ಆ ಸಂಘದಲ್ಲಿ ಸಮಾನ ಮನಸ್ಸುಗಳು ಬೇಕು. ಅಂದಾಗ ಒಂದು ಸತ್ಯದ ಸಾಕ್ಷಾತ್ಕಾರವಾಗುತ್ತದೆ. ಅದು ಆದರ್ಶ ಸಮಾಜವನ್ನು ಕಟ್ಟಲು ನೆರವಾಗುತ್ತದೆ. ಆದ್ದರಿಂದ ಈ ಸತ್ಯದ ಅಭಿವ್ಯಕ್ತಿಯೇ ಅನುಭಾವ. ಹಾಗಾಗಿ ಆದರ್ಶ ಸಮಾಜ ಕಟ್ಟಲು ಅನುಭಾವಿಗಳಿಂದ ಮಾತ್ರ ಸಾಧ್ಯ. ಅನುಭಾವಿಗಳಿಗೆ ಅಭಿವ್ಯಕಿಗೋಸ್ಕರ ಒಂದು ವೇದಿಕೆ ಬೇಕು, ಅದೇ ಮಂಟಪವಾಗುತ್ತದೆ. ಅಂದರೆ ಅನುಭಾವಿಗಳ ವೇದಿಕೆಯೇ ಅನುಭಾವಮಂಟಪ. ಮನುಕುಲದ ಚರಿತ್ರೆಯಲ್ಲಿ ೧೨ನೆಯ ಶತಮಾನದ ಆದರ್ಶ ಸಮಾಜವನ್ನು ರಚನಾತ್ಮಕ ನೆಲೆಯೂ ರೂಪಿಸಿತು. ಅನೇಕ ಜನ ಅನುಭಾವಿಗಳಿಗೆ ಅನುಭಾವ

ಮಂಟಪ ವೇದಿಕೆಯನ್ನು ನೀಡಿತು. ಅಷ್ಟೇ ಅಲ್ಲ ಅವರ ಅಭಿವ್ಯಕ್ತಿಗೆ ಮನ್ನಣೆ ದೊರಕಿಸಿ ಕೊಡಲು ಸಹಾಯಕವೂ ಆಯಿತು. ಆ ಕಾಲದ ಕೂಗಿಗೆ ಸ್ಪಂದಿಸಿದ, ಕಾಲದ ಧ್ವನಿಗಳತ್ತ ಕಾಲವನ್ನೇ ಸ್ಥಿತ್ಯಂತರಗೊಳಿಸಿದ ವೇದಿಕೆ, ಅನುಭಾವಮಂಟಪ. ಈ ಅನುಭಾವಕ್ಕೂ ಒಂದು ಚಾರಿತ್ರಿಕ ಮಹತ್ವವಿದೆ.

೧.೨.೨ ಅನುಭಾವ :

ಅನುಭಾವವೆಂಬುದು ವಿವಿಧಾರ್ಥಗಳಲ್ಲಿ ಬಳಕೆಗೊಳ್ಳುತ್ತಿರುವ ಪದವಾಗಿದೆ. ಕಾವ್ಯಮೀಮಾಂಸೆಯ ಮತ್ತು ಅಧ್ಯಾತ್ಮಿಕ ನೆಲೆಯಲ್ಲಿ ಭಿನ್ನ ಅರ್ಥಛಾಯೆಗಳ ಹಿನ್ನೆಲೆಯಲ್ಲಿ ಈ ಪದದ ಬಳಕೆಯಿದೆ. ಆದರೆ ಎರಡು ನೆಲೆಯಲ್ಲಿ ವಿಶಿಷ್ಟವಾದ ಅರ್ಥಗಳಿವೆ. ಮನುಷ್ಯ ತತ್ವದ ಹಿನ್ನೆಲೆಯಲ್ಲಿ ಅನುಭಾವದ ಅಧ್ಯಾತ್ಮಮುಖದ ಅರ್ಥ ವಿಶಾಲವೂ ವಿಶಿಷ್ಟವೂ ಆಗಿದೆ. ಅದು ಮನುಷ್ಯನ ಪರಿಪಕ್ವ ಮನೋಬುದ್ಧಿಯ ಪರಮಾನಂದದ ತುಟ್ಟತುದಿಯ ಅಭಿವ್ಯಕ್ತಿಯಾಗಿದೆ.

''ಅನುಭಾವ''ವೆಂಬುದು ಮನುಕುಲದ ಚರಿತ್ರೆಯಷ್ಟು ಹಳೆಯದು. ಮನುಷ್ಯನಲ್ಲಿ ಕನಿಷ್ಟ ತಿಳಿವಳಿಕೆ, ಬುದ್ಧಿ-ಭಾವನೆಗಳು ಬೆಳೆದು, ಅವನು ನಿರ್ದಿಷ್ಟ ಗುರಿಯನ್ನು ಪಡೆದಾಗ ದಿನನಿತ್ಯದ ಬದುಕಿನ ಅನುಭವ ಪರಿಪಕ್ವಗೊಂಡು ಉಂಟಾದ ಸತ್ಯ. ಆನಂದದ ಅಭಿವ್ಯಕ್ತಿಯೇ ಅನುಭಾವ. ಇದರ ಅಂತಿಮ ಗುರಿ ಸತ್ಯದ ಸಾಕ್ಷಾತ್ಕಾರವೇ ಆಗಿದೆ. ಮನುಕುಲದ ಏಳಿಗೆಯಲ್ಲಿ ಇದು ಪ್ರಮುಖವಾದ ಪಾತ್ರವಹಿಸಿದೆ. ಪ್ರತಿಯೊಂದು ಮತ- ತತ್ವದ, ಸಿದ್ಧಾಂತ-ದರ್ಶನಗಳ ದರ್ಶನವೇ ಅನುಭಾವ.

ಕಾವ್ಯಮೀಮಾಂಸೆ - ಅನುಭಾವ :

ಭಾರತೀಯ ಕಾವ್ಯಮೀಮಾಂಸೆಯ ಹರಿಕಾರನಾದ ಭರತನ ನಾಟ್ಯಶಾಸ್ತ್ರದ ರಸಸೂತ್ರದಲ್ಲಿ ''ಅನುಭಾವ''ವೆಂಬ ಪದ ಬಳಸಲಾಗಿದೆ. ''ರಸಾನುಕೂಲವೃತ್ತಿಯನ್ನು ವ್ಯಕ್ತಪಡಿಸುವ ಕಾರ್ಯಗಳು ಅನುಭಾವ'' [7] ಅಂದರೆ ರಂಗಸಜ್ಜಿಕೆಯ ಮೇಲೆ ಅಭಿನಯದ ಮೂಲಕ ನಟ-ನಟಿಯರು ವ್ಯಕ್ತಪಡಿಸುವ ಭಾವ ಯಾವುದೆಂಬುದನ್ನು ಪ್ರೇಕ್ಷಕರು ಗುರುತಿಸಲು ಅನುವಾಗುವ ಭಾವಗಳು. ''ಅನುಭಾವ ಎಂಬುದು ಅಭಿನಯದ ಭಾಷೆ, ಭಾವವನ್ನು ಅನುಸರಿಸಿ ಮಾಡುವ ಕಾರ್ಯಗಳು- ಅನುಭಾವ.'' [8] ಇಂಥ ಅನುಭಾವವನ್ನು ವಿವರಿಸಿ ಪ್ರಮುಖವಾದ ಎಂಟು ಅನುಭಾವಗಳನ್ನು ಪ್ರತ್ಯೇಕಗೊಳಿಸಿ ಅವುಗಳನ್ನು ಸಾತ್ವಿಕಭಾವಗಳೆಂದು ಕರೆಯಲಾಗಿದೆ. ಅವೆಂದರೆ, ಸ್ಥಂಬ, ಸ್ವೇದ, ರೋಮಾಂಚ, ಸ್ವನಭೇದ, ನಡುಕ, ವೈವರ್ಣ್ಯ,

ಕಣ್ಣೀರು, ಮೂರ್ಛೆ. ಇವೆಲ್ಲ ಅಪ್ರಯತ್ನಪೂರ್ವಕವಾಗಿ ವ್ಯಕ್ತಿಗೆ ಅರಿವಿಲ್ಲದೇ ತನ್ನಷ್ಟಕ್ಕೆ ತಾನೇ ಭಾವೋದ್ವೇಗದಿಂದುಂಟಾಗುವ ಅನುಭಾವಗಳು. ಈ ಕುರಿತು ಅನೇಕ ಲಾಕ್ಷಣಿಕರು ಚರ್ಚಿಸಿದ್ದಾರೆ. ಅದರ ವಿವರಣೆ ಇಲ್ಲಿ ಅಪ್ರಸ್ತುತ. ಆದರೆ ಮುಖ್ಯವಾಗಿ ಅನುಭಾವವೆಂಬುದು ಅಧ್ಯಾತ್ಮ ಮುಖದ ಹಿನ್ನೆಲೆಯ ಅರ್ಥಕ್ಕೂ ಕಾವ್ಯ ಮೀಮಾಂಸೆಯ ಹಿನ್ನೆಲೆಯ ಅರ್ಥಕ್ಕೂ ಸಂಬಂಧವಿಲ್ಲವೆಂಬ ಮಾತುಗಳು ಮಾತ್ರ ಸತ್ಯಕ್ಕೆ ದೂರ. ಏಕೆಂದರೆ, ಅಭಿನಯದಲ್ಲಿ ಒಂದು ತತ್ವವನ್ನು ಸಿದ್ಧಾಂತವೊಂದನ್ನು ನಟ-ನಟಿ ಹೊತ್ತು ತಂದು ಪ್ರೇಕ್ಷಕನನ್ನು ಇಹದ ಪ್ರಜ್ಞೆಯಿಂದಾಚೆಯೂ ಅರಿವಿನಲ್ಲಿ ಸತ್ಯದ ಸಾಕ್ಷಾತ್ಕಾರಗೊಳಿಸಬಲ್ಲ ಶಕ್ತಿ ಅನುಭಾವಕ್ಕಿದೆ. ಆದ್ದರಿಂದ ಕಾವ್ಯ ಮೀಮಾಂಸೆಯ ಅನುಭಾವಕ್ಕೂ ಅಧ್ಯಾತ್ಮಿಕ ಅನುಭಾವಕ್ಕೂ ಸಂಬಂಧವಿದೆ. ಮನುಷ್ಯ ಪಡೆವ ಅಲೌಕಿಕ ಆನಂದಗಳೆಲ್ಲ ಅನುಭಾವದಲ್ಲಿ ಸೇರಿವೆ. ಮಾದಕ ವಸ್ತುಗಳು, ಮಾಟ, ಮಂತ್ರ ಮೊದಲಾದವು ಇದರ ವ್ಯಾಪ್ತಿಯೊಳಗೆ ಸೇರಲಾರವು. ಇವುಗಳನ್ನು ಹೊರತುಪಡಿಸಿದರೆ ಅನುಭಾವಕ್ಕೆ ವಿಶಾಲಾರ್ಥವಿದೆ.

ಅನುಭಾವ-ತತ್ವಶಾಸ್ತ್ರ:

ಮನುಷ್ಯನ ಬೌದ್ಧಿಕ ತಿಳಿವಿನಿಂದಾದ ಮತ್ತು ಅವನ ನಡವಳಿಕೆಯ ಅನುಸಂಧಾನವಾದ ಅನುಭವವೆ ಅನುಭಾವ. ಅನುಭಾವವೆಂಬ ಈ ಪದವು Englishನ Mysticism ಪದಕ್ಕೆ ಸಂವಾದಿ ಪದವಾಗಿದ್ದು ಅಧ್ಯಾತ್ಮಿಕ ಮತ್ತು ತತ್ವಶಾಸ್ತ್ರದಲ್ಲಿ ಇದಕ್ಕೆ ಅತ್ಯಂತ ಮುಖ್ಯವಾದ ಸ್ಥಾನವಿದೆ. ಅಷ್ಟೇ ಅಲ್ಲದೆ ಅನುಭಾವವೆಂಬ ಪದವು ಭಾರತದಲ್ಲಿಯೇ ಮೊದಲು ಕಾಣಿಸಿಕೊಂಡರೂ ಅದೊಂದು ಶಾಸ್ತ್ರೀಯ ಅಧ್ಯಾಯದ ಚೌಕಟ್ಟಿನಲ್ಲಿ ಬೆಳೆಯಲಿಲ್ಲ. Mysticismಅನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಿದವರಲ್ಲಿ ಗ್ರೀಕರು ಮೊದಲಿಗರು. ಮುಖ್ಯವಾಗಿ ಅದು ಸಾಕ್ರೆಟಿಸ್‌ನಲ್ಲಿ ಹೆಚ್ಚು ಚರ್ಚೆಗೊಳಪಟ್ಟಿದೆ.

ಅನುಭಾವದ ಸಂವಾದಿ ಪದವಾದ Mysticismಗೆ ಹಲವಾರು ಅರ್ಥಮುಖಗಳಿವೆ. "ಯೋಗರಹಸ್ಯ, ಅಧ್ಯಾತ್ಮಜ್ಞಾನ, ಬುದ್ಧಿ-ತರ್ಕಕ್ಕೀರಿದ ಅಥವಾ ಅತೀಂದ್ರಿಯವಾದ ಅಧ್ಯಾತ್ಮಿಕ ತತ್ವಗಳನ್ನು ಅಪರೋಕ್ಷಜ್ಞಾನದಿಂದ ಅರಿಯಬಹುದೆಂದು ಪ್ರತಿಪಾದಿಸುವ ಸಿದ್ಧಾಂತ.[9] ಗೂಢವಾದುದು, ರಹಸ್ಯವಾದುದು, ತಿಳಿಯದುದು, ಅನಿರ್ದಿಷ್ಟವಾದುದು"[10] ಎಂಬ ಅರ್ಥಗಳಲ್ಲಿ ಬಳಕೆಯಾಗಿದೆ. ಇವೆಲ್ಲ ಅನುಭಾವದ ವ್ಯಾಪ್ತಿಯೊಳಗೆ ಬರುತ್ತವೆ. ಅನುಭಾವವೆನ್ನುವುದು ಅಮೂರ್ತವಾದ ಒಂದು ಪರಿಕಲ್ಪನೆಯಾಗಿದೆ. ಅದು ಮನಸ್ಸಿಗೆ ಸಂಬಂಧಿಸಿದ ಸ್ವಾನುಭವವಾಗಿದೆ. ಈ ಕುರಿತು ಪಾಶ್ಚಾ[illegible] ಸಾಕಷ್ಟು ಚಿಂತನೆ ನಡೆದಿದೆ.

ಇಂಗ್ಲಿಷ್‌ನ Mysticism ಎನ್ನುವುದು, Mysticism ಎಂಬ ಗ್ರೀಕ್ ಪದದಿಂದ ಹುಟ್ಟಿಕೊಂಡಿದೆ. ಇದು "Muo" ಎಂಬ ಮೂಲಧಾತುವಿನಿಂದ ಬೆಳೆದಿದೆ. ಅದೇ ಮುಂದೆ Mystorion ಎಂದೂ ಕರೆಸಿಕೊಂಡಿದೆ. ಇಲ್ಲಿ Muyo ಎಂದರೆ to set lip and eyes ಅಂದರೆ ಮೌನವಾದ ಅಂತರ್‌ಜ್ಞಾನ ಎಂಬರ್ಥವಿದೆ. ಅನುಭಾವವೆನ್ನುವುದು ಭಾಷೆಗೆ ಮೀರಿದ (to set lip), ಇಂದ್ರಿಯಾತೀತ (to set eyes) ಆಗಿದೆ. ಹಾಗಾಗಿ ಈ ಪದ ಅನುಭಾವದ ಸಮೀಪದ ಅರ್ಥವನ್ನು ತುಂಬಿ ಕಾಡುತ್ತದೆ. ಅಲ್ಲದೆ Mysticismನ್ನು Mystic, Mysteries, Mysterion ಮೊದಲಾಗಿ ಕರೆಯುವ ವಾಡಿಕೆ ಇದೆ. Mystic ಎನ್ನುವ ಪದವು ಜರ್ಮನ್ ಮೂಲದಿಂದ ಬಂದಿದೆ.

It is equal to German word Mystizim which stands for the cult of supernatural for theosophical pursuits, for a spiritualist exploration of psychological research mystick which stands for immediate experience of a divine human intercourse and relationship [11] ಅಂದರೆ Mystic ಎನ್ನುವುದು ಜರ್ಮನ್ ಮೂಲದ Mystizm ಎಂಬುದಕ್ಕೆ ಸಂವಾದಿ ಪದವಾಗಿದ್ದು ಅದು ಪ್ರಕೃತಿಯಾತೀತವಾದ ಮೂಲಸತ್ಯದ ಹುಡುಕಾಟವಾಗಿದೆ. ಆತ್ಮ-ಚೈತನ್ಯದ ತೀವ್ರಶೋಧವು ಆಗಿದೆ. ಹೀಗಾಗಿ ಜೀವಿ ಮತ್ತು ದೇವರ ಮಧ್ಯದ ಸಂಪರ್ಕಸಂಬಂಧದ ಅನುಸಂಧಾನದ ಫಲವನ್ನೇ ಅನುಭಾವವೆಂದು ಅರ್ಥೈಸಬಹುದು.

ಇಂಗ್ಲಿಷ್ ವಿಶ್ವಕೋಶ Encyclopaedia of Britannicaದಲ್ಲಿ Mysticism ಎಂಬುದನ್ನು ತುಂಬ ಅರ್ಥಪೂರ್ಣವಾಗಿ ವಿವರಿಸಲಾಗಿದೆ :

"It (Mysticism) appears in connection with the endeavour of human mind to grasp the divine essence or the ultimate reality of things, and to enjoy the blessness of actual communion with the highest. The first is the philosophic side of Mysticism, the second is the religious side. The first is theoretical or speculative, the second practical". [12] ಇಲ್ಲಿ ಅನುಭಾವವೆಂಬುದಕ್ಕೆ ಎರಡು ಅರ್ಥಗಳಿವೆ. ಒಂದು ತಾತ್ವಿಕವಾದರೆ ಇನ್ನೊಂದು ಧಾರ್ಮಿಕ. ಮೊದಲನೆಯದು ಜಿಜ್ಞಾಸೆಯಾದರೆ ಎರಡನೆಯದು ಸತ್ಯದ ಸಾಕ್ಷಾತ್ಕಾರಕ್ಕಾಗಿ ಅರಿತು ಅನುಭವಿಸುವುದು. ಇಲ್ಲಿ ಯಾವುದೇ ಭಿನ್ನ ಭಿನ್ನ ಮಾರ್ಗಗಳಿಲ್ಲ, ಬದಲಾಗಿ ಸತ್ಯದ ಹುಡುಕಾಟದಲ್ಲಿರುವ ಬೇರೆ ಬೇರೆ ದಾರಿಗಳ ಸಮನ್ವಯವಾಗಿದೆ. ಇಲ್ಲಿ ತತ್ವ ಮತ್ತು ಧರ್ಮಗಳು ಬೇರೆ ಅಲ್ಲ, ತತ್ವ ಸಿದ್ಧಾಂತ

ವಾದರೆ ಧರ್ಮ ಪ್ರಯೋಗವಾಗಿ ರೂಪುಗೊಳ್ಳುತ್ತದೆ. ಸಾಮಾನ್ಯ ಬುದ್ಧಿಗೆ ನಿಲುಕದ, ಜ್ಞಾನವನ್ನು ಒರೆಗೆ ಹಚ್ಚುವ ಪರಿಪೂರ್ಣ ಜ್ಞಾನವನ್ನು ಸೃಷ್ಟಿಯ ಮೂಲ ಸತ್ಯ - ಚೈತನ್ಯಗಳ ಅನುಸಂಧಾನದ ಮೂಲಕ ಆಗುವ ಅರಿವು, ಅನುಭಾವವೆಂದು ಕರೆಯ ಬಹುದು. ಇದು ವಿಜ್ಞಾನದ ಶೋಧ ಮತ್ತು ಪ್ರಯೋಗಗಳನ್ನು ಮೀರಿದ ಜ್ಞಾನವಾಗಿದೆ.

'ಅನುಭಾವವನ್ನು ಅನುಭವಿಸುವವನು ರೂಢಿಸಿಕೊಂಡವನು ಅನುಭಾವಿ ಯೆನಿಸಿಕೊಳ್ಳುತ್ತಾನೆ'. ಹಾಗಾದರೆ ಅನುಭಾವಿ ಎಂದರೆ ಯಾರು? ಎಂಬುದಕ್ಕೆ ಉತ್ತರ ವಾಗಿ "A mystic was one who had been initiated into these mysteries through which he had gained asotoric knowledge of divine things and has been reborn into eternity. His object was to break through the world of history and time into that of eternity and timelessness" [13]ಎಂದಿದೆ.

ಅಂದರೆ, ಅನುಭವಿಯಾದವನು ಸೃಷ್ಟಿಯ (ಜಗತ್ತಿನ) ರಹಸ್ಯಜ್ಞಾನವನ್ನು ಪಡೆಯುತ್ತಲೆ-ದೈವಿಕಾರಣವಾದ ಜ್ಞಾನ ಸಂಪಾದಿಸಿಕೊಳ್ಳುತ್ತಾನೆ. ಆ ಮೂಲಕ ಹುಟ್ಟು ಸಾವುಗಳಿಗೂ ಮೀರಿದ ಶಾಶ್ವತತೆಗೆ (ಅಮರತ್ವತೆ) ಏರಿ ಜಗದ ಹಂಗನ್ನು ಹರಿದು ಕಾಲಾತೀತನಾಗುತ್ತಾನೆ ಎಂದು ಅರ್ಥ. ನಿಜವಾದ ಅನುಭಾವಿಗೆ ಯಾವುದೇ ಧರ್ಮದ ಹಂಗಿಲ್ಲ, ದೇಶ, ಭಾಷೆ, ಕಾಲದ ಹಂಗಿಲ್ಲದಂತೆ ನೀರ ತಾವರೆಯಂತಿದ್ದು ಎಲ್ಲಕ್ಕೂ ಅತೀತನಾಗಿರುವ ಪರಿಯನ್ನು ಇಲ್ಲಿ ವಿವರಿಸಲಾಗಿದೆ.

'ಇಂಜ್'ನು ಕ್ರೈಸ್ತರ ಅನುಭಾವವನ್ನು ಕುರಿತು ಚರ್ಚಿಸುತ್ತ ''ಅನುಭಾವ ವೆಂಬುದು ಈ ಪ್ರಪಂಚ-ದೇವರನ್ನು ಕುರಿತು ಬಹು ಅಸ್ಪಷ್ಟವಾದ ಐಂದ್ರಜಾಲಿಕವಿದ್ಯ ಕನಸುಗಾರನ ವಿಚಿತ್ರ ಮನಸ್ಥಿತಿ'' [14] ಎಂದಿದ್ದಾನೆ.

ಭಾರತೀಯ ಸಂದರ್ಭದಲ್ಲಿಯೂ ಅನುಭಾವ ಕುರಿತ ಚಿಂತನೆ ನಡೆದಿದೆ. ಅರವಿಂದರೂ ಅನುಭಾವವನ್ನು Intutionದ ಹಿನ್ನೆಲೆಯಲ್ಲಿ ವ್ಯಾಖ್ಯಾನಿಸಿದರೆ, ರಾಧಾಕೃಷ್ಣನ್‌ರವರು ಯೋಗದ ಹಿನ್ನೆಲೆಯಲ್ಲಿ ಚರ್ಚಿಸಿದ್ದಾರೆ.

ಕುಮಾರ ಸ್ವಾಮಿಯವರು ಅನುಭಾವವನ್ನು ವಿವರಿಸುತ್ತ "the Principle of Mysticism is in its core bliss and beatific attitude" [15] ಎಂದಿದ್ದಾರೆ.

ಅಂದರೆ ಅನುಭಾವದ ತತ್ವವೆನ್ನುವುದು ಪರಿಪೂರ್ಣ ಮತ್ತು ಪರಮಾನಂದ ಮನೋಭಾವದ ತಿರುಳಾಗಿದೆ. ಆನಂದದ ಚರಮ ಸ್ಥಿತಿಯೂ ಅನುಭಾವವೆಂದು ವ್ಯಾಖ್ಯಾನಿಸಿದ್ದಾರೆ. ಎಸ್.ಎನ್. ದಾಸಗುಪ್ತ ಅವರು ಅನುಭಾವವನ್ನು ವಿವರಿಸುತ್ತ,

"Mysticism as a theory doctrine or view that considers reason to the incapable of discovering or realising the nature of ultimate truth, but at the same time behises in the certitude of some other means of arriving at it." [16]

ಅನುಭಾವವೆನ್ನುವುದು ಒಂದು ತತ್ವವಾದರೂ, ಅವರ ಶೋಧಕ್ಕೆ ವಿಚಾರವಾದ ಒಂದೇ ಮಾರ್ಗವಲ್ಲ, ಬದಲಾಗಿ ಸೃಷ್ಟಿಯ (ನಿಸರ್ಗದ) ಸಹಜ ಸತ್ಯ ಅರಿಯಲು ನಿರ್ದಿಷ್ಟ ದೈವಿಕ ನಂಬಿಕೆಗಳು ಮುಖ್ಯವಾಗುತ್ತದೆ ಎಂಬ ಆಶಯವನ್ನು ವ್ಯಕ್ತಪಡಿಸುತ್ತಾರೆ.

****

೧.೩. ಅನುಭಾವ - ಪದನಿಷ್ಪತ್ತಿ - ಅರ್ಥ :

ಅನುಭಾವವು ಪ್ರಾಚೀನ ಚರಿತ್ರೆ ಹೊಂದಿದೆ. ಅದು ಮನುಕುಲದ ಚರಿತ್ರೆಯಷ್ಟೇ ಪುರಾತನವಾದ್ದರಿಂದ ಅದರ ಪದನಿಷ್ಪತ್ತಿ, ಅರ್ಥಗಳು ಮುಖ್ಯವಾಗುತ್ತವೆ. ಅನುಭಾವವು ಬದುಕಿನ ಅನುಭವದ ಆಚರಣೆಗಳ ಕೂಡುವಿಕೆ ಮೂಲಕ ಉಂಟಾಗುವ ಅಂತಃಶಕ್ತಿಯ ಅಭಿವ್ಯಕ್ತಿಯೇ ಆಗಿದೆ. ಅನುಭಾವವು ಮೂಲತಃ ಸಂಸ್ಕೃತ ಪದವಾಗಿದೆ. ''ಭೂ- ಭವ್'' ಎಂಬ ಕ್ರಿಯಾಪದದ ಮೂಲದಿಂದ ಬಂದಿದೆ. ಅದಕ್ಕೆ ''ಅನು'' ಉಪಸರ್ಗ ಸೇರಿ ಅನುಭವವೆಂಬ ಪದವಾಗಿದ್ದು ಅದೇ ಅನುಭವ ಪರಿಪಕ್ವತೆ ಪಡೆದು ಪಾಡು ಹಾಡಾಗುವಿಕೆಯೇ ಅನುಭಾವವಾಗಿದೆ. ಅನುಭಾವವೆಂದರೆ ಸಂಸ್ಕೃತದಲ್ಲಿ 'ಎರಡನೆ ಯವರಿಗೆ ತಿಳಿಸುವಿಕೆ' ಎಂದರ್ಥವಿದೆ.[17] ಅನುಭಾವವೆಂಬ ಪದವನ್ನು 'ಅನು' ಮತ್ತು 'ಭಾವ' ಎಂದು ವಿಭಜಿಸಿ ನೋಡಲು ಸಾಧ್ಯವಿದೆ.

''ಅನು'' ಎನ್ನುವುದು ನಾಮವಾಚಿಪದ. ಅದಕ್ಕೆ 'ಅಚ್ಚುಕಟ್ಟು, ಸೊಗಸು, ಹದ, ಮನೋಹರತೆ, ರೀತಿ, ಕ್ರಮ, ಸ್ವರೂಪ, ಸ್ಥಿತಿ'[18] ಮೊದಲಾದ ಅರ್ಥಗಳಿವೆ. ''ಭಾವ'' ವೆಂದರೆ ಇರುವಿಕೆ, ಇರುವುದು, ಅಸ್ತಿತ್ವ, ಸತ್ತೆ ಉಂಟಾಗು, ಸಂಭವಿಸು[19] ಎಂಬರ್ಥಗಳೂ ಕೂಡ ಇವೆ. ಈ ಸಂಯುಕ್ತ ಪದಗಳಿಂದ ಅಚ್ಚುಕಟ್ಟಾಗಿ ಇರುವುದು, ಹದವಾದ ಅಸ್ತಿತ್ವ ಸತ್ತೆಯನ್ನು ಪಡೆ, ಮನೋಹರವಾಗಿರು, ಎಂದು ಅರ್ಥೈಸಬಹುದು. ಅನುಭಾವವೆಂಬುದು ಬದುಕಿನ ಅಚ್ಚುಕಟ್ಟಿಗಾಗಿಯೇ ಇರಬೇಕಾದ ಅಭಿವ್ಯಕ್ತಿಯಾಗಿದೆ. ಶುಚಿ ಸಮಾಜ-ಸುಖಿ ಸಮಾಜವಾಗಲು ಬದುಕಲ್ಲಿ ಅಚ್ಚುಕಟ್ಟುತನ ಅವಶ್ಯವೆಂಬುದು ಎಲ್ಲ ಅನುಭಾವಿಗಳ ವಾದವಾಗಿದೆ. ಹದವಾದ ಅಸ್ತಿತ್ವ, ಸತ್ತೆಯನ್ನು ಪಡೆಯೆನ್ನುವಲ್ಲಿ, ಮನುಷ್ಯ ಬದುಕಿನ ಸಾರ್ಥಕತೆ ಕುರಿತ ಚಿಂತನೆ ಇದೆ. ವ್ಯಕ್ತಿ ಅಳಿದರೂ, ವ್ಯಕ್ತಿತ್ವ ಉಳಿಯುವಂತೆ ನಡೆಸುವ ಬದುಕು ಮಾತ್ರ ಸಾರ್ಥಕ ಬದುಕಾಗಬಲ್ಲದು. ಅದಕ್ಕಾಗಿ ಶಿವ-ಜೀವರ ಮಧ್ಯದ ಸತ್ತೆಯ ಉಳಿವಿನ ಹೋರಾಟವೇ ಸಾಧಕನ (ಅನುಭಾವ) ಹದವಾದ ಜೀವನದ ಅಸ್ತಿತ್ವವಾಗಿದೆ. ಆ ಕಾರಣದಿಂದ ವ್ಯಕ್ತಿ ಸಮಾಧಾನಿಯಾಗಿದ್ದು ಆತ್ಮದ ಅರಿವು ಪಡೆದು ಮನೋಹರವಾಗಿರುವುದೆಂದು ಅರ್ಥ.

''ಅನು''ವೆನ್ನುವುದು ಪ್ರತ್ಯಯ ರೂಪದಲ್ಲಿ ಸಹ ಬಳಕೆಯಾಗಿದ್ದು ''ಕಾಲದೇಶ

ಗಳಿಗೆ ಸಂಬಂಧಪಟ್ಟಂತೆ'' ''ತರುವಾಯ ಎಂಬ ಕ್ರಮವನ್ನು ಸೂಚಿಸುವ ಉಪಸರ್ಗ ವಾಗಿದೆ.'' [20] ಇಲ್ಲಿ ಸುಮಾರು ೬ ಅರ್ಥಗಳಿವೆ. ''ಅನು'' ಎಂದರೆ ತರುವಾಯ, ''ಭಾವ'' ಎಂದರೆ 'ಜೀವ ಪರಿಣಾಮ' ಎಂದರ್ಥವಿದೆ. ಸಾಧಕನು ಸಾಧನೆಯ ನಂತರ ಜೀವಪರಿಣಾಮಕ್ಕೊಳಗಾಗುವುದು ಅಂದರೆ ಅನುಭಾವಿಸುವುದು ಎಂದರ್ಥ (ಜೀವಪರಿಣಾಮವೆಂಬ ಪದವು ಜೈನಧರ್ಮಕ್ಕೆ ಸಂಬಂಧಿಸಿದು ದಾಗಿದ್ದು ಅದನ್ನು ಐದು ಬಗೆಗಳಲ್ಲಿ ಗುರುತಿಸಲಾಗಿದೆ. ಔಪಶಾಮಿಕ, ಕ್ಷಾಮಿಕ, ಕ್ಷಯೋಪಶಮಿಕ, ಔದಯಿಕ ಮತ್ತು ಪರಿಣಾಮಿಕ). ಜಡದೇಹವನ್ನು, ಜೀವವನ್ನು ಚೇತನಗೊಳಿಸುವ ಆಂತರಿಕ ಪ್ರಕ್ರಿಯೆಗೆ ಸಮವೆಂದು ಕರೆಯಬಹುದು. 'ಅನು' ಎಂದರೆ 'ಯಥಾಕ್ರಮವಾಗಿ' ಮತ್ತು 'ಭಾವ' ಎಂದರೆ 'ನಿಜಸ್ಥಿತಿ, ಸತ್ಯ' ಎಂದರ್ಥ. ಅನುಭಾವವೆಂಬುದು ವಾಸ್ತವತೆ ಹಾಗೂ ಸತ್ಯದ ಹುಡುಕಾಟವಾದ್ದರಿಂದ ಪ್ರತಿ ಹುಡುಕಾಟಕ್ಕೊಂದು ಕ್ರಮಬದ್ಧತೆ ಇರುತ್ತದೆ ಎಂಬುದನ್ನು ಮರೆಯುವಂತಿಲ್ಲ. ಆದ್ದರಿಂದ ಅನುಭಾವವೆಂಬುದು ಶಿವಯೋಗದ ಸತ್ಯಸ್ಥಿತಿಯ ಅನುಕ್ರಮವಾಗಿದೆ. ಇದು ಆಯಾ ದಾರ್ಶನಿಕ ಅನುಭಾವಿಯನ್ನು ಅವಲಂಬಿಸಿರುತ್ತದೆ. ಬುದ್ಧನಲ್ಲಿ ಕ್ರಮ ಬದ್ಧವಾದ ಅಷ್ಟಾಂಗ ಮಾರ್ಗಗಳಿದ್ದರೆ, ಶಿವಶರಣರಲ್ಲಿ ಷಟಸ್ಥಲಗಳು ಇವೆ. ಆ ಮೂಲಕ ಸತ್ಯದ ಸಾಕ್ಷಾತ್ಕಾರ ನಡೆವುದು.

'ಅನು' ಎಂದರೆ 'ಸಂಗಡ' ಮತ್ತು 'ಭಾವ'ವೆಂದರೆ, 'ಮನೋಧರ್ಮ' ವೆಂದರ್ಥ. ಅನುಭಾವವೆಂಬುದು ಅಮೂರ್ತ ಪರಿಕಲ್ಪನೆ ಅಲ್ಲ. ಅದು ಒಮ್ಮುಖ ಪ್ರಕ್ರಿಯೆಯೂ ಅಲ್ಲ. ತಾನುಂಡ ಅನುಭವದ ಸಾರವನ್ನೂ ಸಮಾನ ಮನಸ್ಕರೊಂದಿಗೆ ಹಂಚಿಕೊಳ್ಳುವ ಮನೋಧರ್ಮವೇ ಅನುಭಾವ.

ಬಹುದೊಡ್ಡ ವೇದಾಂತಿಯೊಬ್ಬ ಪ್ರಕಾಂಡ ಪಂಡಿತನಾಗಿದ್ದರೂ ಪಾಂಡಿತ್ಯದ ಅಭಿವ್ಯಕ್ತಿ ಇಲ್ಲದಾಗ ಅದೆಲ್ಲವೂ ಈ ಲೋಕಕ್ಕೆ ಶೂನ್ಯ. ಆದ್ದರಿಂದ ಅನುಭಾವ ವೆಂಬುದು ಆತ್ಮ-ಆತ್ಮಗಳ ಮಂಥನದ ಅಭಿವ್ಯಕ್ತಿಯಾಗಿದೆ. 'ಅನು' ಎಂದರೆ 'ಅನುಗುಣ' ಭಾವವೆಂದರೆ 'ಕ್ರಿಯೆ'. ಅನುಭಾವವೆಂಬುದು ಜಡವಲ್ಲ, ಸ್ಥಾವರವಲ್ಲ, ಅದೊಂದು ಚೈತನ್ಯ, ಜೀವಂತ ಕ್ರಿಯೆ. ಕಾಲ, ದೇಶ, ಪರಿಸರಕ್ಕನುಗುಣವಾಗಿ ಕ್ರಿಯಾಶೀಲಗೊಳ್ಳುವುದೇ ನಿಜವಾದ ಅನುಭಾವ. ಇದೇ ಔಚಿತ್ಯಪೂರ್ಣ ಅರ್ಥ.

'ಅನು' ಎಂದರೆ ಉದ್ದಕ್ಕೂ, 'ಭಾವ'ವೆಂದರೆ 'ಸಂವೇದನೆ'. ಅನುಭಾವವು ಮನುಕುಲದುದ್ದಕ್ಕೂ ಸಂವೇದನಶೀಲವಾಗಿದೆ. ಭಾರತೀಯ ಅನುಭಾವದ ಚರಿತ್ರೆಯ ಹಿನ್ನೆಲೆಯಲ್ಲಿ ಈ ಮಾತಿಗೆ ಮಹತ್ವದ ಅರ್ಥಛಾಯಗಳಿವೆ. ಗೀತೆಯ ಅನುಭಾವ ವಚನಕಾರರ ಅನುಭಾವ ಜಡವ್ಯವಸ್ಥೆಗೆ ಸಹ ಸ್ಪಂದಿಸಿದೆ. ಚಲನಶೀಲ ಸಂಸ್ಕೃತಿಯೊಂದರ ಹುಟ್ಟಿಗೆ ಅನುಭಾವ ನಿರಂತರ ಸಕಾರಾತ್ಮಕ ಧೋರಣೆ ತಾಳಿರು ವುದು ಅನುಭಾವದ ಅರ್ಥಕ್ಕೆ ಸಾಕ್ಷಿಯಾಗಿದೆ.

ಅನುಭಾವವೆಂಬ ಪದಕ್ಕೆ ಅಧ್ಯಾತ್ಮಿಕ ನೆಲೆಯಲ್ಲೂ ವಿಶಾಲಾರ್ಥವಿದೆ. ''ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳುವುದು, ಪರಮಾತ್ಮನೊಡನೆ ನೇರವಾದ ಸಂಪರ್ಕ ಪಡೆದುಕೊಳ್ಳುವುದು''[21] ಮನುಷ್ಯ ಮತ್ತು ದೇವರ ಮಧ್ಯದ ಕಂದಕ ಜೋಡಿಸುವ ಮೂಲಕ ಮಾನವ ದೇವನಾಗುವ ಉತ್ಕಟತೆಯೇ ಸಾರ್ಥಕ ಬದುಕಿನ ಬಡೆಯಾಗುತ್ತದೆ. ಆ ಮೂಲಕ ಪಡೆದ ಆತ್ಮಜ್ಞಾನ, ಅಂತರಂಗದ ಅನುಭವ ಪಡೆದವ ಅನುಭಾವಿಯಾಗುತ್ತಾನೆ. ನಿಜದ ಅರಿವು ಮುಟ್ಟಿರುತ್ತಾನೆ. ಅದೇ ಸತ್ಯ ಸಾಕ್ಷಾತ್ಕಾರ.

''ಅನುಭಾವ ಎಂಬ ಮಾತನ್ನು ಪಾರಿಭಾಷಿಕವಾಗಿ ಬಹುಮಟ್ಟಿಗೆ Mysticism ಎಂಬರ್ಥದಲ್ಲಿ ಕನ್ನಡದಲ್ಲಿ ವೀರಶೈವರಲ್ಲದೆ ಇನ್ಯಾರೂ ಉಪಯೋಗಿಸಿಲ್ಲ''[22] ಭಾರತೀಯ ಸಂದರ್ಭದಲ್ಲಿ ವಚನಕಾರರಿಗಿಂತ ಬೇರೆಯವರಾರೂ ಅದನ್ನು ಬಳಸಿಲ್ಲ. ವೇದ, ಉಪನಿಷತ್ತು, ಗೀತೆ, ಜೈನ, ಬೌದ್ಧ, ಇಸ್ಲಾಂ ಧರ್ಮಗಳಲ್ಲಿ ಅನುಭಾವ ಪ್ರಕಟವಾಗಿ ಈ ಪದ ಬಳಕೆಯಾಗಿಲ್ಲ. ಶಿವಾಗಮಗಳಲ್ಲಿ ಈ ಪದ ಬಳಕೆಯಾದರೂ ರಚನಾತ್ಮಕ ಅರ್ಥದಲ್ಲಿ ಬಳಕೆಯಾಗಿಲ್ಲ. ಈ ಮೇಲಿನ ಧಾರ್ಮಿಕ ತತ್ವಗಳು ಕೇವಲ ಧರ್ಮ ಪ್ರಚಾರ ಮಾಡಿದ ಸಿದ್ಧಾಂತಗಳಿವೆ, ವಚನಕಾರರಲ್ಲಿ ಪ್ರಯೋಗವಿದೆ. ಆದ್ದರಿಂದ ಅನುಭಾವಕ್ಕೆ ಪ್ರಾಯೋಗಿಕ ರಚನಾತ್ಮಕತೆ ಇದೆ.

ಅನುಭಾವವೆನ್ನುವುದು ವೀರಶೈವರ ಷಟಸ್ಥಲದಲ್ಲಿ ನಾಲ್ಕನೆಯ ಸ್ಥಲವಾದ ಪ್ರಾಣಲಿಂಗಿ ಸ್ಥಲದ ಅನುಭಾವ ಭಕ್ತಿ ಎಂದು ಕರೆಯಲಾಗಿದೆ. ಇಲ್ಲಿ ಪಾಶ್ಚಾತ್ಯರಂತೆ ಭಕ್ತನು ಮೌನವಾಗಿರದೆ ತಾನು ಪಡೆದ ಅನುಭಾವವನ್ನು ತನ್ನ ಸುತ್ತಲಿನ ಜನರೊಂದಿಗೆ ಅನುಸಂಧಾನಗೈಯುತ್ತಾನೆ.

ಅನುಭಾವದ ನಿಜದ ನೆಲೆ, ಭಕ್ತನ ಆತ್ಮ ಮತ್ತು ದೇವರ ಸಮೀಕರಣವೇ ಆಗಿದೆ. ಅದರ ತೂರ್ಯಾವಸ್ಥೆಯೂ, ಸಚ್ಚಿದಾನಂದ ಅಮೃತತತ್ವವೆಂದು ಕರೆಯಬಹುದು. ಅಂದರೆ "God, soul, relation of the soul to the God"[23] ಇದನ್ನೇ ವಚನಕಾರರು ಲಿಂಗಾಂಗ ಸಾಮರಸ್ಯವೆಂದು ಕರೆದಿದ್ದಾರೆ.

ಅನುಭಾವವೆನ್ನುವುದು ಎರಡು ವಿಧದಲ್ಲಿದೆ. ಒಂದು ಮನೋಪ್ರವೃತ್ತಿ. ಇಲ್ಲಿ ಆಧ್ಯಾತ್ಮಿಕ ಸಾಮರಸ್ಯ, ಸಾಮಾಜಿಕ ಸಾಮರಸ್ಯದ ನೆಲೆಯಲ್ಲಿ ಗ್ರಹಿಸುತ್ತ ಆತ್ಮೋನ್ನತಿಯೊಂದಿಗೆ ಸಮಾಜೋನ್ನತಿಯನ್ನು ಗುರುತಿಸಬಹುದಾಗಿದೆ. ಇನ್ನೊಂದು ಕ್ರಿಯಾಮುಖಿ ಅನುಭಾವ. ಇದಕ್ಕೆ ಯೋಗವೇ ಮೂಲವಾಗಿದ್ದು ಪತಂಜಲಿಯ ಯೋಗ ಸಿದ್ಧಾಂತದ ಮೂಲಕ ವ್ಯಕ್ತಿತ್ವ ಬಲವಾಗುವುದು, ಬೆಳೆಯುವುದು ಸಮರ್ಥಿಸಬಹುದು. ಮುಂದೆ ಗೀತೆಯ ಕರ್ಮಸಿದ್ಧಾಂತ ವೀರಶೈವರ ಕಾಯಕ-ದಾಸೋಹಗಳು ಅನುಭಾವದ ಪ್ರಕ್ರಿಯೆಗಳಾಗಿದ್ದು, ಷಟಸ್ಥಲ ಅದರ ಸೃಜನೆಲೆಯಾಗಿದೆ.

ಅನುಭಾವದ ಸ್ಪಷ್ಟತೆಗಳು ಐಕ್ಯಸ್ಥಲದಲ್ಲಿ ಕಾಣಬೇಕು. ಆದ್ದರಿಂದ ವ್ಯಷ್ಟಿಯಿಂದ ಸಮಷ್ಟಿಯ ಊರ್ಧ್ವಮುಖದ ವಿಕಾಸ ತತ್ವವೇ ಅನುಭಾವ. ಅದನ್ನೇ ಸತ್ಯದ ಸಾಕ್ಷಾತ್ಕಾರ, ಬ್ರಹ್ಮಾನಂದ ಸಾದೃಶ್ಯ ಎಂದು ಮುಂತಾಗಿ ಅರ್ಥೈಸಬಹುದು. ಒಟ್ಟಾರೆಯಾಗಿ ಅನುಭಾವವೆಂದರೆ ಪರಿಪೂರ್ಣ ಜೀವವಿಕಾಸದ ರಚನಾತ್ಮಕ, ಪ್ರಾಯೋಗಿಕ ಚಿಂತನೆಯೊಂದೇ ಆಗದೆ ಜೀವಿಯ ಸಾರ್ಥಕತೆಗೆ ಕೊಂಡೊಯ್ಯುವ ಪ್ರಕ್ರಿಯೆಯಾಗಿದೆ.

೧.೩.೧ ಅನುಭಾವ - ವಿಜ್ಞಾನ :

ಅನುಭಾವವೆಂಬುದು ಆತ್ಮವಿದ್ಯೆಯೇ, ಆದರೂ ಸಹ ಅದೊಂದು ವಿಜ್ಞಾನವಾಗಿದೆ. ವಿಜ್ಞಾನಕ್ಕೂ ಅನುಭಾವಕ್ಕೂ ಅನನ್ಯ ಸಂಬಂಧ ಮತ್ತು ಅವೆರಡರಲ್ಲಿ ಸಾಮ್ಯತೆಗಳಿವೆ. ''ವಿಜ್ಞಾನವೆಂದರೆ ವ್ಯವಸ್ಥಿತವಾದ ಅಧ್ಯಯನ'' ಎಂದು ಅರ್ಥ. ಹಾಗೇ ಅನುಭಾವವೂ ಸಹ ಕ್ರಮಬದ್ಧತೆಯನ್ನು ಅನುಸರಿಸುವುದು. ವಿಜ್ಞಾನದ ಮೂಲ ಉದ್ದೇಶ - ಸೃಷ್ಟಿಯ ಉಗಮ, ಬೆಳವಣಿಗೆಯ ಹಿನ್ನೆಲೆಯಾಗಿದೆ. ಅದರ ಶೋಧ, ಈ ಜೀವಜಗತ್ತು ಕಲಿತ ಚಿಂತನೆ, ಅವುಗಳ ಅಭ್ಯುದಯ ಕುರಿತ ಆಲೋಚನೆ ಆಗಿದೆ. ಈ ಯಾವುದನ್ನು ವಿಜ್ಞಾನವು ಪ್ರಯೋಗವಿಲ್ಲದೇ ಪ್ರಮಾಣಿಸದೇ ಸ್ವೀಕರಿಸುವುದಿಲ್ಲ. ಹಾಗೆಯೇ ಅನುಭಾವವು ವಿಜ್ಞಾನದ ಈ ಆಶೋತ್ತರಗಳಿಗೆ ಬದ್ಧವಾಗಿದೆ. ಅನುಭಾವದ ಮೂಲ ತರ್ಕ ಪ್ರಯೋಗವಾಗಿದೆ. ವಿಜ್ಞಾನಿಯು ಮೊದಲು ಪ್ರಪಂಚದ ಸತ್ಯವನ್ನು ಬೌದ್ಧಿಕವಾಗಿ ವಿಶ್ಲೇಷಣೆ ಮಾಡುತ್ತಾನೆ. ಆ ಮೂಲಕ ಅದೇ ಭಾವವೆಂದು ಭಾವಿಸುತ್ತಾನೆ. ಆದರೆ ಅದು ಅಂತಿಮ ಜ್ಞಾನವಲ್ಲವೆಂದು ಅನಿಸಿದಾಗ ಪ್ರಯೋಗಕ್ಕೆ ವಾಲುತ್ತಾನೆ. ಪ್ರಯೋಗದ ಮೂಲಕ ಶೋಧನೆಗೆ ತೊಡಗುತ್ತಾನೆ. ಆ ಮೂಲಕ ತನ್ನನುಭವಗಳನ್ನು ಗಟ್ಟಿಗೊಳಿಸುತ್ತಾನೆ. ಆ ಜಾಡಿನಲ್ಲಿಯೇ ಸತ್ಯದ ಶೋಧ ಮಾಡುತ್ತಾನೆ. ಅದನ್ನು ಮನುಕುಲದ ಏಳಿಗೆಯ ಹಿನ್ನೆಲೆಯಲ್ಲಿ ಬಳಸಿಕೊಳ್ಳುತ್ತಾನೆ. ಅದೇ ರೀತಿ ಸಾಧಕನಾದವನು ಮೊದಲು ಈ ಸೃಷ್ಟಿಯ ಸತ್ಯತೆಯನ್ನು ಅರಿಯಲು ಬುದ್ಧಿಯ ಮೂಲಕ ಜ್ಞಾನ ಪಡೆಯುತ್ತಾನೆ. ಬುದ್ಧಿಯಿಂದ ಪಡೆದ ಜ್ಞಾನ ಮಾತ್ರ ಸಾಧಕನ ಅನುಭವಗಳನ್ನು ನಿರ್ಧರಿಸಬಲ್ಲದೆಂದು ತಿಳಿದಾಗ ಅದೊಂದು ಕೇವಲ ವಿಚಾರವಾದವಾಗುತ್ತದೆ. ಏಕೆಂದರೆ ಎಲ್ಲ ಜ್ಞಾನಗಳು ಬುದ್ಧಿಯಿಂದಲೇ ಪ್ರಾಪ್ತಿಯಾಗಲಾರವು. ಈ ತಿಳುವಳಿಕೆ ಬಂದಾಗ ಸಾಧಕ ಪ್ರಯೋಗ ಪರೀಕ್ಷೆಗಳಿಗೆ ಒಳಗಾಗುತ್ತಾನೆ. ಆ ಮೂಲಕ ಸಮರ್ಪಕವಾದ ಜ್ಞಾನ ಪಡೆಯಲು ಸಾಧ್ಯವಾಗಬಹುದೆಂದು ಆಲೋಚಿಸುತ್ತಾನೆ. ಪ್ರಾಯೋಗಿಕ ಅನುಭವವೇ ಜ್ಞಾನದ ಮೂಲವೆಂದು ಕಂಡುಕೊಳ್ಳುತ್ತಾನೆ. ಆದರೆ ಎಷ್ಟೋ ಸಲ ಕೇವಲ ಪ್ರಯೋಗ

ಜ್ಞಾನದಿಂದಲೂ ಸಿಗದ ಸತ್ಯವೊಂದಿರುತ್ತದೆ. ಅದನ್ನು ಅರಿಯಲು ಬಾಹ್ಯ ಪ್ರಯೋಗ ಪರೀಕ್ಷೆಗಳು ತತ್ತರಿಸುತ್ತವೆ. ಬುದ್ಧಿ-ಜ್ಞಾನ ಮಂಕಾಗುತ್ತದೆ. ಪ್ರಕೃತಿಗೆ ಅತೀತವಾದ (Supernatural) ಶಕ್ತಿಯೊಂದು ಬುದ್ಧಿ ಪ್ರಯೋಗದಿಂದ ಅರಿಯಲು ಅತೀತವಾದ ದೃಷ್ಟಿ-ಧೋರಣೆಗಳು ಬೇಕು. ಆಗ ಹೊಸಸತ್ಯದ ದರ್ಶನವಾಗುತ್ತದೆ. ಸಾಧಕನ ಅಂತಃಕರಣವನ್ನು ಅವನ 'ಭಾವ' ಜಾಗೃತಗೊಳಿಸುತ್ತದೆ. ಆ ಮೂಲಕ ಜೀವಜಗತ್ತಿನ ಗಂಭೀರ ಚಿಂತನೆ, ಆಲೋಚನೆ, ಸಮಸ್ಯೆಗಳಿಗೆ ಹೃದಯ ದಲ್ಲಿ ಮಿಡಿದ ಭಾವ ಉತ್ತರ ದೊರಕಿಸಿಕೊಡುತ್ತದೆ. ಅದೇ ಅನುಭಾವ. ಆದ್ದರಿಂದ ಅನುಭಾವವೆನ್ನುವು ದೊಂದು ವಿಜ್ಞಾನ. ಅವೆರಡರ ಮೂಲ ಕುರಿತ ಜಿಜ್ಞಾಸೆ, ಚರ್ಚೆ ಸಹ ಬೀಜವೃಕ್ಷ ನ್ಯಾಯದಂತಿದೆ.

ವಿಜ್ಞಾನವೆಂದರೆ ಇಂದಿನ ನಾಗರಿಕತೆಯ ಚರಮಸ್ಥಿತಿಯಷ್ಟೇ ಅಲ್ಲ, ಬದಲಾಗಿ ಪುರಾತನ ಕಾಲದ ಬೇರೆಯ ಅನ್ವೇಷಣೆ. ಕೃಷಿಯ ಆರಂಭ ಮೊದಲಾದವೆಲ್ಲ ಆರಂಭದ ವೈಜ್ಞಾನಿಕತೆಗಳೇ. ಹಾಗಾಗಿ ವಿಜ್ಞಾನದ ಶೋಧವು ಅನುಭಾವದಂತೆ ಮನುಕುಲದ ಬುದ್ಧಿ ಭಾವಗಳೊಂದಿಗೆ ಆರಂಭವಾಗಿ ಬೆಳೆದಿದೆ ಎಂದು ಹೇಳಬಹುದು.

ವಿಜ್ಞಾನ ಮತ್ತು ಅನುಭಾವ : ಸಾಮ್ಯತೆಗಳು

೧. ಸೃಷ್ಟಿಯ ರಹಸ್ಯಭೇದ :

ಆರಂಭಕಾಲದಿಂದಲೂ ವಿಜ್ಞಾನ ಸೃಷ್ಟಿಯ ರಹಸ್ಯಭೇದವನ್ನರಿಯಲು ತನ್ನ ಶಕ್ತಿಯನ್ನು ವ್ಯಯ ಮಾಡಿರುವುದು. ವಿಜ್ಞಾನದ ಇತಿಹಾಸ, ಸೃಷ್ಟಿಯ ಆರಂಭ, ಅದರ ಮೇಲೆ ಜೀವ-ಜಂತುಗಳ ಉದಯ, ಮನುಷ್ಯ-ಮನುಷ್ಯರ ಪಳೆಯುಳಿಕೆ, ಮೊದಲಾದ ಅಧ್ಯಯನಗಳು ನಡೆದಿವೆ. ಡಾರ್ವಿನ್ ಮೊದಲಾದ ವಿಜ್ಞಾನಿಗಳ ಸಿದ್ಧಾಂತಗಳಿಂದ ಈ ಮಾತಿಗೆ ಪುಷ್ಟಿ ದೊರಕುತ್ತದೆ.

ಅನುಭಾವವೂ ಸೃಷ್ಟಿಯ ರಹಸ್ಯ ಭೇದಿಸುವಲ್ಲಿ ತನ್ನ ಹೆಚ್ಚು ಸಮಯವನ್ನು ವ್ಯಯ ಮಾಡಿದಂತೆ ತೋರುತ್ತದೆ. ವೇದಕಾಲದಿಂದ ಇಂದಿನವರೆಗಿನ ಎಲ್ಲ ಅನು ಭಾವಿಗಳು ಸೃಷ್ಟಿಯ ಕುರಿತು ತಮ್ಮ ತಮ್ಮ ಆಲೋಚನಸ್ತರಗಳನ್ನು ವ್ಯಕ್ತಪಡಿಸಿದ್ದಾರೆ. ಗೀತೆ, ತ್ರಿಪಿಟಿಕಾ, ಬೈಬಲ್, ಕುರಾನ್ ಮೊದಲಾದ ಧಾರ್ಮಿಕ ಕೃತಿಗಳು ಆಯಾ ಕೃತಿಗಳ ಕರ್ತೃ(ದಾರ್ಶನಿಕರು)ಗಳು ಸೃಷ್ಟಿಯ ಭೇದ ಕುರಿತು ಚರ್ಚಿಸಿದ ಅನುಭವ ಗಳಾಗಿವೆ. ಮುಖ್ಯವಾಗಿ ಬಸವಾದಿ ಶರಣರಲ್ಲಿ ಸೃಷ್ಟಿಯ ರಹಸ್ಯ ಕುರಿತು ಸ್ಪಷ್ಟ ಶೋಧಗಳು ಕಂಡುಬರುತ್ತವೆ. ಕೆಲ ವಚನಕಾರರ ವಚನಗಳಲ್ಲಿ ಸೃಷ್ಟಿಯ ವಚನ

ಗಳೆಂದೇ ಪ್ರಸಿದ್ಧಿ ಪಡೆದಿವೆ. ಅಲ್ಲಮ, ಬಸವಣ್ಣ ಸಿದ್ಧರಾಮ, ಚೆನ್ನಬಸವಣ್ಣ ಅಕ್ಕ ಮಹಾದೇವಿ ಮೊದಲಾದವರ ವಚನಗಳಲ್ಲಿ ಸೃಷ್ಟಿಯ ರಹಸ್ಯ ಭೇದದ ಮಾತಿರುವುದು ಸ್ಪಷ್ಟವಿದೆ. ಮಾದರಿಗಾಗಿ ಅಲ್ಲಮನ ಒಂದು ವಚನವನ್ನು ಇಲ್ಲಿ ಕಾಣಿಸಲಾಗಿದೆ.

"ಆದಿ ಅನಾದಿ ಇಲ್ಲದಂದು ಹಮ್ಮು ಬಿಮ್ಮುಗಳಿಲ್ಲದಂದು
ಸುರಾಳ ನಿರಾಳವಿಲ್ಲದಂದು, ಶೂನ್ಯ ನಿಶೂನ್ಯವಿಲ್ಲದಂದು
ಸಚರಾಚರವೆಲ್ಲ ರಚನೆಗೆ ಬಾರದಂದು
ಗುಹೇಶ್ವರನೊಬ್ಬನೇ ಇದೆಯಲ್ಲ ಇಲ್ಲದಂತೆ" [24]

೨. ವಿಚಾರವಾದ

ವಿಜ್ಞಾನವು ವೈಜ್ಞಾನಿಕ ಮನೋಜ್ಞಾನವನ್ನು ಪ್ರತಿಪಾದಿಸುತ್ತದೆ. ಈ ವೈಚಾರಿಕತೆಯು ಮಾನವನ ಬದುಕಿನ ಉನ್ನತಿಯನ್ನು ಬಯಸುತ್ತದೆ. ಈ ನಿಟ್ಟಿನಲ್ಲಿ ಅದು ಶುದ್ಧ ವೈಚಾರಿಕವಾದವನ್ನು ಪ್ರತಿಪಾದಿಸುತ್ತದೆ. ಅನುಭಾವದಲ್ಲಿಯೂ (ಅದು ವಿಶೇಷವಾಗಿ ಬಸವಾದಿ ಶರಣರಲ್ಲಿ) ವಿಚಾರವಾದದ ಮೂಲ ಆಶಯ ಮನುಷ್ಯ ಬದುಕನ್ನು ಊರ್ಧ್ವಮುಖದಲ್ಲಿ ಬೆಳೆಸುವುದು. ಅನುಭಾವದ ಮೂಲ ಉದ್ದೇಶವೂ ಜೀವಿಯ ಊರ್ಧ್ವಮುಖ ಬೆಳವಣಿಗೆಯ ಅಪೇಕ್ಷೆಯನ್ನೇ ಹೊಂದಿದೆ. ಆ ನಿಟ್ಟಿನಲ್ಲಿ ಅವೈಚಾರಿಕವಾದ ನಂಬಿಕೆ, ಆಚರಣೆಗಳನ್ನು ನಿರಾಕರಿಸುತ್ತದೆ. ಉದಾ: ವೇದಗಳು, ಉಪನಿಷತ್ತುಗಳು, ಬೌದ್ಧ-ಜೈನ ಧರ್ಮತತ್ವಗಳ ಸಂದೇಶಗಳು ಮಾನವ ಜೀವನದ ಅಭಿವೃದ್ಧಿ ಕುರಿತ ಆಲೋಚನೆಗಳೇ ಆಗಿವೆ. ಇಲ್ಲೆಲ್ಲ ಅವೈಚಾರಿಕತೆಯ ನಿರಾಕರಣೆ ಇರುವುದು ಗಮನಿಸಬೇಕು.

೩. ಅಪ್ರಸ್ತುತ ಸಿದ್ಧಾಂತಗಳ ನಿರಾಕರಣೆ :

ವಿಜ್ಞಾನವು ಶೋಧನೆಗೆ ತೊಡಗಿಕೊಂಡಾಗ ಹಿಂದಿನ ಸಿದ್ಧಾಂತದಲ್ಲಿ ದೋಷ ಕಂಡುಬಂದರೆ ಅದನ್ನು ನಿರಾಕರಿಸಿ ಹೊಸ ಸಿದ್ಧಾಂತವನ್ನು ರೂಪುಗೊಳಿಸಿ ಆ ಮೂಲಕ ಹೊಸ ಸತ್ಯವೊಂದನ್ನು ಜಗತ್ತಿಗೆ ದೊರೆಯುವಂತೆ ಮಾಡುತ್ತದೆ. ಉದಾ: ೧. ಹಿಂದೆ ಕೇವಲ ೫ ಭೂಖಂಡಗಳೆಂದುದನ್ನು, ಇಂದು ೬ ಭೂಖಂಡಗಳಿವೆ ಎಂದು ಒಪ್ಪಿಕೊಂಡಿದ್ದೇವೆ (ಹೊಸ ಭೂಖಂಡ - ಅಂಟಾರ್ಟಿಕ).

ಉದಾ: ೨. ಮೊದಮೊದಲು ಭೂಮಿಯ ಸುತ್ತ ಸೂರ್ಯ ಸುತ್ತುತ್ತದೆಂದು ನಂಬಲಾಗಿತ್ತು. ಅನಂತರದಲ್ಲಿ ಗೆಲಿಲಿಯೋ ಈ ವಾದವನ್ನು ಮೂದಲಿಸಿ ಸೂರ್ಯನ ಸುತ್ತ ಭೂಮಿ ತಿರುಗುತ್ತದೆಂದು ವಾದಿಸಿದ. ಮೂಲಭೂತವಾದಿಗಳಿಂದ

ಅವನು ತೊಂದರೆಗಳನ್ನು ಎದುರಿಸಬೇಕಾಗಿ ಬಂದಿತು. ಮುಂದೊಂದು ದಿನ ಅವನ ವಾದದಲ್ಲಿ ಸತ್ಯತೆ ಕಂಡುಬಂದಿತು. ಇಂದು ಭೂಮಿಯೂ ಸೂರ್ಯನೆಂಬ ಗ್ರಹದ ಸುತ್ತಲೂ ಸುತ್ತುತ್ತದೆಂದು ನಂಬಿದ್ದೇವೆ.

ಉದಾ: ೩. ಮೊದಲು ಭೂಮಿಯೂ ಗೋಲಾಕಾರವಾಗಿದೆ (ಚಂದಿರನಂತೆ) ಎಂದು ವಿಜ್ಞಾನ ಖಚಿತಪಡಿಸಿತು. ನಂತರ ಹೆಚ್ಚಿನ ಶೋಧದಿಂದ ಭೂಮಿ ಗೋಲಾಕಾರವಾಗಿದ್ದರೂ ಮೇಲಿಂದ ಕೆಳಗೆ ಚಪ್ಪಟೆಯಾಗಿದೆ (ತತ್ತಿಯ ಮಾದರಿ ಯಲ್ಲಿ) ಎಂದು ಒಪ್ಪಿಕೊಳ್ಳಲಾಗಿದೆ (ಇಂಥ ಅನೇಕ ಉದಾಹರಣೆಗಳಿವೆ ಡಿ.ಡಿ.ಟಿ./ ರಸಾಯನಿಕ ಗೊಬ್ಬರ ಮುಂತಾದವು).

ಅನುಭಾವವೆಂಬುದು ಸಹ ಹಳೆಯ ತತ್ವಸಿದ್ಧಾಂತಗಳಲ್ಲಿ ಲೋಪದೋಷ ಕಂಡುಬಂದರೆ ಅವುಗಳನ್ನು ನಿರಾಕರಿಸಿ ಹೊಸ ತತ್ವಸಿದ್ಧಾಂತಗಳ ಹುಟ್ಟಿಗೆ ಕಾರಣ ವಾಗುತ್ತದೆ. ಸಾಮಾನ್ಯವಾಗಿ ವೇದಗಳೇ ಅನುಭಾವದ ಮೊದಲ ಮೆಟ್ಟಿಲು ಗಳಾದರೂ ವೇದದ ಕರ್ಮಠತನಗಳು ಮನುಕುಲಕ್ಕೆ ಜಡವಾದಾಗ, ವೇದೋತ್ತರ ದಲ್ಲಿ ಅಂದರೆ ಉಪನಿಷತ್ತುಗಳಲ್ಲಿನ ಅನುಭಾವ ವೇದಕಾಲದ ಜೀವನಸಿದ್ಧಾಂತ ಗಳನ್ನೇ ನಿರಾಕರಿಸಿದೆ. ಜೈನ-ಬೌದ್ಧ ಅನುಭಾವ ತತ್ವಗಳೂ ಹಳೆ ತತ್ವಸಿದ್ಧಾಂತಗಳನ್ನು ನಿರಾಕರಿಸಿಯೇ ಬೆಳೆದು ಜಡವಾದಾಗ ವೀರಶೈವ ಅನುಭಾವ ತತ್ವಸಿದ್ಧಾಂತ ರೂಪು ಗೊಂಡಿದ್ದು ಇಲ್ಲಿ ಕಾಣಬಹುದು.

''ವೇದಕ್ಕೆ ಒರೆಯ ಕಟ್ಟುವೆ ! ಶಾಸ್ತ್ರಕ್ಕೆ ನಿಗಳವನಿಕ್ಕುವೆ !
ತರ್ಕದ ಬೆನ್ನಬಾರನೆತ್ತುವೆ ! ಆಗಮದ ಮೂಗ ಕೊಯಿವೆ !
ನೋಡಯ್ಯ ಮಹದಾನಿ ಕೂಡಲಸಂಗಮದೇವಾ
ಮಾದಾರಚೆನ್ನಯ್ಯನ ಮನೆಯಮಗ ನಾನಯ್ಯ //'' [25]

ಎನ್ನುವಲ್ಲಿ ಹಳೆಯ ಸಿದ್ಧಾಂತದ ನಿರಾಕರಣೆಯನ್ನು ಗುರುತಿಸಬಹುದು.

೪. ಪ್ರಯೋಗಶೀಲತೆ

ವಿಜ್ಞಾನವೂ ಪ್ರಯೋಗ-ತರ್ಕವನ್ನು ಆಧರಿಸಿರುತ್ತದೆ. ಪ್ರಯೋಗವಿಲ್ಲದೇ ಏನನ್ನೂ ಹೇಳದು. ಆದ್ದರಿಂದ ಪ್ರಯೋಗಕ್ಕೆ ವಿಜ್ಞಾನದಲ್ಲಿ ಹೆಚ್ಚಿನ ಮಹತ್ವವಿದೆ. ಅನುಭಾವವೂ ಪ್ರಯೋಗಶೀಲವಾಗಿದೆ. ಹಾಗಾಗಿ ಪ್ರಯೋಗದ ಮೂಲಕ ಬಂದ ಅನುಭಾವವೇ ಸತ್ಯವೆಂದು ಪ್ರತಿಪಾದಿತವಾಗುತ್ತದೆ. ಸಾಧಕನಾದವನು ಸತ್ಯಾ ನ್ವೇಷಣೆಗೆ ಇಡೀ ಸೃಷ್ಟಿಯನ್ನು ಪ್ರಯೋಗಶಾಲೆಯಾಗಿಸಿಕೊಂಡಿರುತ್ತಾನೆ. ತನ್ನ ಬದುಕನ್ನೇ ಪ್ರಯೋಗಕ್ಕೆ ಒಳಪಡಿಸಿಕೊಳ್ಳುತ್ತಾನೆ. ಭಾರತೀಯ ಅನುಭಾವದ ಚರಿತ್ರೆ

ಯುದ್ಧಕ್ಕೂ ಹೊಸ ಪ್ರಯೋಗಗಳಿವೆ. ಆ ಮೂಲಕ ಮನುಕುಲದ ಒಳಗೊಳಗಿನ ಸತ್ಯಾನ್ವೇಷಣೆ ನಡೆದುದರ ಫಲವಾಗಿ ಹಲವಾರು ಧರ್ಮ-ತತ್ವಗಳು ಹುಟ್ಟಿಕೊಂಡಿವೆ. ಪ್ರತಿಯೊಂದು ಧರ್ಮವೂ ತನ್ನದೇ ಆದ ಹೊಸ ಪ್ರಯೋಗಗಳನ್ನು ಮಾಡುವ ಮೂಲಕ ಹೊಸ ಅನ್ವೇಷಣೆಗೆ ಒಳಗಾಗಿದೆ. ಹಾಗಾಗಿ ವಿಜ್ಞಾನ-ಅನುಭಾವಗಳೆರಡೂ ಪ್ರಯೋಗಶೀಲವೆಂದು ಹೇಳಬಹುದು.

೫. ತಾಂತ್ರಿಕ ಕೌಶಲ್ಯ :

ವಿನೂತನ ತಾಂತ್ರಿಕ ಕೌಶಲ್ಯವನ್ನು ರಚಿಸುವುದು ವಿಜ್ಞಾನದ ಮೂಲವಾಗಿದೆ. ಹೊಸ ಹೊಸ ತಂತ್ರಾಂಶಗಳು ಈ ಜಗತ್ತನ್ನು ಹೊಸ ದಿಕ್ಕಿನತ್ತ ಚಲಿಸಲು ಸಹಾಯಕವಾಗಿದ್ದು ವಿಜ್ಞಾನದ ಹರವು ಹೆಚ್ಚಾಗಲು ಕಾರಣವಾಗಿವೆ.

ಅನುಭಾವವೂ ತಾಂತ್ರಿಕ ಕೌಶಲ್ಯಗಳನ್ನು ಹೊಂದಿದೆ. ಅನುಭಾವದ ಬೆಳವಣಿಗೆಯ ಹಿನ್ನೆಲೆಯಲ್ಲಿ ಹೊಸ ತಂತ್ರಾಂಶಗಳನ್ನು ಬಳಸಿಕೊಂಡಿದೆ. ಪತಂಜಲಿಯ ಯೋಗತಂತ್ರವೂ ಒಂದು ಅನುಭಾವವಾದರೆ, ಬಸವಾದಿ ಶರಣರ ಷಟಸ್ಥಲ ಸಿದ್ಧಾಂತವೂ ತಾಂತ್ರಿಕ ಅಂಶಗಳನ್ನೊಳಗೊಂಡಿದೆ. ಆ ಮೂಲಕ ಅನುಭಾವದ ಹರವಿಗೆ ಬೆಳವಣಿಗೆಗೆ ಸಹಾಯಕವಾಗಿದೆ. ವ್ಯಕ್ತಿಯ ವ್ಯಕ್ತಿತ್ವ ರಚನೆಯಲ್ಲಿ ತಾಂತ್ರಿಕ ಅನುಭಾವವು ಅತ್ಯಂತ ಪ್ರಮುಖವಾದದ್ದಾಗಿದೆ. ತಾಂತ್ರಿಕ ಅನುಭಾವಿ ಇಲ್ಲದಿದ್ದರೆ, ಅನುಭಾವವೇ ಇಲ್ಲ. (ಕೇವಲ ಸಂತನು ಅನುಭಾವಿಯಾಗಲಾರ) ಭಾವ ಮತ್ತು ಆಚರಣೆಗಳ ತಾಂತ್ರಿಕ ಅನುಸಂಧಾನ ಮಾತ್ರ ಅನುಭಾವವಾಗಲು ಸಾಧ್ಯ.

೬. ನೆಮ್ಮದಿಯ ಜಗತ್ತು :

ವಿಜ್ಞಾನದ ಮೂಲ ಆಶಯ ಈ ಜಗತ್ತನ್ನು ನೆಮ್ಮದಿಯ ಪಾತಳಿಯ ಮೇಲೆಯೇ ನೆಲೆಸುವಂತೆ ಮಾಡುವುದು. ಅನೇಕ ಶೋಧ ಹಾಗೂ ಆವಿಷ್ಕಾರಗಳು ಮನುಕುಲದ ಒಳಿತಿಗಾಗಿ, ಮಾನವನ ಸುಖಶಾಂತಿಗಾಗಿ. ನೆಲದ ಮೇಲೆ ನಡೆದಾಡುವ ಮನುಷ್ಯ - ಇಂದು ನೀರಿನ ಮೇಲೆ, ಗಾಳಿಯ ಮೇಲೆ ಸರಾಗವಾಗಿ ಚಲಿಸಬಲ್ಲ ಸಾಮರ್ಥ್ಯ ಪಡೆದುದರ ಹಿಂದಿನ ಶ್ರಮವೇ ನೆಮ್ಮದಿಯ ಬದುಕಿನ ಆಶಯವಾಗಿದೆ.

ಅನುಭಾವವೂ ನೆಮ್ಮದಿಯ ಬದುಕನ್ನು ಕುರಿತು ಆಲೋಚಿಸುತ್ತದೆ. ಅನುಭಾವದ ಮೊದಲ ಮೆಟ್ಟಿಲು ಸಂಸಾರದ ವೈರಾಗ್ಯ ಮಾತ್ರ ಮನುಷ್ಯನನ್ನು ನೆಮ್ಮದಿಯಾಗಿರಿಸುತ್ತದೆ ಎಂದು ಸಾರಿತು. ಬಹುತೇಕ ದಾರ್ಶನಿಕರು, ಅನುಭಾವಿಗಳು ಸಂಸಾರ ತ್ಯಾಗದ ಬೋಧನೆ ಮಾಡಿದ್ದಾರೆ. ಆ ಮೂಲಕ ಮಾನವನ ನೆಮ್ಮದಿಯ ಕುರಿತು ಚಿಂತಿಸಿದ್ದಾರೆ (ಬುದ್ಧನು ನಿರ್ವಾಣ ಬೋಧನೆಗೆ ಎಲ್ಲವೂ ಶೂನ್ಯವೆನ್ನುತ್ತಾನೆ, ಆರುವ ದೀಪಗಳೆನ್ನುತ್ತಾನೆ). ವಚನಕಾರರು ಈ ವಿಷಯದಲ್ಲಿ ಹೊಸ ನಿಟ್ಟಿನಲ್ಲಿ

ಚಿಂತಿಸಿದ್ದಾರೆ. ಅಲ್ಲಮ ಗೋರಕ್ಷರ ಸಂವಾದದಲ್ಲಿ ದೇಹ-ಮನಸ್ಸುಗಳು ಬಲಿಷ್ಟತೆಗಳ ಮುಖಾಮುಖಿ ಇದ್ದರೆ, ಆ ಮೂಲಕ ಮನಸ್ಸು ಗಟ್ಟಿಗೊಳಿಸಿದ ಅಲ್ಲಮ ಗೆಲ್ಲುವುದು ಆತ್ಮಬಲದ - ಆತ್ಮಸ್ಥೈರ್ಯದ ಮೂಲಕ ನೆಮ್ಮದಿ ಸಾಧ್ಯವೆಂದು ಪ್ರತಿಪಾದನೆ ಮಾಡಿದುದು ಗಮನಿಸಬೇಕು. ಅದೇ ರೀತಿ ಬಸವಾದಿ ಶರಣರು ಬದುಕಿನ ನೆಮ್ಮದಿಗೆ ವೈರಾಗ್ಯವನ್ನು ಸೂಚಿಸುವುದಿಲ್ಲ.

"ಭಕ್ತನ ಮನ ಹೆಣ್ಣಿನೊಳಗಾದರೆ ವಿವಾಹವಾಗಿ ಕೊಡುವುದು
ಭಕ್ತನ ಮನ ಮಣ್ಣಿನೊಳಗಾದರೆ ಕೊಂಡು ಆಲಯವ ಮಾಡುವುದು
ಭಕ್ತನ ಮನ ಹೊನ್ನಿನೊಳಗಾದರೆ
ಬಳಲಿ ದೊರಕಿಸುವುದು ನೋಡಾ ಕಪಿಲಸಿದ್ದ ಮಲ್ಲಿಕಾರ್ಜುನಾ" [26]

ಎಂದು ಹೇಳುವ ಮೂಲಕ ವಚನಕಾರರು ಪ್ರಪಂಚದಲ್ಲಿದ್ದು ಪಾರಮಾರ್ಥ ಜಯಿಸಿದ್ದರು. ಸರಳ ಸೂತ್ರದ ಮೂಲಕ ಶರಣರ ಅನುಭಾವ ನೆಮ್ಮದಿಯ ಜಗತ್ತಿಗಾಗಿ ದುಡಿದಿದೆ, ಶ್ರಮಿಸಿದೆ.

೭. ಭೌತ – ಅಭೌತ :

ವಿಜ್ಞಾನ ನಿರಂತರ ಭೌತಿಕ ಜಗತ್ತಿನ ಪ್ರಗತಿಗೆ ಪೂರಕವಾಗಿ ಶ್ರಮಿಸುತ್ತಿದೆ. ಆ ಮೂಲಕ ಮನುಷ್ಯನನ್ನು ನಾಗರಿಕರನ್ನಾಗಿಸಿದೆ. ಆದೀಮ ಸ್ಥಿತಿಯಲ್ಲಿ ಮಾನವರು ಗುಹೆಯಲ್ಲಿ ವಾಸ ಮಾಡುತ್ತಿದ್ದರು. ಇಂದು ಮಂಗಳ ಲೋಕದಲ್ಲಿನ ಮನೆ ನಿರ್ಮಾಣದ ಅಪೇಕ್ಷೆಯಲ್ಲಿದ್ದಾರೆ. ಈ ಮಧ್ಯದಲ್ಲಿ ಅನೇಕ ಸ್ಥರದ ಅಭಿವೃದ್ಧಿ ಸಾಧಿಸಿರುವ ಚರಿತ್ರೆ ನಮ್ಮ ಕಣ್ಣೆದುರಿಗಿದೆ. ಆ ಮೂಲಕ ಮನುಷ್ಯರ ಅಮೂರ್ತ ರೂಪದ ಅಭೌತಿಕ ವಿಚಾರಸರಣಿ ಬದಲಾಗಿದೆ. ಮನುಷ್ಯರು ವಿಶ್ವಕುಟುಂಬಿ ಆಗಿದ್ದಾರೆ (ನಾವು ನಮ್ಮವರೆಂಬ ಭಾವ ಬೆಳೆಯುತ್ತಿದೆ. ಆದರೆ ಹಿಂದೆ ಜಗತ್ತಿನ ವೈಶಾಲ್ಯತೆಯ ಅರಿವಿರಲಿಲ್ಲ).

ಅನುಭಾವವು ಅಂತರಂಗಕ್ಕೆ ಸಂಬಂಧಿಸಿದ ಆತ್ಮಜ್ಞಾನವಾದರೂ ವ್ಯಕ್ತಿಯ ಅಂತರಂಗದ ವಿಕಾಸ ತತ್ವ ಸ್ಫುರಿಸುವುದರ ಮೂಲಕ ಅಭೌತಿಕ (ಭಾವನಾತ್ಮಕ) ವಿಕಾಸ ಸಾಧಿಸಿದ್ದು, ಅದು ತನ್ನಷ್ಟಕ್ಕೆ ತಾನೇ ಭೌತಿಕ ಬೆಳವಣಿಗೆಗೆ ಕಾರಣವಾಗಿದೆ. ವ್ಯಕ್ತಿಯ ಆತ್ಮ ಶುದ್ಧವಾದಾಗ ದೇಹ ತನ್ನ ಪಾಡಿಗೆ ತಾನು ಶುದ್ಧವಾಗುತ್ತದೆ. ಅಕಾಯ ಶರೀರದಲ್ಲಿನ ಕಾಯವನ್ನು ನಿರಾಕರಿಸಲಾಗುವುದಿಲ್ಲ. ಹಾಗಾಗಿ ಅನುಭಾವವು ಭೌತಿಕ-ಅಭೌತಿಕ ಬೆಳವಣಿಗೆಗೆ ಸಹಾಯಕಾರಿಯಾಗಿ ಬೆಳೆದಿದೆ.

೮. ನಿರಂತರ ಶೋಧನೆ :

ವಿಜ್ಞಾನ ಹಿಂದಿಗಿಂತ ಇಂದು ಅನೇಕ ರೀತಿಯಲ್ಲಿ ಬೆಳವಣಿಗೆ, ಅಭಿವೃದ್ಧಿಯ

ಚರಮಸ್ಥಿತಿ ತಲುಪಿದಂತೆ ಕಂಡುಬಂದರೂ ಅದು ತನ್ನ ಶೋಧಗಳನ್ನು ಸ್ಥಗಿತಗೊಳಿಸಿಲ್ಲ. ಆ ಶೋಧದ ಹೊಸ ಹೊಸ ಆವಿಷ್ಕಾರಗಳು ಎಲ್ಲರಿಗೂ ಸಿಗುವಂತೆ ವ್ಯವಸ್ಥೆಗೊಳಿಸಲಾಗುತ್ತಿದೆ. ಆದ್ದರಿಂದ ವಿಜ್ಞಾನದ ಶೋಧವು ನಿರಂತರವಾಗಿದೆ.

ಅನುಭಾವವೂ ಒಂದು ಶೋಧವೇ (ಅನ್ವೇಷಣೆ) ಆಗಿದೆ. ಇಲ್ಲಿಯ ಪೂರ್ಣಜ್ಞಾನವೆಂದರೆ ಸತ್ಯಾನ್ವೇಷಣೆ. ಆದರೆ ಸತ್ಯವೆನ್ನುವುದು ತನ್ನ ವಾರಸುದಾರಿಕೆಯನ್ನು ಇಂದಿಗೂ ಯಾರಿಗೂ ಬಿಟ್ಟುಕೊಟ್ಟಿಲ್ಲ.

ಪ್ರತಿಯೊಬ್ಬ ದಾರ್ಶನಿಕ, ಸಾಧಕ (ಸತ್ಯಾನ್ವೇಷಣೆ) ಸಹ ತನಗೆ ಕಂಡ ಸತ್ಯವನ್ನು ಸಾರಿದ್ದಾನೆ. ಅದೇ ಅವನ ತತ್ವವೂ ಆಗಿದೆ. ಆ ಕಾಲದ ಬದುಕಿನ ಸಿದ್ಧಾಂತವಾಗಿದೆ. ಬೇರೆ ಬೇರೆ ವಿಜ್ಞಾನಿಗಳ ಹಲವಾರು ಶೋಧಗಳಿರುವಂತೆ ಬೇರೆ ಬೇರೆ ಅನುಭಾವಿಗಳ ಹಲವಾರು ಸಿದ್ಧಾಂತಗಳಿವೆ. ಅವೆಲ್ಲಾ ಆಯಾಕಾಲದ ಸತ್ಯತೆಗಳು ಮಾತ್ರವೆಂದು ಹೇಳಬಹುದು. ಅನುಭಾವಿಯು ಹೊಸ ಸತ್ಯಾನ್ವೇಷಣೆಯ ಮೂಲಕ ಮನುಕುಲದ ಸಾರ್ಥಕತೆಗೆ ತೆಗೆದುಕೊಂಡು ಹೋಗುತ್ತಾನೆ. ಆದ್ದರಿಂದ ಇಲ್ಲಿರುವ ಶೋಧ ನಿರಂತರ, ಇದು ಸತ್ಯಾನ್ವೇಷಣೆಯ ಜೀವಂತಿಕೆಯನ್ನು ಸೂಚಿಸುತ್ತದೆ.

ಕಾರಣ-ಪರಿಣಾಮ :

ವಿಜ್ಞಾನ ಕಾರಣ-ಪರಿಣಾಮಗಳನ್ನು ಅವಲಂಬಿಸಿರುವಂತೆ ಅನುಭಾವವು ತಾರ್ಕಿಕ ಕಾರಣ-ಪರಿಣಾಮಗಳ ಮೂಲಕ ವ್ಯಕ್ತಿತ್ವ ಬೆಳವಣಿಗೆಗೆ ಕಾರಣವಾಗುತ್ತದೆ. ಆ ಮೂಲಕ ಸಾಧ್ಯವಾದ ಮೌಢ್ಯತೆಗಳನ್ನು ಅನುಭಾವ ನಿರಾಕರಿಸಿದರೆ, ವಿಜ್ಞಾನ ಮಾತ್ರ ಎಲ್ಲ ಮೌಢ್ಯತೆಗಳನ್ನು ನಿರಾಕರಿಸುತ್ತದೆ.

ಒಟ್ಟಾರೆ ಅನುಭಾವವೂ ಒಂದು ವಿಜ್ಞಾನವಾಗಿದೆ. ಅನುಭಾವ-ವಿಜ್ಞಾನಗಳು ಪೂರಕವಾಗಿಯೇ ಬೆಳೆದು ಬಂದ ಜ್ಞಾನಶಿಸ್ತುಗಳಾಗಿವೆ. ವಿಜ್ಞಾನವು ಬಹಿರಂಗದಲ್ಲಿ ಪ್ರಕಟಗೊಂಡರೆ, ಅನುಭಾವವು ಅಂತರಂಗದಲ್ಲಿ ಮಥನವಾಗಿ ಅಭಿವ್ಯಕ್ತವಾಗುತ್ತದೆ. ಆರೋಗ್ಯಪೂರ್ಣವಾದ ಚಾರಿತ್ರಿಕ, ನೈತಿಕ, ಭಾವಗಳ ಆಚರಣೆಗಳ ಅನುಸಂಧಾನ ಮಾತ್ರ ಅನುಭಾವವಾಗುತ್ತದೆ. ಬೌದ್ಧಿಕ, ಪ್ರಾಯೋಗಿಕತೆಗಳ ಮೂಲಕ ಅಂತರಂಗದ ಅಂತಃಶಕ್ತಿಯಾಗಿದೆ. ಅನುಭಾವವಿಲ್ಲದ ಅಧ್ಯಾತ್ಮಚೇತನ ಆತ್ಮವಿಲ್ಲದ ದೇಹದಂತೆ, ರಸ-ಧ್ವನಿರಹಿತ ಕಾವ್ಯದಂತಿದೆ. Internet ವೈಜ್ಞಾನಿಕತೆಯೂ ಶಿಶು ಕಂಡ ಕನಸಿನ ಅನುಭಾವವಾಗಿದೆ ಎಂಬುದು ವಿಜ್ಞಾನ-ಅನುಭಾವದ ಮಧ್ಯದ ಸಾಮ್ಯತೆಗಳನ್ನು ಬಲಪಡಿಸುತ್ತದೆ.

****

೧.೪ ಅನುಭಾವ - ಚಾರಿತ್ರಿಕ ನೆಲೆಗಳು

ಅನುಭಾವವೆನ್ನುವುದು ಮನುಕುಲದಷ್ಟು ಪ್ರಾಚೀನವಾದುದೆಂದು ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಚರಿತ್ರೆ ಬೆಳೆದಂತೆ ಅನುಭಾವವು ಬೆಳೆದಿದೆ. ಮನುಕುಲದ ಏಳಿಗೆಗೆ ಹಿನ್ನೆಲೆಯಾದ ಬೆಳವಣಿಗೆಗಳು ಮತ್ತು ಕಾಲಮಾನದ ಹಿನ್ನೆಲೆಯಲ್ಲಿ ನಿರಂತರ ಬದಲಾವಣೆಗೆ ಒಳಗಾದ ಸಮಾಜೋಧಾರ್ಮಿಕ ಚಳುವಳಿಗಳು; ಆಂದೋಲನ ಗಳು, ಪ್ರಭುತ್ವದ ಏಳುಬೀಳುಗಳೆಲ್ಲ ಅನುಭಾವಿ ಮತ್ತು ಅನುಭಾವದ ಮೇಲೆ ಗಾಢಪರಿಣಾಮ ಬೀರಿವೆ. ಅದನ್ನು ಮುಖ್ಯವಾಗಿ ಮನುಷ್ಯನ ಅಧ್ಯಾತ್ಮಿಕ ಜೀವನ ವೇದಕಾಲದಿಂದ ಆರಂಭವಾಗಿದ್ದರಿಂದ ಅನುಭಾವವನ್ನು ಸಹ ವೇದಕಾಲದಿಂದ ಆರಂಭಿಸಿ ಉಪನಿಷತ್ತು, ಗೀತೆ ಮೊದಲಾದವುಗಳ ಕಾಲಗತಿಯ ಹಿನ್ನೆಲೆಯಲ್ಲಿ ಪ್ರತಿಪಾದಿಸುತ್ತ ಅನುಭಾವದ ಚಾರಿತ್ರಿಕ ನೆಲೆ ಮತ್ತು ಅದರ ಅಸ್ತಿತ್ವಗಳನ್ನು ಚರ್ಚಿಸಿ, ೧೨ನೆ ಶತಮಾನದ ಶಿವಶರಣರ ಅನುಭಾವ ಮಂಟಪದಲ್ಲಿ ಗೋಚರಿಸಿದ, ಅನುಭಾವದ ಇತಿಹಾಸವನ್ನು ವೇದದಿಂದ ಶರಣರ ಅನುಭಾವಮಂಟಪದವರೆಗೆ ಅದರ ಚಾರಿತ್ರಿಕ ನೆಲೆಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ದಾಖಲಿಸಲಾಗಿದೆ.

೧.೪.೧. ವೇದಗಳಲ್ಲಿ ಅನುಭಾವ :

ಭಾರತೀಯ ಮನುಕುಲದ ವ್ಯವಸ್ಥಿತ ಬದುಕಿನ ಆರಂಭವೆಂದರೆ ವೇದಕಾಲ ದ್ದೆಂದು ಹೇಳಬಹುದು. ಮನುಕುಲದ ಜೀವನ ವಿಧಾನದ ಸಂಹಿತೆಗಳಾಗಿದ್ದ ವೇದಗಳು ಭಾರತೀಯರ ಸಾಂಸ್ಕೃತಿಕ, ಅಧ್ಯಾತ್ಮಿಕ ನೆಲೆಗಳ ತವರು ಸಹ. ಅಂತೆಯೇ ವೇದಗಳು ಆ ಕಾಲದ ಒಟ್ಟಾರೆ ಬದುಕನ್ನು ಆಳಲು ಸಮರ್ಥವಾಗಿದ್ದವು. ಏಕೆಂದರೆ ವೇದಗಳು ಅಂದು ಅಂತಿಮ ಸತ್ಯಗಳಾಗಿದ್ದವು. ಹೇಗೆ ಮಾನವನು ಬುದ್ಧಿ-ಭಾವಗಳ ವಿಕಸನಕ್ಕೆ ಒಳಗಾಗುತ್ತಾನೋ ಹಾಗೇ ವೇದಗಳು ಅವನಿಗೆ ಎದುರಾಗುತ್ತವೆ, ತಮ್ಮದೇ ಆದ ಜಗತ್ತನ್ನು ತೆರೆದುಕೊಳ್ಳುತ್ತವೆ.

ವೇದವೆಂದರೆ ಅರಿವು, ಜ್ಞಾನ, ತಿಳುವಳಿಕೆ ಎಂದರ್ಥ. ಮನುಷ್ಯಬದುಕಿನ ತಿಳುವಳಿಕೆಯನ್ನು ಹೆಚ್ಚಿಸುವಲ್ಲಿ ವೇದಗಳದ್ದು ಮಹತ್ವದ ಪಾತ್ರವಿದೆ. ವೇದಗಳ ಮುಖ್ಯ ಪ್ರಕ್ರಿಯೆಯೆಂದರೆ ಅರ್ಚನೆ, ಅರ್ಪಣೆ, ಗಾಯನ. ಜ್ಞಾನದಾಹದಲ್ಲಿದ್ದಾಗ ಎದುರಾದ ಈ ವೇದಗಳು ಭಾರತೀಯರ ಭಾವುಕತೆಯ ಪ್ರತೀಕವಾದವು. ಇವು

ಅಧ್ಯಾತ್ಮಿಕ ಜೀವನದ ಮೊದಲ ಮೆಟ್ಟಿಲುಗಳು. ಅಜ್ಞಾನ-ಅಂಧಕಾರದಲ್ಲಿದ್ದ ಬದುಕನ್ನು ಜ್ಞಾನಕ್ಕೆ ತರಲು, ಬೆಳಕು ಕಾಣಿಸಲು ಆಶಿಸಿದ ವೇದಗಳು ಬದುಕಿನ ನಿಜವಾದ ಅರ್ಥವಂತಿಕೆ ತಿಳಿಸಿಕೊಡಲು ಮುಂದಾದವು. ಮನುಷ್ಯನ ಜ್ಞಾನವಿಕಾಸದ ಆರಂಭದ ಪ್ರಯತ್ನಗಳಾಗಿ ಇವು ಕ್ರಿಯೆಗೆ ತೊಡಗಿಕೊಂಡವು.

ವೇದಗಳು ಹಲವಾರು ಜಿಜ್ಞಾಸೆಗೆ ಒಳಗಾಗಿವೆ. ಒಟ್ಟು ವೇದಗಳು ನಾಲ್ಕು. ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ. ಆದರೆ ಇವು ಒಂದೇ ಕಾಲದಲ್ಲಿ ಒಬ್ಬ ವ್ಯಕ್ತಿಯಿಂದ ರಚಿತವಾದವುಗಳಲ್ಲ. ವೇದಗಳು ಅಪೌರುಷೇಯ ವೆಂದು, ಬ್ರಹ್ಮನ ಚತುರ್ಮುಖದಿಂದ ಬಂದವೆಂಬ ಮಾತುಗಳು ಇವೆ. ಇವೆಲ್ಲ ಅಭಿಮಾನದ ಮಾತುಗಳು ಮಾತ್ರ. ಅದಕ್ಕೆ ಕಾರಣವೆಂದರೆ ಅದರ ಪ್ರಾಚೀನತೆ. ಇತಿಹಾಸದ ತಪ್ಪಿನಿಂದ ಅದು ದೂರವಾಗದು. ಹೀಗಾಗಿ ವೇದಗಳ ಕಾಲದ ಖಚಿತತೆ ಇಲ್ಲ.

ಬಾಲ ಗಂಗಾಧರ ತಿಲಕ್ ಅವರು ''ಕ್ರಿ.ಪೂ. ಆರು ಸಾವಿರ ವರ್ಷಗಳಷ್ಟು ಪುರಾತನವಾದವು ಕೆಲವು ಋಗ್ವೇದ ಮಂತ್ರಗಳು'' ಎನ್ನುತ್ತಾರೆ. ಹರ್ಮನ್ ಯಾಕೋಬಿ ಎಂಬ ಜರ್ಮನಿಯ ಪಂಡಿತ ''ಕ್ರಿ.ಪೂ. ೪೫೦೦ ವರ್ಷ'' ಎನ್ನುತ್ತಾರೆ. ಮುಂದೆ ಹೌಗ ಎಂಬ ಪಂಡಿತ ''ವೇದಗಳ ಕಾಲ ಕ್ರಿ.ಪೂ. ೨೪೦೦ರಿಂದ ೨೦೦೦ದ ಒಳಗೆ'' ಎನ್ನುತ್ತಾನೆ. [27] ಈ ಅಭಿಪ್ರಾಯಗಳನ್ನು ಗಮನಿಸಿದಾಗ ವೇದ ಗಳು ಇಂದಿಗೆ ಸು. ೭-೮ ಸಾವಿರ ವರ್ಷಗಳಷ್ಟು ಪುರಾತನವಾದವುಗಳೆಂಬ ನಿಲುವು ತಾಳಬೇಕಾಗುತ್ತದೆ.

ವಾಸ್ತವವಾಗಿ ವೇದಗಳು ಅಷ್ಟು ಪುರಾತನವಾದವುಗಳಲ್ಲ. ''ಋಗ್ವೇದವನ್ನು ಕ್ರಿ.ಪೂ. ಸು. ೨೫೦೦ರಲ್ಲಿ ರಚಿಸಿರಬೇಕೆಂದು'' ಸಿ. ಎನ್. ದಾಸರು ಅಭಿಪ್ರಾಯ ಪಡುತ್ತಾರೆ. [28] ಆದರೆ ವೇದಗಳ ಕಾಲ ಕುರಿತು ಖಚಿತ ನಿರ್ದಿಷ್ಟತೆಯಿಲ್ಲ. ಬಾಲ ಗಂಗಾಧರ ತಿಲಕರು ಕ್ರಿ.ಪೂ. ೬೦೦೦ ಎಂದಿದ್ದಾರೆ. ಡಾ. ಜಾಕೋಬಿಯವರು ೪೦೦೦ ಎಂದಿದ್ದಾರೆ. ಮಾಕ್ಸಮುಲ್ಲರ್‌ರು ಕ್ರಿ.ಪೂ. ೧೨೦೦ರಿಂದ ಕ್ರಿ.ಪೂ. ೧೦೦೦ ಅವಧಿಯಲ್ಲಿ ರಚಿತವಾಗಿರಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಇವೆಲ್ಲವನ್ನೂ ಆಧರಿಸಿ ಆರ್. ಸಿ. ಮುಜುಂದಾರರವರು ಕ್ರಿ.ಪೂ. ೨೦೦೦ ಮತ್ತು ೧೫೦೦ರ ನಡುವಿನ ಕಾಲವು ಋಗ್ವೇದದ ಕಾಲವೆಂಬ ತೀರ್ಮಾನಕ್ಕೆ ಬಂದಿದ್ದಾರೆ. [29]

ವೇದಗಳೂ ಮೂಲತಃ ಅಧ್ಯಾತ್ಮ ಮೂಲದ ಪ್ರೇರಣೆಗಳಾದ್ದರಿಂದ ವೇದಗಳ ಕಾಲವು ನಿರ್ದಿಷ್ಟವಾಗಿಲ್ಲ. ಒಟ್ಟಾರೆ ಅಭಿಮತವೆಂದರೆ, ಕ್ರಿ.ಪೂ. ೬೦೦೦ದಿಂದ ಕ್ರಿ.ಪೂ. ೧೦೦೦ದವರೆಗಿನ ಕಾಲದ ಉಯ್ಯಾಲೆಯಲ್ಲಿ ವೇದಗಳ ಕಾಲವಿರುವುದು. ಅನುಭಾವದ ಚರಿತ್ರೆಯ ಕಾಲವನ್ನು ಇದೇ ಎಂದು ಗ್ರಹಿಸಿಕೊಳ್ಳಬಹುದು.

ವೇದಕಾಲದ ಧಾರ್ಮಿಕ ಸ್ವರೂಪ - ಅನುಭಾವ :

ವೇದವೆಂದರೆ ಧಾರ್ಮಿಕ ಬದುಕಿನ ಆರಂಭವೆನ್ನಬೇಕು. ಶಕ್ತಿಯ ಉಪಾಸನೆಯಿಂದ ಆರಂಭವಾಗಿದ್ದು ಪ್ರಾಕೃತಿಕ ಶಕ್ತಿಗಳಲ್ಲಿ ದೈವತ್ವವನ್ನು ಅರಸಿ ಆರಾಧನೆ ಮಾಡುವ ಮೂಲಕ ಅಧ್ಯಾತ್ಮಿಕ ತಳಹದಿಗೆ ನಾಂದಿಯಾಯಿತು. ಹಾಗಾಗಿ ದೇವರ ಪರಿಕಲ್ಪನೆ ಮೂಡಿದ್ದೆ ವೇದಕಾಲದಲ್ಲಿ. ಮನುಷ್ಯ ನಿಸರ್ಗವೊಂದು ಶಕ್ತಿಯೆಂದು ಬಗೆದು ಅದರ ಕೋಪಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ನಿಸರ್ಗಶಕ್ತಿಯ ಆರಾಧನೆಗೆ ಮುಂದಾದನು. ಇಲ್ಲಿ ನಿಸರ್ಗದ ಶಕ್ತಿಗಳೆಲ್ಲ ದೇವರಾಗುತ್ತವೆ. ಬೆಂಕಿ, ಗಾಳಿ, ಮಳೆ, ಸೂರ್ಯ, ಚಂದ್ರಗಳೆಲ್ಲ ಜೀವ ತಾಳುತ್ತವೆ. ಇವುಗಳ ಆರಾಧನೆಯೇ ಯಜ್ಞಗಳಾಗಿ ರೂಪು ತಳೆಯುತ್ತವೆ. ಹಾಗೆ ನೋಡಿದರೆ ವಿಷ್ಣುವಿಗೆ ಇಲ್ಲಿ ಮಾನ್ಯತೆಯೇ ಇಲ್ಲ. ಇಲ್ಲಿ ಇಂದ್ರನೇ ಸರ್ವಸ್ವ. ವೇದಗಳು, ಬಹುತೇಕ ಮಂತ್ರಗಳು ಇಂದ್ರನ ಹೆಸರಿನಲ್ಲಿವೆ. (ಇಂದ್ರ ಆರ್ಯರ ಯಜ್ಞದೇವ) ಇಂದ್ರನ ನಂತರ ಎರಡನೇ ಸ್ಥಾನದಲ್ಲಿ ವರುಣ ಬರುತ್ತಾನೆ. ಇವರಲ್ಲದೇ ಸೋಮ, ಯಮ, ರುದ್ರ ಮೊದಲಾದ ದೇವತೆಗಳ ಪ್ರಸ್ತಾಪವೂ ಬರುತ್ತದೆ. ಆದರೆ ಆ ಕಾಲದ ದೈವಭಕ್ತಿ ಹೆಚ್ಚು ವಾಸ್ತವವಾಗಿರಲಿಲ್ಲ.

ಯಜ್ಞ ಯಾಗಗಳನ್ನು ಮಾಡುವುದು, ಅದರಿಂದ ಅಲೌಕಿಕ ಶಕ್ತಿಯೊಂದು ಪ್ರಾಪ್ತಿಸಿಕೊಳ್ಳಬಹುದೆಂಬ ನಂಬಿಕೆ ತಳೆದಿದ್ದರು. ಇಹ-ಪರಗಳೆರಡರಲ್ಲಿ ಸಂತೋಷ ಪಡಬೇಕೆಂಬ ಆಶಯ ಮತ್ತು ಈ ಲೌಕಿಕ ಶಕ್ತಿ ಪಡೆಯುವದರ ಮೂಲಕ ಮನುಷ್ಯನ ಆಂತರಿಕ ಬದುಕಿನ ಚಿತ್ರವಾಗುತ್ತದೆಂಬುದು ಇಲ್ಲಿ ಮುಖ್ಯವಾಗಿದ್ದು, ಅದೇ ಅನುಭಾವದ ಆರಂಭವೆಂದು ಹೇಳಬಹುದು. ಯಜ್ಞಯಾಗಗಳ ಮೂಲಕ ಇಹಪರಗಳ ಸುಖ ಪಡೆಯುವುದು ಸಾಧ್ಯವೆಂದು ನಂಬಿದ ಕಾಲ. ಇದೊಂದು ದೇವರು ಮತ್ತು ವ್ಯಕ್ತಿಯ ಮಧ್ಯದ ಒಪ್ಪಂದವೆಂದು ಹೇಳಬಹುದು. 'ನಾ ನಿನಗೆ ಬಲಿ ಕೊಡುವೆ ನೀ ನನಗೆ ರಕ್ಷಣೆ ಕೊಡು' ಎಂಬ ವಾಗ್ವಾದದ ಭಕ್ತಿಯ ಸ್ವರೂಪಗಳಿವೆ. ಒಂದರ್ಥದಲ್ಲಿ ಇದನ್ನು ಸಕಾಮಭಕ್ತಿಯೆಂದು ಗುರುತಿಸಬಹುದು.

ವೇದಗಳು ಬಹುದೇವತೋಪಾಸನೆಗೆ ಅವಕಾಶ ಮಾಡಿಕೊಟ್ಟವು. ಋಗ್ವೇದದಲ್ಲಿ ೩೩ ದೇವತೆಗಳ ಉಲ್ಲೇಖ ಬರುತ್ತದೆ. ವೇದಗಳೇ ಅಂತಿಮ ಸತ್ಯಗಳಾಗಿದ್ದವು. ಕಾರಣವೆಂದರೆ ಇವು ಪುರಾಣ-ಮಹಾಕಾವ್ಯಗಳಿಗಿಂತ ಹೆಚ್ಚು ನಂಬಲರ್ಹವೆಂಬಂತೆ ಪ್ರತಿಬಿಂಬಿಸಲಾಗಿತ್ತು. ಆದ್ದರಿಂದ ಪ್ರಶ್ನಾತೀತವಾದವುಗಳಾಗಿದ್ದವು.

ವೇದಕಾಲದ ಯಜ್ಞ ಯಾಗಗಳ ಮೂಲ ಆಶಯವೆಂದರೆ ಪ್ರಕೃತಿ ಮತ್ತು ಸುತ್ತಲಿನ ಪರಿಸರ ಶುದ್ಧವಾಗಿರಬೇಕು. ಕಲುಷಿತ ವಾತಾವರಣ ಇರಬಾರದೆಂಬ ನಂಬಿಕೆಯೊಂದಿಗೆ ಶಾಶ್ವತವಾದ ಸುಖಸಿದ್ಧಿಗಳನ್ನು ಪಡೆದು ಮೋಕ್ಷ ಪ್ರಾಪ್ತಿ ಮಾಡಿಕೊಳ್ಳಬೇಕೆಂಬ ನಿಯಮಕ್ಕೆ ಬದ್ಧರಾದರು. ಹಾಗಾಗಿ ಯಜ್ಞ-ಯಾಗಗಳನ್ನು ಅವುಗಳ

ಉದ್ದೇಶಗಳನ್ನು ಬೋಧಿಸುತ್ತಿದ್ದರು. ಅಂತೆಯೇ "ವೇದಗಳು ಮೊದಲ ಅನುಭಾವ ಗ್ರಂಥಗಳು" [30] ಇಂದು ಅನುಭಾವಕ್ಕೆ ವಿಶಿಷ್ಟ ವಿಶಾಲಾರ್ಥವಿದೆ. ಅನುಭಾವವೂ ಅಮೂರ್ತವೇ ಇರಬಹುದಾದರೂ, ಅದರಲ್ಲೊಂದು ಪ್ರಾಯೋಗಿಕವಾದ ರಚನಾತ್ಮಕವಾದ ಸಾಕ್ಷಾತ್ಕಾರವಿದೆ. ಮೌಢ್ಯತೆಯನ್ನು ದಮನೀಕರಿಸುವ ಶಕ್ತಿಯೇ ಅನುಭಾವವಾಗುತ್ತದೆ. ಆದರೆ ಇಂದಿನ ಅರ್ಥ ವೇದಗಳಲ್ಲಿ ಕಂಡು ಬರುವುದಿಲ್ಲ. ಆದರೆ ಅನುಭಾವ ಅಲ್ಲಿ ಬೀಜಾಂಕುರವಾಗಿ ಪಲ್ಲವಿಸುತ್ತಿರುವುದನ್ನು ಮಾತ್ರ ನಿರಾಕರಿಸಲಾಗದು.

ಹಾಗಾಗಿ ಅನುಭಾವ ಹೆಚ್ಚು ವ್ಯಾಪಕತೆಯನ್ನು ರೂಪಿಸಿರುವ ಕಾಲವೆಂದು ಅನಿಸದು. ಏಕೆಂದರೆ ವೇದಕಾಲದಲ್ಲಿ ಕರ್ಮಠತನದ ಪ್ರಾಬಲ್ಯ ಹೆಚ್ಚಾಗಿತ್ತು. ವೇದಗಳು ದೇವವಾಣಿಯೆಂದು ನಂಬಿಸಲಾಗಿತ್ತು. ಅದರಿಂದ ವೈಚಾರಿಕತೆಗಾಗಲಿ, ಬೌದ್ಧಿಕ ಬೆಳವಣಿಗೆಗಾಗಲಿ ಅವು ಅವಕಾಶ ಮಾಡಿಕೊಡಲಿಲ್ಲ. ಆದ್ದರಿಂದ ಹೃದಯ ಸಂವೇದನೆಯನ್ನು ಕಿರಿದುಗೊಳಿಸಿದವೆಂದು ಹೇಳಬಹುದು. ಮೌಢ್ಯತೆಯೇ ಇಲ್ಲಿ ಊರುಗೋಲಾಗಿ ಕೆಲಸ ನಿರ್ವಹಿಸಿದೆ.

ವೇದಗಳ ಆರಂಭಿಕ ಕಾಲ ಅಭಿವೃದ್ಧಿಪರ ಜೀವನಕ್ರಮವಾಗಿದ್ದು, ಅದು ವಿಕಾಸದ ಹಂತವೆಂದು ಕರೆಯಬಹುದು. ಅನುಭಾವವೆಂಬುದು ಅಲ್ಲಿ ವಿಕಾಸದ ಹಂತವೆಂದೇ ಹೇಳಬೇಕು. ವೇದಗಳ ಕೊನೆ ಕಾಲಘಟ್ಟದಲ್ಲಿ ಅನುಭಾವವು ಪ್ರಬುದ್ಧ ಬೆಳವಣಿಗೆ ಸಾಧಿಸಿರುವುದು ಸ್ಪಷ್ಟವಾಗಿದೆ. ವೇದಗಳ ನಂತರ ಬ್ರಾಹ್ಮಣಗಳಲ್ಲಿ ಆಧ್ಯಾತ್ಮದ ಬೆಳವಣಿಗೆ- ಬದಲಾವಣೆಗಳು ಇವೆ.

೧.೪.೨. ಉಪನಿಷತ್ತಿನಲ್ಲಿ ಅನುಭಾವ

ಭಾರತೀಯರ ವೈಚಾರಿಕ ಬದುಕಿನ ಆರಂಭಕಾಲವೆಂದರೆ ಉಪನಿಷತ್ತಿನ ಕಾಲ. ಉಪನಿಷತ್ತುಗಳು ಭಾರತದ ಪುರಾತನ, ತತ್ವಶಾಸ್ತ್ರಗಳ ಪ್ರತಿನಿಧಿಗಳಾಗಿದ್ದು ವೇದಾಂಗಗಳ ಕೊನೆಯ ಘಟಕಗಳು. ಹಾಗಾಗಿ ಉಪನಿಷತ್ತನ್ನು "ವೇದಾಂತ" ವೆಂದೂ ಕರೆಯಲಾಗಿದೆ. ಈ ವೇದಾಂತ (ಉಪನಿಷತ್ತು)ಗಳು ಮನುಷ್ಯನನ್ನು ಮಾನವನನ್ನಾಗಿಸುವ ಶಕ್ತಿಪಡೆದ ಉದಾತ್ತ ಸಿದ್ಧಾಂತ-ತತ್ವಗಳನ್ನು ಒಳಗೊಂಡಿವೆ. ವೇದಗಳನ್ನು ಸ್ಥೂಲವಾಗಿ ನಾಲ್ಕು ಭಾಗಗಳಲ್ಲಿ ವಿಂಗಡಿಸಬಹುದು. ೧. ಮಂತ್ರ ೨. ಬ್ರಾಹ್ಮಣ ೩. ಅರಣ್ಯಕ ೪. ಉಪನಿಷತ್ತು. ಇದರಲ್ಲಿ ಮೊದಲಿನೆರಡು ಅಂದರೆ ಮಂತ್ರ, ಬ್ರಾಹ್ಮಣಗಳು ಯಜ್ಞ, ಯಾಗಾದಿ ಕರ್ಮಠತನ ಬೋಧಿಸಿದರೆ ಉಳಿದೆರಡು ಅಂದರೆ ಕೊನೆಯ ಅರಣ್ಯಕ ಉಪನಿಷತ್ತುಗಳು ಉಪಾಸನೆ-ಜ್ಞಾನಗಳನ್ನು ಬೋಧಿಸುತ್ತವೆ. ಹಾಗಾಗಿ ಉಪನಿಷತ್ತಿಗೆ ಹೆಚ್ಚಿನ ಮಹತ್ವವಿದ್ದು ಉಪನಿಷತ್ತಿನ ಕಾಲದ ಅನುಭಾವ

ಪ್ರಬುದ್ಧವಾಗಿ ಬೆಳೆದಿದೆ. ವೇದಗಳಿಗೆ 'ನೇರಜ್ಞಾನ'ವೆಂದರ್ಥವಿದ್ದರೆ ಉಪನಿಷತ್ತು 'ಪರೋಕ್ಷಜ್ಞಾನ' ಎಂಬರ್ಥ ಸ್ಫುರಿಸುತ್ತದೆ. ನೇರಜ್ಞಾನ ಅನುಭವವಾದರೆ, ಪರೋಕ್ಷ ಜ್ಞಾನವೇ ಅನುಭಾವ. ಅದನ್ನು ಆತ್ಮಜ್ಞಾನವೆಂದು ಕರೆಯಬಹುದು. ಉಪನಿಷತ್ತು ಎಂದರೆ ''ವೇದವಾಙ್ಮಯದಲ್ಲಿ ಬ್ರಹ್ಮನ ಸ್ವರೂಪ ವನ್ನು ನಿರೂಪಿಸುವ ಜ್ಞಾನಕಾಂಡ, ವೇದಾಂತ ವಿಭಾಗ'' [31] ಬ್ರಹ್ಮಜ್ಞಾನವೆಂದರೆ ಆತ್ಮಜ್ಞಾನ, ಸೃಷ್ಟಿರಹಸ್ಯ. ಆ ರಹಸ್ಯ ತತ್ವಗಳಿಗೆ ಬರೆದ ಭಾಷ್ಯಗೆ ಅರ್ಥವ್ಯಾಪ್ತಿ ಇದೆ.

ಉಪನಿಷತ್ತಿನ ಸಂಖ್ಯೆ ಕುರಿತು ಒಮ್ಮತ ನಿಲುವಿಲ್ಲ. ಏಕೆಂದರೆ ಇಲ್ಲಿ ಒಂದೇ ತತ್ವವಿಲ್ಲ ಹಲವಾರು ತತ್ವಗಳಿವೆ, ಹಲವಾರು ಸಿದ್ಧಾಂತಗಳ ಪ್ರತಿಪಾದನೆಯಿದೆ. ನೂರಾರು ಋಷಿಮುನಿಗಳ ಸಾವಿರಾರು ವರುಷದವರೆಗೆ ನಡೆಸಿದ 'ಸತ್ಯ' ಶೋಧನೆಯ ಫಲಶೃತಿಯಿದೆ. ಹಾಗಾಗಿ ಏಕವ್ಯಕ್ತಿಯ, ಏಕಕಾಲದ ನಿರ್ದಿಷ್ಟ ರಚನೆ ಇವಲ್ಲ.

''ಮುಕ್ತಿಕೋಪನಿಷತ್ತಿನ ಪ್ರಕಾರ ಉಪನಿಷತ್ತುಗಳು ನೂರೆಂಟು. ಮ್ಯಾಕ್ಸ್ ಮುಲ್ಲರ್ ಹೇಳಿಕೆಯಂತೆ ಉಪನಿಷತ್ತುಗಳು ೧೪೯, ಬರ್ಗೆಟ್‌ರವರ ಪ್ರಕಾರ ೧೫೪, ಪ್ರೊ. ಫಾಗ್‌ರ ಪ್ರಕಾರ ೧೭೦'' [32] ಎಂದು ಉಲ್ಲೇಖಗಳಿವೆ. ಆದರೆ ಹತ್ತು ಮಾತ್ರ ಅತ್ಯಂತ ಪ್ರಮುಖ ಉಪನಿಷತ್ತುಗಳು. ಅವೆಂದರೆ ೧. ಈಶ, ೨. ಕೇನ, ೩. ಕಠ್, ೪. ಪ್ರಶ್ನ ೫. ಮುಂಡಕ, ೬. ಮಾಂಡಕ್ಯ ೭. ತೈತ್ತರೀಯ, ೮. ಐತರೇಯ, ೯. ಛಾಂದೋಗ್ಯ, ೧೦. ಬೃಹದಾರಣ್ಯಕ. ಇವುಗಳಿಗೆ ಶಂಕರಾಚಾರ್ಯ ಮತ್ತು ಮಧ್ವಾಚಾರ್ಯರು ವ್ಯಾಖ್ಯಾನಗಳನ್ನು ಬರೆದಿದ್ದಾರೆ.

ಉಪನಿಷತ್ತಿನ ಸಂಖ್ಯೆಗಳ ಕುರಿತೆ ಇಷ್ಟು ಗೊಂದಲಗಳಿರುವುದರಿಂದ ಕಾಲ ಕುರಿತ ನಿಖರತೆಗಳು ದೊರೆಯಲಾರವು. ಇವುಗಳನ್ನು ವೇದಾಂತಗಳೆಂದು ಕರೆಯುವುದರಿಂದ ವೇದೋತ್ತರ ಕಾಲದಲ್ಲಿ ವಿರಚಿತವಾದವೆಂದು ಊಹಿಸಬಹುದಾಗಿದೆ.

ಉಪನಿಷತ್ತಿನ ಕಾಲಕ್ಕಾಗಲೇ ಅಧ್ಯಾತ್ಮಿಕತೆ ಪ್ರಬುದ್ಧವಾಗಿ ಬೆಳೆದಿರುವುದನ್ನು ಕಾಣಬಹುದು. ವೇದಕಾಲದ ಬಹುತೇಕ ಮೌಢ್ಯತೆಗಳನ್ನು ಇಲ್ಲಿ ನಿರಾಕರಿಸಲಾಗಿದೆ. ಯಜ್ಞ, ಯಾಗಗಳು ಮಾನವನ ಇಹಪರದ ಬದುಕಿನ ಶ್ರೇಯಸ್ಸೆಂದು ನಂಬಿದರೂ ಸಹ ಪರಮ ಸತ್ಯದತ್ತ ಇವು (ಯಜ್ಞಯಾಗ) ಹೊತ್ತೊಯ್ಯಬಲ್ಲವೆ? ಎಂಬ ಅನುಮಾನವನ್ನು ವ್ಯಕ್ತಪಡಿಸಿದರೆ ಆ ಪರಮ ಸತ್ಯದ ಅರಸುವಿಕೆಯೇ ಉಪನಿಷತ್ ಮುನಿಗಳ ದೊಡ್ಡ ಅನುಭಾವವಾಗುತ್ತದೆ. ಉಪನಿಷತ್ತಿನ ವಿಚಾರಗಳು ಅಧ್ಯಾತ್ಮಿಕ ಬದುಕಿನ ವಿಜ್ಞಾನಗಳಾಗಿವೆ. ಏಕೆಂದರೆ ಉಪನಿಷತ್‌ಕಾರರು ''ಇಂದ್ರಿಯಾತೀತ ಅನುಭವಗಳನ್ನು ಪ್ರತಿಪಾದಿಸುವಲ್ಲಿ ಅವರ ಭಾವಪರವಶತೆ, ಅಂತರ್ದೃಷ್ಟಿ ಮತ್ತು [illegible] ತಮ್ಮ ನಿರೀಕ್ಷಣೆ-[illegible] ಮತ್ತು ಸಂವಾ[illegible]

ಮೊದಲಾದ ಪ್ರಯೋಗಗಳಿಂದ ಎಲ್ಲರ ಅನುಭವಕ್ಕೆ ಒಪ್ಪುವ ತತ್ವಗಳನ್ನು ಉಸುರಿದ್ದಾರೆ.'' [33] ಇಲ್ಲಿ ತತ್ವವೆಂದರೆ ಸತ್ಯ ನುಡಿವುದು ಎಂದರ್ಥ. ಉಪನಿಷತ್ಕಾರರು ಆ ಮೂಲಸತ್ಯವನ್ನು ಅರಸಿ, ಅನುಭಾವಿಸಿ ನುಡಿದಿದ್ದಾರೆ. ಮಣ್ಣಿನ ಮಡಿಕೆ, ಗಡಿಗೆ ಮೊದಲಾದ ವಸ್ತುಗಳು ನಾಮರೂಪಭೇದಗಳಿಗೆ ವೈವಿಧ್ಯತೆಯನ್ನು ರೂಪಿಸಿ ಕೊಟ್ಟರೂ ಅದರ ಮೂಲ ಮಣ್ಣು ಎಂಬುದೇ ಆ ತತ್ವ. ಹಾಗೇ ವ್ಯಕ್ತಿಯ ಜೀವನ ಸಿದ್ಧಾಂತ ಕುರಿತ ತತ್ವವೇ ಅನುಭಾವ. ಇದರ ಮೂಲವೆಂದರೆ ಬ್ರಹ್ಮ ಅಥವಾ ಆತ್ಮವೆಂದು ಕರೆಯಬಹುದು. ಈ ಆತ್ಮ(ಬ್ರಹ್ಮ)ತತ್ವದ ಮೂಲಕ ಜೀವಿ-ಜಗತ್ತು, ಶಕ್ತಿ (ಈಶ್ವರ?) ಇವೆಲ್ಲಕ್ಕೂ ಮೂಲ ಚೈತನ್ಯವೊಂದಿದ್ದು ಅದೇ ಅಂತಿಮ ಸತ್ಯವೆಂದು ಕರೆಯುತ್ತೇವೆ. ಇಲ್ಲಿ ಜೀವಿಗೂ- ಜಗತ್ತಿಗೂ, ಜಗತ್ತಿಗೂ-ಶಕ್ತಿಗೂ ಇರುವ ಸತ್ಯದ ಶೋಧವೇ ಉಪನಿಷತ್ತಿನ ಮುಖ್ಯ ತಿರುಳಾಗಿದೆ. ಈ ಜೀವ-ಜಗತ್ತು ಎಷ್ಟೆಲ್ಲ ಮೌಲ್ಯಗಳಿಂದ ವ್ಯಾಪಿಸಿಕೊಂಡರೂ, ಅದರ ಹಿಂದಿರುವ ತತ್ವವೇ ಬೇರೆ. ವಜ್ರ ಎಷ್ಟೇ ಬೆಲೆಬಾಳುವ ಮೌಲ್ಯ ಹೊಂದಿ ದ್ದರೂ, ಒಬ್ಬ ವಿಜ್ಞಾನಿಯ ದೃಷ್ಟಿಯಲ್ಲಿ ಅದು ಕೇವಲ ಇಂಗಾಲ (Carbon) ಮಾತ್ರ. ಹಾಗೇ ಉಪನಿಷತ್ತಿನ ಋಷಿಗಳು ಜೀವ-ಜಗತ್ತಿನ ಮೂಲಸತ್ಯವನ್ನು ಕುರಿತು ಆಲೋಚಿಸಿದ್ದಾರೆ. ಉಪನಿಷತ್ತಿನ ಅನುಭಾವವನ್ನು ೧. ಸಿದ್ಧಾಂತ ರೂಪ ೨. ಕಥಾ ರೂಪ ಮತ್ತು ೩. ಪ್ರಶ್ನೋತ್ತರ ರೂಪವೆಂಬ ಮೂರು ವಿಧಗಳಲ್ಲಿ ವಿಂಗಡಿಸಬಹುದು.

ಉಪನಿಷತ್ತಿನ ಮೊದಲ ಸಿದ್ಧತೆಯೆಂದರೆ ಜೀವಿಯ ಮನಸ್ಸು ಅಂತರಮುಖವಾಗಿ ಸತ್ಯಾನ್ವೇಷಣೆಗೆ ತೊಡಗಿಸಿಕೊಳ್ಳುವುದು. ಇದನ್ನು ಕುರಿತು ಕೇನೋಪನಿಷತ್ತು ಈ ರೀತಿ ಹೇಳುತ್ತದೆ.

''ಓಂ ಕೇನೇಷಿತಂ ಪತತಿ, ಪ್ರೇಷಿಕಂ ಮನಃ
ಕೇನ ಪ್ರಾಣಃ ಪ್ರಥಮಃ ಪ್ರೈತಿಯುಕ್ತಃ
ಕೇನಾಸಿತಂ ವಾಚಮಿಮಾಂ ಪದಂತಿ,
ಚಕ್ಷುಃಶ್ರೋತಂ ಕ ಉದೇವೋಯುನಕ್ತಿ''

ಅಂದರೆ ಯಾರ ಇಚ್ಛೆಗನುಸರಿಸಿ ಯಾರ ಪ್ರೇರಣೆಯಿಂದ ಈ ಮನಸ್ಸು ತನ್ನ ವಿಷಯದಲ್ಲಿ ತೊಡಗುವುದು? ಪ್ರಾಣವು ಮೊಟ್ಟಮೊದಲು ಯಾರ ಆಜ್ಞೆಗಳಿಂದ ತನ್ನ ಕರ್ಮವನ್ನಾರಂಭಿಸುವುದು? ಯಾರ ಇಚ್ಛೆಯಿಂದ ಜನರು ದುಡಿದರು? ಕಣ್ಣು ಕಿವಿಗಳಿಗೆ ಆಜ್ಞೆ ಮಾಡುವ ದೇವತೆಯು ಯಾರು? [34] ಎಂಬ ಹಲವಾರು ಪ್ರಶ್ನೆಗಳು ರೂಪಿಸಿ, ಉತ್ತರ ಕಂಡುಕೊಂಡರು. ಅವರ ನಿವೇದನೆಗೆ ಕೆಲ ತತ್ವಗಳನ್ನು ಗುರುತಿಸಿದರು. ಅವುಗಳಲ್ಲಿ ಮುಖ್ಯವಾದ ಕೆಲವು ತತ್ವಗಳನ್ನು ಇಲ್ಲಿ ಕೊಡಬಹುದು.

ಜೀವನ ತತ್ವ - ಅನುಭಾವ

ಕಾರ್ಯಕಾರಣ ಭಾವತತ್ವ - ಅನುಭಾವ

ಅವಸ್ಥಾತ್ರಯ ತತ್ವ - ಅನುಭಾವ

ಪಂಚಕೋಶ ತತ್ವ - ಅನುಭಾವ

ಭೂಮ ತತ್ವ - ಅನುಭಾವ ಇತ್ಯಾದಿ.

ಜೀವನ ತತ್ವ- ಅನುಭಾವ :

ಉಪನಿಷತ್ತಿನಲ್ಲಿ ಜೀವನ ತತ್ವಕ್ಕೆ ಅತ್ಯಂತ ಮಹತ್ವದ ಸ್ಥಾನವಿದೆ. ಅದರಲ್ಲಿ ಮುಖ್ಯವಾಗಿ ಮೂರು ಭಾಗಗಳಾಗಿ ವಿಂಗಡಿಸಬಹುದು.

ಜಗತ್ತು

ಆದಿಭೌತಿಕ — (ಅಧ್ಯಾತ್ಮಿಕ ಪ್ರಪಂಚ, ಜಗತ್ತು)

ಜೀವಿಗಳು — (ನಾವು)

ನಿಯಾಮಕ — (ಶಕ್ತಿ ಅಥವಾ ಈಶ್ವರ)

ಇಲ್ಲಿರುವ ಜೀವನಕ್ಕೆ ಎರಡು ಮುಖಗಳಿವೆ. ಒಂದು ಲೌಕಿಕ, ಇನ್ನೊಂದು ಆಗಮಿಕ. ಈ ಕಾಲದ ಋಷಿಮುನಿಗಳ ಜೀವನ ವ್ಯವಹಾರಕ್ಕೆ ಬೇಕಾಗಿರುವ ದೇಹ, ಪ್ರಾಣ, ಇಂದ್ರಿಯ, ಮನಸ್ಸು, ಬುದ್ಧಿ ಮೊದಲಾದವುಗಳನ್ನು ಕೂಲಂಕಷವಾಗಿ ವಿವೇಚಿಸುತ್ತಾನೆ. ಇವೆಲ್ಲ ಕೇವಲ ಉಪಜೀವನವೆಂಬ ತೀರ್ಮಾನಕ್ಕೆ ಬಂದರೂ ಇವೆಲ್ಲ ಮೀರಿದ ಮತ್ತು ಇವುಗಳ ಮೇಲೆ ನಿಯಂತ್ರಿಸಬಲ್ಲ ಚೈತನ್ಯವೊಂದು ಜೀವಿಯಲ್ಲದ್ದು. ಅದನ್ನೇ 'ಶಿವತತ್ವ'ವೆಂದು ಕರೆಯುತ್ತೇವೆ. ಶಿವ(ಚೈತನ್ಯ)ತತ್ವ ಇಲ್ಲದಾಗಿ ಜೀವಿ 'ಶಿವ'ವಾಗುತ್ತಾನೆಂಬುದೇ ಋಷಿಗಳ ಜೀವತತ್ವದ ಅನುಭಾವ ವಾಗಿದೆ. ಈ ಚೈತನ್ಯವೂ ಸೂಕ್ಷ್ಮವಾಗಿದ್ದು, ಬ್ರಹ್ಮ ಅಥವಾ ಆತ್ಮವೆಂದು ಕರೆಯುತ್ತೇವೆ. ಇಲ್ಲಿ ಬ್ರಹ್ಮವೆಂಬುದು ಮನೋಧರ್ಮ, ಸರ್ವಶಕ್ತಿ, ಸರ್ವವ್ಯಾಪಿ ಮತ್ತು ಎಲ್ಲಕ್ಕೂ ಮಿಗಿಲಾದದ್ದು ಎಂದು ಅರ್ಥೈಸಬೇಕು. ಇಡೀ ಜೀವನ ತತ್ವವೇ ಆತ್ಮ ಅಥವಾ ಬ್ರಹ್ಮವನ್ನು ಅವಲಂಬಿಸಿರುವುದರಿಂದ ''ಬ್ರಹ್ಮೇವ ಸತ್ಯಂ'' (ಬ್ರಹ್ಮವೊಂದೇ ಸತ್ಯ), ''ಅಯಮಾತ್ಮ ಬ್ರಹ್ಮ'' (ನಮ್ಮೆಲ್ಲರ ಆತ್ಮವೂ ಬ್ರಹ್ಮವೇ), ''ತತ್ವಮಸಿ'' (ನೀನು ಅದೇ

ಆಗಿರುವೆ), ''ಬ್ರಹ್ಮರ್ಷಿ'' (ನಾನು ಬ್ರಹ್ಮನಾಗಿದ್ದೇನೆ) ಎಂಬಂಥ ಹಲವಾರು ಮೂಲ ಸತ್ಯಗಳನ್ನು ಉಪನಿಷತ್ಕಾರರು ಸಾರಿದ್ದಾರೆ. ಆ ಮೂಲಕ ಮನುಷ್ಯನನ್ನು ಮಾನವನಾಗಲು ಮಾನವ ದೇವನಾಗಲು ಬೇಕಾದ ನಿಜದ ಅರಿವು ಜ್ಞಾನದ ಬೋಧನೆ ನೀಡುತ್ತಾರೆ. ಇದೇ ನಿಜವಾದ ಬದುಕಿನ ಸಾರ್ಥಕತೆ ಎಂದು ಹೇಳಬಹುದು. ಇದಕ್ಕೆ ಯಾವುದೇ ತರತಮ ಭೇದಗಳನ್ನು ಮಾಡಲಿಲ್ಲ.

ಜೀವಿಯ ಚೈತನ್ಯವು ಎಲ್ಲೆಡೆ ವ್ಯಾಪಿಸಿದ್ದು ಅದು ಕಣ್ಣಿನೊಳಗಿನ ಬೆಳಕಾಗಿ, ಮನದ ಸ್ವಭಾವವಾಗಿ, ನಾಲಗೆಯ ಶಬ್ದವಾಗಿ, ಕರ್ಣದ ಶ್ರವಣವಾಗಿ, ನಾಸಿಕದ ಘ್ರಾಣವಾಗಿ, ಚರ್ಮದ ಸ್ಪರ್ಶವಾಗಿ, ಅದ್ವೈತದ ಸ್ಥಿತಿ ಮೀರಿದ ಘನವಾಗಿದೆ. ಹಾಗಾಗಿ ಅದು ಎಂದೂ ಪರಿಶುದ್ಧವಾದುದು. ಇದಕ್ಕೆ ಯಾವುದೇ ಭೇದಭಿನ್ನತೆಗಳ ಸಂಬಂಧವಿಲ್ಲ. ಆದರೆ ಮಣ್ಣಿನಲ್ಲಿರುವ ಆಕರ್ಷಕ ಶಕ್ತಿ, ಬೆಂಕಿಯಲ್ಲಿನ ಸುಡುವ ಶಕ್ತಿ ಸೂರ್ಯಚಂದ್ರರ ಪ್ರಕಾಶ, ವಾಯುವಿನಲ್ಲಿರುವ ಉಸಿರು, ಮನದ ಬುದ್ಧಿ-ವಿಚಾರ, ನೀರಲ್ಲಿರುವ ಕೊರೆತಗಳೆಲ್ಲ ಸತ್ಯ. ಇದರ ಪರಿಪೂರ್ಣ ತಿಳಿವಳಿಕೆಯೇ ಜೀವನ ತತ್ವಾನುಭವ. ಇದನ್ನರಿತವ ಏಕೋಭಾವದವನಾಗುತ್ತಾನೆ. ಇಲ್ಲಿ ವಿಭಜನೆಯೇ ಇಲ್ಲ ಎಂಬ ನಿಲುವಿಗೆ ಬರಲಾಗಿದೆ.

ಕಾರ್ಯಕಾರಣ ಭಾವತತ್ವ - ಅನುಭಾವ :

ಉಪನಿಷತ್ಕಾರರು ಜೀವತತ್ವ ಕುರಿತ ಚಿಂತನೆಯ ಮುಂದಿನ ಹಂತವಾಗಿ ಕಾರ್ಯಕಾರಣ ಭಾವವನ್ನು ಚರ್ಚಿಸಿದ್ದಾರೆ. ಚೈತನ್ಯ(ಬ್ರಹ್ಮ)ವೊಂದೇ ಸತ್ಯವೆಂಬ ವಾದ ಮಂಡಿಸುತ್ತ ಅದರ (ಚೈತನ್ಯದ) ಕಾರ್ಯಗಳಾದ ಈ ಜಗತ್ತು-ಜೀವ, ಈಶ್ವರ ವಲ್ಲ, ಕೇವಲ ನಿಮಿತ್ಯ ನಾಮರೂಪಗಳು ಎನ್ನಬಹುದು. ಈ ಮಾತಿನ ಸಮರ್ಥನೆಯೂ ಛಾಂದೋಗ್ಯೋಪನಿಷತ್ತಿನ ಆರನೇ ಅಧ್ಯಾಯದಲ್ಲಿ ಅರುಣ ಋಷಿಗಳು ಹೀಗೆ ಹೇಳುತ್ತಾರೆ:

''ಐತದಾತ್ಮ್ಯಮಿದಂ ಸರ್ವಂ, ತತ್‌ಸತ್ಯಂ, ಸ ಆತ್ಮಾ, ತತ್ವಮಸಿ'' [35]

ಅಂದರೆ 'ಈ ಜಗತ್ತಿಗೆಲ್ಲ ಈ 'ಸತ್ಯ' ಎಂಬ ಬ್ರಹ್ಮವೇ ತಿರುಳು. 'ಅದೇ ಸತ್ಯ, ಅದೇ ಆತ್ಮ; ಅದೇ ನೀನಾಗಿರುವೆ' ಎಂದರ್ಥ. ಕಾರ್ಯಗಳಿಗೆಲ್ಲಕ್ಕೂ ಕಾರಣವೇ ಮೂಲವಾಗಿರುವುದರಿಂದ ಅದನ್ನರಿತರೆ ಆತ್ಮಚೈತನ್ಯ ಅರಿತಂತೆಯೇ ಆಗುತ್ತದೆ. ಈ ಜೀವ-ಜಗತ್ತುಗಳಿಗೂ ಮೂಲ ಸತ್ಯವೇ ಆಗಿದ್ದು ಅದು ಭೇದವಿಲ್ಲದ 'ಸತ್' ಇದರ (ಸತ್ಯ) ಸಂಕಲ್ಪದಿಂದ ಈ ಜೀವಜಗತ್ತು ಮೈತಳೆದಿದೆ. ಆ ಸತ್ಯವೆಂಬುದು ಕಾರಣ, ಈ ಜಗತ್ಕಾರ್ಯವಾಗುತ್ತದೆ. ಇಲ್ಲಿರುವ ಭೇದಗಳೆಲ್ಲ ಕೇವಲ ತೋರಿಕೆಯ ಭೇದಗಳು.

ಮಾತ್ರ, ಜಗತ್ತೆಲ್ಲ ಶಿವಮಯ, ಬ್ರಹ್ಮಮಯ, ಆತ್ಮಮಯವಾಗಿ ಕಾಣುವುದೇ ಕಾರ್ಯ ಕಾರಣ ಭಾವತತ್ವದ ಅನುಭಾವವೆಂದು ಹೇಳಬಹುದು.

ಅವಸ್ಥಾತ್ರಯ ತತ್ವ - ಅನುಭಾವ :

ಜೀವಿಯ ಅವಸ್ಥಾತ್ರಯಗಳನ್ನು ಕುರಿತು ಉಪನಿಷತ್ತಿನಲ್ಲಿ ದೀರ್ಘ ಚರ್ಚೆಯಿದೆ. ನಿಜವಾದ ಜೀವಿಯ ಜೀವದ ಅನುಭಾವದ ನೆಲೆ ಇಲ್ಲಿದೆ. ಅವಸ್ಥಾತ್ರಯಗಳೆಂದರೆ ೧. ಜಾಗೃತ ; ಇದು ಲಾಭ-ಹಾನಿ, ಸುಖ-ದುಃಖ, ನೋವು-ನಲಿವು, ಹಿತ-ಅಹಿತ, ಮೊದಲಾದ ಗ್ರಹಿಕೆಗಳು ಇದರ ವ್ಯಾಪ್ತಿಯಲ್ಲಿ ಬಂದಿದ್ದು, ಎಲ್ಲವೂ ದೃಗ್ಗೋಚರವಾದವುಗಳು, ೨. ಸ್ವಪ್ನ : ಇದು ಕೇವಲ ಛಾಯೆ ಮಾತ್ರ, ನೆರಳಿದ್ದಂತೆ ತೋರಿಕೆ, ೩. ಸುಷುಪ್ತಿ: ಇದೊಂದು ಅಮೂರ್ತಾನಂದ, ಶೂನ್ಯಾವಸ್ಥೆ(ನಿದ್ರೆ). ಈ ಮೂರು ಅಂಶಗಳ ಹಿನ್ನೆಲೆಯಲ್ಲಿಯೂ ಅನುಭಾವದ-ಬೆಳವಣಿಗೆ ಇದೆ. ಇದನ್ನು ಉಪನಿಷತ್ಕಾರರು ಸ್ಪಷ್ಟವಾಗಿ ಚರ್ಚಿಸಿದ್ದಾರೆ.

೧. ಜಾಗೃತ : ಇಲ್ಲಿ ವಿಶಾಲವಾದ ಜಗತ್ತು, ಪ್ರಪಂಚವೇ ಕಣ್ಣೆದುರಿಗಿದೆ. ಅನಂತ ಕಾಲ, ದೇಶಗಳ ಘಟನಾವಳಿಗೆ ಕಾರ್ಯ-ಕಾರಣ ಸಂಬಂಧ ರೂಪಿಸಿ, ಇಲ್ಲಿ ನೆರವೇರುವ ಪ್ರತಿಯೊಂದು ಚಟುವಟಿಕೆ, ಕ್ರಿಯಾತ್ಮಕತೆಗಳು ನಮ್ಮ ನಮ್ಮ ಕರ್ಮಫಲವೆಂದು ಬಗೆದು ನಮ್ಮ ಮುಂದಿರುವ ಜಗತ್ತು ಅಂತಿಮ ಸತ್ಯವೆಂಬ ಭಾವಕ್ಕೆ ಒಳಗಾಗುತ್ತೇವೆ. ಇದನ್ನು ಜಾಗೃತಾವಸ್ಥೆ ಎಂದು ಕರೆದರೂ ಇದೊಂದು ಅನುಭವವೇ, ಅನುಭಾವವಲ್ಲ. ಏಕೆಂದರೆ ಇವೆಲ್ಲ ಸತ್ಯಗಳಿಗೆ ಇಂದ್ರಿಯಗಳ ಗ್ರಹಿಕೆಗಳಿವೆ. ಜೀವಿಗಳಾದ ನಾವು ಒಪ್ಪಿದರೂ ಉಪನಿಷತ್ತಿನ ಮುನಿಗಳು ಇದನ್ನು ಒಪ್ಪುವುದಿಲ್ಲ.

೨. ಸ್ವಪ್ನ: ನಾವು ನಿದ್ರೆಗೆ ಹೋದರೂ (ಮಲಗಿದರೂ) ನಮ್ಮ ದೇಹದ ಕನಸಿನ ಜಗತ್ತನ್ನು ಕಟ್ಟಿಕೊಂಡು ನಮ್ಮೆಲ್ಲ ಇಂದ್ರಿಯಗಳನ್ನು ನೆಲೆಗೊಳಿಸಿ ಎಚ್ಚರದ ಜಗತ್ತಿನಲ್ಲಿರುವಂತೆ ವರ್ತಿಸುತ್ತೇವೆ (ಇಲ್ಲಿಯೂ ಕಾರ್ಯಕಾರಣ ಸಂಬಂಧಗಳಿವೆ). ಹಾಗಾಗಿ ಸ್ವಪ್ನವಿದ್ದರೂ ಸತ್ಯವೆಂದು ನಂಬುತ್ತೇವೆ. ಆದರೆ ಸ್ವಪ್ನಕ್ಕೂ ಜಾಗರಣಕ್ಕೂ ಅನೇಕ ವ್ಯತ್ಯಾಸಗಳಿವೆ. ನಿಯಮಗಳಿಗೂ ಬೆಲೆ ಬೇರೆ. ಉದಾ : ಆಕಾಶಕ್ಕೆ ಹಾರಬಹುದು, ನೀರಿಗೆ ಬೆಂಕಿ ಹತ್ತಬಹುದು, ನಾವೇ ಸಾಯಬಹುದು, ಇತ್ಯಾದಿಗಳು. ಎಚ್ಚರದಲ್ಲಿ ಒಂದೇ ಪ್ರಪಂಚವಿದ್ದರೆ ಕನಸಿನಲ್ಲಿ ನೂರಾರು ಪ್ರಪಂಚಗಳಿರುತ್ತವೆ. ಎಚ್ಚರ ದೀರ್ಘವಾದರೆ ಸ್ವಪ್ನ ಕ್ಷಣಿಕವಾಗಿರುತ್ತದೆ. ಜಾಗೃತವಾಗಿರುವುದು ಸ್ಥೂಲ ಪ್ರಪಂಚವಾದರೆ, ಕನಸು ಸೂಕ್ಷ್ಮವಾಗುತ್ತದೆ. ಇವೆರಡೂ ಒಂದರ ಮನೆಯಲ್ಲಿ ಒಂದಿರುತ್ತವೆ. ಅವರೆಡೂ ಸತ್ಯವೂ-ಮಿಥ್ಯವೂ ಆಗಿದ್ದ, ಜೀವಿಯ(ನಸ್ಸ)ಲ್ಲಿಯೇ

ಆಗುತ್ತವೆ. ಆದ್ದರಿಂದ 'ನಾನು' ನಿತ್ಯ-ಸತ್ಯವೆಂಬುದು ಪ್ರಸ್ತುತವೆನಿಸುತ್ತದೆ. ಕನಸು-ವಾಸ್ತವ (ಜಾಗೃತ)ಗಳೆರಡೂ ಜೀವಿಯ ಮನೋಭಾವಗಳೇ. ಹಾಗಾಗಿ ಅವು ಮನೋನಿರ್ಮಿತವಾದ್ದರಿಂದ ಕನಸು ಸುಳ್ಳಾದಾಗ, ಎಚ್ಚರಕ್ಕೆ ಬಂದಾಗ ಎಚ್ಚರದ ಕ್ರಿಯೆಗೂ ಮನೋಭಾವದಂತೆ ನೆರವೇರುತ್ತವೆ ಎಂಬ ಅರಿವು ಗಟ್ಟಿಗೊಂಡರೆ ಅದೇ ಅನುಭಾವ.

೩. **ಸುಷುಮ್ನ :** ಇದು ನಿದ್ರೆಯಾಚೆಗಿನ ಸುಪ್ತನಿದ್ರಾವಸ್ಥೆಯನ್ನು ಸೂಚಿಸುತ್ತದೆ. ಜನ ಕನಸ್ಸಿಗೆ ಕೊಡುವಷ್ಟು ಮಹತ್ವವನ್ನು ನಿದ್ರೆಗೆ ಕೊಡಲಾರರು. ಕನಸೊಡೆದರೆ ಎಲ್ಲಿಲ್ಲದ ಕೋಪ ತಾಳಬಹುದು (ಕನಸೊಡೆದದ್ದೆ ಯಯಾತಿಯ ದುರಂತಕ್ಕೆ, ಅಭಿಮನ್ಯುವಿನ ಸಾವಿಗೆ ಕಾರಣ). ಸುಷುಮ್ನ ಇದೊಂದು ಶೂನ್ಯಾವಸ್ಥೆಯ ವಿಶ್ರಾಂತಿಯ ಸ್ಥಿತಿ. ಎಚ್ಚರ ಕನಸುಗಳಲ್ಲಿದ್ದ ದೇಹ ಮತ್ತು ಇಂದ್ರಿಯಗಳು ಇಲ್ಲಿ ಕ್ರಿಯಾ ಹೀನವಾಗಿರುತ್ತವೆ. ಇಲ್ಲಿ ಎಲ್ಲವೂ ಅಜ್ಞಾನ, ಅಂಧಕಾರ ಆದರೂ ಪರಮಾನಂದ. ನಿದ್ರೆಯಲ್ಲಿದ್ದಾಗ ನಿದ್ರೆಯಲ್ಲಿಲ್ಲದ ತತ್ವವೇ 'ಆತ್ಮ ತತ್ವ'. ಅದೇ ಚೈತನ್ಯದ ನಿಜದರಿವು. ಅದೇ ನಿಜವಾದ ಅನುಭಾವವಾಗುತ್ತದೆ. ಏಕೆಂದರೆ ಈ ಅರಿವು ಮೂರು ಅವಸ್ಥೆಗಳಲ್ಲಿ ಅನುಸ್ಯೂತವಾಗಿದ್ದು, ಅವುಗಳ ಚೈತನ್ಯದಲ್ಲಿ ತೋರಿ ಅಡಗುತ್ತದೆ. ಅಲ್ಲಿರುವ ಚೈತನ್ಯವೇ 'ನಾನು' ಎಂಬ ಪರಿಜ್ಞಾನ ಅನುಭಾವವಾಗುತ್ತದೆ.

ಪಂಚಕೋಶ ತತ್ವ - ಅನುಭಾವ :

ಪಂಚಕೋಶ ತತ್ವದ ವಿವರವಾದ ವಿವೇಚನೆ ತೈತ್ತರಿಯೋಪನಿಷತ್ತಿನಲ್ಲಿದೆ. ಈ ಪ್ರಕ್ರಿಯೆಯಿಂದ ಆತ್ಮದ ಸ್ವರೂಪವನ್ನು ತಿಳಿಸಿಕೊಡುವ ಜ್ಞಾನದ ಅನುಭಾವವೇ ಇದಾಗಿದೆ. ಇದರಲ್ಲಿ ೫ ತತ್ವಗಳಿವೆ.

೧. ಅನ್ನಮಯ ಕೋಶ :

ಈ ದೇಹವು ಅನ್ನಮಯವಾಗಿದೆ. ಮಣ್ಣಿನಿಂದ ರಚಿತವಾದದ್ದೆಲ್ಲವೂ ಮಣ್ಣಲ್ಲೇ ಲೀನವಾಗುತ್ತದೆ. ಅನ್ನದಿಂದುಂಟಾದ ತಾಯಿ ತಂದೆ ಶುಕ್ಲ-ಶೋಣಿತಗಳಿಂದ ಉದಿಸಿ ತಾಯಿಯ ಮೂಲಕ ಅನ್ನ ಪಡೆದು ಮಗುವಾಗಿ ಬೆಳೆದು ಅವಸಾನವೂ ಅನ್ನದೇವ ನಲ್ಲೇ ಆಗುವುದು ಇಡೀ ಜೀವ-ಜಗತ್ತಿನ ಪ್ರಕ್ರಿಯೆಯಾಗಿದೆ. ಎಲ್ಲವೂ ಮಣ್ಣಲ್ಲಿ ಹುಟ್ಟಿ ಬೆಳೆದು ಅದರಲ್ಲೇ ಲೀನವಾಗುವುದರಿಂದ ಯಾರಲ್ಲಿಯೂ, ಯಾವುದರಲ್ಲಿಯೂ ಭೇದ ಮಾಡಬಾರದೆಂಬ ಅನುಭಾವ ತತ್ವವೇ ಇದಾಗಿದೆ. ದೇಹದಲ್ಲಿ 'ನಾನೆ' ಎಂಬ ಅಭಿಮಾನವಿದ್ದರೂ ದೇಹ-ದೇಹವೇ. ಅದು ಜಡವೆಂಬುದು ಇಲ್ಲಿನ ಮೊದಲ ಅನುಭಾವವಾಗುತ್ತದೆ.

೨. ಪ್ರಾಣಮಯ ಕೋಶ :

ದೇಹದಲ್ಲಿ ಪ್ರಾಣವೇ ಅತ್ಯಂತ ಮುಖ್ಯವಾದರೂ ಸಹ ಅದೂ ದೇಹವಲ್ಲ. ಆ ಪ್ರಾಣವನ್ನು 'ನಾನು' ನಿಯಂತ್ರಿಸಬಲ್ಲೆ. ಅದರ ಕ್ರಿಯೆ ಅರಿಯಬಹುದಾದರೂ ಅದು ಇನ್ನೊಂದಿದೆ. ಅದೇ ಮನಸ್ಸು. ಆದ್ದರಿಂದ ದೇಹ ಮನೋಮಯವಾದದ್ದು.

೩. ಮನೋಮಯ ಕೋಶ :

ಮನದ ಮನಸ್ಸು ಮನುಕುಲದ ವಿಜಯ. ಮನಸ್ಸಿನಿಂದ ಇಡೀ ಜಗತ್ತನ್ನು ಗೆಲ್ಲಬಹುದು. ಅದರಿಂದಲೇ ಎಲ್ಲ ಕಾರ್ಯವನ್ನು ಮಾಡಬಹುದು. ಆದರೆ ಇದೂ ದೇಹವಲ್ಲ. ಏಕೆಂದರೆ ಇದು ಬುದ್ಧಿಯ ಅಧೀನ.

೪. ಜ್ಞಾನಮಯ ಕೋಶ :

'ನಹೀ ಜ್ಞಾನೇನ ಸದೃಶಂ' ಎಂಬ ಸೂಕ್ತಿಯ ಮಾತಿನ ಅರ್ಥವೆಂದರೆ, ಜ್ಞಾನಕ್ಕಿಂತ ಮಿಗಿಲಾದುದಿಲ್ಲ. ಜ್ಞಾನವೇ ಎಲ್ಲಕ್ಕೂ ಮೇಲು. ಜ್ಞಾನ (ಬುದ್ಧಿ) ಮನಸ್ಸನ್ನು ನಿಗ್ರಹಿಸುತ್ತದೆ. ಎಲ್ಲ ಪ್ರಕ್ರಿಯೆಗಳ ಬಗ್ಗೆ ಸ್ಪಷ್ಟ ತೀರ್ಮಾನ ತೆಗೆದುಕೊಳ್ಳುತ್ತದೆ. ಆದರೆ ಇದೂ ದೇಹವಲ್ಲ, ಮನಸ್ಸು-ಬುದ್ಧಿಯ ಕಾರ್ಯಭಾರಗಳ ಫಲಶೃತಿ ಇನ್ನೊಂದರಲ್ಲಿದೆ, ಅದೇ ಆನಂದ.

೫. ಆನಂದಮಯ ಕೋಶ :

ಪ್ರತಿಯೊಂದು ಜೀವಿ ಸುಖಾನಂದವನ್ನು ಪಡೆಯುವುದಕ್ಕಾಗಿ ಬುದ್ಧಿ-ಮನಸ್ಸುಗಳನ್ನು ಬಳಸುತ್ತದೆ. ಅದು ಪರಮಾನಂದವಾಗಿರುತ್ತದೆ ಎಂಬ ಪಂಚಕೋಶ ತತ್ವಾನುಭವವು ಉಪನಿಷತ್ತಿನಲ್ಲಿ ಚರ್ಚಿಸಲಾಗಿದೆ. ಆದರೆ ಇದು ಅಂತಿಮದಲ್ಲಿ ಜೀವಿ ಗಾಢನಿದ್ರೆಯಲ್ಲಿದ್ದಾಗ, ಈ ಐದೂ ಕೋಶದಲ್ಲಿಯ ನಾನು ಬೇರೆ, ಆನಂದ ಸ್ವರೂಪನಾದ, ಸಾಕ್ಷಿ ಚೈತನ್ಯನಾದ ನಾನು ಬೇರೆ, ಅದೇ ನಿಜವಾದ ಪರಮಾನಂದ, ಅದೇ ಬ್ರಹ್ಮ, ಅದು ನಿಜವಾದ ಆತ್ಮತತ್ವ ಎಂಬುದು ಅನುಭಾವದ ಉನ್ನತ ನೆಲೆಯಾಗುತ್ತದೆ. ಈ ಸಾಕ್ಷಿಚೈತನ್ಯದ ಅನುಭಾವ ಕುರಿತು ಉಪನಿಷತ್ತಿನ ನಿಲುವೆಂದರೆ,

"ಅಸನ್ನೇಪ ಸಭವತಿ, ಅಸತ್ ಬ್ರಹ್ಮೇತಿ ವೇದ ಚೇತ್ ।
ಅಸ್ತಿ ಬ್ರಹ್ಮೇತಿ ಚೇದ್ವಿದ ಸಂತಮೇನಂ ಮಿದುರ್ಬುಧಾಃ ॥ [36]

(ಬ್ರಹ್ಮವಿಲ್ಲವೆಂದು ಭಾವಿಸಿದವನು ತನ್ನನ್ನೇ ಅಲ್ಲಗಳೆದಂತೆ ;
ಬ್ರಹ್ಮನಿದ್ದಾನೆಂದು ಅರಿತವನು ತಾನು ಇರುವೆನೆಂದರ್ಥ)

ಹೀಗೆ ಪಂಚಕೋಶ ತತ್ವಾನುಭಾವದ ಮೂಲಕ ಸಾಕ್ಷಿಚೈತನ್ಯದ ಅಸ್ತಿತ್ವವನ್ನು ಸ್ಥಾಪಿಸುವ ನೆಲೆ ಗಮನಾರ್ಹವೆಂದು ಹೇಳಬಹುದು.

ಭೂಮತತ್ವ- ಅನುಭಾವ :

ಭೂಮತತ್ವ ಕುರಿತು ಛಾಂದೋಗ್ಯೋಪನಿಷತ್ತಿನಲ್ಲಿ ನಾರದರಿಗೆ ಸನತ್ಕುಮಾರರು ವಿವರವಾಗಿ ಹೇಳಿರುವುದೆಲ್ಲ ಅನುಭಾವವಾಗಿದೆ. ಭೂಮತತ್ವವು ಸಾಕ್ಷಿ ಚೈತನ್ಯವನ್ನು ಮೀರಿದ ಶುದ್ಧ ಚೈತನ್ಯವೆಂದು ಗುರುತಿಸಬಹುದು. ಇಲ್ಲಿ ಸಾಕ್ಷಿಚೈತನ್ಯ ಬಯಲಾದರೆ, ಶುದ್ಧಚೈತನ್ಯ ನಿರ್ಬಯಲಾಗುತ್ತದೆ. ಘನತತ್ವವೆಂದರೆ ವಾಕ್, ಮನಸ್, ಸಂಕಲ್ಪ ಮೊದಲಾದ ತತ್ವಗಳನ್ನು ಮೀರಿದ ಆತ್ಮವಿದ್ಯೆಯೇ ಭೂಮತತ್ವದ ಅನುಭಾವವಾಗಿದೆ. ಅದನ್ನು ಸನತ್ಕುಮಾರರು ವಿವೇಚಿಸಿದ ಮಾತುಗಳಲ್ಲಿ ನೋಡುವುದಾದರೆ,

''ಯತ್ರ ನಾನ್ಯತ್ರ ಶ್ರುತಿ, ನಾನ್ಯಕ್ ಶೃಣೋತಿ ನಾನ್ಯದ್ವಿಬಾನಾತಿಸಭೂಮಾ
ಯತ್ರಾನ್ಯಾತ್ ಪಶ್ಯತಿ ಅನ್ಯಾತ್ ಶ್ರಣೋತಿ ಅನ್ಯಾತ್ ಉಖಾನಾತಿ ತದಲ್ಪಮ್''
ಯೋ ವೈಭೂಫತದಮೃತಮ್ । ಅಥಯದಲ್ಪತನ್ಮರ್ತ್ಯಮ್ [37]

ಅಂದರೆ ಯಾವ ಸ್ಥಿತಿಯಲ್ಲಿ ಬೇರೆ ಯಾವುದನ್ನು ನೋಡುವುದಿಲ್ಲವೋ, ಕೇಳುವುದಿಲ್ಲವೋ, ಅರಿಯುವುದಿಲ್ಲವೋ ಅದು ಭೂಮ. ಯಾವ ಸ್ಥಿತಿಯಲ್ಲಿ ಬೇರೊಂದನ್ನು ತೋರುವುದಿದೆಯೋ ಅರಿಯುವುದಿದೆಯೋ ಅದು ಅಲ್ಪಭೂಮ. ತತ್ವವೇ ಅಮೃತ; ಆದರೆ ಅಲ್ಪವಾದುದು ಮರಣಶೀಲ.

ಈ ಭೂಮವು ಸರ್ವವ್ಯಾಪಿಯಾಗಿದ್ದು, ಅದೇ ಬ್ರಹ್ಮವೂ, ಆತ್ಮವೂ ಆಗಿರುತ್ತದೆ. ಇಲ್ಲಿ ಯಾವುದೇ ವ್ಯವಹಾರವಾಗಲಿ, ಅದ್ವೈತವಾಗಲಿ, ಕ್ರಿಯೆಯಾಗಲಿ ಇಲ್ಲ. ಏನೂ ಇಲ್ಲದ, ಏನೂ ಆಗದ ತತ್ವವೇ ಭೂಮದ ಅನುಭಾವ. ಇದು ನಿಜಾನುಭಾವದ ಚರಮಸ್ಥಿತಿ ಎಂದು ಹೇಳಬಹುದು.

ಜೀವಿ ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿ ನಡೆಸುವ ದೀರ್ಘ ಹೋರಾಟ, ಆ ಹೋರಾಟದ ರೀತಿ-ನೀತಿಗಳನ್ನು ರೂಪಿಸಿದ ಉಪನಿಷತ್ಕಾರರು ಎಲ್ಲ ಚರಾಚರ ಜೀವಿಗಳಲ್ಲಿರುವ ಚೈತನ್ಯ ಒಂದೇ ಎಂದು ಸಾರಿದರು. ಮನಸ್ಸನ್ನು ಅಂತರ್ಮುಖಿ ಮಾಡಿಕೊಂಡು ಶರೀರಗಳಲ್ಲಿ ಅಶರೀರವಾಗಿ, ಅನಿತ್ಯಗಳಲ್ಲಿ ನಿತ್ಯನಾಗಿ, ಸರ್ವವ್ಯಾಪ್ತಿ ಚೈತನ್ಯದೊಂದಿಗೆ ಕೂಡುವ ಕುರಿತು ಉಪದೇಶ ನೀಡುತ್ತಾರೆ. ಆತ್ಮನ ಸ್ವರೂಪವನ್ನು ನಿಜನಿವಾಸದಲ್ಲಿ ಕಾಣಲು ಅಪೇಕ್ಷಿತ ತಯಾರಿ ನಡೆಸಿದ್ದೇ ಉಪನಿಷತ್ತಿನ ಗಾಢ

ಅನುಭಾವ, ಸತ್ಯದ ಪ್ರತ್ಯಕ್ಷದರ್ಶನವೇ ಅನುಭಾವವೆಂದು ಸಾರಿದರು. ತತ್ವ ಕಂಡ ಸತ್ಯ, ಅದರ ಕಾಣ್ಕೆ ಇಡೀ ಜಗತ್ತಿಗೆ ನೀಡಿದರೂ ಮನುಕುಲದ ಏಳಿಗೆಗೆ ಆ ತತ್ವ ಗಳನ್ನು ಅಳವಡಿಸಿಕೊಳ್ಳಲುಬೇಕು. ಹೀಗಾಗಿ ಉಪನಿಷತ್ತಿನ ಕಾಲಕ್ಕೆ ಅನುಭಾವವು ರಚನಾತ್ಮಕವಾಗಿ ತನ್ನ ಅಧಿತ್ವವನ್ನು ರೂಪಿಸಿಕೊಳ್ಳಲು ಸಾಧ್ಯವಾಗಿದೆ.

೧.೪.೩. ಭಗವದ್ಗೀತೆಯಲ್ಲಿ ಅನುಭಾವ :

ಉಪನಿಷತ್‌ಗಳ ನಂತರ ಅನುಭಾವವೆಂಬುದು ಉತ್ಕೃಷ್ಟವಾಗಿ ಪ್ರಕಟ ಗೊಂಡಿದ್ದ ಮಹಾಭಾರತದ ಭಾಗವಾದ 'ಗೀತೆ'ಯಲ್ಲಿ ಅದನ್ನು ಉಪದೇಶವೆಂದು, ಭಗವದ್‌ಗೀತೆ ಎಂದೂ ಕರೆಯಲಾಗಿದೆ. ಆದರೆ ಅದರ ಹೆಚ್ಚಿನ ವಿವರಣೆ ಇಲ್ಲಿ ಅಗತ್ಯವಿಲ್ಲ. ಏಕೆಂದರೆ, ಇಡೀ ಉಪನಿಷತ್ತಿನ ಸಾರವು ಗೀತೆಯಲ್ಲಿ ಕೃಷ್ಣನ ಮೂಲಕ ಪ್ರತಿಪಾದಿತವಾಗಿದೆ. ಇಲ್ಲಿ ಚರ್ಚಿತ ವಿಷಯಗಳೆಂದರೆ, ಧರ್ಮದ ಆಯ್ಕೆ ಮತ್ತು ಕರ್ತವ್ಯಗಳ ಸಂಘರ್ಷವನ್ನು ಚರ್ಚಿಸುತ್ತಲೇ ಕರ್ಮ, ಅಕರ್ಮ, ತ್ಯಾಗ, ಸನ್ಯಾಸ ಹಾಗೂ ಯೋಗಗಳನ್ನು ಚರ್ಚಿಸಲಾಗಿದೆ. ಇಲ್ಲೆಲ್ಲ ನಿಚ್ಚಳವಾದ ಅನುಭಾವವಿದೆ. ಇಡೀ ಗೀತೆಯ ಅನುಭಾವವೆಂದರೆ ಪ್ರಾಯೋಗಿಕ (practical) ನೆಲೆಯ ತತ್ವ ದರ್ಶನವಾಗಿದೆ. ಅದರ ಮೊದಲ ಹಂತವಾಗಿ ಕೃಷ್ಣನು ಅರ್ಜುನನ ಮನಸ್ಸಿನಲ್ಲಿ ಆತ್ಮಸ್ಥೈರ್ಯ ಮತ್ತು ನಂಬಿಕೆಗಳನ್ನು ತುಂಬುವುದಾಗಿದೆ. ಈ ಅಂಶಗಳಿಗೆ ಪೂರಕ ವಾಗಿ ಅರ್ಜುನನು ಯುದ್ಧದಿಂದ ವಿಮುಖನಾದಾಗ, ಕೃಷ್ಣನ ಬೋಧನೆಯೆಂದರೆ ;

''ಕುತಸ್ತ್ವಾ ಕಶ್ಮಲಮಿದಂ ವಿಷಮೇ ಸಮುಪಸೀತಮ್
ಅನಾರ್ಯಾಜಷ್ಟಂ ಅಸ್ವರ್ಗ್ಯಂ ಅಕೀರ್ತಿಕರಂ ಅರ್ಜುನ''

''ಇಂತಹ ವಿಷಮ ಸನ್ನಿವೇಶದಲ್ಲಿ ಹೇ ಅರ್ಜುನ ನಿನಗೆ ಇಂತಹ ಅನಾಚರಣೀಯವೂ ಸ್ವರ್ಗಕ್ಕೆ ಪ್ರಬಂಧಕವಾದುದೂ ಅಕೀರ್ತಿಕರವಾದುದೂ ಆದ ನಿನ್ನ ಖಿನ್ನತೆ ಎಲ್ಲಿಂದ ಬಂದಿತು''[38] ಎಂದು ಕೇಳುವ ಮೂಲಕ ಅರ್ಜುನನ ಮನ ದಲ್ಲಿರುವ ಎಲ್ಲ ಭಿನ್ನತೆಗಳನ್ನು ದೌರ್ಬಲ್ಯಗಳನ್ನು ಹೊರಹಾಕುತ್ತಾನೆ. ಮನುಷ್ಯನ ಸಹಜ ದೌರ್ಬಲ್ಯಗಳೇ ಅರ್ಜುನನಲ್ಲಿದ್ದಾಗ ತಾರ್ಕಿಕವಾದದ ನೈತಿಕತೆ ಮತ್ತು ಮೌಲ್ಯಗಳನ್ನು ಮೀರುವ ಪ್ರಥಮ ಹೆಜ್ಜೆಯಾಗಿ ಈ ನಿರೂಪಣೆ ಅತ್ಯಂತ ಮುಖ್ಯ ವಾಗುತ್ತದೆ. ಸಾಮಾನ್ಯ ಶಿಷ್ಯನಲ್ಲಿರುವ ಭಯನಿವಾರಣೆಯಿಂದ ಗುರುವು ಅವನಲ್ಲಿ ಗುರುತ್ವವನ್ನು ಸ್ಥಾಪಿಸಲು ಆರಂಭಿಸುವ ಈ ಪ್ರಕ್ರಿಯೆ ಅತ್ಯಂತ ಮುಖ್ಯವಾಗಿದೆ. ಕೃಷ್ಣನು ಮುಂದುವರಿದು,

"ಕ್ಲೈಬ್ಯಮಾಸ್ಮಗಮಃ ಪಾರ್ಥನೈತತ್ತ್ವಯ್ಯುಪ ಪದ್ಯತೆ
ಕ್ಷುದ್ರ ಹೃದಯ ದೌರ್ಬಲ್ಯಂ ತ್ಯಕ್ತ್ವೋತ್ತಿಷ್ಠಂ ಪರಂತಪ"

ಹೇ ಕ್ಷತ್ರಿಯ ಪುತ್ರ! ಹೇಡಿತನವನ್ನು ಹೊಂದಬೇಡ, ಇದು ನಿನಗೆ ಯೋಗ್ಯವಾದುದಲ್ಲ. ಹೇ ಶತ್ರುನಾಶಕ, ತುಚ್ಛವಾದ ಈ ಹೃದಯ ದೌರ್ಬಲ್ಯವನ್ನು ಬಿಟ್ಟು ಮೇಲೇಳು[39] ಎಂಬುದರಿಂದ ಅನುಭಾವ ತತ್ತ್ವದ ಕಡೆಗೆ ಒಯ್ಯುವ ಕೃಷ್ಣ ಅರ್ಜುನನಿಗೆ ಮಾನಸಿಕ ಶಕ್ತಿ ಸಾಮರ್ಥ್ಯಗಳನ್ನು ಹೆಚ್ಚಿಸುವಲ್ಲಿ ತೊಡಗಿದ್ದಾನೆ. ಆ ಮೂಲಕ ಕರ್ತವ್ಯಪಾಲನೆಯನ್ನು, ಮನುಷ್ಯನ ಜವಾಬ್ದಾರಿತನವನ್ನು, ಆತ್ಮದ ಜೀವಂತಿಕೆಯನ್ನು ಅತ್ಯಂತ ತಾರ್ಕಿಕವಾಗಿ ನಿರೂಪಿಸಿದ್ದಾನೆ. ಕರ್ತವ್ಯಪಾಲನೆಯನ್ನು ಕರ್ಮಸಿದ್ಧಾಂತದ ಮೂಲಕ ಉಪದೇಶಿಸುವ ಕೃಷ್ಣನು, ಒಂದು ಪ್ರತಿಫಲಾಪೇಕ್ಷದಿಂದ ದೂರವಿರಬೇಕು ಮತ್ತು ಬದುಕಿನಲ್ಲಿ ಹೋರಾಟದಲ್ಲಿದ್ದರೂ ಎಲ್ಲ ಬಂಧನಗಳಿಂದ ಮುಕ್ತವಾಗಿರಬೇಕು ಎಂಬುದನ್ನು ನಿರೂಪಿಸುತ್ತಾನೆ. ಇದು ಮುಖ್ಯವಾಗಿ ಆತ್ಮನಿಂದ ಆತ್ಮನಲ್ಲಿಯೇ ಸಂತುಷ್ಟನಾಗುವ ಸ್ಥಿತಿಯನ್ನು ವಿವರಿಸುತ್ತದೆ. ಇದೇ ಯೋಗಸಮುಚ್ಚಯಕ್ಕೆ ಮಾರ್ಗ ಸೂಚಿಯಾಗಿದೆ. ಮನುಷ್ಯನ ಜವಾಬ್ದಾರಿ ಕುರಿತ ಬೋಧನೆಯಲ್ಲಿ ಪ್ರತಿಜೀವಿಗೂ ಹುಟ್ಟಿನ ಮೂಲಕ ಜವಾಬ್ದಾರಿಗಳು ಬರುತ್ತವೆ. ಅದಕ್ಕಾಗಿ ನಂತರ ಹೋರಾಟ ಮಾಡಬೇಕು. ಅದು ವ್ಯಕ್ತಿಯ ಕರ್ತವ್ಯವಾಗಿರುತ್ತದೆ. ಆತ್ಮದ ಅಮರತ್ವ ಕುರಿತು ನೀಡುವ ಉಪದೇಶದಲ್ಲಿ, ನೀನು ಮಾಡುವ ಯುದ್ಧವು ಧರ್ಮಯುದ್ಧವಾಗಿದ್ದು ಇಲ್ಲಿ ಯಾರೂ ಸಾಯುವುದಿಲ್ಲ ಈ ಯುದ್ಧದ ಮೂಲಕ ನೀನಾಗಲೀ ನಿನ್ನ ವೈರಿಗಳಾಗಲೀ ಸಾವನ್ನಪ್ಪುವುದಿಲ್ಲ ಅವರ ಆತ್ಮ ಜೀವಂತವಾಗಿರುತ್ತದೆ. ಅಂದರೆ ಆತ್ಮ ಅಮರ. ಧರ್ಮಪಾಲನೆಗೆ ಅಡ್ಡಿಯಾದದ್ದು ಜೀವಿಯ ದೇಹ ಮಾತ್ರ. ಅದನ್ನು (ದೇಹ) ಇಲ್ಲದಂತೆ ಮಾಡು ಎಂದು ಹೇಳುವ ಮೂಲಕ ಅರ್ಜುನನ ಹೃದಯವನ್ನು ಆರ್ದ್ರಗೊಳಿಸುತ್ತಾನೆ. "ತತ್ತ್ವ ಜಿಜ್ಞಾಸೆ ಸಾರ್ಥಕವಾಗಬೇಕಾದರೆ ಬುದ್ಧಿಯನ್ನು ಮಾತ್ರ ತೃಪ್ತಿ ಪಡಿಸಿದರೆ ಸಾಲದು, ಹೃದಯವನ್ನರಳಿಸುವ ಅನುಭಾವವಾಗಬೇಕು" ಎಂಬುದಕ್ಕೆ ಈ ಮೇಲಿನ ಉಪದೇಶವೆಲ್ಲ ಕೃಷ್ಣ ಅರ್ಜುನನ ಮೂಲಕ ಈಡೇರಿಸಬೇಕಾಗಿ ಬಂದಾಗ, ಅರ್ಜುನನಿಗೆ ದಿವ್ಯದೃಷ್ಟಿ ನೀಡಿದ್ದಾನೆ. ಆ ದಿವ್ಯದೃಷ್ಟಿಯಲ್ಲಿ ಇಡೀ ವಿಶ್ವ ಗೋಚರಿಸುತ್ತದೆ. ಇಂತಹ ದೃಷ್ಟಿಯ ದರ್ಶನಕ್ಕೆ ಶ್ರೇಷ್ಠ ಅನುಭಾವಿಗೆ ಇರಬೇಕಾದ ಅಂತರ್ದೃಷ್ಟಿ ಅಂದರೆ ಒಳ ಕಣ್ಣು ಬೇಕು. ಅದು ಅರ್ಜುನನಲ್ಲಿರುವಂತೆ ಅವನನ್ನು ತಯಾರಿಸಿದ್ದಾನೆ. ವಿಶ್ವರೂಪದ ದರ್ಶನ ಎಂದರೆ ಸತ್ಯದ ದರ್ಶನವೇ ಆಗಿದೆ. ಅಂತಃ ಸತ್ಯ ಸಾಕ್ಷಾತ್ಕಾರದೃಷ್ಟಿಯ ಜ್ಞಾನ ಗೀತೆಯ ಮೂಲಕ ಪ್ರಾಪ್ತವಾಗುವುದರಿಂದ ಗೀತೆಯಲ್ಲಿ ಅರ್ಜುನ ನೆಪ ಮಾತ್ರ. ಅವನಿಗೆ ಅತೀತವಾದ ದೃಷ್ಟಿ ದರ್ಶನ ಹಾಗೂ ತನಗರಿವಿಲ್ಲದ ಶಕ್ತಿ ಸಾಮರ್ಥ್ಯವನ್ನು ಪಡೆದು ಅನುಭಾವಿಯಾಗಿ

ಕಾಣುತ್ತಾನೆ. ಗೀತೆಯಲ್ಲಿ ಬರುವ ಪ್ರಮುಖ ಅನುಭಾವದ ನೆಲೆಗಳನ್ನು ಮುಖ್ಯವಾಗಿ ನೀತಿವಾದ (Moralism) , ಅತಿನೀತಿವಾದ (Super Moralism), ಆತ್ಮಾನಂದವಾದ (Beautificism) ಬೆಳೆದು ನಿಂತಿದೆ. ಅತಿನೀತಿವಾದವು ನಿಷ್ಕರ್ಮ ಅಂದರೆ ಕರ್ಮ ಧರ್ಮದ ಆಚೆಗೆ ಹೋಗುವುದು, ಗುಣಾತೀತವಾಗುವುದು, ಸ್ಥಿತಿಪ್ರಜ್ಞತೆ ಪಡೆಯುವುದು ಮತ್ತು ಆ ಮೂಲಕ ಸಮಾಜೋಅಧ್ಯಾತ್ಮಿಕ ನೆಲೆಯನ್ನು ತಲುಪುವುದು. ಈ ತತ್ವಗಳೇ ಅನುಭಾವದ ತುಟ್ಟತುದಿಯಾಗಿದೆ.

೧.೪.೪. ಮಧ್ಯಕಾಲ - ಅನುಭಾವ :

ಗೀತೆಯು ನಂತರ ಅನುಭಾವದ ಕಲ್ಪನೆ ಪ್ರಕಟವಾದದ್ದು ಮಧ್ಯಕಾಲದ 'ಭಕ್ತಿ ಯುಗ'ದಲ್ಲಿ. ಇಲ್ಲಿ ಆಳ್ವಾರರು, ನಾಯನ್ಮಾರರು, ಮತ್ತು ತೇವಾರರುಗಳ ಭಕ್ತಿ ಪಂಥವು ಅತ್ಯಂತ ಉತ್ಕಟವಾದ ಭಕ್ತಿಯ ನೆಲೆಗೆ ಏರಿಸಿದ್ದಾರೆ.[40] ಇಲ್ಲಿ ಕೆಲವರು ಗೀತೆಗಳನ್ನು ಸಹ ಬರೆದಿರುವರು. ಆದರೆ ಇಲ್ಲಿ ಅನುಭಾವದ ಪರಿಕಲ್ಪನೆಗಳಿವೆ. ಇಲ್ಲಿ ಯಾರೂ ಅನುಭಾವಿಗಳಿಲ್ಲ. ಆದ್ದರಿಂದ ಇಲ್ಲಿ ಪ್ರತಿಯೊಬ್ಬ ಭಕ್ತನಿಗೂ ಒಂದೊಂದು ಪವಾಡಸದೃಶವಾದ ಕತೆಗಳಿವೆ. ಪ್ರತಿ ಕತೆಯ ಮುಖ್ಯ ಆಶಯ ಭಕ್ತಿಯನ್ನು ಮೆರೆಯುವುದೇ ಆಗಿದೆ. ಅಲ್ಲದೇ ಅನುಭಾವಿಯ ಮೊದಲ ಮೆಟ್ಟಿಲಾದ ಭಕ್ತಿಯು ಇಲ್ಲಿ ಶ್ರೇಷ್ಠವಾದದ್ದರಿಂದ ಇವರನ್ನು ಅನುಭಾವಿಗಳೆಂದು ಕರೆಯುವುದಕ್ಕಿಂತ ಭಕ್ತರೆಂದು ಕರೆಯಬಹುದು. ಅವರು ರಚಿಸಿದ ಸಾಹಿತ್ಯವು ಅವರಷ್ಟೇ ಭಕ್ತಿಪ್ರಧಾನವಾದದ್ದರಿಂದ ಒಂದರ್ಥದಲ್ಲಿ ಅದು ಭಕ್ತಿ ಸಾಹಿತ್ಯವೆನಿಸಿಕೊಳ್ಳುತ್ತದೆ ಹೊರತು ಅನುಭಾವ ಸಾಹಿತ್ಯವೆನಿಸಿಕೊಳ್ಳದು. ಈ ಭಕ್ತಿಪಂಥದ ಮುಂದುವರಿಕೆಗೆ ೧೨ನೆ ಶತಮಾನದ ಶಿವಶರಣ ಶರಣೆಯರು ಭಕ್ತಿಯನ್ನು ಮೀರಿದ ಸಾಧನೆ ಮಾಡಿದ್ದಾರೆ. ಅವರು ಅನುಭಾವಿಗಳಾಗಿದ್ದುದರಿಂದ ಅವರನ್ನು ಮಾತ್ರ ಇಲ್ಲಿ ಅನುಭಾವಿಗಳೆಂದು, ಅವರ ರಚನೆಗಳನ್ನು ಅನುಭಾವ ಸಾಹಿತ್ಯವೆಂದು ಕರೆಯಬಹುದಾಗಿದೆ.

೧.೪.೫. ಅನುಭಾವಮಂಟಪ - ಅನುಭಾವ :

ನಿಜವನ್ನು ಅರಿಯಬೇಕೆಂದು ಹೊರಟ ಜೀವಿ ಬರುತ್ತ ರಾಗ-ಭಾವಗಳನ್ನು ಮರೆತು, ಅವುಗಳನ್ನು ಮೀರಿ ಸತ್ಯಶುದ್ಧನಾಗಿ ತಾನೇ ನಿಜವಾಗುವ ಮತ್ತು ಆ ಮೂಲಕ ಅಮೂರ್ತವಾದ ಅರಿವನ್ನು ಪಡೆದು ಅಭಿವ್ಯಕ್ತಿಸುವ ಪರಿ ಅನುಭಾವವಾಗುತ್ತದೆ. ಈ ಅನುಭಾವವು ಪಾಶ್ಚಾತ್ಯ-ಪೌರ್ವಾತ್ಯ ವಲಯಗಳಲ್ಲಿ ಅಗಾಧವಾಗಿ ಬೆಳೆದು ಬಂದಿರುವಾಗ ವಚನಕಾರರ ಸಂದರ್ಭದಲ್ಲಿ ಅದು ಪಡೆದುಕೊಳ್ಳುವ ಅರ್ಥ ಜೇರೆಯದೇ ಲೋಕವನ್ನು ಅನಾವರಣಗೊಳಿಸಿದೆ. ಅನುಭಾವಪ್ರಂಪ

ಶಾಸ್ತ್ರೀಯ ಅಧ್ಯಯನವಾಗಿ, ಸಿದ್ಧಾಂತವಾಗಿ ಬೆಳೆದ ಸಂದರ್ಭದಲ್ಲಿ ಮುಂದುವರೆದ ಶರಣರಲ್ಲಿ ಅದು ವೇದಿಕೆಯಾಗಿ ರೂಪು ಪಡೆದು ಅನುಭಾವಮಂಟಪವೆಂದು ಕರೆಸಿಕೊಳ್ಳುವುದರ ಮೂಲಕ ತನ್ನ ವ್ಯಾಪ್ತಿಯ ಹರವನ್ನು ಹೆಚ್ಚಿಸಿಕೊಂಡಿದೆ. ವೇದ ಕಾಲೀನ ಸಂದರ್ಭದಲ್ಲಿ ಭಕ್ತಿ-ಜ್ಞಾನ ವೈರಾಗ್ಯಗಳು ಬೇಕೆಂದು ದೇವರಲ್ಲಿ ಕೇಳಿ ಕೊಂಡು ಅನುಭಾವವು ಬೆಳೆದು ಅರ್ಥ ಸ್ಥಿತ್ಯಂತರವಾಗಿ ವಚನ ಸಂದರ್ಭಕ್ಕೆ ಅನುಭಾವ ಮಂಟಪದ ಶರಣರು ಸ್ವತಃ ಭಕ್ತಿ-ಜ್ಞಾನ-ವೈರಾಗ್ಯ ಹೊಂದಿದವರು, ವೇದದಲ್ಲಿ ವೈರಾಗ್ಯ ಮೇಲೆಂದು ಸಾರಿದ ಅಧ್ಯಾತ್ಮಿಕನೆಲೆ, ಇಲ್ಲಿ ಗೌಣವಾಗಿದೆ. ಏಕೆಂದರೆ ಅನುಭಾವ ಮಂಟಪ ಅನುಭಾವಕ್ಕೆ ಧಾರ್ಮಿಕ ಹಂಗಿಲ್ಲ (ಅನುಭಾವಿ ಯಾದವನು ಎಲ್ಲವನ್ನು ಮೀರಿರುತ್ತಾನೆ). ಅದೊಂದು ಅತಾರ್ಕಿಕ, ವೈವಿಧ್ಯಮಯ ವಾದ ಜೀವಂತ ಪ್ರಕ್ರಿಯೆ. ಅದು ಒಮ್ಮೆ ಭಕ್ತಿಯಾಗಿ, ಒಮ್ಮೆ ಜ್ಞಾನವಾಗಿ, ಒಮ್ಮೆ ವೈರಾಗ್ಯವಾಗಿ, ಒಮ್ಮೆ ವಿರಕ್ತಿಯಾಗಿ, ಒಮ್ಮೆ ಹಟವಾಗಿ, ದೈನ್ಯವಾಗಿ, ಒಮ್ಮೆ ಮೌನ ವಾಗಿ-ಮಾತಾಗಿ, ಒಮ್ಮೆ ವೀರವಾಗಿ, ಕ್ರೋಧವಾಗಿ, ಮತ್ತೊಮ್ಮೆ ಪ್ರೀತಿಯಾಗಿ, ಶಾಂತಿಯಾಗಿ, ನಡೆ ನುಡಿ ಒಂದಾದ ಕ್ರಿಯೆ-ಜ್ಞಾನಗಳ ಸಂಗಮವಾಗಿದೆ. ಇಲ್ಲಿ ಯಾವುದೇ ಭೇದ-ಭಾವಗಳಿಲ್ಲ, ಕಂದರ- ಕಂದಕಗಳಿಲ್ಲ, ಮೇಲು-ಕೀಳುಗಳಿಲ್ಲ. ಶತಮಾನದಿಂದ ಶೋಷಣೆಗೆ ಒಳಗಾದವರೆಲ್ಲ ವರ್ಗಭೇದದಿಂದ ಮುಕ್ತವಾಗಿ, ಚನ್ನಯ್ಯ, ಕಕ್ಕಯ್ಯ, ಹರಳಯ್ಯ, ಚಂದಯ್ಯ ಮೊದಲಾದವರು ಅನುಭಾವದ ಔನ್ನತ್ಯಕ್ಕೆ ತಲುಪಿದರೆ, ಲಿಂಗಭೇದವಿಲ್ಲದೆ ಅಕ್ಕಮಹಾದೇವಿ, ನೀಲಮ್ಮ, ನಾಗಮ್ಮ, ಗಂಗಾಂಬಿಕೆ, ಮುಕ್ತಾಯಕ್ಕ, ಆಯ್ದಕ್ಕಿ ಲಕ್ಕಮ್ಮ, ಲಿಂಗಮ್ಮ, ಸೂಳೆಸಂಕವ್ವ, ಗಂಗಮ್ಮ, ಕದಿರೆಮ್ಮವ್ವ ಮೊದಲಾದ ವಚನಕಾರ್ತಿಯರೆಲ್ಲ ಗಾರ್ಗಿ, ಮೈತ್ರೇಯಿ, ಕಾತ್ಯಾಯಿನಿ, ವಿಶ್ವವರಾ, ಘೋಷಾ, ನಿವಾವರಿ, ಲೋಪಮುದ್ರ ಮೊದಲಾದವರನ್ನು ಮೀರಿಸುವ ಜ್ಞಾನ ಪಡೆದವರಾಗಿದ್ದರು. ಗಾರ್ಗಿ-ಯಜ್ಞವಲ್ಕರ ಚರ್ಚೆಯ ಸಂವಾದ ಅಕ್ಕ ಮಹಾದೇವಿ ಅಲ್ಲಮರ ಅನುಭಾವ ಗೋಷ್ಠಿಯನ್ನು ಮೀರಲಾರದು. ಇದರಿಂದ ಈ ಕಾಲದ ಅನುಭಾವ ತಲುಪಿದ ಸ್ಥಿತಿ ಎಷ್ಟು ಎನ್ನುವುದು ಮುಖ್ಯ. ಅನುಭಾವ ಮಂಟಪದ ಶರಣರ ಅನುಭಾವ ವ್ಯಷ್ಟಿ-ಸಮಷ್ಟಿಯ ನೆಲೆಯಲ್ಲಾದ್ದರಿಂದ ಅದು ''ಸಂಬಂಧದ ಸ್ವರೂಪವೆಂದು, ತಿಳಿವಳಿಕೆಯ ದಾರಿಯೆಂದೂ, ಎರಡೂ ರೀತಿಯಲ್ಲಿ ವಿವೇಚಿಸಲು ಸಾಧ್ಯವಿದೆ. ಆದ್ದರಿಂದಲೇ ಇಂಗ್ಲಿಷ್‌ನ Mysticism ಅನ್ನುವ ಮಾತು ಹೊಳೆಸುವ ಅರ್ಥಗಳಿಗಿಂತ ಸೂಕ್ಷ್ಮವಾಗಿ ಭಿನ್ನವಾದ ಅರ್ಥ ಅನುಭಾವಕ್ಕಿದೆ. ಅನುಭಾವವೂ ವ್ಯಕ್ತಿ ಮತ್ತು ಅವನ ಇಷ್ಟದೈವದ ಸಂಬಂಧವನ್ನು ಸೂಚಿಸುತ್ತದೆ. ಆ ಸಂಬಂಧ ಅರಿವಿಗೆ ಕಾರಣವಾಗುತ್ತದೆ''[41] ಈ ಅರಿವಿನ ಅನ್ವೇಷಣೆಗೆ ಒಳ-ಹೊರಗೆರಡೂ ಸಂಬಂಧವಿರುವ ಹಾಗೆ ರೂಪಿತವಾದ ಶರಣರ ಅನುಭಾವ

ಮಂಟಪದ ಮಾರ್ಗ ಭಿನ್ನಭಿನ್ನವಾದ ನೆಲೆಗಳನ್ನು ರೂಪಿಸಿಕೊಂಡು ಜೀವಂತ ಪ್ರಕ್ರಿಯೆಯಾಗಿ ರೂಪು ಪಡೆಯುವುದರಿಂದ ಶರಣ ಅನುಭಾವವೆನ್ನುವುದು ಅಧ್ಯಾತ್ಮಿಕ ಚರ್ಚೆಯಾಗಿ, ಗೋಷ್ಠಿಯಾಗಿ, ಶಿವತತ್ವಜ್ಞಾನವಾಗಿ, ಶಿವತತ್ವಜ್ಞಾನಿಯಾಗಿ, ಆತ್ಮವಿದ್ಯೆಯಾಗಿ, ಅರಿವಾಗಿ ಕೊನೆಗೆ ಲಿಂಗಾಂಗ ಸಾಮರಸ್ಯವಾಗುತ್ತದೆ. ಅದು ಚಿತ್ಕಳೆಯಾಗಿಯೂ ಕಂಡುಬರುತ್ತದೆ.

ಶರಣರ ಅನುಭಾವ - ಅಧ್ಯಾತ್ಮಿಕ ಚರ್ಚೆ :

ಮನುಷ್ಯ ತನ್ನ ಅಸ್ತಿತ್ವ ರೂಪಿಸಿಕೊಳ್ಳಲು ಹೋದವನು ಜೀವ-ಜಗತ್ತಿನ ಅಸ್ತಿತ್ವ ಕುರಿತು ಚಿಂತನೆ ನಡೆಸಿದ. ತತ್‌ಫಲವಾಗಿ ಅಧ್ಯಾತ್ಮಿಕ ಮಾರ್ಗ ತುಳಿದು ಅನುಭಾವ ಪಡೆದನು. ಅಧ್ಯಾತ್ಮಕ್ಕಿಂತ ಅನುಭಾವವೇ ದೊಡ್ಡದಾದರೂ ಸಹ ಅನುಭಾವಕ್ಕೆ ಅಧ್ಯಾತ್ಮವೇ ನಿಚ್ಚಣಿಕೆ. ಹೀಗಾಗಿ ಅಧ್ಯಾತ್ಮಕ್ಕೂ ಅನುಭಾವಕ್ಕೂ ಅವಿನಾಭಾವಿ ಸಂಬಂಧವಿರುವುದರಿಂದ ಅಧ್ಯಾತ್ಮವಿಲ್ಲದ ಅನುಭಾವವೇ ಅಸಾಧ್ಯ.

ಪೂರ್ವ ಮತ್ತು ಪಶ್ಚಿಮಗಳೆರಡರಲ್ಲಿ ಅಧ್ಯಾತ್ಮ ಮತ್ತು ಅನುಭಾವಗಳು ಕೇವಲ ಅಲೌಕಿಕ ಬದುಕನ್ನು ಮುಖ್ಯ ವಾಹಕವಾಗಿರಿಸಿಕೊಂಡರೆ ಅನುಭಾವ ಮಂಟಪದ ಶರಣರು ಲೌಕಿಕದಲ್ಲಿದ್ದೂ ಅಲೌಕಿಕ ಅಧ್ಯಾತ್ಮ, ಅನುಭಾವಗಳ ಅನುಸಂಧಾನ ಗೊಳಿಸಿದರು. ಇದನ್ನೇ ಅಲ್ಲಮ ಚೋದ್ಯವೆಂದಿದ್ದಾನೆ. ಅಪರಿಮಿತದ ಕತ್ತಲೊಳಗೆ ವಿಪರೀತದ ಬೆಳಕನ್ನು ಕಂಡುಕೊಂಡಿದ್ದ ಶರಣರಲ್ಲಿ ಒಳಗೆ ಆನೆಯೂ, ಸಿಂಹವೂ ಒಂದಾಗಿದ್ದುಕೊಂಡೆ ಆತ್ಮ ಸಾಕ್ಷಾತ್ಕಾರದ ಹಂಬಲಕ್ಕೆ ಒಳಗಾಗಿದ್ದಾರೆ, ಶರಣರು ಆತ್ಮ ಸಾಕ್ಷಾತ್ಕಾರಕ್ಕೆ ಭಕ್ತಿಯೇ ನೆಲೆಯಾದ್ದರಿಂದ ಭಕ್ತಿ ಮತ್ತು ಅನುಭಾವದ ಮೂಲಕ ನಡೆಸುವ ಜೀವ-ದೇವರ ಸಂವಾದ ಬಸವಣ್ಣ ಅತ್ಯಂತ ಮಾರ್ಮಿಕವಾಗಿ ನಿರ್ವಚಿಸುತ್ತಾನೆ.

''ಅನುಭಾವವಿಲ್ಲದ ಭಕ್ತಿ ಅನುವಿಂಗೆ ಬಾರದು
ಅನುಭಾವವಿಲ್ಲದ ಲಿಂಗ ಸಮರಸ ಸುಖಕ್ಕೆ ನಿಲುಕದು.
ಅನುಭಾವವಿಲ್ಲದ ಪ್ರಸಾದ ಪರಿಣಾಮವ ಕೊಡದು
ಅನುಭಾವವಿಲ್ಲದೆ ಏನನ್ನೂ ಅರಿಯಬಾರದು
ತನ್ನಲ್ಲಿ ತಾ ಸನ್ನಿಹಿತವುಳ್ಳಡೆ
ಶಿವಶರಣರ ಸಂಗವೇತಕ್ಕೆನಲುಂಟೆ
ಕೂಡಲಸಂಗಮದೇವಯ್ಯ ನಿಮ್ಮ ಅನುಭಾವ
ಮಾತಿನ ಮಥನವೆಂದು ನುಡಿಯಬಹುದೇ ಪ್ರಭುವೆ'' [42]

ಎಂದು ನುಡಿದು, ಇಲ್ಲಿ ಎಲ್ಲದಕ್ಕೂ ಅನುಭಾವವೇ ಮೂಲವಾಗಿದ್ದು, ಭಕ್ತಿ, ಲಿಂಗ, ಪ್ರಸಾದಗಳೆಲ್ಲಕ್ಕೂ ಅನುಭಾವವೇ ತಾತ್ವಿಕ ತಳಹದಿಯಾಗಿದ್ದು, ಅನುಭಾವವಿಲ್ಲದೆ ಏನನ್ನೂ ಅರಿಯಬಾರದೆಂಬ ನಿಲುವು ಮುಖ್ಯವಾಗುತ್ತದೆ. ಅರಿವು ಎನ್ನುವುದು ಅನುಭಾವದ ಮೂಲಕ ನೆಲೆಗೊಳ್ಳುವುದರಿಂದ ಅದಕ್ಕೆ ಶಿವಜ್ಞಾನಿಗಳ ಸಂಗವೂ ಮುಖ್ಯವೆಂಬುದನ್ನು ಸೂಚಿಸಿದ ಬಸವಣ್ಣ ಅದು ಕೇವಲ ಮಾತಿನ ಮಥನವಲ್ಲ, ತನ್ನಲ್ಲಿ ತಾ ಸನ್ನಿಹಿತವಾಗುವುದೇ ನಿಜವಾದ ಅರಿವು. ಅರಿವಿನಲ್ಲಿ ತಾ ಸನ್ನಿಹಿತವಾಗುವುದೇ ನಿಜವಾದ ಅರಿವು. ಅರಿವಿನ ಅನುಭಾವವೆಂಬುದು ಅಧ್ಯಾತ್ಮಿಕ ಚರ್ಚೆಗೆ ವೇದಿಕೆಯಾಗುತ್ತದೆಂದು ನಿರೂಪಿಸಿದ.

ಬಸವಣ್ಣನ ಚಳುವಳಿಗೂ, ಅನುಭಾವ ಮಂಟಪಕ್ಕೂ ಸೂಕ್ತ ಭೂಮಿಕೆ ಒದಗಿಸಿಕೊಟ್ಟ ದಾಸಿಮಯ್ಯನೂ ಸಹ ಅನುಭಾವವನ್ನು ಅಧ್ಯಾತ್ಮಿಕ ಚರ್ಚೆ ಎಂಬ ಅರ್ಥದಲ್ಲಿ ಅದನ್ನು ವಿವರಿಸಲು ಹೊರಟವನು, ಅಧ್ಯಾತ್ಮಿಕಕ್ಕೆ ಭಕ್ತಿಯೇ ನೆಲೆಯಾದರೆ, ಭಕ್ತಿಗೆ ಅನುಭಾವವೇ ನೆಲೆ ಎಂಬುದು ಖಚಿತಪಡಿಸುತ್ತಾನೆ.

"ಅನುಭಾವವಿಲ್ಲದ ಭಕ್ತಿ ತಲೆಕೆಳಗಾದುದಯ್ಯ
ಅನುಭಾವ ಭಕ್ತಿಗಾಧಾರ, ಅನುಭಾವ ಭಕ್ತಿಗೆ ನೆಲೆವನೆ
ಅನುಭಾವವುಳ್ಳವರ ಕಂಡು ತೂರ್ಯ ಸಂಭಾಷಣೆಯ ಬೆಸಗೊಳ್ಳದಿದ್ದಡೆ
ನರಕದಲ್ಲಿಕ್ಕಯ್ಯ ; ರಾಮನಾಥ" 43

ಇಲ್ಲಿ ಅನುಭಾವಿಯೊಂದಿಗೆ ತೂರ್ಯದ ಸಂಭಾಷಣೆ ನೆರವೇರಿಸಬೇಕು ಎನ್ನುವ ಅವನ ಮಾತಿನಲ್ಲಿ ತೂರ್ಯವೆಂಬುದು ಜೀವಿಯ ನಾಲ್ಕನೇ ಅವಸ್ಥೆ, ಅದು ಆನಂದದ ತೂರಿಯ ಅವಸ್ಥೆ, ಅರ್ಥಾತ್ ಜಾಗ್ರ, ಸ್ವಪ್ನ, ಸುಷುಮ್ನಾ ಮೀರಿದ ದೇವ-ಜೀವನೊಂದಿಗಿನ ಸಂಭಾಷಣೆಯು, ನಿಜವಾದ ಅಧ್ಯಾತ್ಮಿಕ ಚರ್ಚೆ, ಅದೇ ಅನುಭಾವವೆಂದು ದಾಸೀಮಯ್ಯ ಹೇಳುತ್ತಾನೆ. ಅವರೊಂದಿಗಿನ ಸಂವಾದ ಸ್ವರ್ಗಸಮವೆಂಬ ದಾಸಿಮಯ್ಯನ ನಿಷ್ಠುರ ನಿಲುವು ಅನುಭಾವಕ್ಕೆ ಕೊಟ್ಟ ನೆಲೆಯನ್ನು ಅರ್ಥ ಪರಿಧಿಯನ್ನು ವಿಶದಪಡಿಸುತ್ತದೆ.

ಅನುಭಾವ ಮಂಟಪದ ಅತ್ಯಂತ ನಿಷ್ಠುರವಾದಿಯಾದ ಅಂಬಿಗರ ಚೌಡಯ್ಯ ಅಧ್ಯಾತ್ಮದ ತುದಿಯೇರಿದ ಅನುಭಾವಿಯ ನಿಲುವನ್ನು ಹೀಗೆ ವಿವರಿಸುತ್ತಾನೆ.

"ಆರೂಢ ಜ್ಞಾನಿಯಾದವಂಗೆ ಅನುಭಾವವೇಕಯ್ಯ
ಮೀರಿದ ಸ್ಥಲದಲ್ಲಿ ನಿಂದವಂಗೆ ನೀರೇನು - ನೆಲವೇನು?
ಎಂದಾತನಂಬಿಗ ಚೌಡಯ್ಯ" 44

ಅನುಭಾವಿಯಾದವನಿಗೆ ಯಾವುದೇ ಹಂಗಿಲ್ಲ. ಧರ್ಮ-ದೇವರ, ದೇಶ-ಭಾಷೆ, ನೀರು-ನೆಲದ ಹಂಗನ್ನು ಮೀರಿದವನೇ ಅನುಭಾವಿ. ಅವನಲ್ಲಿ ಎಲ್ಲವೂ ತಿಳಿದ ಪರಮ ಸತ್ಯದ ವಿವೇಕವಿರುವುದು. ಅವನೊಂದಿಗೆ ಅನುಭಾವವೇ ಸಲ್ಲದೆನ್ನುವ ಅಂಬಿಗರ ಚೌಡಯ್ಯ ಅನುಭಾವಿಯ ಅಧ್ಯಾತ್ಮಿಕ ಚರ್ಚೆ-ಅದು ಸ್ಥಲ ಮೀರಿದ ಐಕ್ಯದಲ್ಲಿರುವ ಭಾಷೆ, ಭಾಷೆ ಮೀರಿದ ಸಂವಾದವೆಂದು ಸಾರುತ್ತಾನೆ.

ಶರಣರ ಅನುಭಾವ - ಗೋಷ್ಠಿ

ಕೇವಲ ಆಧ್ಯಾತ್ಮ ಅನುಭಾವವಲ್ಲ, ಆಧ್ಯಾತ್ಮವಾದಿ ಅನುಭಾವಿಯೂ ಅಲ್ಲ. ಆಧ್ಯಾತ್ಮದ ಪ್ರತಿಫಲವನ್ನು ಜೀವಜಗತ್ತಿಗೆ ಸಾರುವ ಅಭಿವ್ಯಕ್ತಿ ಮಾತ್ರ ಅನುಭಾವ. ಆದ್ದರಿಂದ ಅನುಭಾವ ಒಂದು ಗೋಷ್ಠಿ ಎಂದು ಕರೆಯಬಹುದು. ಇಲ್ಲಿ ಗೋಷ್ಠಿ ಎನ್ನುವುದು ಗೊಟ್ಟಿ ಎನ್ನುವ ಮೂಲಪದದಿಂದ ಬಂದಿದ್ದು, ಗೊಟ್ಟಿ ಎನ್ನುವುದು ಮಾತು, ಪ್ರಮಾಣ ಎಂಬರ್ಥ ನೀಡುತ್ತದೆ. ಗೊಟ್ಟಿಯೆನ್ನುವುದು ಪ್ರಮಾಣಬದ್ಧವಾದ ಸಂವಾದವೆಂದು ಕರೆಸಿಕೊಳ್ಳುವಾಗ, ಸಮಾನ ಮನಸ್ಕರು ಒಂದೆಡೆ ಸೇರಿ ವಿಚಾರ ವಿನಿಮಯ ಮಾಡುವುದು. ಅದು ಶರಣರು ಅನುಭಾವ ಮಂಟಪದ ಮೂಲಕ ನೆರವೇರಿಸಿದ್ದಾರೆ. ಮುಖ್ಯವಾಗಿ ಅನುಭಾವದ ಸಾರ್ಥಕತೆ ಗೋಷ್ಠಿಯಲ್ಲಿದೆ ಎಂದು ಹೇಳಬಹುದು. ಗೋಷ್ಠಿ ಹೇಗೆ ಅನುಭಾವವಾಗುತ್ತದೆ ಎನ್ನುವುದನ್ನು ಚೆನ್ನ ಬಸವಣ್ಣ ವಿವರಿಸುತ್ತ,

''ಮಂಡೆಯು ಮಾಸಿದಡೆ ಮಹಾಮಜ್ಜನವ ಮಾಡುವುದು
ವಸ್ತ್ರ ಮಾಸಿದರೆ ಮಡಿವಾಳರಿಗಿಕ್ಕುವುದು
ಮನದ ಮೈಲಿಗೆ ತೊಳೆಯಬೇಕಾದಡೆ
ಕೂಡಲ ಚೆನ್ನಸಂಗಯ್ಯನ ಶರಣರ ಅನುಭಾವವ ಮಾಡುವುದು'' [45]

ಎನ್ನುವನು. ಇಲ್ಲಿ ''ಅನುಭಾವ'' ಗೋಷ್ಠಿಯಾಗುವುದು ಶುಚಿಗೊಳಿಸುವುದಕ್ಕಾಗಿ ಎಂಬುದನ್ನು ಸ್ಪಷ್ಟಪಡಿಸಲು ಮಂಡೆ-ವಸ್ತ್ರದ ಪ್ರತಿಮೆಗಳನ್ನು ನೀಡಿದ ಚೆನ್ನಬಸವಣ್ಣ ಮನದ ಶುಚಿತ್ವಕ್ಕೆ ಶರಣರ ಅನುಭಾವ ಗೋಷ್ಠಿಯನ್ನು ಸೂಚಿಸುತ್ತಾನೆ. ಇಲ್ಲಿ ಮನದ ಮೈಲಿಗೆ ಎನ್ನುವುದು ಅಂತರಂಗದ ಆತ್ಮಶುದ್ಧಿಯ ನೆಲೆಯನ್ನು ವಿವರಿಸುವಾಗ, ಅನುಭಾವಿಯಾದವನು ಅಂತರಂಗ ಶುದ್ಧವುಳ್ಳವನಾಗಿರಬೇಕು ಎಂಬುದನ್ನು ಸ್ಪಷ್ಟಪಡಿಸುತ್ತಾನೆ. ''ಅನುಭಾವ'' ಗೋಷ್ಠಿ ನಡೆಸಲು ಅವನ ಈ ಪ್ರತಿಮೆಗಳು ಪರಿಣಾಮಕಾರಿಯಾಗಿವೆ.

'ಅನುಭಾವ' ಗೋಷ್ಠಿಯಾದಾಗ ಏನೆಲ್ಲ ಪರಿಣಾಮಗಳಾಗುತ್ತವೆ, ಏನೆಲ್ಲ

ಬದಲಾವಣೆ, ಸ್ಥಿತ್ಯಂತರಗಳು ಆಗುತ್ತವೆಂಬುದನ್ನು ಅಕ್ಕನ ನಿಲುವು ಸಮರ್ಥವಾಗಿ ಪ್ರತಿಪಾದಿಸುತ್ತದೆ.

"ನೋಡಿ ನುಡಿಸಿ ಮಾತಾಡಿಸಿದಡೊಂದು ಸುಖ
ಏನ ಮಾಡದಯ್ಯ ನಿಮ್ಮ ಶರಣ ಅನುಭಾವ
ಚೆನ್ನಮಲ್ಲಿಕಾರ್ಜುನಯ್ಯ
ನಿಮ್ಮ ಶರಣರ ಸದ್ಗೋಷ್ಟಿ ಏನ ಮಾಡದಯ್ಯ"[46]

ಅಕ್ಕನ ಈ ಮಾತುಗಳಿಂದ ಅನುಭಾವಗೋಷ್ಟಿ ಕೇವಲ ಪರಿಣಾಮವಲ್ಲ, ಪರಿಣಾಮ ಮೀರಿದ ಆನಂದವನ್ನು ನೀಡುತ್ತದೆ. ಆನಂದವೆನ್ನುವುದು ಸುಖದ ನೆಲೆಯಾಗಿದ್ದು ಕೊಂಡಾಗ, ನೋಡುವಲ್ಲಿ ಒಂದು ಸುಖವಾದರೆ ನುಡಿಸುವಲ್ಲಿ ಮತ್ತೊಂದು ಸುಖ ಮಥಿಸಿ ಮಾತಾಡಿಸಿದೊಡೆ ಅಪರಿಮಿತದ ಸುಖವೆಂಬ ಕಲ್ಪನೆ ಕೊಡುತ್ತಲೆ ಶರಣರ ಅನುಭಾವ ಗೋಷ್ಟಿ ಏನು ಮಾಡಿಸದು? ಎಂಬ ಪ್ರಶ್ನೆಯಲ್ಲಿ ಏನೆಲ್ಲ (ಸುಖ) ಮಾಡಿಸಲು ಸಾಧ್ಯವೆಂಬ ಉತ್ತರವೂ ಒಳಗೊಂಡಿರುವುದು ಅನುಭಾವಗೋಷ್ಟಿಯ ಮಹತ್ವ ಸೂಚಿಸುತ್ತದೆ. ಈ ಅನುಭಾವ ಗೋಷ್ಟಿಗೆ ಅನುಭಾವಿಗಳೇ ಬೇಕು ಎನ್ನುವ ಶರಣರಿಗೆ ಅನುಭಾವಿಯಾದವನು ಹೇಗಿರಬೇಕು ಎನ್ನುವುದನ್ನು ಅಕ್ಕ ಹೀಗೆ ಸ್ಪಷ್ಟ ಪಡಿಸುತ್ತಾಳೆ.

"ಪಡೆವುದರಿದು ನರಜನ್ಮವ
ಪಡೆವುದರಿದು ಹರಭಕ್ತಿಯ
ಪಡೆವುದರಿದು ಗುರುಕಾರುಣ್ಯವ
ಪಡೆವುದರಿದು ಲಿಂಗ ಜಂಗಮ ಸೇವೆಯ
ಪಡೆವುದರಿದು ಸತ್ಯಶರಣರ ಅನುಭಾವವ
ಇಂತಾಗಿ ಚನ್ನಮಲ್ಲಿಕಾರ್ಜುನಯ್ಯನ ಶರಣರ ಅನುಭಾವದಲ್ಲಿ
ನಲಿನಲಿದಾಡು ಕಂಡೆಯಾ ಎಲೆ ಮನವೆ"[47]

ಇಲ್ಲಿ ಪಡೆವುದು ಮಾತ್ರ ಮುಖ್ಯವಲ್ಲ, ಹೇಗೆ ಪಡೆಯಬೇಕು, ಕೂಡಬೇಕು, ಒಲಿಯ ಬೇಕು ಎಂಬುದನ್ನು ವ್ಯಷ್ಟಿ-ಸಮಷ್ಟಿಯ ನೆಲೆಯಲ್ಲಿ ಚರ್ಚಿಸುತ್ತ, ಪಡೆವ ಏನೆಲ್ಲವೂ ಅರಿತು ಪಡೆಯಬೇಕೆನ್ನುವ ಅಕ್ಕ-ಹುಟ್ಟು ಸಹ ಅರಿತು ಪಡೆಯಬೇಕೆಂದು ವಿವರಿಸು ತ್ತಲೇ ಹರಭಕ್ತಿ, ಗುರುಕಾರುಣ್ಯ, ಲಿಂಗ ಜಂಗಮ ಸೇವೆ, ಇವೆಲ್ಲ ಆಷಾಢಭೂತಿತನಕ್ಕೆ ಪಡೆಯದೇ ಅದರ ಮೂಲಸತ್ಯವನ್ನು ಅರಿತು ಪಡೆಯಬೇಕು. ಇವೆಲ್ಲ ಪಡೆದಾಗ ಅನುಭಾವ ದೊರಕುವುದು. ಅದು ಸಾಮಾನ್ಯರಲ್ಲಿ ಅಲ್ಲ, ಸತ್ಯಶರಣರಲ್ಲಿ ಮಾತ್ರ.

ಅಂದಾಗ ಆ ಶರಣರ ಅನುಭಾವ ಗೋಷ್ಠಿ ಮಾತ್ರ ನಲಿವನ್ನು ತಂದುಕೊಡುತ್ತದೆ. ಅದು ಅನುಭಾವದ ಭೂಮವೂ ಆಗುತ್ತದೆ.

ಶರಣರ ಅನುಭಾವ - ಶಿವತತ್ವಜ್ಞಾನ :

ಅನುಭಾವವು ಶಿವ ಮತ್ತು ಜೀವರ ಮಧ್ಯದ ಮಾಧ್ಯಮವಾಗಿದ್ದು; ಅನುಭಾವ ಪಡೆವುದೆಂದರೆ ಶಿವನನ್ನೇ ಪಡೆವುದು, ಶಿವಜ್ಞಾನ ಹೊಂದುವುದು ಎಂದರ್ಥ. ಆದರೆ ಶರಣರಲ್ಲಿ ಅನುಭಾವ ಕೇವಲ ಶಿವಜ್ಞಾನವಲ್ಲ, ಅನುಭಾವವೆಂಬುದು ಶಿವ ತತ್ವಜ್ಞಾನವಾಗಿದೆ. ಇಲ್ಲಿ ಶಿವತತ್ವವೆಂದರೆ ''ಪರಶಿವನಲ್ಲಿರುವ ಸತ್ತು, ಚಿತ್ತು, ಆನಂದ, ನಿತ್ಯ ಮತ್ತು ಪರಿಪೂರ್ಣಗಳೆಂಬ ಐದು ಸ್ವರೂಪಗಳು'' [48] ಒಳಗೊಂಡ ಪೂರ್ಣ ಸಚ್ಚಿದಾನಂದ ಕುರಿತ ಜ್ಞಾನ ಅಂದರೆ ಶಿವಸಂಬಂಧವಾದ ಜ್ಞಾನವೆಂದು ಕರೆಸಿ ಕೊಳ್ಳುತ್ತದೆ. ಆದರೆ ಶಿವಜ್ಞಾನವಿಲ್ಲದವಗೆ ಯಾವುದು ತಾನೆ ವೇದ್ಯವಾಗಲು ಸಾಧ್ಯ?

''ಆದಿಯಲ್ಲಿ ಶಿವಬೀಜವಿಲ್ಲದವರಿಗೆ
ವೇದ್ಯವಾಗದು ಶಿವಜ್ಞಾನ, ಶಿವಭಕ್ತಿ
ಲಿಂಗಸ್ಥಲವಳವಡದು ; ಜಂಗಮಸ್ಥಲವಳವಡದು
ಪಾದೋದಕ ಪ್ರಸಾದಸ್ಥಲವಳವಡದು
ನರಕದಲ್ಲಿ ಬೀಳುವ ಕರ್ಮಿಗಳಿಗೆ
ಕೂಡಲ ಸಂಗನ ಶರಣರನುಭಾವ ನೆಲೆಗೊಳ್ಳದು'' [49]

ಅನುಭಾವವೆಂಬುದು ಶಿವತತ್ವಜ್ಞಾನವಾದ್ದರಿಂದ ಶಿವಬೀಜವಿಲ್ಲದವರಿಗೆ ಯಾವುದೂ ಲಭಿಸದೆಂದಿರುವ ಬಸವಣ್ಣ ಇಲ್ಲಿ ಶಿವಬೀಜವೆಂದ ಭಕ್ತನು 'ಶಿವಾಂಶಿಕ'ವೆಂಬ ಭಾವ ನೆಲೆಗೊಳಿಸಿಕೊಳ್ಳುವ ಪ್ರಜ್ಞೆಯನ್ನು ಕಡ್ಡಾಯಗೊಳಿಸುತ್ತಾನೆ. ತಾನು ಶಿವಾಂಶಿಕ ವೆಂದರಿತುಕೊಂಡು, ಶಿವಭಾವ ಅಳವಡಿಸಿಕೊಂಡಾಗ ಮಾತ್ರ ಲಿಂಗ, ಜಂಗಮ, ಪ್ರಸಾದ ದೊರಕುವುದು. ಆ ಮೂಲಕವಾಗಿ ಭಕ್ತನಲ್ಲಿ ಶಿವಜ್ಞಾನ ನೆಲೆಗೊಂಡು ಶರಣ ರೊಂದಿಗೆ ಅನುಭಾವ ಪಡೆಯಲು ಸಾಧ್ಯವೆಂಬುದು ಇಲ್ಲಿ ನಿರೂಪಿತವಾಗಿದೆ.

ಶರಣರ ಅನುಭಾವ - ಶಿವತತ್ವಜ್ಞಾನಿ :

ಅನುಭಾವವೆನ್ನುವುದು ಕೇವಲ ಶಿವತತ್ವಜ್ಞಾನವೇ ಅಲ್ಲ, ಶಿವತತ್ವಜ್ಞಾನದ ಅರ್ಥಾತ್ ಪರಬ್ರಹ್ಮ ಅರಿವುಳ್ಳವನು ಶಿವತತ್ವಜ್ಞಾನಿ ಎನಿಸಿಕೊಳ್ಳುತ್ತಾನೆ. ಶಿವತತ್ವಜ್ಞಾನಿ ಅಂದರೆ, ಲಿಂಗಾಂಗ ಸಾಮರಸ್ಯದ ಅರಿವುಳ್ಳ ಲಿಂಗಾನುಭಾವಿ. ಹಾಗಾಗಿ ಶರಣರ

ಅನುಭಾವ ಅದೊಂದು 'ಶಿವತತ್ವಜ್ಞಾನಿ'ಯಾಗಿ ಸಹ ಕಾರ್ಯ ನಿರ್ವಹಿಸುತ್ತದೆ. ಶಿವತತ್ವಜ್ಞಾನಿಯಾಗಲು, ಅವನೇನಾಗಬೇಕು ಎನ್ನುವುದು ಇಲ್ಲಿ ಮುಖ್ಯವಾಗುತ್ತದೆ. ಅದಕ್ಕಾಗಿ ಇದನ್ನು ಅಕ್ಕಮಹಾದೇವಿ 'ಮಥನದ ಪ್ರತಿಮೆ'ಯ ಮೂಲಕ ವಿವರಿಸಿದ್ದಾಳೆ.

''ಮರ ಮರ ಮಥನಿಸಿ ಕಿಚ್ಚು ಹುಟ್ಟಿ
ಸುತ್ತಣ ತರುಮರಾದಿಗಳ ಸುಡಲಾಯಿತ್ತು
ಆತ್ಮ ಆತ್ಮ ಮಥನಿಸಿ ಅನುಭಾವ ಹುಟ್ಟಿ
ಹೊದ್ದಿರ್ದ ತನುಗುಣಾದಿಗಳ ಸುಡಲಾಯಿತ್ತು.
ಇಂತಪ್ಪ ಅನುಭಾವರ ಅನುಭಾವವ ತೋರಿ
ಎನ್ನ ಒಡಲನುಳುಹಿಕೊಳ್ಳ ಚೆನ್ನಮಲ್ಲಿಕಾರ್ಜುನಾ'' [50]

ಅನುಭಾವಕ್ಕೆ ಹೇಗೆ ಮಿತಿಗಳಿಲ್ಲವೋ ಹಾಗೇ ಅನುಭಾವಿಗೂ ಮಿತಿಗಳಿಲ್ಲ, ಕರ್ಮಠ ತನಗಳಿಲ್ಲ. ದೇಶ-ಭಾಷೆಯ, ರಾಗ-ಭಾವದ ಹಂಗಿನಿಂದ ಹೊರಬರುತ್ತ ಮನುಷ್ಯ ಮೃಗೀಯತೆಯನ್ನು ಮೀರಿದಾಗ. ಅಂದರೆ ಅವನು ಸತ್-ಚಿತ್-ಆನಂದ ಪಡೆದು ಶಿವಜ್ಞಾನಿಯಾಗುತ್ತಾನೆ, ಅದು ಯೋಗದಿಂದ ಸಾಧ್ಯ. ಹೇಗೆ ಮರ-ಮರಗಳ ಮಥನ ದಿಂದ ಸುತ್ತಲಿನ ಕಾಡು ನಷ್ಟವಾಗುತ್ತದೆಯೋ ಹಾಗೇ ಶಿವಾಂಶಿಕವಾದ ಆತ್ಮ-ಆತ್ಮಗಳ ಮಥನದ ಅನುಭಾವದಿಂದ ತನುವಿನ ಗುಣಗಳು ಸುಡುತ್ತವೆಂದು ಹೇಳುವ ಅಕ್ಕ ಮಹಾದೇವಿಯ ನಿಲುವಲ್ಲಿ ತನುಗುಣಾದಿಗಳು ಸುಡುವುದೆಂದರೆ, ಆತ್ಮಶುದ್ಧಿಯಾಗು ವುದೆಂದರ್ಥ. ಹೀಗೆ ಅನುಭಾವವು ಶಿವಶರಣರ ಶಿವತತ್ವಜ್ಞಾನಿಯಾಗುವುದು ಗಮನಾರ್ಹ.

ಶರಣರ ಅನುಭಾವ - ಆತ್ಮವಿದ್ಯೆ :

ಆತ್ಮವಿದ್ಯೆ ಎಂದರೆ ಸಾಧಕ ತನ್ನ ತಾನು ಅರಿಯುವುದೇ ಆಗಿದೆ. ಅನುಭಾವದ ನೆಲೆಯೂ ಅದೇ ಆಗಿರುವುದರಿಂದ ಶರಣರ ಅನುಭಾವ ಆತ್ಮವಿದ್ಯೆಯಾಗಿದೆ. ಇಲ್ಲಿ ಆತ್ಮವಿದ್ಯೆ ಎಂದರೆ, ದೇಹದೊಳಗಿನ ನಿರಾಕಾರ ತತ್ವ, ಜೀವತತ್ವ, ಚೈತನ್ಯತತ್ವ, ಹಾಗೂ ಪ್ರಾಣತತ್ವವೆಂಬ ಅಂಶಗಳ ಕುರಿತ ಪರಿಕಲ್ಪನೆಯಾಗಿದೆ. ಆದರೆ ಶರಣರ ಅನುಭಾವದ ಆತ್ಮವಿದ್ಯೆಯ ಸ್ವರೂಪ ಒಂದಿಷ್ಟು ವಿಶಾಲವಾಗಿದ್ದು ಸಕಲ ಜೀವರಾಶಿ ಗಳಲ್ಲಿರುವ ಶಿವಾಂಶ ಕುರಿತ ಜ್ಞಾನವನ್ನು ಆತ್ಮವಿದ್ಯೆ ಎಂದು ಕರೆಯಬಹುದು. ಇಲ್ಲಿನ ಆತ್ಮತತ್ವವೆಂದರೆ ಸಾಧಕನ ಆಚರಣೆಗಳಿಗೆ ಸಹಾಯಕವಾಗುವ ೨೫ ಬಗೆಯ ಸೂತ್ರ

ಸಿದ್ಧಾಂತಗಳಿವೆ. ಅವೆಂದರೆ ಕರ್ಮೇಂದ್ರಿಯಗಳು ೫, ಜ್ಞಾನೇಂದ್ರಿಯಗಳು ೫, ಪ್ರಾಣಾದಿವಾಯುಗಳು ೫, ಶಬ್ದಾದಿ ವಿಷಯಗಳು-೫, ಅಂತಃಕರಣ-೪ ಮತ್ತು ಜೀವತತ್ವ-೧. ಇವುಗಳ ತಿಳುವಳಿಕೆಯಿಂದ ಸಾಧಕ ತನ್ನನ್ನು ತಾನು ಅರಿತುಕೊಳ್ಳುವುದರ ಮೂಲಕ ತನ್ನ ಅಂತಃಸತ್ವವನ್ನು ಬೆಳೆಸಿಕೊಳ್ಳುತ್ತಾನೆ.

ಈ ಅರ್ಥದಲ್ಲಿ ಆತ್ಮವಿದ್ಯೆಯಿಲ್ಲದ ಅನುಭಾವವಿಲ್ಲ. ಅಂಥವನು ಭಕ್ತನೇ ಅಲ್ಲ. ಅದೆಲ್ಲ ನಿರುಪಯುಕ್ತವೆನ್ನುತ್ತಾನೆ, ಬಸವಣ್ಣ.

''ಬಚ್ಚಲ ನೀರು ತಿಳಿಯಿದ್ದಡೇನು
ಸಲ್ಲದ ಹೊನ್ನು ಮತ್ತೆಲ್ಲಿದ್ದಡೇನು
ಆಕಾಶದ ಮಾವಿನ ಫಲವೆಂದಡೇನು
ಕೊಯ್ಯಲಿಲ್ಲ ಮೆಲ್ಲಲಿಲ್ಲ
ಕೂಡಲಸಂಗನ ಶರಣರ ಅನುಭಾವವಿಲ್ಲದವ
ಎಲ್ಲಿದ್ದಡೇನು ಎಂತಾದಡೇನು'' [51]

ಇಲ್ಲಿ ಆತ್ಮವಿದ್ಯೆ ಇಲ್ಲದವ ತಿಳಿಯಾದ ಬಚ್ಚಲ ನೀರು, ಸಲ್ಲದ ಹೊನ್ನು, ಆಕಾಶದ ಫಲಕ್ಕೆ ಸಮವೆನ್ನುತ್ತಲೇ, ಎಲ್ಲವನ್ನೂ ನಿರುಪಯುಕ್ತಗೊಳಿಸುವ ಮೂಲಕ ಅದು ಹೇಗಿದ್ದರೂ, ಎಲ್ಲಿದ್ದರೂ ಅಷ್ಟೇ, ನಿರುಪಯುಕ್ತ ನೆಲೆಯದ್ದು. ಅದಕ್ಕಾಗಿ ಶರಣರ ಅನುಭಾವವು ಆತ್ಮವಿದ್ಯೆಯಾಗಿದೆ.

ಶರಣರ ಅನುಭಾವ - ಅರಿವು

ಅನುಭಾವಕ್ಕೂ ಅರಿವಿಗೂ ಅನನ್ಯ ಸಂಬಂಧವಿದೆ. ಒಂದರ್ಥದಲ್ಲಿ ಇವೆರಡೂ ಬೇರೆ ಅಲ್ಲವೇ ಅಲ್ಲ ಎನ್ನುವುದಕ್ಕೆ ಜ್ಞಾನ, ತಿಳಿವಳಿಕೆ ಎಂಬ ಅರ್ಥಗಳಿರುವಾಗ ಅನುಭಾವವನ್ನು ಶಿವಜ್ಞಾನ, ಶಿವತತ್ವಜ್ಞಾನವೆಂದೇ ಅರ್ಥೈಸಬೇಕು. ಇದನ್ನು ಇನ್ನೂ ವಿವರಿಸಬಹುದಾದರೆ ಸಾಧಕನ ಇರುವಿಕೆ ಅಂದರೆ ಅಸ್ತಿತ್ವದ ಬಗೆಗೆ ಇರುವ ಸ್ವಾತ್ಮಜ್ಞಾನವೆಂದು ಕರೆಯಬಹುದು. ಅದನ್ನೇ ನಾವು ಶಿವಸಂಬಂಧವಾದ ಜ್ಞಾನ ಅಂದರೆ ಶಿವಜ್ಞಾನವೆಂದು ಕರೆಯುತ್ತೇವೆ. ಇಂಥಲ್ಲಿ ಅನುಭಾವವೆಂಬುದು ಅರಿವಾದಾಗ ಅದು ಆಚರಣೆಯ ಮೂಲಕ ಪ್ರಕಟಗೊಳ್ಳುವ ತಿಳುವಳಿಕೆಯಾಗಿ ಶರಣರಲ್ಲಿ ಅದರ ಅರ್ಥ ಪೂರೈಸಿದೆ.

ವ್ಯಕ್ತಿ ತನ್ನತನದ ಬಗ್ಗೆ ಹೊಂದಿದ ಖಚಿತತೆಗಳೇ ಜ್ಞಾನವೆಂದು ಕರೆಯಬಹುದು. ಅದನ್ನೇ ವಚನ ಸಾಹಿತ್ಯದ ಪರಿಭಾಷೆಯಲ್ಲಿ ಹೇಳುವುದಾದರೆ ''ತನ್ನ

ಅರಿವೆ ತನಗೆ ಗುರು'' ಎನ್ನುವ ಮಟ್ಟಿಗೆ ಅರಿವು ಗುರುವಾಗುತ್ತದೆ. ಅನುಭಾವಿ ಅಲ್ಲಮ ಅರಿವನ್ನು ಕುರಿತು ಅತ್ಯಂತ ತೀವ್ರವಾಗಿ ಚರ್ಚಿಸುತ್ತ ಸು. ೩೦೦ ವಚನಗಳಲ್ಲಿ ಅರಿವನ್ನು ಕುರಿತು ಪ್ರಸ್ತಾಪಿಸುತ್ತಾನೆ. [52]

ಹೇಗೆ ಅನುಭಾವಕ್ಕೆ ಒಳ ಹೊರಗಿಲ್ಲೋ ಹಾಗೆ ಅರಿವಿಗೂ ಒಳಹೊರಗು ಇಲ್ಲ, ಇದಕ್ಕೆ ಕುರುಹಾಗಲಿ, ಸಂಬಂಧಗಳಾಗಲಿ ಇರುವುದಿಲ್ಲ. ಅದನ್ನೇ ಅಲ್ಲಮ ಅತ್ಯಂತ ಪರಿಣಾಮಕಾರಿಯಾಗಿ ವಿವರಿಸುತ್ತ ''ತೆರಹಿಲ್ಲದ ಘನಕ್ಕೆ ಕುರುಹು ಮುನ್ನಿಲ್ಲ'', ''ಅರಿವು ನೆಲೆಗೊಂಡಲ್ಲಿ ಕುರುಹಿಂಗೆ ಹೊರಗು'' ಎಂಬಂಥ ಮಾತುಗಳಲ್ಲಿ ಅನುಭಾವದ ಅರಿವಿನ ಸ್ಪಷ್ಟತೆಗಳಿವೆ.

ಶರಣರ ಅನುಭಾವ - ಲಿಂಗಾಂಗ ಸಾಮರಸ್ಯ :

ಮನುಷ್ಯ ಮಾನವನಾಗಿ-ಮಹಾಮಾನವನಾಗಿ-ದೇವಮಾನವನಾಗುವ ಪರಿಯೆಂದರೆ, ಅಂಗ, ಗುಣವಳಿದು ಲಿಂಗಗುಣಗಳನ್ನು ಹೊಂದುವುದು. ಇದನ್ನು ವೀರಶೈವ ಪರಿಭಾಷೆಯಲ್ಲಿ 'ಲಿಂಗಾಂಗ ಸಾಮರಸ್ಯ'ವೆಂದು ಕರೆಯಲಾಗುತ್ತದೆ. ಲಿಂಗಾಂಗ ಸಾಮರಸ್ಯದ ಪರಿಕಲ್ಪನೆ ಸಾಧಕ ತಾನೇ ಲಿಂಗವಾಗುವ, ತಾನೇ ಗುರುವಾಗುವ, ತಾನೇ ಜಂಗಮವಾಗುವ, ತಾನೇ ತಾನಾಗಿ ತಾನಿಲ್ಲದಂತಹ ಅವಸ್ಥೆ ಬೆಂಕಿ ಮುಟ್ಟಿದ ಕಟ್ಟಿಗೆ ಬೆಂಕಿಯಾಗುವುದು, ಜ್ಯೋತಿ ಮುಟ್ಟಿದ ಹಣತೆ ಜ್ಯೋತಿಯಾಗುವುದು. ಗುರುವನ್ನು ಮುಟ್ಟಿದವ ಗುರುವಾಗುವ ಹಾಗೇ ಲಿಂಗ ಮುಟ್ಟಿ ಲಿಂಗವಾಗುವ ಪರಿಯೇ ಲಿಂಗಾಂಗ ಸಾಮರಸ್ಯ. ಇದು ಬರಿ ಮಾತಿನ ಮಣಿಹದಿಂದ ಆಗುವ ಸಾಧನೆ ಅಲ್ಲ. ಅದಕ್ಕೆ ಅವುಗಳದೇ ಆದ ಸಿದ್ಧಾಂತ ತತ್ವಗಳಿವೆ. ಅವೇ ವೀರಶೈವರಲ್ಲಿ ಷಟಸ್ಥಲವೆಂದು ಕರೆಯಲಾಗುತ್ತದೆ. ಶರಣರ ಷಟಸ್ಥಲಕ್ಕೂ ಮತ್ತು ಅವರ ಅನುಭಾವಕ್ಕೂ ಅನನ್ಯ ಸಂಬಂಧ ಮತ್ತು ಸಾಮ್ಯತೆಗಳಿವೆ. ಹೇಗೆ ಅನುಭಾವವು ತತ್ವಮುಖವಾಗಿ ಮತ್ತು ಪ್ರಯೋಗಮುಖವಾಗಿ ಪ್ರಕಟಗೊಳ್ಳುವುದೋ ಹಾಗೆಯೇ ಷಟಸ್ಥಲ ಸಹ ಮತತತ್ವಶಾಸ್ತ್ರದ ನೆಲೆಯಲ್ಲಿ ಮತ್ತು ಪ್ರಾಯೋಗಿಕ ನೆಲೆಯಲ್ಲಿದೆ. ಇಲ್ಲಿ ಶರಣ ತಮಗಿಂತಲೂ ಪರಾತ್ಮರ ಅವಸ್ಥೆಯಲ್ಲಿ ತನ್ಮಯತೆ ಬಯಸುವಾಗ ಅವನಿಗೂ ಮೂಲತಃ ಸಚ್ಚಾರಿತ್ರ್ಯ ಸದಾಚಾರಗಳು ಅಗತ್ಯವಾಗುತ್ತವೆ. ಅದಕ್ಕೆ ಅವನು ಕೆಲ ನಿಯಮಗಳನ್ನು ಪಾಲಿಸಬೇಕೆಂಬುದರ ಹಿನ್ನೆಲೆಯಲ್ಲಿ ಪ್ಲೊಟೈನನು ತನ್ನ ಎನಿಯಡ್ಸ್ (Enneads) ಗ್ರಂಥದಲ್ಲಿ ಅನುಭಾವಿ ಕುರಿತು ಚರ್ಚಿಸುತ್ತ ''ರಹಸ್ಯಮಯವಾದ ಐಕ್ಯಾನುಭವಕ್ಕೆ ಆಧಾರವಾಗಿ ಶೀಲ ಸೌಜನ್ಯಗಳು ಇರಬೇಕು. ಅದನ್ನು ಪಡೆಯುವುದರ ಪೂರ್ವಭಾವಿಯಾಗಿ ಬಹುಕಾಲದ ಬುದ್ಧಿಯ ವ್ಯವಸಾಯವೂ ಬೇಕಾಗುತ್ತದೆ. ಇದು ಪ್ರಾಜ್ಞನಿಗೆ, ಸಾತ್ವಿಕನಿಗೆ ಸಾಧ್ಯ''. [53]

ಹೀಗೆ ಅನುಭಾವದ ಮೆಟ್ಟಿಲುಗಳಾಗಿ ಇಲ್ಲಿ ಷಟಸ್ಥಲವೆನ್ನುವುದು (ಶರಣರಲ್ಲಿ) ಸೂಚಿತವಾಗಿದೆ. ಲಿಂಗಾಂಗ ಸಾಮರಸ್ಯಕ್ಕೆ ಷಟಸ್ಥಲವು ನಿಚ್ಚಣಿಕೆಯಾದರೆ, ಅನುಭಾವಕ್ಕೂ ಶುದ್ಧ ದರ್ಶನ ಹಾಗೂ ಸಂಗಮವೆಂಬ ತಾತ್ವಿಕ ಮಾರ್ಗಗಳು ಏಣಿಗಳಾಗಿವೆ. ಶರಣರ ಐಕ್ಯದ ಪರಿಕಲ್ಪನೆ ಇಲ್ಲಿರುವ ಸಂಗಮಕ್ಕೆ ಭಿನ್ನವಿಲ್ಲ (ಐಕ್ಯದಲ್ಲಿ ಸಂಗಮ, ಸಂಗಮದಲ್ಲಿ ಐಕ್ಯ). ಈ ಷಟಸ್ಥಲವು ದೇಹದ ಷಟ್‌ಚಕ್ರಗಳನ್ನು ಆಧರಿಸಿರುತ್ತದೆ. ಅಂದರೆ ''ಶಿವಯೋಗಿಗಳು ಸಂಪೂರ್ಣವಾಗಿ ಆತ್ಮಶುದ್ಧಿಯ ನೆಲೆಯಲ್ಲಿ ಇರುವವರು. ಅವರು ಷಟ್‌ಚಕ್ರಗಳ ಅನುಸಂಧಾನದ ಮುಖೇನ ಕುಂಡಲಿನಿ ಶಕ್ತಿಯನ್ನು ಮೇಲ್ಮುಖಿಯನ್ನಾಗಿಸಿ, ಇಡಾ-ಪಿಂಗಳ ನಾಡಿಗಳನ್ನು ನಿರೋಧಿಸಿ, ಪ್ರಾಣವಾಯು ಸುಷುಮ್ನೆಯ ಮೂಲಕ ಸಂಚರಿಸುವಂತೆ ಸಹಸ್ರಾರವು ಅರಳಿ ಶಿವ ಕಾರುಣ್ಯದ ಸುರಿಮಳೆಯಾಗುವ ಸಿದ್ಧಿ ಪಡೆದು, ಶಿವ-ಶಕ್ತಿಯರ ಐಕ್ಯದಲ್ಲಿ ಲಿಂಗಾಂಗ ಸಾಮರಸ್ಯದ ಮಹಾತೃಪ್ತಿ ಪಡೆಯುವಂಥವರು'' [54]

ಸದಾ ಇವರು ಇಡೀ ವಿಶ್ವಶಕ್ತಿ (Cosmic energy) ಯೊಂದಿಗೆ ಇರುವ ಶಿವಾನುಭವಿಗಳು ಲಿಂಗಾಂಗ ಸಾಮರಸ್ಯದಲ್ಲಿರುವರು. ಆದ್ದರಿಂದ ಅನುಭಾವಿಯ ಮಾರ್ಗಗಳು, ಷಟಸ್ಥಲ ಹಾಗೂ ಷಟ್‌ಚಕ್ರಗಳಲ್ಲಿ ಸಾಮ್ಯತೆಗಳಿರುವುದರಿಂದ ಅವೆಲ್ಲವನ್ನು ಹೀಗೆ ಸಮೀಕರಿಸಬಹುದು.

ಅನುಭಾವ ಮಾರ್ಗ	**ಷಟಸ್ಥಲ**		**ಷಟ್‌ಚಕ್ರ**
೧. ಶೋಧನೆ (Purgation)	ಭಕ್ತಸ್ಥಲ, ಮಹೇಶ	> ಆಚಾರ	ಆಧಾರಚಕ್ರ, ಸ್ವಾದೀಷ್ಠ
೨. ದರ್ಶನ (Illumination)	ಪ್ರಸಾದಿ, ಪ್ರಾಣಲಿಂಗ	> ವಿಚಾರ	ಮಣಿಪೂರ, ಅನಾಹತ
೩. ಸಂಗಮ (Union)	ಶರಣ, ಐಕ್ಯ	> ಅನುಭಾವ	ಅಶುದ್ಧಿ, ಅಜ್ಞಾ

ಈ ಅನುಭಾವ ಮಾರ್ಗವನ್ನು ಚೆನ್ನಬಸವಣ್ಣ ಸಮರ್ಪಕವಾದ ರೀತಿಯಲ್ಲಿ ವಿವರ ನೀಡುತ್ತಾನೆ.

''ಆಯತ ಲಿಂಗದಲ್ಲಿ ಆಚಾರವರಿತು
ಸ್ವಾಯತ ಲಿಂಗದಲ್ಲಿ ವಿಚಾರವರಿತು

ಸನ್ನಿಹಿತ ಲಿಂಗದಲ್ಲಿ ಅನುಭಾವವರಿತು
ಈ ತ್ರಿವಿಧದಲ್ಲಿ ತ್ರಿವಿಧವರಿತಡೆ
'ಒಂದಲ್ಲದ ಎರಡುಂಟೆ' ಕೂಡಲಚೆನ್ನಸಂಗಾ ನಿಮ್ಮಲ್ಲಿ'' [55]

ಇಲ್ಲಿ ಅನುಭಾವ ಮಾರ್ಗವು ಆಚಾರ-ವಿಚಾರಗಳ ಮೂಲಕ ಬರುವ ಅನುಭಾವ. ಅದು ಜೀವಕ್ಕೂ ಆಧಾರ, ಬಾಳಿಗೂ ಆಧಾರ. ವೇದಕಾಲದಿಂದ ಶರಣರವರೆಗಿನ ಅನುಭಾವಕ್ಕೂ, ಶರಣರ ಅನುಭಾವಕ್ಕೂ ಇರುವ ವ್ಯತ್ಯಾಸವೇ ಇದು. ಇಲ್ಲಿ ಶರಣ ಒಡೆದು ಕಾಣಿಸುತ್ತಾನೆ. ಶೋಧ ದರ್ಶನ ಹಾಗೂ ಸಂಗಮಗಳಲ್ಲಿ ಬದುಕನ್ನು ಅರಿತು ಅದರಿಂದ ವಿರಕ್ತಿಗೊಂಡು ಹೊರಟರೆ, ಶರಣರು ಬದುಕನ್ನು ಅರಿತು ಅದರೊಳಗೆ ಬೆರೆತು ಬದುಕನ್ನು ಸಾಗಿಸುವ ಲೌಕಿಕ - ಅಲೌಕಿಕ ಬದುಕೆರಡನ್ನು ಸ್ವೀಕರಿಸಿದ ರೀತಿ ಅನನ್ಯವಾದದ್ದು. ಏಕೆಂದರೆ ಅನುಭಾವವೆನ್ನುವುದು ಕೇವಲ ಹೊರಗಿನ ಕಾಟಾಚಾರ ದ್ದಲ್ಲ, ಅದು ಅರಿವಿನೊಳಗಣ ಅರಿವಾಗಿ ವ್ಯಕ್ತಿ ಕುಟುಂಬ, ಸಮಾಜ, ರಾಷ್ಟ್ರ ಎಂಬುದರಿಂದ ಹಿಡಿದು ವಿಶ್ವವೆಲ್ಲ ತನ್ನದಾಗಿಸಿಕೊಳ್ಳುವ ಹೊಸ ಹೊಸ ಆವರ್ತಗಳ ನೆಲೆಯಲ್ಲಿ ಪ್ರಕಟಗೊಳ್ಳುವುದೇ ಶರಣರ ಅನುಭಾವ ಲಿಂಗಾಂಗ ಸಾಮರಸ್ಯವಾಗಿದ್ದು. ಅದನ್ನು ಷಟಸ್ಥಲಗಳ ನೆಲೆಯಲ್ಲಿ ಹುಡುಕುವುದಾದರೆ "ಭಕ್ತ ಸ್ಥಲ ಶರಣನ ಸಾಧನೆಯ ಆರಂಭದ ನೆಲೆ, ಇಲ್ಲಿ ಮನಶ್ಶುದ್ಧಿಗೆ ಕಾರಣವಾಗುತ್ತದೆ. ಮಹೇಶಸ್ಥಲ ಜ್ಞಾನಾಸಕ್ತಿಯಾಗಿ ಶಿವನತ್ತ ನಿರಂತರ ತುಡಿಯುತ್ತಿರುತ್ತದೆ. ಪ್ರಸಾದಿ ಸ್ಥಲಕ್ಕೆ ಒಲಿದ ಶರಣನ ಮನಸ್ಸು ಕೇವಲ ಧ್ಯಾನ ರೂಪ ಆನಂದದಲ್ಲಿ ಮುಳುಗುತ್ತದೆ. ಪ್ರಾಣಲಿಂಗಿ ಸ್ಥಲದಲ್ಲಿ ನೆಲೆನಿಲ್ಲುವ ಶರಣನು ಬೆಳಕಿನ ಆಸ್ವಾದನೆಯ ಅನುಭಾವದಲ್ಲಿ ಧ್ಯಾನಸ್ಥ ನಾಗುತ್ತಾನೆ. ಜಗತ್ತಿನ ಅನುಭಾವಿಗಳು ಈ ಸ್ಥರವನ್ನು *"Enlightenment"* ಎಂದು ಕರೆದಿದ್ದಾರೆ. ಇನ್ನು ಮುಂದಿನ ಶರಣ ಐಕ್ಯಸ್ಥಲಗಳು ಆನಂದಭಕ್ತಿ ಸಮರಸಭಕ್ತಿಗೆ ಸರಿಯಾದ ನಿರ್ವಚನವನ್ನು ಮಾಡುತ್ತಾರೆ.[56] ಸಾಧಕ (ಭಕ್ತ)ನು ಶಿವನೊಂದಿಗಿನ ಸಮರಸ ಪ್ರೀತಿಯೇ ಲಿಂಗಾಂಗ ಸಾಮರಸ್ಯವೆನ್ನುವುದಕ್ಕೆ ಸಕಲೇಶ ಮಾದರಸನ ಮಾತುಗಳು ಉತ್ತಮ ನಿದರ್ಶನಗಳಾಗಿವೆ.

''ಜ್ಯೋತಿ ಸೋಂಕಿದ ಬತ್ತಿಯೆಲ್ಲ ಜ್ಯೋತಿಯಪ್ಪವಯ್ಯಾ
ಸಾಗರ ಮುಟ್ಟಿದ ನದಿಗಳೆಲ್ಲ ಸಾಗರವಪ್ಪುವಯ್ಯ
ಪ್ರಸಾದವ ಮುಟ್ಟಿದ ಪದಾರ್ಥಂಗಳೆಲ್ಲ ಪ್ರಸಾದವಪ್ಪುವಯ್ಯಾ
ಲಿಂಗವ ಮುಟ್ಟಿದ ಅಂಗವೆಲ್ಲ ಲಿಂಗಾಂಗವಪ್ಪುವಯ್ಯ
ಸಕಲೇಶ್ವರದೇವಯ್ಯ ನಿಮ್ಮ ಮುಟ್ಟಿದವರೆಲ್ಲ ನಿಮ್ಮಂತೆ ಅಪ್ಪರಯ್ಯ'' [57]

ಹೀಗೆ ಲಿಂಗಾಂಗ ಸಾಮರಸ್ಯದ ಬಗೆಯನ್ನು ವಿವರಿಸಿದ ಸಕಲೇಶ ಮಾದರಸನ ನಿಲುವು ಅನುಭಾವ ಮಂಟಪದ ಎಲ್ಲ ಸದಸ್ಯರ ನಿಲುವಾಗಿರುವುದರಿಂದ ಅಲ್ಲಿರುವ

ವರೆಲ್ಲ ಮುಕ್ತಾತ್ಮ ಜೀವಿಗಳಾಗಿ ಅಮರಗಣಂಗಳಾದರು. ಅಂತೆಯೇ ಅವರ ಬದುಕು-ಬರಹಗಳಲ್ಲಿ ಬೆರಗಿನ ಬೆಳಗಿದೆ. ಆನಂದದ ಆನಂದವಿದೆ. ಅರಿವಿನೊಳಗಿನ ಅರಿವಿದೆ. ಅದನ್ನೇ ನಾವು *Conscious of Consciousness* ಎಂದೂ ಕರೆಯಬಹುದು. ಇದೇ ಮುಂದೆ ಪೂರ್ಣವನ್ನು ಅರಿತು ಪೂರ್ಣದಲ್ಲಿ ಐಕ್ಯಗೊಳ್ಳುವುದಕ್ಕೆ ಈ ಮೇಲಿನ ಮಾತಿನ ಮೂಲಕ ಸಮರ್ಥನೆ ನೀಡಬಹುದು. ಹೀಗೆ ಅನುಭಾವ ಮಂಟಪದ ಶರಣರ ಅನುಭಾವವು ಒಂದೇ ಅರ್ಥಛಾಯೆಯಲ್ಲಿ ಸ್ಥಾವರವಾಗದೇ ಹಲವಾರು ಅರ್ಥಗಳ ಆವರ್ತಗಳನ್ನು ಅನಾವರಣಗೊಳಿಸುವ ಜೀವಂತ ಪ್ರಕ್ರಿಯೆಯಾಗಿ ತತ್ವ ಹಾಗೂ ಪ್ರಯೋಗಗಳೆರಡರ ಸಮೀಕರಣವನ್ನು ಒಳಗೊಂಡಿದೆ. ಬಹುಶಃ ಜಗತ್ತಿನ ಯಾವುದೇ ಅಧ್ಯಾತ್ಮಿಕ ವಲಯ ಸಾಧಿಸದ ಉನ್ನತಿಯನ್ನು ಶಿವಶರಣರ ಅನುಭಾವ ಸಾಧಿಸಿದ್ದು ಈವರೆಗಿನ ಚರ್ಚೆಯ ಮೂಲಕ ದೃಢಪಡಿಸಬಹುದಾಗಿದೆ.

ಯಾರು, ಅನುಭಾವಿ ಅಲ್ಲ :

ಅನುಭಾವವೆಂಬುದು ಒಂದು ಅಮೂರ್ತವಾದ ಆನಂದ. ಸತ್ಯದ ಸಾಕ್ಷಾತ್ಕಾರವಾಗಿದ್ದು, ಅದೊಂದು ಸೃಷ್ಟಿಯ ಮೂಲ ಸತ್ಯದೊಂದಿಗಿನ ಅರಿವಿನೊಂದಿಗೆ ಜೀವಜಗತ್ತಿನ ಊರ್ಧ್ವಮುಖ ಬೆಳವಣಿಗೆಯ ಚಿಂತನಕ್ರಮವಾಗಿದೆ. ಅಂಥ ಅನುಭಾವವು ಅಂತರಂಗದ ರತ್ನವಾಗಿ ಶರಣರಲ್ಲಿ ಪ್ರಕಟಗೊಳ್ಳುವಾಗ ಅನುಭಾವಿಯಾದವನು ಶುದ್ಧನಾಗಿರಬೇಕು, ಪ್ರಾಮಾಣಿಕನಾಗಿರಬೇಕು, ಮೊದಲಾದ ನಿಯಮಗಳು ರೂಪಿತವಾಗುವ ಹಿನ್ನೆಲೆಯಲ್ಲಿ ಅನುಭಾವವೆಂಬುದು ಸತ್-ಚಿತ್-ಆನಂದದೊಂದಿಗಿನ ಸಂವಾದ, ನೇರ ನಡೆ-ನುಡಿಯಾಗಿ ಶಾಶ್ವತ ಮೌಲ್ಯಗಳನ್ನು ಶೋಭಿಸುವ ಜೀವನ ಧರ್ಮವಾಗಿದೆ. ಅದಕ್ಕಾಗಿ ಅನುಭಾವ ಸಂತೆಯ ಸುದ್ದಿ ರಚ್ಚೆಯ ಮಾತಲ್ಲವೆಂಬ ಚೆನ್ನಬಸವಣ್ಣನು ನಿಜವಾದ ಅನುಭಾವ ಕುರಿತು ಚರ್ಚಿಸುತ್ತ, ಯಾರು ಅನುಭಾವಿ ಅಲ್ಲ ಎಂಬುದನ್ನು ಅತ್ಯಂತ ಸೂಕ್ಷ್ಮವಾಗಿ ಮತ್ತು ದೀರ್ಘವಾಗಿ ವಿವೇಚಿಸಿದ್ದಾನೆ.

''ವಚನರಚನೆಯ ಅನುಭಾವವ ಬಲ್ಲೆವೆಂದೆಂಬರು
ವಚನವಾವುದು ರಚನೆಯಾವುದು ಅನುಭಾವವಾವುದು ಹೇಳಿರಣ್ಣ ?
ವಚನ ; ಆತ್ಮ ತುಷ್ಟಿಯನರಿವುದು
ರಚನೆ ; ಸ್ಥಾವರ ಲಿಂಗ ಜಂಗಮ ತ್ರಿವಿಧದಲ್ಲಿ ಕಾಣಬಲ್ಲರೆ
ಅನುಭಾವ ; ಕಾಮದಿಚ್ಛೆಗೆ ಹರಿದು ಕಾಮಿಯಾಗದಿರಬೇಕು

ಕ್ರೋಧದಿಚ್ಛೆಗೆ ಹರಿದು ಕ್ರೋಧಿಯಾಗದಿರಬೇಕು
ಮದ ಮಚ್ಚರದಿಚ್ಛೆಗೆ ಹರಿದು ಮದ ಮಚ್ಚರವಿಲ್ಲದಿರಬೇಕು
ಆಶೆಯಾಮಿಷ ಹರುಷದಿಚ್ಛೆಗೆ ಹರಿದು ಯಾಚಕನಾಗದಿರಬೇಕು.
ಕಾಮ ಕ್ರೋಧ ಲೋಭ ಮೋಹ ಮದ ಮಚ್ಚರ ಆಶೆಯಾಮಿಷ
ರೋಷಾದಿಗಳಂ ಹರಿವೊದೆದು
ಏಕೋಗ್ರಾಹಿಯಾಗಿ ನಿಂದಲ್ಲೆ ಅನುಭಾವಿ
ನಾಲ್ಕು ವೇದಶಾಸ್ತ್ರಂಗಳ ಬಲ್ಲೆವೆಂದು ನುಡಿವಾತನನುಭಾವಿಯೇ ? ಅಲ್ಲ
ಅವು ಬ್ರಹ್ಮನೆಂಜಲು, ಇವ ಬಲ್ಲೆನೆಂದು ನುಡಿವಾತನನುಭಾವಿಯೇ ? ಅಲ್ಲ
ಆತನು ಇದಿರ ನಂಬಿಸಿ ಎಂಬ ಭುಂಜಕನಯ್ಯಾ
ಕೂಡಲಚೆನ್ನ ಸಂಗಮದೇವಾ'' [58]

ಇಲ್ಲಿ ವಚನ ರಚನೆ ಮತ್ತು ಅನುಭಾವವನ್ನು ಕುರಿತು ಸ್ಪಷ್ಟೀಕರಣಗಳಿವೆ. ಅರಿಷಡ್ವರ್ಗಗಳನ್ನು ಮೀರಿ ಮೆಟ್ಟಿ ನಿಂತು ರೋಷ ಆಶೆಯೂ ವಿಷಯಗಳ ಹಂಗನ್ನು ಹರಿದು, ಅಹಂಕಾರವಳಿದಿರಬೇಕು. ವೇದಶಾಸ್ತ್ರಗಳ ಅರಿತೆನೆಂಬುದು ಅನುಭಾವವಲ್ಲ, ಅವೆಲ್ಲ ಬ್ರಹ್ಮನೆಂಜಲು ಎಂದು ಲೇವಡಿ ಮಾಡುವ ಮೂಲಕ ಅನುಭಾವಿಯಾದವನು ಅನುಭಾವ ಪಡೆಯಲು ಚಿರಂತನ ಸತ್ಯ ಕುರಿತ ಸಾತ್ವಿಕ, ವಾಸ್ತವ ಬದುಕು ಮುಖ್ಯವೆಂಬುದು ಇಲ್ಲಿ ನಿರೂಪಿತವಾಗಿದೆ.

ಅನುಭಾವದ ಮಹತ್ವ:

ಅಧ್ಯಾತ್ಮಿಕ ಚರಿತ್ರೆಯಲ್ಲಿ ಅನುಭಾವಕ್ಕಿರುವಷ್ಟು ಮಹತ್ವ ಬಹುಶಃ ಬೇರೆ ಪರಿಕಲ್ಪನೆಗಳಿಗಿಲ್ಲ. ಅವರಲ್ಲಿ ಶರಣರನುಭಾವವೆಂದರೆ ಅದು ಎಲ್ಲವನ್ನು ಮೀರಿದ ಹೊಳಹು. ಇಲ್ಲಿ ಅನುಭಾವವೆಂದರೆ ಪರಮಾತ್ಮನ ಚೈತನ್ಯಾಂಶವಾಗಿದೆ. ಆ ಚೈತನ್ಯದ ಚಿತ್ಕಳೆಯೇ ಆಗಿದೆ. ಬೆಳಗಿನ ಬೆಳಗಾಗಿದ್ದು ಚೈತನ್ಯಾತ್ಮಕ ದಿವ್ಯಶಕ್ತಿ ಸಹ ಆಗಿದೆ. ಪರವಸ್ತುವಿನ ದಿವ್ಯಾಂಶವಾದ ಅನುಭಾವ ಸತ್, ಚಿತ್, ಆನಂದ ಮೀರಿದ ಪರಿಪೂರ್ಣ. ಹಾಗಾಗಿ ವೀರಶೈವ ಪರಿಕಲ್ಪನೆಯ ಎಲ್ಲ ತತ್ವಗಳಿಗಿಂತ ಅನುಭಾವತತ್ವ ಮುಖ್ಯವಾಗಿ ಮಹತ್ವದ್ದಾಗಿ ಕಾಣಿಸಿದೆ.

''ಅನಂತ ಕಾಲ ತರುಗಿರಿಗಳ ಹೊಕ್ಕು ತಪವ ಮಾಡುವುದರಿಂದ
ಒಂದು ದಿನ ಲಿಂಗಪೂಜೆ ಸಾಲದೆ

ಅನಂತಕಾಲ ಲಿಂಗಪೂಜೆಯ ಮಾಡುವುದರಿಂದ
ಒಂದು ದಿನ ಗುರು ಚರಣದ ಸೇವೆ ಸಾಲದೆ
ಅನಂತಕಾಲ ಗುರು ಚರಣ ಸೇವೆಯ ಮಾಡುವುದರಿಂದ
ಒಂದು ದಿನ ಜಂಗಮಕ್ಕೆ ತೃಪ್ತಿಯ ಮಾಡುವುದು ಸಾಲದೆ
ಅನಂತಕಾಲ ಜಂಗಮಕ್ಕೆ ತೃಪ್ತಿ ಮಾಡುವುದರಿಂದ
ಒಂದು ನಿಮಿಷ ಕೂಡಲ ಸಂಗಯ್ಯ
ನಿಮ್ಮ ಶರಣರನುಭಾವ ಸಾಲದೆ'' [59]

ಹೀಗೆ ಅನುಭಾವದ ಮಹತ್ವವನ್ನು ನಿರ್ವಚಿಸುವಲ್ಲಿ ಶರಣರು ಹುಟ್ಟುಹಾಕಿದ ಗುರು-ಲಿಂಗ-ಜಂಗಮಗಳ ಮೌಲ್ಯಗಳನ್ನು ಮತ್ತು ಅವುಗಳ ಸಂಬಂಧಿಯಾದ ಕಟ್ಟಳೆ ನಿಯಮಗಳನ್ನು ಅನುಭಾವದ ನೆಲೆಗೆ ಬಂದಾಗ ಅವೆಲ್ಲಗಳು ತಾವೇ ಮುರಿಯುವ ಮತ್ತು ಮೀರುವ ಮೂಲಕ ಅನುಭಾವ ಶ್ರೇಷ್ಠಮಟ್ಟದ ನಿಲುವಿಗೆ ಬರುವುದು. ಅನುಭಾವವೇ ಎಲ್ಲವನ್ನೂ ಒಳಗೊಂಡಿದೆ. ಗುರು-ಲಿಂಗ-ಜಂಗಮವ ಮೀರಿದ ತತ್ವ ಅನುಭಾವವೆಂಬುದನ್ನು ಹೇಳುತ್ತಲೇ ಅನುಭಾವದಲ್ಲಿ ಅವೆಲ್ಲ ಸಮಾವೇಶಗೊಳ್ಳುವುದು ಅತ್ಯಂತ ಸ್ಪಷ್ಟವಾಗಿ ನಿರೂಪಿತವಾಗಿದೆ.

ಹೀಗೆ ಅನುಭಾವವು ಅನುಭಾವ ಮಂಟಪದ ಕಮ್ಮಟ ಶಾಲೆಯಲ್ಲಿ ಪೂರ್ಣತ್ವದ ಪರಿಪೂರ್ಣತೆ ಪಡೆದಿರುವುದು ಕೇವಲವಾಗದೆ, ತಾತ್ವಿಕ ಹಾಗೂ ಪ್ರಾಮಾಣಿಕ ನೆಲೆಯಲ್ಲಿ ವ್ಯಷ್ಟಿ-ಸಮಷ್ಟಿ, ಜೀವ-ಜಗತ್ತಿನ ಬಗ್ಗೆ ತಳೆದ ಪ್ರೀತಿ-ಶಾಂತಿಯ ನೆಲೆಗಳು ಶರಣರ ಅನುಭಾವ ಕಟ್ಟಿಕೊಡುತ್ತದೆ. ಇಲ್ಲಿ ಧ್ಯಾನವಿದೆ, ಯೋಗವಿದೆ. ಆತ್ಮಸಾಕ್ಷಾತ್ಕಾರದೊಂದಿಗೆ ಚೈತನ್ಯದ ಸಾಕ್ಷಾತ್ಕಾರವು ಸೇರಿ, ಶಾಶ್ವತ ಮೌಲ್ಯವಾಗಿರುವುದೇ ಅನುಭಾವ ಮಂಟಪದ ಶರಣರ ಅನುಭಾವದ ಮಹತ್ವವಾಗಿದೆ.

****

೧.೫. ಅನುಭಾವ ಮಂಟಪ : ಅಸ್ತಿತ್ವದ ನೆಲೆಗಳು

ಸಂಘಟನೆಯೆನ್ನುವುದು ಮನುಷ್ಯ ಸಮಾಜವನ್ನು ರೂಪಿಸಿಕೊಂಡಂದಿನಿಂದ ಮುಖ್ಯ ಪ್ರಕ್ರಿಯೆಯಾಗಿ ನಡೆದುಕೊಂಡು ಬಂದಿದೆ. ಈ ಸಂಘಟನೆಯು ಚರಿತ್ರೆ ಯುದ್ದಕ್ಕೂ ಅದರ ಮುಖ್ಯ ಆಶಯಗಳು ಮಾನವೀಯತೆಯನ್ನು ಬೆಳೆಸುವುದು, ಜಗತ್ತನ್ನು ಪ್ರೀತಿ-ಶಾಂತಿ-ನೆಮ್ಮದಿಯ ನೆಲೆಯಲ್ಲಿಡುವುದೇ ಆಗಿದೆ. ಇದಕ್ಕೆ ಭಾರತೀಯ ಸಂಘಟನೆಗಳೂ ಹೊರತಾಗಿಲ್ಲ, ಅವರಲ್ಲಿ ಅಧ್ಯಾತ್ಮಿಕ ಸಂಘಟನೆಗಳು ಧಾರ್ಮಿಕತೆಯ ವೇದಿಕೆಯಾಗಿ ಬೆಳೆದಿದ್ದು ಆ ಮೂಲಕ ಮನುಕುಲದ ಏಳಿಗೆಗಾಗಿ ನಡೆಸಿದ್ದ ಹೋರಾಟ ಅನನ್ಯವಾಗಿದೆ. ಮಾನವನಲ್ಲಿ ವಿಚಾರವಂತಿಕೆ ಬೆಳೆದಂತೆಲ್ಲ ಚಿಂತನಪರವಾದ ಜಿಜ್ಞಾಸೆಗಳು ಹುಟ್ಟಿಕೊಳ್ಳುತ್ತಲೇ ಇರುತ್ತವೆ. ಇದರಿಂದ ಹೊಸ ಹೊಸ ಬದುಕಿನ ಇರುವಿಕೆಗಳು ಆವಿಷ್ಕಾರಗೊಳ್ಳುತ್ತವೆ. ಇದನ್ನೇ 'ಯುಗಪರ್ವ' ವೆಂದು ಕರೆಯುತ್ತೇವೆ. ಅಂತಹ ಯುಗಪರ್ವವೆಂದರೆ, ೧೨ನೆಯ ಶತಮಾನದ ಬಸವಾದಿ ಶರಣರ ಸಂಘಟನೆಯ ಫಲಶ್ರುತಿ ಅನುಭಾವ ಮಂಟಪ.

ಬಸವಾದಿ ಶರಣರು ಸಮಾಜೋ-ಧಾರ್ಮಿಕ ಬದುಕಿನ ಸ್ಥಿತ್ಯಂತರಕ್ಕಾಗಿ ರೂಪಿಸಿದ ಸಂಘಟನೆ ಮುಖ್ಯವಾಗಿ ಅಂತರಂಗ-ಬಹಿರಂಗದ ಶುದ್ಧೀಕರಣ ನೆಲೆ ಯಿಂದ ರೂಪಿತವಾದ್ದರಿಂದ ಅದೊಂದು ವಿಶಿಷ್ಟ ಪಾರಿಭಾಷಿಕ ಪದದ ಮೂಲಕ ಕರೆಸಿಕೊಂಡಿದೆ. ಅದೇ 'ಅನುಭಾವ ಮಂಟಪ'. ಈ ಅನುಭಾವ ಮಂಟಪವು ವ್ಯಷ್ಟಿ ಯೊಂದಿಗೆ ಸಮಷ್ಟಿಯ ವಿಕಾಸ, ಆತ್ಮೋನ್ನತಿಯೊಂದಿಗೆ ಸಮಾಜೋನ್ನತಿಯ ಮುಖ್ಯ ಆಶಯ ಹೊತ್ತು ರಚನೆಯಾದ ಒಂದು ಮಹತ್ವದ ಸಂಸ್ಥೆ.

ಈ ಅನುಭಾವ ಮಂಟಪವು ಸಾವಿರಾರು ಜನ ಸದಸ್ಯರನ್ನು (ಶರಣ) ಹೊಂದಿದ್ದು ಇದಕ್ಕೂ ಒಬ್ಬ ಅಧ್ಯಕ್ಷ (ಅಲ್ಲಮ) ಅವನಿಗೊಂದು ಪೀಠ (ಶೂನ್ಯ ಸಿಂಹಾಸನ)ವೂ ಇತ್ತು. ಅಲ್ಲಿ ಚರ್ಚಾಗೋಷ್ಠಿಗಳು ನಡೆಯುತ್ತಿದ್ದವು. ಈ ಚರ್ಚೆ ಯಲ್ಲಿ ಸೃಷ್ಟಿಯ ಮೂಲ 'ಸತ್ಯ'ದಿಂದ ಹಿಡಿದು ತಮ್ಮ ತಮ್ಮ ಬದುಕಿನ ವಿವಿಧ ಆಯಾಮಗಳನ್ನು ಚರ್ಚಿಸುತ್ತಿದ್ದರು. ವೇದ, ಆಗಮ, ಉಪನಿಷತ್ತು, ಗೀತೆ, ಯೋಗ, ಸಾಂಖ್ಯ, ದರ್ಶನ ಮೊದಲಾದವನ್ನು ಕುರಿತ ವಿಚಾರ ವಿನಿಮಯ ಹಾಗೂ ಅಧ್ಯಾತ್ಮ, ಭಕ್ತಿ ಆರಾಧನೆ, ಅರ್ಚನೆ, ಅರ್ಪಣೆ, ಅನುಭಾವ ಮೊದಲಾದ ವಿಷಯಗಳ

ಮಂಥನ ನಡೆಯುತ್ತಿತ್ತು. ಶ್ರೇಣೀಕೃತ ಸಮಾಜ ಹುಟ್ಟು ಹಾಕಿದ ವರ್ಗ, ವರ್ಣ, ಲಿಂಗ, ಜಾತಿ, ಭಾಷೆ-ಭೇದಭಾವಗಳನ್ನು ಮರೆತು, ಎಲ್ಲರೂ ಒಂದೇ ವೇದಿಕೆಯಲ್ಲಿ ಒಂದೇ ಮನಸ್ಸಿನಿಂದ ಸೇರಿ ಅನುಭಾವ ಮಂಟಪ ಸಾಮೂಹಿಕ ಸಾಮರಸ್ಯಕ್ಕೆ ನಾಂದಿ ಹಾಡಿದ್ದು ಚಾರಿತ್ರಿಕ ಸತ್ಯವಾಗಿದೆ.

೧.೫.೧. ಅನುಭಾವಮಂಟಪದ ಹಿನ್ನೆಲೆ :

ಅನುಭಾವ ಮಂಟಪವು ೧೨ನೆಯ ಶತಮಾನದ ಶಿವಶರಣರ ಕೊಡುಗೆ. ಅಧ್ಯಾತ್ಮಿಕ ಚರಿತ್ರೆಯಲ್ಲಿ ಇಂಥ ಕೆಲವು ಸಂಘಟನೆಗಳು ಇದ್ದದ್ದು ಕಂಡು ಬರುತ್ತದೆ. ಪಾಶ್ಚಾತ್ಯರಲ್ಲಿ ತತ್ವಜ್ಞಾನದ ತವರೂರಾದ ಗ್ರೀಕ್ ಮೂಲದ ಸಾಕ್ರೆಟಿಸ್‌ನ ನಿತ್ಯಸತ್ಯದ ಚರ್ಚೆಗಳು, ಪ್ಲೇಟೋ ಅಕಾಡೆಮಿ ಇವೆ. ಭಾರತೀಯರಲ್ಲಿ ಬೌದ್ಧಸಂಘಗಳು, ಜೈನರ ಸಮವಸರಣಮಂಟಪ, ಸಂಗಮ ಸಾಹಿತ್ಯ ಮೊದಲಾದವುಗಳು ಅನುಭಾವ ಮಂಟಪದ ಮಾದರಿಯಲ್ಲಿ ಸಂಘಟಿತವಾಗಿ ಕೆಲಸ ಮಾಡಿವೆ. ಇವುಗಳನ್ನು ವಿವರವಾಗಿ ''ಅನುಭಾವ ಮಂಟಪ ತೌಲನಿಕತೆ'' ಎಂಬ ಭಾಗದಲ್ಲಿ ಚರ್ಚಿಸಲಾಗಿದೆ.

ವಚನಕಾರರ ಪೂರ್ವದಲ್ಲಿದ್ದ ಪೆರ್ಮಾಡಿಯಲ್ಲಿ (೬ನೆ ವಿಕ್ರಮಾದಿತ್ಯನ ಕಾಲಕ್ಕೆ) ಮಂತ್ರಿಯಾಗಿದ್ದ ಕೊಂಡಗುಳಿ ಕೇಶಿರಾಜನು ಅನುಭಾವ ಗೋಷ್ಠಿಗಳನ್ನು ನಡೆಸುತ್ತಿರುವುದಾಗಿ ಅವನ ಕೃತಿಗಳೇ ಸ್ಪಷ್ಟಪಡಿಸುತ್ತವೆ.

ಇಂಥ ಮಹತ್ವದ ಅನುಭಾವ ಮಂಟಪ ಕುರಿತು ೨೦ನೆ ಶತಮಾನದಲ್ಲಿ ದಿಢೀರನೆ ಅನುಮಾನಗಳು ಊಹೆಗಳು ಎದ್ದವು. ಆಸ್ತಿಕ-ನಾಸ್ತಿಕವಾದಗಳ ನೆಲೆಯಲ್ಲಿ ಚರ್ಚೆಗಳು ಉದ್ಭವವಾಗುತ್ತವೆಯೆಂಬುದೇ ಇತಿಹಾಸ ಕಟ್ಟಿಕೊಡುವ ದುರಂತ. ಅನುಭಾವಮಂಟಪದ ಅಸ್ತಿತ್ವ ಕುರಿತು ಪರ-ವಿರೋಧ ಎರಡೂ ಚರ್ಚೆಗಳು ತುಂಬಾ ಗಂಭೀರವಾಗಿ ನಡೆದಿವೆ. ಆ ಎರಡೂ ವಾದಗಳು ಇಲ್ಲಿ ಮುಖ್ಯವಾಗುತ್ತವೆ.

೧.೫.೨. ಅನುಭಾವ ಮಂಪಟ - ನಾಸ್ತಿಕವಾದ :

ಅನುಭಾವ ಮಂಟಪ ಕುರಿತು ಮೊಟ್ಟ ಮೊದಲು ನಾಸ್ತಿಕವಾದವನ್ನು ಮಂಡಿಸಿದವರೆಂದರೆ ಕಪಟರಾಳ ಕೃಷ್ಣರಾಯರು. ಅನುಭಾವ ಮಂಟಪವೆಂಬುದು ಕೇವಲ ಕವಿ ಕಾಲ್ಪನಿಕವೇ ಹೊರತು ವಾಸ್ತವವಲ್ಲ ಎಂಬ ಅವರ ವಾದ ಈ ರೀತಿ ಇದೆ: ''ವೀರಶೈವ ಕವಿಗಳು ಪ್ರಾಚೀನ ಚರಿತ್ರೆಯನ್ನು ಬರೆಯಲು ಹೊರಟ ಕವಿಗಳು, ಇಂಥ (ಅನುಭಾವಮಂಟಪದಂಥ) ಸಂಸ್ಥೆಯೊಂದು ಆ ಕಾಲದಲ್ಲಿ ಇದ್ದುದಾದರೆ ಎಲ್ಲವನ್ನೂ ವರ್ಣಿಸುವ ಈ ಪ್ರಾಚೀನ ಗ್ರಂಥಕಾರರು ಅದನ್ನು ಹೇಳದೆ ಇರುತ್ತಿರಲಿಲ್ಲ. ಇದರ ಮೇಲಿಂದ ಇವರ ಕಾಲದಲ್ಲಿ ಶಿವಾನುಭವಮಂಟಪದ ಕಲ್ಪನೆಯೂ ಸಹ

ಜನರಲ್ಲಿ ಇದ್ದಿರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಸು. ಕ್ರಿ. ಶ. ೧೮ನೆ ಶತಮಾನದವರೆಗೆ ವಿದ್ಯಾವಂತರಾದ ಚರಿತ್ರೆಕಾರರಿಗೆ ಈ ಸಂಗತಿ ಹೊಳೆದಿರಲಿಲ್ಲ. ಇದರಿಂದ ಇಂತಹ ಸಂಸ್ಥೆಯೊಂದು ಇತ್ತೆಂದು ನಂಬುವಂತಿಲ್ಲ. ಇತ್ತೆಂದು ನಂಬುವುದಾದರೆ ಐತಿಹಾಸಿಕ ಪ್ರಮಾಣಗಳ ವಿರುದ್ಧವಾದ ಮಾತಾಗುವುದು.... ಓಲೆಶಾಂತರಸನ (ಲಿಪಿಕಾರರ ಮೇಲಾಧಿಕಾರಿ) ವಿಚಾರವೂ ತರ್ಕಶುದ್ಧಿ ಚರಿತ್ರೆ ಆಗಲಾರದು... ಈ ತರದ ಅರ್ಥ ಮಾಡುವುದು ಧಾರ್ಮಿಕ ಸಂಪ್ರದಾಯಕ್ಕೂ ಸಮನ್ವಯಿಸುವುದಿಲ್ಲ. ಐತಿಹಾಸಿಕವಂತೂ ಅಲ್ಲವೇ ಅಲ್ಲ. ಅನುಭವಮಂಟಪ ಅದರಲ್ಲಿಯ ಚರ್ಚೆ ಮುಂತಾದ ಸಂವಾದಾತ್ಮಕ ವಚನಗಳು ೧೫ನೆ ಶತಮಾನದ ಕವಿಯ ಕಲ್ಪನೆ. ಶಾಂತರಸನ ವಿಚಾರ ೨೦ನೆ ಶತಮಾನದ ಕವಿಯ ಕಲ್ಪನೆಗಳು. ಸಂಪ್ರದಾಯಕ್ಕೂ ಮೀರಿ ನಿಜವಾದ ಚರಿತ್ರೆ ಹೊಂದದೆ ಅಡ್ಡದಾರಿ ಬಿದ್ದಂತಾಗುವುದು''[60] ಎಂದು ಸುದೀರ್ಘವಾಗಿ ಕಪಟರಾಳ ಕೃಷ್ಣರಾಯರು ತಮ್ಮ ವಾದವನ್ನು ಮಂಡಿಸುತ್ತಾರೆ. ತಮ್ಮ ಈ ವಾದವನ್ನು ಪುಷ್ಟೀಕರಿಸಲು ಅನೇಕ ಕೃತಿಗಳನ್ನು ತಮ್ಮ ಸಮರ್ಥನೆಗೆ ಬಳಸಿಕೊಂಡಿದ್ದಾರೆ. ಅಲ್ಲಮ ಬಸವಕಲ್ಯಾಣಕ್ಕೆ ಬರುವುದನ್ನೇ ಅಲ್ಲಗಳೆಯುವ ರಾಯರು ಅಲ್ಲಮನ ಶೂನ್ಯ ಸಿಂಹಾಸನವೂ ಒಂದು ಕಾಲ್ಪನಿಕ. ಅದು ಕೇವಲ ೧೫ನೆ ಶತಮಾನದ ಕಾಲ್ಪನಿಕ ರಚನೆಯೆಂದು ಹೇಳುತ್ತಾರೆ. ಆದರೆ ವಾಸ್ತವವಾಗಿ, 'ಬಸವ ಕಲ್ಯಾಣ'ದಲ್ಲಿ ಅನುಭವ ಮಂಟಪವಿತ್ತು ಎನ್ನಲು ಸಾಕಷ್ಟು ಆಧಾರಗಳಿವೆ. ಕಪಟರಾಳ ಕೃಷ್ಣರಾಯರ ಈ ವಾದವನ್ನು ಎರಡು ನೆಲೆಗಳಲ್ಲಿ ನಿರಾಕರಿಸಬಹುದು. ಒಂದು ಅನುಭಾವಮಂಟಪದ ಕುರಿತು ಕಪಟರಾಳ ಅವರಿಗಿರುವ ಪೂರ್ವಾಗ್ರಹ, ಎರಡನೆಯದು ಕಪಟರಾಳರಿಗೆ ಉತ್ತಂಗಿಯವರೊಂದಿಗೆ ಇರುವ ವೈಯಕ್ತಿಕ (ತಾತ್ವಿಕ) ವೈಮನಸ್ಸು. ಹೀಗಾಗಿ ಈ ವಾದ-ಪ್ರತಿವಾದಗಳು ಕೇವಲ ಕಪಟರಾಳರ ಮತ್ತು ಉತ್ತಂಗಿಯವರ ಮಧ್ಯದಲ್ಲಿ ನಡೆದ ಚರ್ಚೆ-ತಾತ್ವಿಕ ವಿವಾದಗಳು ಸಾರ್ವತ್ರಿಕವಾಗಿವೆ.

ಕಪಟರಾಳರ ಅನುಭಾವ ಮಂಟಪ ಕುರಿತ ನಾಸ್ತಿಕ ವಾದಕ್ಕೆ ಇರುವ ಕಾರಣವೊಂದೇ-ವಚನ ಸಾಹಿತ್ಯದಲ್ಲಿ ಆ ಪದ ಬಳಕೆಯಾಗದ್ದು ಮತ್ತು ಸಮಕಾಲೀನ ಸಂದರ್ಭದಲ್ಲಿ ಬೇರೆ ಹರಿಹರಾದಿ ಕವಿಗಳು ಅನುಭಾವ ಮಂಟಪ ಕುರಿತು ಉಲ್ಲೇಖ ನೀಡದೇ ಇರುವುದು. ಆದರೆ ಈ ವಾದದಲ್ಲಿ ಹುರುಳಿಲ್ಲ.

೧.೫.೩. ಅನುಭಾವಮಂಟಪ - ಆಸ್ತಿಕವಾದ :

ಅನುಭಾವಮಂಟಪವೆಂಬ ಬೃಹತ್ ಸಂಸ್ಥೆ ೧೨ನೆ ಶತಮಾನದಲ್ಲಿ ಬಸವಾದಿ ಶರಣರ ಕಾಲಕ್ಕೆ ಕಾರ್ಯರೂಪದಲ್ಲಿತ್ತು. ಅದಕ್ಕೆ ಅನೇಕ ಆಧಾರಗಳನ್ನು ವಚನಗಳೇ ಒದಗಿಸಿಕೊಡುತ್ತವೆ. ನಂತರ ಬಂದ ವೀರಶೈವ ಕೃತಿಗಳು, ಶಾಸನಗಳು ಹಾಗೂ

ಜನಪದ ಕಾವ್ಯಗಳು ಆ ಕುರಿತು ಉಲ್ಲೇಖಿಸಿವೆ. ಬಸವಾದಿ ಶರಣರೆಲ್ಲಾ ಬಹುತೇಕ ವಚನಕಾರರು. ಅನುಭಾವ-ಅನುಭಾವಿಗಳ ಸಂಘ, ಅನುಭಾವ ಗೋಷ್ಠಿ, ಮಹಾ ಮನೆ ಮೊದಲಾದ ಪದ ಪ್ರಯೋಗಗಳು ಅನುಭಾವಮಂಟಪದ ಅಸ್ತಿತ್ವವನ್ನು ಸಮರ್ಥಿಸುತ್ತವೆ. ಬಸವಣ್ಣನೊಬ್ಬನ ವಚನದಲ್ಲಿ 'ಅನುಭಾವ'ವೆಂಬ ಪದ ಸುಮಾರು ೨೩ ವಚನಗಳಲ್ಲಿ ಬಳಕೆಯಾದರೆ, ಅನುಭಾವ ಲಿಂಗ, ಅನುಭಾವ ಸಂಗ ಎಂಬ ಪದ ಬಳಕೆಯ ಒಂದೊಂದು ವಚನಗಳಿವೆ. 'ಅನುಭಾವಿ' ಎಂಬ ಉಲ್ಲೇಖ ಸುಮಾರು ಮೂರು ವಚನಗಳು ರಚಿತವಾಗಿದ್ದು; ಅಲ್ಲಮ, ಅಕ್ಕಮಹಾದೇವಿ, ಚನ್ನಬಸವಣ್ಣ ಮೊದಲಾದವರು ಸಾದ್ಯಂತವಾಗಿ ಅನುಭಾವ ಪದ ಬಳಸಿರುವರು. (ವಿವರಗಳಿಗಾಗಿ 'ಶರಣರು-ಅನುಭಾವ' ಗಮನಿಸಬಹುದು). ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಅನುಭಾವಮಂಟಪದ ಅಸ್ತಿತ್ವವನ್ನು ಸಮರ್ಥಿಸಬಹುದಾಗಿದೆ. ಸಮರ್ಥ ಆಧಾರಗಳಿಲ್ಲವೆಂದು ಅನುಭಾವಮಂಟಪವನ್ನು ನಿರಾಕರಿಸುವುದು ಚರಿತ್ರೆಯನ್ನೇ ನಿರಾಕರಿಸಿದಂತೆ. ಬೌದ್ಧ ಸಂಸ್ಥೆಗಳನ್ನು, ಜೈನಧರ್ಮದ ಸಮವಸರಣ ಮಂಟಪವನ್ನು ಒಪ್ಪಿಕೊಳ್ಳುತ್ತೇವೆ. ಉಪನಿಷತ್ ಕಾಲದ ಗಾರ್ಗಿ, ಯಜ್ಞವಲ್ಕರ ಸಂವಾದ ಚರಿತೆಯನ್ನು ಒಪ್ಪಿಕೊಳ್ಳುತ್ತೇವೆ. ಹಾಗೆಯೇ ಅನುಭಾವಮಂಟಪವನ್ನು ಒಪ್ಪಿಕೊಳ್ಳಬೇಕು. ನೀಲಲೋಚನೆಯ ಒಂದು ಸಮಗ್ರ ವಚನವೇ ಅನುಭಾವ ಮಂಟಪದ ಮೇಲೆ ಬೆಳಕು ಚೆಲ್ಲುತ್ತದೆ. ಬಸವಣ್ಣ, ಚೆನ್ನಬಸವಣ್ಣ ಮತ್ತು ಅಲ್ಲಮ ಪ್ರಭುವಿನ ಕಾಲಜ್ಞಾನ ವಚನಗಳಲ್ಲಿ ಅನುಭಾವಮಂಟಪದ ಉಲ್ಲೇಖವಿದೆ. ಇದೆಲ್ಲವನ್ನು ನಿರಾಕರಿಸುವುದು ಸಾಧ್ಯವೇ?

೧.೫.೪. ವಚನಸಾಹಿತ್ಯ ಮತ್ತು ಅನುಭಾವಮಂಟಪ :

ಅನುಭಾವಮಂಟಪವೆಂಬ ಪೂರ್ಣಪದವು ಅನುಭಾವಮಂಟಪದ ರೂವಾರಿಯಾದ ಬಸವಣ್ಣನ ವಿಚಾರಪತ್ನಿಯಾದ ನೀಲಲೋಚನೆಯ ದೀರ್ಘ ವಚನವೊಂದರಲ್ಲಿ ಬಳಕೆಯಾಗಿದೆ. ಚಾರಿತ್ರಿಕವಾಗಿ ಈ ವಚನಕ್ಕೆ ಅತ್ಯಂತ ಮಹತ್ವದ ಸ್ಥಾನವಿದೆ.

''ಆದಿಯಾಧಾರವಿಲ್ಲದಂದು, ಕಳೆಮೊಳೆದೋರದಂದು
ಕಾಮನಿಃಕಾಮವಿಲ್ಲದಂದು, ವೀರವಿತರಣವಿಲ್ಲದಂದು,
ಯುಗಜಗವಿಲ್ಲದಂದು, ಪಿಂಡಾಂಡ ಬ್ರಹ್ಮಾಂಡವಿಲ್ಲದಂದು,
ಏನೂ ಏನೂ ಇಲ್ಲದಂದು, ಎಲ್ಲಾ ಮೂರ್ತಿಗಳು ನೆಲೆಗೊಳ್ಳದಂದು,
ಅಂದು ಏನೆಂದು ಅರಿಯದಿರ್ದ ನಮ್ಮ ಬಸವಯ್ಯನು,
ಒಂದು ಗುಣವನೊಂದು ಅಕ್ಷರಕ್ಕೆ ತಂದಾತ ನಮ್ಮ ಬಸವಯ್ಯನು

ಆ ಅಕ್ಷರವ ರೂಪ ಮಾಡಿ
ತ್ರಯಾಕ್ಷರದಲ್ಲಿ ಕಳೆಯ ಸಂಬಂಧಿಸಿದಾತ ನಮ್ಮ ಬಸವಯ್ಯನು
ಆ ಕಳೆಯ ಮೂರು ತೆರೆನ ಮಾಡಿ
ಪೃಥ್ವಿ ಅಪ್ಪು ತೇಜ ವಾಯು ಆಕಾಶ ಎಂಬ ಪಂಚತತ್ವವೆ ಪಂಚವದನವಾಗಿ
ಆ ಪಂಚವದನವೇ ಪಂಚೀಕೃತದನೆಯ್ದು
ಜಗದಾದಿ ಸೃಷ್ಟಿಯನು ಮಾಡುವುದಕ್ಕೆ ಕರ್ತನಾದ ನಮ್ಮ ಬಸವಯ್ಯನು
ಆ ಸೃಷ್ಟಿಯ ಮುಖವ ಕಂಡು ಸೃಜಿಸಲು ಪುಟ್ಟಿದರು ಪಂಚಶಕ್ತಿಯರು
ಆ ಪಂಚಶಕ್ತಿಯರಿಗೆ ಪಂಚಮೂರ್ತಿಯರ
ಕೈಗೊಳಿಸಿದಾತ ನಮ್ಮ ಬಸವಯ್ಯನು
ಆ ಪಂಚಮೂರ್ತಿಗಳಿಂದುತ್ಪತ್ಯವಾದ ಲೋಕವ ನೋಡಲೆಂದು,
ಕೈಲಾಸವನೆ ಕಲ್ಯಾಣವ ಮಾಡಿದಾತ ನಮ್ಮ ಬಸವಯ್ಯನು
ಆ ಕೈಲಾಸವೇ ಕಲ್ಯಾಣವಾಗಲಾ ಕಲ್ಯಾಣಕೆ
ಪ್ರಮಥ ಗಣಂಗಳ, ರುದ್ರಗಣಂಗಳ, ಅಮರಗಣಂಗಳ,
ಪುರಾತನಗಣಂಗಳ, ರುದ್ರಗಣಂಗಳ ಅಮರಗಣಂಗಳ,
ಪುರಾತನಗಣಂಗಳ, ಪುಣ್ಯಗಣಂಗಳ, ಮಹಾಗಣಂಗಳ,
ಮುಖ್ಯಗಣಂಗಳ, ಮಹಾಲಿಂಗೈಕ್ಯ ಸಂಪನ್ನರಂ,
ಭಕ್ತ ಮಾಹೇಶ್ವರ ಪ್ರಸಾದ ಪ್ರಾಣಲಿಂಗ ಶರಣ ಐಕ್ಯರೆಂಬ
ಆಚಾರಾದಿ ಮಹಾಲಿಂಗ ಸಂಪನ್ನರಂ
ಷಟಸ್ಥಲ ಪ್ರಸಾದ ಪ್ರಸನ್ನ ರೂಪರಂ
ಆದಿಮುಕ್ತರಂ, ಅನಾದಿಮುಕ್ತರಂ, ಅಜಾತರಂ ಅಪ್ರಮಾಣರಂ
ತ್ರಿವಿಧಲಿಂಗಾಂಗ ಮೂರ್ತಿಗಳಂ ಅರ್ಪಿತಸಂಯೋಗರಂ
ಆಗಮವಿದರಂ, ಅನಾದಿಪರಶಿವಮೂರ್ತಿಗಳಂ
ಏಕಲಿಂಗ ನಿಷ್ಠಾಪರರುಮಪ್ಪ ಮಹಾಪ್ರಮಥಗಣಂಗಳಂ
ತಂದು ನೆರಹಿದಾತ ನಮ್ಮ ಬಸವಯ್ಯನು
ಮರ್ತ್ಯಲೋಕವನೆ ಮಹಾಪ್ರಮಥರ ಬಿಡಾರವ
ಮಾಡಿದಾತ ನಮ್ಮ ಬಸವಯ್ಯನು

'ಆದಿಯ ಸೃಷ್ಟಿಯನನಾದಿಯ ಸೃಷ್ಟಿಗೆ ತಂದು,
ಅನಾದಿಸೃಷ್ಟಿಯನಾದಿ ಸೃಷ್ಟಿಗೆ ತಂದು,
ಅಜಾತನಬೀಡನಂಗದಲ್ಲಿ ನೆರಹಿದಾತ ನಮ್ಮ ಬಸವಯ್ಯನು
ಭಾವವಿಲ್ಲದ ಭ್ರಮೆಯ ಭ್ರಮೆಗೊಳಿಸಿ
ಭಾವಕ್ಕೆ ತಂದಾತ ನಮ್ಮ ಬಸವಯ್ಯನು
ಬಯಲನೊಂದು ರೂಪ ಮಾಡಿ ಬಣ್ಣಕ್ಕೆ ತಂದು
ಆ ಬಣ್ಣವ ನಿಜದಲ್ಲಿ ನಿಲ್ಲಿಸಿದಾತ ನಮ್ಮ ಬಸವಯ್ಯನು
ಲಕ್ಷದ ಮೇಲೆ ತೊಂಬತ್ತಾರುಸಾವಿರ ಜಂಗಮಕ್ಕೆ
ಇಚ್ಛೆಯನರಿದು ಅರ್ಪಿತವ ಮಾಡಿದಾತ ನಮ್ಮ ಬಸವಯ್ಯನು
ಅಂಗಸಂಗಿಗಳನಂತರಿಗೆ
ಅಂಗನೆಯರ ಅನುಭವವ ನಡೆಸಿದಾತ ನಮ್ಮ ಬಸವಯ್ಯನು
ಮೂವತ್ತಾರುಸಾವಿರ ಮಾಹೇಶ್ವರರಿಗೆ ಮುಖಮೂರ್ತಿಯಾಗಿ
ಅರ್ಪಿತಪ್ರಸಾದವನನುಭವಿಸಿದಾತ ನಮ್ಮ ಬಸವಯ್ಯನು
ಹನ್ನೆರಡು ಸಾವಿರ ರಾಣಿಯರ
ಅಂಗವನರ್ಪಿತ ಪ್ರಸಾದಿಗಳ ಮಾಡಿದಾತ ನಮ್ಮ ಬಸವಯ್ಯನು
ಎಂಬತ್ತೆಂಟುಪವಾಡಮಂ ಗೆದ್ದು
ಮುನ್ನೂರರುವತ್ತು ಸತ್ತ ಪ್ರಾಣವನ್ನೆತ್ತಿ ಮೆರೆದು
ಪರಸಮಯವನಳಿದಾತ ನಮ್ಮ ಬಸವಯ್ಯನು
ಇಪ್ಪತ್ತೈದು ಸಾವಿರ ಚಾರ್ವಾಕರಂ ನೆಗ್ಗಿಲೊತ್ತಿ
ಅಪ್ರತಿಮ ಶಿವಗಣಂಗಳ ಮಹಾತ್ಮೆಯಂ
ಮೆರೆದಾತ ನಮ್ಮ ಬಸವಯ್ಯನು
ಪ್ರಣವದ ಬೀಜವ ಬಿತ್ತಿ ಪಂಚಾಕ್ಷರಿಯ ಬೆಳೆಯ ಬೆಳೆದು
ಪರಮ ಪ್ರಸಾದವನ್ನೊಂದು ರೂಪ ಮಾಡಿ ಮರೆದು
ಭಕ್ತಿಫಲವನುಂಡಾತ ನಮ್ಮ ಬಸವಯ್ಯನು
ಚೆನ್ನಬಸವನೆಂಬ ಪ್ರಸಾದಿಯ ಪಡೆದು
ಅನುಭವಮಂಟಪವನು ಮಾಡಿ,

ಅನುಭವ ಮೂರ್ತಿಯಾದ ನಮ್ಮ ಬಸವಯ್ಯನು
ಅರಿವ ಸಂಪಾದಿಸಿ ಆಚಾರವನಂಗಗೊಳಿಸಿ
ಏಳುನೂರೆಪ್ಪತ್ತು ಅಮರಗಣಂಗಳ
ಅನುಭವಮೂರ್ತಿಗಳ ಮಾಡಿದಾತ ನಮ್ಮ ಬಸವಯ್ಯನು
ಆ ಅನುಭವದಲ್ಲಿ ಐಕ್ಯಪ್ರಸಾದವನಂಗಂಗೊಂಡು
ಮಂತ್ರ ನಿರ್ಮಂತ್ರವಾದಾತ ನಮ್ಮ ಬಸವಯ್ಯನು
ಭಕ್ತಿಸ್ಥಲವನಳಿದು ಭಾವವಡಗಿ ಬಟ್ಟಬಯಲು ಮಾಡಿ
ಸಂಗಯ್ಯನಲ್ಲಿ ಸ್ವಯಂಲಿಂಗಿಯಾದ ನಮ್ಮ ಬಸವಯ್ಯನು.'' 61

ಸುದೀರ್ಘವಾದ ಸುಮಾರು ೬೬ ಸಾಲುಗಳ ಈ ವಚನ ಅನುಭಾವಮಂಟಪದ ಇರುವಿಕೆಯನ್ನು ಸ್ಪಷ್ಟಪಡಿಸುತ್ತದೆ. ಅಲ್ಲದೆ ಇಡೀ ಚಳುವಳಿಯ ಹಾಗೂ ಅನುಭಾವ ಮಂಟಪದ ಒಟ್ಟು ಕಾರ್ಯ ಚಟುವಟಿಕೆಗಳನ್ನು ಇದು ದಾಖಲಿಸುತ್ತದೆ. ಈ ವಚನ ದಲ್ಲಿ ಬೆಡಗಿದೆ, ಬೆರಗಿದೆ, ಬೆಳಕೂ ಇದೆ. ಈ ವಚನ ಬೇರೆ ಯಾರದೇ ಆಗಿದ್ದರೂ ಅದರ ಬಗ್ಗೆ ಅನುಮಾನಗಳು ಏಳಬಹುದಾಗಿತ್ತು. ಸ್ವತಃ ಬಸವಣ್ಣನ ವಿಚಾರಪತ್ನಿಯೇ ಇದಕ್ಕೆ ಸಾಕ್ಷಿಯಾಗಿ ನಿಂತಿರುವುದು ಅನುಭಾವಮಂಟಪದ ಅಸ್ತಿತ್ವಕ್ಕೆ ಇದೊಂದು ಮೈಲಿಗಲ್ಲೆಂದು ಹೇಳಬೇಕು. ಮೇಲಿನ ವಚನವು ಅನುಭಾವಮಂಟಪದ ಚರ್ಚೆಯ ವಿಷಯ, ವಿಷಯಗಳನ್ನು ಆರಂಭದಿಂದ ಚರ್ಚಿಸುತ್ತ ಸೃಷ್ಟಿಯ ಮೂಲಸತ್ಯ, ಪಿಂಡಾಂಡ, ಬ್ರಹ್ಮಾಂಡ, ಪಂಚತತ್ವ ಮೊದಲಾದವುಗಳನ್ನು ಉಲ್ಲೇಖಿಸುತ್ತಲೇ ಅನುಭಾವಮಂಟಪದ ಮೂಲಕ ''ಕಲ್ಯಾಣ ಕೈಲಾಸ''ವಾದ ಬಗ್ಗೆ ವಿವರವಾದ ಮಾಹಿತಿಗಳಿವೆ. ಕಲ್ಯಾಣ ಕೈಲಾಸವಾದದ್ದರಿಂದ ಪ್ರಮಥ ಗಣಗಳು, ರುದ್ರಗಣಗಳು, ಅಮರಗಣಗಳು, ಪುರಾತನ ಗಣಗಳು ಹಾಗೂ ಮಹಾ ಲಿಂಗೈಕ್ಯ ಸಂಪನ್ನರೆಲ್ಲ ಬಂದು ಸೇರಿ ಷಟಸ್ಥಲಕ್ಕೆ ಒಳಗಾಗಿ, ಅನಾದಿ ಮುಕ್ತರಾದವರೆಂದು ಇಂಥ ಹಲವಾರು ಅಂಶಗಳು ಇಲ್ಲಿ ಚರ್ಚಿತವಾಗಿವೆ. ಹಾಗಾಗಿ ಈ ವಚನ ಅತ್ಯಂತ ಪ್ರಮುಖವಾದ ಪಾತ್ರ ವಹಿಸಿದೆ. ದುರಂತವೆಂದರೆ ಈ ವಚನ ಹೇಗೆ ಕಪಟರಾಳರ ಕಣ್ಣಿಗೆ ಬೀಳಲಿಲ್ಲ ವೆಂಬುದು (ಮುಖ್ಯವಾಗಿ ಈ ವಚನವನ್ನು ರೆ. ಉತ್ತಂಗಿ ಚನ್ನಪ್ಪನವರೂ ಸಹ ಉಲ್ಲೇಖಿಸಿಲ್ಲ).

ಅನುಭಾವಮಂಟಪಕ್ಕೆ ಪರ್ಯಾಯ ಹೆಸರುಗಳು ಇದ್ದವು. ಅನುಭಾವ, ಶಿವಾನುಭಾವಗಳೆಂಬ ಪದಗಳೊಂದಿಗೆ ಮಹಾಮನೆ, ಮಹಾನುಭಾವರಣೆ, ಗೋಷ್ಠಿ ಮೊದಲಾದ ಪದಗಳಿಂದ ಅದನ್ನು ಕರೆಯಲಾಗಿದೆ. ಅನುಭಾವಮಂಟಪವು

ಬಸವಣ್ಣನವರ ಮನೆಯಲ್ಲಿ ನಡೆದಿರುವ ಸಾಧ್ಯತೆಗಳಿರುವುದರಿಂದ ಬಸವಣ್ಣನ ಆ ಮನೆಯೇ 'ಮಹಾಮನೆ' ಎಂದು ಕರೆಸಿಕೊಂಡಿದೆ. ಬಸವಣ್ಣನವರ ಕೆಲವಚನಗಳಲ್ಲಿ ಮಹಾಮನೆ ಪದದ ಉಲ್ಲೇಖವಾಗಿದೆ.

"..........ಚನ್ನಯ್ಯನ ಮಗ ನಾನು / ಕೂಡಲ ಸಂಗಯ್ಯನ ಮಹಾಮನೆ ಯಲಿ ಧರ್ಮ ಸಂತಾನಿ ಭಂಡಾರಿ ಬಸವಣ್ಣನು" [62]

"........ನಮ್ಮ ಕೂಡಲ ಸಂಗನ ಮಹಾಮನೆಯಲು
ಮಾದಾರ ಚನ್ನಯ್ಯ ಹೊಲಬಿಗನಯ್ಯ" [63]

"........ಕೂಡಲ ಸಂಗನ ಮಹಾಮನೆಯಲ್ಲು
ಒಕ್ಕುದನುಣ್ಣೌ ತೊತ್ತೇ ಎಂಬರು" [64]

........ಕೂಡಲ ಸಂಗನ ಮಹಾಮನೆಯಲ್ಲಿ ಅಸ್ತಿಗ್ರಾಹಕನೆಂಬ ಗಣೇಶ್ವರನ
ಇಚ್ಛಾಮಂತ್ರದಿಂದ ಜಗಜುಗವಯ್ಯ" [65]

ಈ ಮೊದಲಾದ ವಚನಗಳು ಅನುಭಾವ ಮಂಟಪದ ಅರ್ಥವ್ಯಾಪ್ತಿಯನ್ನು ತುಂಬಿಕೊಡುತ್ತವೆ. ಬಸವಣ್ಣ ಬಿಜ್ಜಳನ ಮಂತ್ರಿಯಾದ್ದರಿಂದ ಮತ್ತು ಸಂಘಟನೆಯ ನೇತಾರನಾಗಿರುವುರಿಂದ ಸಹಜವಾಗಿಯೇ ಅವನ ಮನೆ ವಿಶಾಲವಾಗಿರಬೇಕು. ಅಲ್ಲಿ ಶಿವಶರಣರು ಸೇರುವುದರಿಂದ ಮನೆ, ಮಹಾಮನೆಯಾಗಿ ಮಾರ್ಪಾಟಾದ ಸಾಧ್ಯತೆಗಳಿವೆ.

"ಮರ್ತ್ಯಲೋಕದ ಮಹಾಮನೆ ಹಾಳಾಗಿ ಹೋಗಬಾರದೆಂದು
ಕರ್ತನಟ್ಟಿದನಯ್ಯ ಒಬ್ಬ ಶರಣನ
ಆ ಶರಣ ಬಂದ ಕಲ್ಯಾಣವೆಂಬ ಶಿವಪುರವ
ಕೈಲಾಸವ ಮಾಡಿ........" [66]

ಎಂದು ಹೇಳುವಲ್ಲಿ ಬಸವಣ್ಣನನ್ನು ಕೇಂದ್ರವಾಗಿಟ್ಟುಕೊಂಡು ಮತ್ತು ಬಸವಣ್ಣನ ಮಹಾಮನೆಯನ್ನು ಕುರಿತು ಹೇಳಿರುವುದು ಸ್ಪಷ್ಟವಾಗಿದೆ.

ಅನುಭಾವಮಂಟಪವೊಂದು ಸಂಸ್ಥೆ. ಅದು ಕಟ್ಟಡವೇ ಇರಬೇಕೆಂಬ ನಿಯಮ ವೇನಿಲ್ಲ. ಎಲ್ಲಿ ಶರಣರು ಸೇರುತ್ತಿದ್ದರೋ, ಎಲ್ಲಿ ಶಿವಾನುಭವ ಚಿಂತನ-ಮಂಥನ ನಡೆಯುತ್ತಿತ್ತೋ ಅದೇ ಅನುಭಾವ ಮಂಟಪ. ಕಟ್ಟಡ ಅಳಿಯಬಹುದು, ಸಂಸ್ಥೆ ಅಳಿಯುವುದಿಲ್ಲವೆಂಬುದು ಮುಖ್ಯ. ಬಸವಾದಿ ಶರಣರು ಕಟ್ಟಿದ ಮಂಟಪ

ಸ್ಥಾವರವಲ್ಲದ ಜಂಗಮವಾಗಿತ್ತು. ಅದೊಂದು ಚೈತನ್ಯ, ಚಿರಂತನವೆಂದು ಹೇಳಬಹುದು.

ಅಲ್ಲಮನ ಇನ್ನೊಂದು ವಚನ ಅನುಭಾವ ಮಂಟಪದ ರಚನೆ ವಿನ್ಯಾಸ ಕುರಿತು ಸಮಗ್ರ ಚಿತ್ರಣವನ್ನು ನೀಡುತ್ತದೆ :

''ಆದಿ ಲಿಂಗವ ಮೇದಿನಿಗೆ ತಂದು
ಮರ್ತ್ಯಲೋಕದಲ್ಲಿ ಮಹಾಮನೆಯ ಕಟ್ಟಿದನಯ್ಯ ಸಂಗನಬಸವಣ್ಣನು
ಆ ಮನೆಯ ನೋಡಲೆಂದು ಹೋದಡೆ
ಆ ಗೃಹ ಹೋಗದ ಮುನ್ನವೆ ಎನ್ನ ನುಂಗಿತ್ತಯ್ಯ
ಅದಕ್ಕೆ ಕಂಭ ಒಂದು, ತೊಲೆ ಆರು, ಜಂತೆವೆಲಗು ಮೂವತ್ತಾರು
ಧರೆಯಾಕಾಶವ ಹೊದ್ದಾದ ಕೆಸರುಗಲ್ಲು,
ಒಂಬತ್ತು ಬಾಗಿಲು, ಬಿಯ್ಯಗವಿಕ್ಕಿಹವು
ಬೇರೊಂದು ಬಾಗಿಲು ಉರಿಯನುಗುಳುತಿರ್ಪುದು
ಮುತ್ತಿನ ಕಂಭದ ಮೇಲುಕಟ್ಟಿನ ಮೇಲೆ ಮಾಣಿಕ್ಯದ ಶಿಖರಿ!
ಆ ಶಿಖರಿಯ ತುದಿಯಲ್ಲಿ ಬಿಳಿಯ ಹೊಂಗಳಸವಿಪ್ಪುದು
ಅದು ಕಾಬವರಿಗೆ ಕಾಣಬಾರದು
ಕಾಣಬಾರದವರಿಗೆ ಕಾಣಬಪ್ಪುದು
ಅಲ್ಲಿ ಹತ್ತು ಮಂದಿ ಪರಿಚಾರಕರು ಎಡೆ ಮಾಡುತ್ತಿಪ್ಪರು
ಇಬ್ಬರು ದಡಿಕಾರರು ಬಾಗಿಲ ಕಾಯ್ದಿಪ್ಪರು
ಒಬ್ಬಾಕೆ ಎಡೆಯಾಡುತ್ತಿಪ್ಪಳು
ಒಬ್ಬಾಕೆ ಲಿಂಗಾರ್ಚನೆಗೆ ನೀಡುತ್ತಿಪ್ಪಳು
ಒಬ್ಬಾಕೆ ಸುಯಿಧಾನಂಗಳೆಲ್ಲವನು ಶೋಧಿಸಿ ತಂದು ಕೊಡುತ್ತಿಪ್ಪಳು
ಒಬ್ಬಾಕೆ ಉರಿಯಿಲ್ಲದಗ್ನಿಯಲ್ಲಿ ಪಾಟಕವ ಮಾಡುತ್ತಿಪ್ಪಳು
ಒಬ್ಬಾಕೆ ಜಂಗಮ ಲಿಂಗಕ್ಕೆ ಮಾಡಿ, ನೀಡಿ, ಊಡಿ, ಉಣಿಸಿ,
ತೃಪ್ತಿಯ ಮಾಡುತ್ತಿಪ್ಪಳು
ಒಂದಡ್ಡಣಿಗೆಯ ಮೇಲೆ
ಐದು ಅಗಲೊಳಗೆ ಇಟ್ಟ ಬೋನವನು ಒಬ್ಬನುಂಡಡೆ
ಪ್ರಮಥಗಣಂಗಳೆಲ್ಲರೂ ಆತನ ಒಕ್ಕುದ ಕೊಳಲೆಂದು ಬಂದು

ಆ ಮನೆಯ ಹೊಕ್ಕು ನಿಶ್ಚಿಂತ ವಾಸಿಗಳಾದರು
ಗುಹೇಶ್ವರನ ಶರಣ ಸಂಗನ ಬಸವಣ್ಣನ ಮಹಾಮನೆಯ ಕಂಡು
ಧನ್ಯನಾದೆನು ಕಾಣಾ ಸಿದ್ದರಾಮಯ್ಯ'' [67]

ಇಡೀ ವಚನ ಬೆಡಗಿನಂತೆ ಸಾಂಕೇತವಾಗಿ ಕಂಡುಬಂದರೂ ಇದು ಅನುಭವ ಮಂಟಪದ ಸಮಗ್ರ ಚಿತ್ರಣವನ್ನು ನೀಡುತ್ತದೆ.

ಇಲ್ಲಿ ಉಲ್ಲೇಖಿತವಾದ 'ಮಹಾಮನೆ' ಅನುಭಾವ ಮಂಟಪವೇ ಆಗಿದೆ. ಈ ವಚನಕ್ಕೆ ಎರಡು ಅರ್ಥಗಳಿವೆ. ಒಂದು ಬಸವಣ್ಣನೇ ದೇವಾಲಯ (ಬಸವನೆಂದರೆ ಅನುಭಾವಮಂಟಪ) ಒಳಾರ್ಥ, ಎರಡು ಅನುಭಾವಮಂಟಪವೇ ದೇವಾಲಯ ಹೊರಗೆ. ಬಸವಣ್ಣ ಅನುಭಾವಮಂಟಪದ ರಚನೆಯಾದ ಮೇಲೆ ಸಮರ್ಥ ಅಧ್ಯಕ್ಷ ನಿಗಾಗಿ ಕಾದಿರುವ ಸಂಗತಿಯೂ ಸರ್ವವಿದಿತವಾದದ್ದು, ಅದಕ್ಕೆ ಈ ಮೇಲಿನ ವಚನವೂ ಸಮರ್ಥನೀಯವಾಗಿದೆ. ಅಲ್ಲಮ, ಬಸವಣ್ಣನು ಕಟ್ಟಿದ ಮಹಾಮನೆ ನೋಡಲೆಂದು ಹೋದರೆ ಹೋಗುವ ಮೊದಲೇ ಅದರೊಳಗೆ ಬೆರೆತನು. ಅಂತೆಯೇ ''ಆ ಗೃಹ ಹೋಗದ ಮುನ್ನವೇ ಎನ್ನ ನುಂಗಿತಯ್ಯ'' ಎಂದು ಅಲ್ಲಮ ಬೆರಗಾಗಿ ಹೇಳುತ್ತಾನೆ. ಆರು ತೊಲೆಗಳ ಬಗ್ಗೆ ವಿವರಗಳು, ಷಟಸ್ಥಲ ಸಿದ್ಧಾಂತವನ್ನು ಪ್ರತಿಪಾದಿಸುತ್ತವೆ. ಮೂವತ್ತಾರು ಜಂತೆವೆಲಗು ಮೂವತ್ತಾರು ತತ್ವಗಳನ್ನು ಪ್ರತಿನಿಧಿ ಸುತ್ತವೆ. ''ಮನುಷ್ಯ ಅಂತಃಶಕ್ತಿಯ ವಿಕಾಸಕ್ಕೆ ಹಾಗೂ ಸೃಷ್ಟಿಯ ರಚನೆಗೆ ಸಹಾಯಕ ವಾದ ಪಂಚಕರ್ಮೇಂದ್ರಿಯಗಳು, ಪಂಚ ಜ್ಞಾನೇಂದ್ರಿಯಗಳು, ಪಂಚವಾಯು ಗಳು, ಪಂಚವಿಷಯಗಳು, ಅಂತಃಕರಣ ಚತುಷ್ಟಯ, ಆತ್ಮ, ಪಂಚಸಾದಾಖ್ಯಗಳು, ಪಂಚಕಲೆಗಳು, ಮತ್ತು ಶಿವತತ್ವ ಎಂಬ ಮೂವತ್ತಾರು ಬಗೆಯ ತತ್ವಗಳು'' [68] ಇವುಗಳನ್ನು ಸ್ಥೂಲವಾಗಿ ಮೂರು ಭಾಗಗಳಾಗಿ ವಿಂಗಡಿಸಬಹುದು. ೧. ಆತ್ಮ ತತ್ವ ಗಳು-೨೫, ೨. ವಿದ್ಯಾತತ್ವಗಳು-೧೦, ೩. ಶಿವತತ್ವ-೧ ಎಂದು ಅರ್ಥೈಸಬೇಕು. ಈ ಮೂವತ್ತಾರು ವೀರಶೈವ ಮೂಲತತ್ವಗಳೂ ಅನುಭಾವದ ಆಧಾರ ಸ್ಥಂಭಗಳು. ಷಟಸ್ಥಲದ ೬ ತತ್ವಗಳು ಒಳಪ್ರಭೇದಗಳು ೬ X ೬ = ೩೬, ಇಲ್ಲಿರುವ ಕಂಬ, ಬಿಂದು, ಶೂನ್ಯಪೀಠವಾಗುತ್ತದೆ. ಈ ವಿನ್ಯಾಸದಲ್ಲಿ ಅನುಭಾವಮಂಟಪ ರಚನೆ ಗೊಂಡಿದೆ. ಕನ್ನಡ ವಿಶ್ವಕೋಶದಲ್ಲಿ ಅನುಭಾವಮಂಟಪದ ರಚನೆ ಕುರಿತು ಉಲ್ಲೇಖಿಸುತ್ತ 'ಅನುಭಾವ ಮಂಪಟ ನಾಲ್ಕು ಮಹಾದ್ವಾರ, ಮೂವತ್ತಾರು ಕಂಬ ಗಳಿಂದ ಕೂಡಿತ್ತೆಂದು ತಿಳಿದುಬರುತ್ತದೆ. ಇದರ ಅಧ್ಯಕ್ಷ ಪೀಠವೇ ಶೂನ್ಯ ಸಿಂಹಾಸನ. ಅನುಭವಮಂಟಪದ ಹೆಸರು ವಿಶೇಷವಾಗಿ ಕಾಲಜ್ಞಾನ ವಚನಗಳಲ್ಲಿ ಕಂಡು ಬಂದಿದೆ.' [69] ಹೀಗೆ ಅನುಭಾವಮಂಟಪ ಇತ್ತು ಎನ್ನುವುದಕ್ಕೆ ಹಲವಾರು ಆಧಾರ ಗಳು ವಚನಗಳ ಒಡಲಲ್ಲಿ ಸಿಗುವುದು ಅದರ ಅಸ್ತಿತ್ವಕ್ಕೆ ಹೆಚು

೧.೫.೫. ಕಾಲಜ್ಞಾನ ಸಾಹಿತ್ಯ - ಅನುಭಾವಮಂಟಪ :

ವಚನಕಾರರ ಒಟ್ಟು ಸಾಹಿತ್ಯವನ್ನು ಎರಡು ಭಾಗಗಳಲ್ಲಿ ವಿಂಗಡಿಸಬಹುದು. ಒಂದು ವಚನ ಸಾಹಿತ್ಯ. ಇನ್ನೊಂದು ವಚನೇತರ ಸಾಹಿತ್ಯ. ಪ್ರಮಾಣದೃಷ್ಟಿಯಿಂದ ಕಡಿಮೆ ಇರುವುದರಿಂದ ಈ ವಚನೇತರ ಸಾಹಿತ್ಯ ಉಪೇಕ್ಷೆಗೆ ಒಳಗಾಗಿದ್ದರೂ ಇದರಲ್ಲಿ ವೈವಿಧ್ಯತೆಯಿದೆ. ವಚನಸಾಹಿತ್ಯದ ಬಹುಮುಖ ಪರಿಚಯವಾದಂತೆ ವಚನೇತರ ಸಾಹಿತ್ಯಕ್ಕೆ ಆದಂತಿಲ್ಲ. ಈ ವಚನೇತರ ಸಾಹಿತ್ಯವೆನ್ನುವುದು ಶಾಸ್ತ್ರಸಾಹಿತ್ಯ ವೆಂದು, ತಾತ್ವಿಕ ಸಿದ್ಧಾಂತವೆಂದೂ ಕರೆಸಿಕೊಳ್ಳುತ್ತದೆ. ಇಲ್ಲಿ ಹೆಚ್ಚಾಗಿ ಅನುಭಾವ, ನೀತಿ, ತತ್ವಗಳ ಹಿನ್ನೆಲೆಯಲ್ಲಿ ಅರ್ಚನ, ಅರ್ಪಣ, ಅನುಭಾವಕ್ಕೆ ಹೆಚ್ಚು ಒತ್ತು ನೀಡ ಲಾಗಿದ್ದು ವೀರಶೈವ, ತತ್ವಕ್ಕೆ ಸೈದ್ಧಾಂತಿಕನೆಲೆಯನ್ನು ಒದಗಿಸಿಕೊಟ್ಟಿವೆ. ಅಂಥ ಪ್ರಮುಖ ವಚನೇತರ ಸಾಹಿತ್ಯವೆಂದರೆ, ಸ್ವರವಚನ, ಕರಣಹಸಿಗೆ, ಮಿಶ್ರಾರ್ಪಣ, ಮಂತ್ರಗೋಪ್ಯ, ಸೃಷ್ಟಿಯ ವಚನ, ತ್ರಿವಿಧಿಗಳು, ಕೊರವಂಜಿ ಸಾಹಿತ್ಯ ಮತ್ತು ಕಾಲಜ್ಞಾನಗಳು.

ವಚನಕಾರರು, ಶಿವಜ್ಞಾನಿಗಳಾಗಿದ್ದಂತೆ ಕಾಲಜ್ಞಾನಿಗಳೂ ಆಗಿದ್ದರು. ಸಾಮಾನ್ಯವಾಗಿ ಎಲ್ಲ ಧರ್ಮದಲ್ಲಿಯೂ ಒಂದು ವಿಶಿಷ್ಟ ಯೋಗಸಿದ್ಧಿಯ ಮೂಲಕ ಭೂತ, ವರ್ತಮಾನ ಹಾಗೂ ಭವಿಷ್ಯ ಕಾಲ ಗ್ರಹಿಸುವುದು, ಅದನ್ನೇ ನಾವು ತ್ರಿಕಾಲ ಜ್ಞಾನವೆಂದು ಕರೆಯುತ್ತೇವೆ. ಶಿವಶರಣರ ಕಾಲಜ್ಞಾನವೂ ಚಾರಿತ್ರಿಕವಾದ ಸಾಂಸ್ಕೃತಿಕ ಮಹತ್ವ ಪಡೆದಿದ್ದು, ಸಾಂಸ್ಕೃತಿಕ ಬದಲಾವಣೆ ಕುರಿತ ಸ್ಥೂಲ ಚಿತ್ರಣ ನೀಡುವ ಈ ಸಾಹಿತ್ಯವು ರಾಜಕೀಯ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ವಿಷಯಕ್ಕೆ ಸ್ಥೂಲ ಭವಿಷ್ಯ ಬರೆದ ಮಹತ್ವದ ಸಾಹಿತ್ಯವಾಗಿದೆ. ಒಂದರ್ಥದಲ್ಲಿ ಕಾಲಜ್ಞಾನ ಸಾಹಿತ್ಯ ವೆಂದರೆ ಪ್ರಮಾಣ ಸಾಹಿತ್ಯವೆಂದು ಕರೆಯಬೇಕು. ಇಂಥ ಕಾಲಜ್ಞಾನ ಸಾಹಿತ್ಯದಲ್ಲಿ ಅನೇಕ ಸಲ ಅನುಭಾವ ಮಂಟಪದ ಉಲ್ಲೇಖವಾಗಿದೆ. ಬಸವಣ್ಣ, ಅಲ್ಲಮ, ಚನ್ನಬಸವಣ್ಣನವರ ಕಾಲಜ್ಞಾನ ವಚನಗಳು ಇಲ್ಲಿ ಪ್ರಮುಖವೆಂದು ಪರಿಗಣಿಸಿ ಉಲ್ಲೇಖಿಸಲಾಗಿದೆ.

ಬಸವಣ್ಣನವರ ಕಾಲಜ್ಞಾನ ವಚನ - ಅನುಭಾವಮಂಟಪ :

ಬಸವಣ್ಣನ ಕಾಲಜ್ಞಾನ ವಚನವೆಂಬ ಹೆಸರಿನ ಒಂದೇ ಒಂದು ಸುದೀರ್ಘ ವಾದ ವಚನ ಲಭ್ಯವಾಗಿದ್ದು ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ವಿಷಯ ಗಳನ್ನೊಳಗೊಂಡ ಆ ವಚನವು ಅನುಭಾವ ಮಂಟಪ ಕುರಿತು ಉಲ್ಲೇಖಿಸುತ್ತದೆ.

''ಮರ್ತ್ಯಲೋಕದ ಮಹಾಗಣಂಗಳಿಗೆ ಶರಣು

ಶರಣಾರ್ಥಿ, ರಾಕ್ಷಸನಾಮ ಸಂವತ್ಸರದ ಫಾಲ್ಗುಣ ಶುದ್ಧ ಏಕಾದಶಿಯಲ್ಲು ಇಪ್ಪತ್ತೇಳು

ನಕ್ಷತ್ರ ಪ್ರಾಣಿಗ್ರಹಣ ಶುಭಕಲ್ಯಾಣದೂರ ಸೋಮವಾರ ಅಹೋರಾತ್ರಿಯಲ್ಲಿ ಬಸವರಾಜ ದೇವರು ನಿರೂಪವ ಮಾಡಿದರು ....

....

ನಾವು ಹೋದ ಏಳನೂರು ಎಪ್ಪತ್ತು ವರುಷಕ್ಕೆ ಬಿದುರೆಯೆಂಬ ಪಟ್ಟಣ ಕೆಟ್ಟು ಹುಲಿ, ಕರಡಿ ಅಡ್ಡಾವು. ಕಲ್ಯಾಣ ಮುನ್ನಿನಂತೆ ಪಟ್ಟಣವಾದೀತು, ಲಕ್ಷದ ಮೇಲೆ ತೊಂಬತ್ತಾರು ಸಾವಿರ ಗೋರಿಗುಮ್ಮಟವಳಿದಾವು. ನವನಾಥಸಿದ್ಧರಿಗೆ ಬಿಡಾರ ವಾದಾವು. ಶೂನ್ಯ ಸಿಂಹಾಸನದಲ್ಲಿ ಲಿಂಗಪ್ರತಿಷ್ಠೆಯಾದಾವು. ಗುಡಿಯವರು ಗುಡಿಗೆ ಬಂದಾರು, ಬರಲಿಕೆ ಮರ್ತ್ಯದ ಶಾಪ ಉಳಿದೀತು. ಅಳಿಯೆ ಕಲ್ಯಾಣ ನಾಲ್ವತ್ತೆಂಟ ಗಾವುದ ವಿಸ್ತೀರ್ಣ ಲಿಂಗಮಯವಾದೀತು. ತ್ರಿಪುರಾಂತಕ ದೇವರ ಪಶ್ಚಿಮದ ಬದಿಗೆ ಇಪ್ಪತ್ತೇಳು ಬಯಲಾದೀತು. ಬಯಲಾದಂದಿಗೆ ಹಿಂದಕ್ಕೆ ಹತ್ತು ಮುಂದಕ್ಕೆ ಹನ್ನೊಂದು, ಅಮರಗಣಂಗಳು ಸಹಿತ ಆನಂದ ಸಂವತ್ಸರದ ಕಾರ್ತಿಕದ ಮಾಸದ ದಶಮಿ ಸೋಮವಾರ ಶ್ರವಣ ನಕ್ಷತ್ರ ಬಂದು, ಅಹೋರಾತ್ರಿಯಲ್ಲಿ ಕಲ್ಯಾಣದ ತ್ರಿಪುರಾಂತಕ ದೇವರ **ಅನುಭವ ಮಂಟಪದ**ಲ್ಲಿ ವೀರ ವಸಂತಗೆ ಪಟ್ಟಣವಾದೀತು. ಚಿಕ್ಕದಂಡನಾಯಕರಿಗೆ ಪ್ರಧಾನಿ ಪಟ್ಟವಾದೀತು, ನಾವು ಬರಲು ವೀರವಸಂತ ರಾಯನು, ಚಿಕ್ಕದಂಡನಾಯಕರು, ಅಲ್ಲಮ ಪ್ರಭುದೇವರು ಅಸಂಖ್ಯಾತ ಮಹಾ ಗಣಂಗಳು ಮರ್ತ್ಯಲೋಕಕ್ಕೆ ಚಿತ್ತೈಸಾರು, ಇಂತು ನಾವು ಪೇಳಿದ ಕಾಲಜ್ಞಾನ ಹುಸಿಯಲ್ಲ, ನಿಮ್ಮಾಣೆ ನಿಮ್ಮ ಪ್ರಮಥರಾಣೆ, ನಿಮ್ಮ ರಾಣಿವಾಸದಾಣೆ, ಅಲ್ಲಮಪ್ರಭು ದೇವರಾಣೆ, ತಪ್ಪುದು ಕಾಣಾ ಕೂಡಲ ಸಂಗಮದೇವಾ'' [70]

ಸುದೀರ್ಘವಾದ ಈ ಮೇಲಿನ ನಿರೂಪಣೆಯಲ್ಲಿ ಶೂನ್ಯಸಿಂಹಾಸನ, ಅನುಭಾವಮಂಟಪದ ಅಸ್ತಿತ್ವದ ಬಗ್ಗೆ ಪ್ರಸ್ತಾಪ ಬಂದಿದೆ. ಸಾಮಾಜಿಕ, ಸಾಂಸ್ಕೃತಿಕ ಪಲ್ಲಟಗಳೊಂದಿಗೆ ಮತ್ತೊಮ್ಮೆ ಎಲ್ಲರೂ ಸೇರುವುದಾಗಿ ಹೇಳುತ್ತ ವ್ಯಕ್ತಿ ವ್ಯಕ್ತಿತ್ವ ಮತ್ತು ಸಾಮಾಜಿಕ ವ್ಯವಸ್ಥೆಯ ಸ್ಥಿತ್ಯಂತರಗಳ ಮೂಲಕ ಕಟ್ಟಿದ್ದೆಲ್ಲ ಸರ್ವನಾಶವಾಗಿ, ಹೊಸ ದೊಂದು ವ್ಯವಸ್ಥೆ ಹುಟ್ಟಿಕೊಳ್ಳುವ ಆಶಾವಾದವು ಇಲ್ಲಿದೆ. ಇದೆಲ್ಲ ಪ್ರಮಾಣವಾಗಿದೆ. ಹುಸಿಯಲ್ಲವೆಂದು ಬಸವಣ್ಣ ಸ್ಪಷ್ಟಪಡಿಸಿದ್ದು ಚಾರಿತ್ರಿಕವಾಗಿ ಮಹತ್ವದ್ದಾಗಿದೆ.

ಅಲ್ಲಮಪ್ರಭುದೇವರ ಕಾಲಜ್ಞಾನ ವಚನ – ಅನುಭಾವಮಂಟಪ :

ವಚನ ಸಾಹಿತ್ಯ ಮತ್ತು ಅನುಭಾವ ಮಂಟಪದಲ್ಲಿ ಅಲ್ಲಮನಿಗೆ ವಿಶಿಷ್ಟವಾದ ಸ್ಥಾನವಿದೆ. ಇವೆರಡರಲ್ಲಿ ಅಲ್ಲಮನೇ ಕೇಂದ್ರ ವ್ಯಕ್ತಿ. ಅನುಭಾವಮಂಟಪದ ಶೂನ್ಯ ಪೀಠಕ್ಕೂ ಅಲ್ಲಮನೇ ಅಧ್ಯಕ್ಷ (ಪೀಠಾಧಿಪತಿ). ಇಡೀ ಭಕ್ತಿಯ ನೆಲೆಗೆ ಚಲನೆಯನ್ನು ತಂದುಕೊಟ್ಟು ಅರ್ಚನೆ, ಅರ್ಪಣೆ, ಅನುಭಾವಕ್ಕೆ ಸೈದ್ಧಾಂತಿಕ ನೆಲೆ ಒದಗಿಸಿದವನು.

ಅಲ್ಲಮ ವಚನಗಳಲ್ಲದೇ ಸೃಷ್ಟಿಯ ವಚನ, ಪರಮಯೋಗ ಮಂತ್ರಗೋಪ್ಯ, ಸ್ವರವಚನ ಹಾಗೂ ಕಾಲಜ್ಞಾನ ವಚನ ಬರೆದಿದ್ದು ; ಉಪಲಬ್ಧವಿರುವ ಅಲ್ಲಮನ ಒಂದೇ ಒಂದು ಕಾಲಜ್ಞಾನ ವಚನ ದೀರ್ಘ ಗದ್ಯದಲ್ಲಿದ್ದು, ಅದು ಸುಮಾರು ಐದು ಪುಟಗಳ ಹರವು ಪಡೆದಿದೆ. ಈ ವಿಸ್ತಾರವಾದ ನಿರೂಪಣೆಯಲ್ಲಿ ಅಲ್ಲಮ ಅನುಭಾವ ಮಂಟಪ ಕುರಿತು ಮೂರು ಸಲ ಪ್ರಸ್ತಾಪ ಮಾಡಿದ್ದಾನೆ. ''ಕಲ್ಯಾಣದಲ್ಲಿ ಚನ್ನಬಸವಣ್ಣ ನವರು ಉಳುಮೆಯ ಮಹಾಮನೆಗೆ ಹೋಗುವುದನ್ನು ಪೇಳ್ವೆನು ಎಲ್ಲಾ ಗಣಂಗಳು ಕೇಳಿ ಕೃತಾರ್ಥರಾಗಿರಯ್ಯ ಬಿನ್ನಹವಂ ಮಾಡೇನು ಏಕಚಿತ್ತದಿಂ ಕೇಳಿ ಕೃತಾರ್ಥ ರಾಗಿರಯ್ಯ ಶ್ರೀ ಕಲ್ಯಾಣದ ಕೈಲಾಸಮಪ್ಪ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶಿವಾಲಯಕ್ಕೆ ಮುಖ್ಯವಾದ ತ್ರಿಪುರಾಂತಕ ದೇವರ ಮುಂದಣ **ಅನುಭಾವಮಂಟಪ** ದಲ್ಲಿ ಪ್ರಭುದೇವರು, ಸಿದ್ದರಾಮೇಶ್ವರ ದೇವರು, ಮೋಳಿಗೆ ಮಾರಯ್ಯಗಳು, ಮುಸುಡಿ ಚೌಡಯ್ಯಗಳು, ವೀರಮಡಿವಾಳಯ್ಯಗಳು ಏಳು ನೂರು ಎಪ್ಪತ್ತು ಅಮರ ಗಣಂಗಳೆಲ್ಲ ಅಸಂಖ್ಯಾತ ಮಹಾಗಣಂಗಳ ಸಮೂಹದಲ್ಲಿ ನಿರೂಪಿಸಿದ ವಚನ :

....

....ಶಂಬು ತ್ರಿಪುರಾಂತಕ ದೇವರ ಮುಂದಣ **ಅನುಭವಮಂಟಪ**ದಲ್ಲಿ ಕಪಿಲೆ ಬಾಣಸವ ಮಾಡ್ಯಾರು ನಂದಿಕಂಭ ಮುರಿದಾರು..................................

...ಲೋಕಾಚಾರ್ಯರಾದ ಪುರಾತರು ಕಲ್ಯಾಣದಲ್ಲಿ ಸುಖದಿಂದ ಈಶ್ವರಾರ್ಚಕರಾಗಿ ಶಿವಾನುಭವದಿಂದ ಇರುತಿರ್ದಾ ಜ್ಞಾನದಿಂದ ಸದಾ ಸಮ್ಯಕ್‌ಜ್ಞಾನಕ್ಕಾಗಿ ಅನುಭವ ಮಂಟಪದಲ್ಲಿ ಎಲ್ಲ ಗಣಂಗಳಂ ಮುಹೂರ್ತವಂ ಮಾಡಿ ಇರುತಂ ಇದ್ದು ಸದ್ಗೋಷ್ಠಿ ಯಲ್ಲಿ ಸಂಪಾದನೆಯ ಸಮಯದಲ್ಲಿ ಕಾರುಣ್ಯಸಿಂಧುವಾದ ಬಸವೇಶ್ವರ ದೇವರು ಲೋಕಹಿತಾರ್ಥರಾಗಿ ಬಹುಸೇವಾರ್ಥ ಮಾನಂಗಳಾಗಿ ನಿರೂಪವಂ ಕೊಡಲಾಗಿ, ಎಲ್ಲ ಗಣಂಗಳು ಆಲಿಸುತ್ತಿರ್ದ ಸಮಯದಲ್ಲಿ ಚನ್ನಬಸವೇಶ್ವರ ದೇವರು, ಸಿದ್ದ ರಾಮೇಶ್ವರ ದೇವರು, ಅಕ್ಕ ನಾಗಲೆಯಮ್ಮನವರು, ಮಡಿವಾಳಯ್ಯಗಳು, ಉಗ್ರಾಣದ ರುದ್ರಯ್ಯಗಳು, ಅವಸರದ ರೇಕಯ್ಯಗಳು, ಎಚ್ಚರಿಕೆಯ ದೇವಯ್ಯಗಳು, ಯತಾರ್ಥದ ಅಪ್ಪಣ್ಯಗಳು ಪೇಳಿದ ಕಾಲಜ್ಞಾನ ಸಹ ಹನ್ನೊಂದು ವಚನದ ಸಂಗಡ ಬಸವೇಶ್ವರ ದೇವರು ಬರೆದು ಇರಿಸಿದ ಲಿಪಿಗಳು ಪೇಳಿದರೆಲ್ಲ ಸಹ ಒಂದಿಗೆ ಕಾಣಲ್ಪಟ್ಟವು.'' 71

ಈ ವಚನದಲ್ಲಿ ಕೆಲವು ಮುಖ್ಯವಾದ ವಿಷಯಗಳು ಅಡಕವಾಗಿವೆ. ಕಲ್ಯಾಣ ವೆಂಬುದು ಇಲ್ಲಿ ಕೈಲಾಸದಂತೆ ವರ್ಣಿತವಾಗಿದ್ದು ಕಲ್ಯಾಣದಲ್ಲಿರುವ ಅನುಭಾವ ಮಂಟಪವು ಕಲ್ಯಾಣದಲ್ಲಿರುವ ಲಕ್ಷದ ತೊಂಬತ್ತಾರು ಸಾವಿರ ಶಿವಾಲಯಕ್ಕೆ ಸಮ ವೆಂಬುದು ಗಮನಾರ್ಹ. ಅನುಭಾವಮಂಟಪ ಎಷ್ಟು ಮಹತ್ವದ್ದಾಗಿತ್ತೆಂಬುದು

ಇದರಿಂದ ವಿದಿತವಾಗುತ್ತದೆ. ಅಲ್ಲದೆ ಅತ್ಯಂತ ಜಿಜ್ಞಾಸೆಗೊಳಗಾಗಿರುವ ವಿಷಯ ಸಿದ್ಧರಾಮ ಕಲ್ಯಾಣಕ್ಕೆ ಬಂದಿದ್ದನೇ? ಎಂಬುದು. ಸಿದ್ಧರಾಮನನ್ನು ಕಲ್ಯಾಣಕ್ಕೆ ತರುವುದು ಮತ್ತು ಅವನಿಗೆ ಲಿಂಗ ದೀಕ್ಷೆ ಮಾಡಿಸುವ ನಿಮಿತ್ಯದಿಂದಲೇ ಎರಡನೇ ಶೂನ್ಯ ಸಂಪಾದನೆ ಹುಟ್ಟಿಕೊಂಡಿದೆ. [72] ಇದಕ್ಕೂ ಮಹತ್ವದ ಇನ್ನೊಂದು ವಿಷಯವೆಂದರೆ, ಅಲ್ಲಮ ಕಲ್ಯಾಣಕ್ಕೆ ಬಂದುದು ಸತ್ಯವೇ? ಎಂಬುದು [73]. ಈ ಎರಡೂ ಅನುಮಾನಗಳಿಗೆ ಇಲ್ಲಿ ಉತ್ತರವಿದೆ. ಇಲ್ಲಿ ಬರುವ ಅನೇಕ ಪ್ರಮುಖ ಶರಣ(ವಚನಕಾರ)ರ ಹೆಸರುಗಳ ಉಲ್ಲೇಖವಾದದ್ದು ಅವರೆಲ್ಲ ಅನುಭಾವಮಂಟಪದ ಸದಸ್ಯರಾಗಿದ್ದರೆಂಬುದು ಸೂಚಿಸುತ್ತದೆ. ಹೀಗೆ ಅಲ್ಲಮನ ಕಾಲಜ್ಞಾನದ ವಚನ ಹಲವಾರು ಅನುಮಾನಗಳಿಗೆ ತೆರೆ ಎಳೆದಿದೆ.

ಚೆನ್ನಬಸವಣ್ಣನವರ ಕಾಲಜ್ಞಾನ ವಚನ - ಅನುಭಾವಮಂಟಪ :

ವೀರಶೈವ ತತ್ವಕ್ಕೆ ಸೈದ್ಧಾಂತಿಕ ನೆಲೆ ಒದಗಿಸಿದವನು ಚನ್ನಬಸವಣ್ಣ. ಷಟಸ್ಥಲ ಜ್ಞಾನಿ ಎಂದು ಕರೆಸಿಕೊಳ್ಳುವ ಚೆನ್ನಬಸವಣ್ಣ ವಚನಗಳಲ್ಲದೆ ಕರಣಹಸಿಗೆ, ಮಿಶ್ರಾರ್ಪಣ, ಹಿರಿಯ ಮಂತ್ರಗೋಪ್ಯ, ಪದಮಂತ್ರಗೋಪ್ಯ, ತೊಂಬತ್ತಾರು ಸಕೀಲಗಳು, ಸ್ವರವಚನಗಳು, ದೀಕ್ಷಾವಿಧಾನ, ಷಟಚಕ್ರ ಹಾಗೂ ಮೂರು ಕಾಲಜ್ಞಾನ ವಚನಗಳನ್ನು ಬರೆದಿದ್ದು, ಮೊದಲನೆ, ಮೂರನೆ ಕಾಲಜ್ಞಾನ ವಚನ ಗದ್ಯದಲ್ಲಿದೆ. ಎರಡನೇ ಕಾಲಜ್ಞಾನ ವಚನ ಪದ್ಯರೂಪದಲ್ಲಿದೆ. ಮೊದಲನೆ ಕಾಲಜ್ಞಾನವಚನದಲ್ಲಿ ಅನುಭಾವ ಮಂಟಪ ಕುರಿತು ಪ್ರಸ್ತಾಪವಿದೆ.

''ಮುಂದಣ ಕಲಿಯುಗ ಮಹಾತ್ಮೆಯನು ಮರ್ತ್ಯಲೋಕದ ಮಹಾಗಣಂಗಳು ಕೇಳಿ ಕೃತಾರ್ಥರಾಗಿರಯ್ಯ......ಪಂಚಾಶತ್ ಕೋಟಿ ಭೂಮಂಡಲದ ಮಧ್ಯದಲ್ಲಿ ಪೃಥ್ವಿಗೆ ಕೈಲಾಸಮಪ್ಪ ಶ್ರೀಶೈಲದ ಮಲ್ಲಿಕಾರ್ಜುನ ದೇವರ ಮೂಡಲ ಬಾಗಿಲ ಮುಚ್ಚೀತು.... ಶಂಭು ತ್ರಿಪುರಾಂತಕ ದೇವರ ಮುಂದಣ **ಅನುಭವಮಂಟಪ**ದಲ್ಲಿ ಕಪಿಲೆಯ ಬಾಣಸವ ಮಾಡ್ಯಾರು, ನಂದಿಕಂಬ ಮುರಿದಾರು....'' [74] ಇಲ್ಲಿಯೂ ಸಹ ಭವಿಷ್ಯತ್ತಿನಲ್ಲಾಗುವ ಬದಲಾವಣೆ ಕುರಿತು ಉಲ್ಲೇಖಿಸುತ್ತ ಅನುಭಾವಮಂಟಪದಲ್ಲಿ ಸಹ ಬದಲಾವಣೆಗಳಾಗುತ್ತವೆ ಎಂಬುದು ಉಲ್ಲೇಖವಾಗಿದೆ.

ಬಸವ, ಅಲ್ಲಮ, ಚೆನ್ನಬಸವಣ್ಣ ಮೂವರ ವಚನಗಳಲ್ಲಿಯೂ ಅನುಭಾವ ಮಂಟಪ ಇರುವುದು ಕಂಡುಬರುತ್ತದೆ. ಗಮನಾರ್ಹ ಅಂಶವೆಂದರೆ ಅನುಭಾವ ಮಂಟಪದ ಸ್ಥಾನ ನಿರ್ದೇಶನ ಎಲ್ಲಕಡೆ ''ತ್ರಿಪುರಾಂತಕೇಶ್ವರ ಮುಂದಿನ ಅನುಭಾವ ಮಂಟಪ''ವೆಂದು ಉಲ್ಲೇಖವಾದುದರಿಂದ ಈಗಿರುವ ತ್ರಿಪುರಾಂತಕ ದೇವಾಲಯದ ಸುತ್ತಲಿನ ಪ್ರದೇಶದಲ್ಲಿ (ಕೆರೆಯ ದಡದ ಮೇಲೆ) ಅನುಭಾವಮಂಟಪ ಇದ್ದಿರ

ಬಹು[illegible]ವ ಸಾಧ್ಯತೆಗಳಿವೆ. ಹೀಗೆ ಕಾಲಜ್ಞಾನ ವಚನಗಳಲ್ಲಿ ಅನುಭಾವಮಂಟಪದ ಅಸ್ತಿತ್ವ ಕುರಿತ ಖಚಿತ ನಿಲುವುಗಳಿವೆ.

೧.೫.೬. ಪುರಾಣ ಕಾವ್ಯ-ಅನುಭಾವಮಂಟಪ :

ಬಸವಾದಿ ಶರಣರ ಚರಿತ್ರೆಯು ವಚನ-ವಚನೇತರ ಸಾಹಿತ್ಯಕ್ಕಿಂತ ಸಮಕಾಲೀನರಲ್ಲಿ ಹಾಗೂ ನಂತರದಲ್ಲಿ ಬಂದ ಪುರಾಣಕಾವ್ಯಗಳಲ್ಲಿ ದೊರೆಯುತ್ತದೆ. ವಚನಕಾರರು ಆತ್ಮಪ್ರಶಂಸೆಗೆ ಒತ್ತುಕೊಡಲಿಲ್ಲ. ಒಬ್ಬರು ಮತ್ತೊಬ್ಬರನ್ನು ಕುರಿತು ಆಡಿದ ಮಾತುಗಳು ಅವರ ವ್ಯಕ್ತಿತ್ವದ ಮೇಲೆ ಮತ್ತು ವ್ಯಷ್ಟಿಯಿಂದ ಸಮಷ್ಟಿಯ ಬದುಕನ್ನು ಕಟ್ಟುವ ಅವರ ಕಾಳಜಿಗಳನ್ನು ಕುರಿತ ಮಾತುಗಳಿವೆ ಹೊರತು ಯಾವೊಬ್ಬ ವಚನಕಾರರ ವೈಯಕ್ತಿಕ ಚರಿತ್ರೆ ದಾಖಲಾಗಿಲ್ಲ. ಆದ್ದರಿಂದ ವಚನಕಾರರ ಚಾರಿತ್ರಿಕ ನೆಲೆಗಳು ಪುರಾಣಕಾವ್ಯಗಳಲ್ಲಿ ದೊರೆಯುತ್ತವೆ. ಹಾಗಾಗಿ ಅನುಭಾವಮಂಟಪದ ಅಸ್ತಿತ್ವ ಕುರಿತು ದಾಖಲಾತಿಗಳನ್ನು ಪುರಾಣಕಾವ್ಯಗಳಲ್ಲಿ ಅರಸುವುದು ಸೂಕ್ತವಾದೀತು.

ಚೆನ್ನಬಸವ ಪುರಾಣ - ಅನುಭಾವಮಂಟಪ :

ಚೆನ್ನಬಸವಣ್ಣನನ್ನು ಕೇಂದ್ರವಾಗಿಟ್ಟುಕೊಂಡು ವಿರೂಪಾಕ್ಷ ಪಂಡಿತನು ಬರೆದ ಮಹತ್ವದ ಕಾವ್ಯ ಇದಾಗಿದ್ದು ಶಿವಶರಣರ ಬದುಕಿನ ಚಾರಿತ್ರಿಕ ಸಂಗತಿಗಳನ್ನು ಒಳಗೊಂಡಿದೆ. ಹಾಗೇ ಇದರಲ್ಲಿ ಅನುಭಾವಮಂಟಪವನ್ನು ನಾಗಲಾಂಬಿಕೆಯ ಮಾತುಗಳ ಮೂಲಕ ಪ್ರಸ್ತಾಪಿತವಾಗಿದೆ.

"ಆ ಕಾಲದೊಳ್ ಭಕ್ತಿಯಿಂ ನಾಗಲಾಂಬಿಕೆಯು
ಮಾಕಾಂತಪೂಜೆಯಂ ತೀರ್ಚಿಯಾ ಬಸವಾದ್ಯ
ನೇಕರೊಡನೀ ವಾರ್ತೆಯಾದ್ಯಂತಮಂ ಹಿಂಚು
ಮುಂಚೆನಿಸದಾಂ ಪೇಳಲು
ಬೇಕೆಂದು ಬೇಗಮನುಭವಮಂಟಪಕ್ಕೆ ಬಂ
ದಾ ಕಾರ್ಯಮಂ ಮಹಾಗಣಕುಲಂ ಕೇಳ್ವಂತೆ
ಜೋಕೆಮಿಗೆ ಬಸವ ದಂಡಾಧೀಶನೊಳು ಸವಿಸ್ತರಮಾಗಿ
ವಿರಚಿಸಿದಳು" [75]

ಇಲ್ಲಿ ನಾಗಲಾಂಬಿಕೆಯು ತನ್ನ ದಿನನಿತ್ಯದ ಚಟುವಟಿಕೆಗಳಲ್ಲುಂಟಾದ ನೋವು-ನಲಿವುಗಳನ್ನು ಸಂತೋಷದಿಂದ ಹೇಳಿಕೊಳ್ಳಲು ನಿತ್ಯಪೂಜಾಕರ್ಮ ಮುಗಿದೊಡನೆ ಅನುಭಾವಮಂಟಪಕ್ಕೆ ಓಡಿಬಂದು ಶರಣರ ಸಮೂಹದ ಮುಂದೆ ತನ್ನ ಆನಂದ ವನ್ನು ತೋಡಿಕೊಳ್ಳುವ ಪರಿಯನ್ನು ಈ ಮೇಲಿನ ಪದ್ಯಭಾಗ ಸೂಚಿಸುತ್ತದೆ. ಅನುಭಾವ ಮಂಟಪದಲ್ಲಿ ಬಹುತೇಕ ಹೆಚ್ಚು ಪುರುಷರು ಇರುತ್ತಿದ್ದು, ಮಹಿಳೆಯರು ತಮ್ಮ ಮನೆಕೆಲಸ ಮುಗಿಸಿಕೊಂಡು ಹೋಗುತ್ತಿದ್ದರೆಂಬಂತೆ ಇಲ್ಲಿ ಉಲ್ಲೇಖ ಗೊಂಡಿದೆ.

ಅದೇ ಪುರಾಣದ ನಾಲ್ಕನೇ ಅಧ್ಯಾಯದ ಹದಿನೆಂಟನೇ ಪದ್ಯದಲ್ಲಿ;

''ಬಸವಣ್ಣನವರ ಗೃಹಾಂತಸ್ಥದನುಭವಮಂಟಪದೊಳೀಗ
ಹರಭಕ್ತರು ನೀಲಲೋಚನೆಯುಂ.....................'' [76]

ಎಂದೂ ಉಲ್ಲೇಖವಾಗಿದೆ. ಇಲ್ಲಿ ಆನುಭಾವ ಮಂಟಪವು ಬಸವಣ್ಣನವರ ಮನೆ ಯಲ್ಲಿ ಇದ್ದಿರಬಹುದಾದ ಸೂಚನೆಗಳಿವೆ.

ಬಸವ ಪುರಾಣ – ಅನುಭಾವಮಂಟಪ :

ಬಸವಣ್ಣ ಕಟ್ಟಿದ ಮರ್ತ್ಯದ ಮಹಾಮನೆಯಾದ ಅನುಭಾವಮಂಟಪ ಕುರಿತು ಬಸವಪುರಾಣವೂ ಸಹ ಹೀಗೆ ಪ್ರಸ್ತಾಪ ಮಾಡುತ್ತದೆ :

''ವಿವಿಧ ಭಕ್ತರುವೆರಸಿ ಪರಮೋ
ತ್ಸಾವದಿ ಕೂಡಲಸಂಗಮೇಶನ (ನು?)
ಭವಮಂಟಪದೊಳು ಮಹಾಒಡ್ಡೋಲಗವನಿತ್ತು
ನವರಸಾಂಚಿತ ರಾಗದಿಂ ಮೂ
ರವಸರದೊಳರ್ಚಿಸುತ ಸಗುರು
ಸ್ತವನ ಪೂಜೆಯೊಳಿಂತು ಬಸವಂ ಸುಖದೊಳಿರುತಿರಲು'' [77]

ಎಂದು ಹೇಳುವಲ್ಲಿ ಬಸವಣ್ಣ ಅನೇಕ ಭಕ್ತರೊಂದಿಗೆ ಪರಮೋತ್ಸವದಲ್ಲಿದ್ದಂತೆಯೇ ಅನುಭಾವಮಂಟಪದ ಒಡ್ಡೋಲಗದಲ್ಲಿ ಶಾಂತಿ, ನೆಮ್ಮದಿಯಿಂದ ಸುಖಕರವಾಗಿ ಇರುತ್ತಿದ್ದ ಬಗೆಯನ್ನು ವಿವರಿಸಲಾಗಿದೆ.

ಮಹಾದೇವಿಯಕ್ಕನ ಪುರಾಣ – ಅನುಭಾವಮಂಟಪ :

ಚೆನ್ನಬಸವಾಂಕನು (ಸು. ೧೫೫೦) ತನ್ನ ಮಹಾದೇವಿಯಕ್ಕನ ಪುರಾಣದಲ್ಲಿ

ಅಕ್ಕಮಹಾದೇವಿ ಕಲ್ಯಾಣಕ್ಕೆ ಬಂದು ಅನುಭಾವಮಂಟಪ ನೋಡಿದಾಗಿನ ವರ್ಣನೆಯಿದೆ:

''ಈಷಣತ್ರಯ ಲೋಭಮಧುಪಯಂ ಭವಿ
ದೋಷ ಕಾಸಾರಜಾಪ್ತಕಾಮಾದಿ ಷಡ್ವರ್ಗಮೃಗ
ರಾಶಿ ಮೃಗರಿಪು ಮದಾಷ್ಟೇಭ ಕೇಸರಿ ಸಕಲವೇದ ಪೌರಾಣಾಗಮ
ಘೋಷಿಸುವ ವನಧಿ ಶಿವಭಕ್ತಿಯಂ ಬದ್ದಿಸುವ
ತ್ರಾಸು ಶೈವಾಚಾರದೊರೆಗಲ್ಲು ಜನ್ಮವಾ
ರಾಶಿ ವಡಬಾಗ್ನಿಯೆನಿಪನುಭಾವಮಂಟಪವಿದೆನಲಾತ
ನಿಂತೆಂದಳು'' 78

ಹೆಂಡತಿ, ಮಕ್ಕಳು ಐಶ್ವರ್ಯವೆಂಬ ಈಷಣತ್ರಯಗಳನ್ನು, ಅರಿಷಡ್ವರ್ಗ, ಅಷ್ಟಮದಗಳನ್ನು ಕಳೆವ, ವೇದಾಗಮಗಳನ್ನು ಪ್ರಯೋಗದಲ್ಲಿ ನಡೆದು ತೋರುವ ಶಿವಭಕ್ತಿಯನ್ನು ತೂಗಬಲ್ಲ ತಕ್ಕಡಿ, ಶಿವಾಚಾರವನ್ನು ಒರೆಹಚ್ಚುವ ನಿಕಷ, ಭವ ಸಾಗರಕ್ಕೆ ದಾವಾನಲವೆನ್ನಿಸುವ ಅನುಭವಮಂಟಪವಿದು ಎಂದು ಕಿನ್ನರಿ ಬೊಮ್ಮನ ಮೂಲಕವಾಗಿ ತಿಳಿಸಲಾಗಿದೆ. ಇದರಿಂದ ಅನುಭಾವದ ಮಂಟಪ ಏನಿತ್ತು? ಅದರ ಕಾರ್ಯಾಚರಣೆಗಳೇನು ಎಂಬಿತ್ಯಾದಿ ಅಂಶಗಳ ಮೇಲಿನ ಈ ಪುರಾಣದ ಈ ಭಾಗ ಹೆಚ್ಚು ಬೆಳಕು ಚೆಲ್ಲಿದೆ. ಅಲ್ಲಮಪ್ರಭುದೇವರನ್ನು ಕೇಂದ್ರವ್ಯಕ್ತಿಯಾಗಿ ರಚಿತವಾದ ಯಳಂದೂರ ಹರೀಶ್ವರನ (ಸು. ೧೬೦೬) ಪ್ರಭುದೇವರ ಪುರಾಣದಲ್ಲಿ ''ಬಸವ ರಾಜನನುಭಾವಮಂಟಪವ ನೋಡುತಂ'' 79 ಎಂದು ಉಲ್ಲೇಖವಾಗಿದೆ. ಪ್ರಭು ದೇವರು ಅನುಭಾವಮಂಟಪಕ್ಕೆ ಮೊದಲ ಸಲ ಬಂದಾಗ ನೋಡಿದ ವಿವರ ಇಲ್ಲಿದೆ. ಹೀಗೆ ಅನುಭಾವ ಮಂಟಪ ಕುರಿತು ಪುರಾಣಗಳಲ್ಲಿ ಸಹ ಪ್ರಸ್ತಾಪವಾಗಿರುವುದು ಚಾರಿತ್ರಿಕ ಮಹತ್ವ ಪಡೆಯುವುದು.

ಶೂನ್ಯ ಸಂಪಾದನೆ - ಅನುಭಾವಮಂಟಪ :

೧೨ನೆ ಶತಮಾನದಲ್ಲಿ ವಚನಸಾಹಿತ್ಯದ ಕೃಷಿ ಮಾಡಿದ ವಚನಕಾರರಂತೆ ೧೫ನೆ ಶತಮಾನದ ವಚನಸಂಗ್ರಹ ಕಾಲವೂ ಅತ್ಯಂತ ಮುಖ್ಯ ಕಾಲವೆಂದು ಗುರುತಿಸಬೇಕು. ಹರಿದು ಹಂಚಿ ಹೋದ ವೀರಶೈವ ಸಾಹಿತ್ಯರಾಶಿಯನ್ನು ಒಂದೆಡೆ ಕಲೆಹಾಕುವ ಮಹತ್ವದ ಕೆಲಸ ನಡೆದಿದೆ. ಅಂತೆಯೇ ಅಲ್ಪಸ್ವಲ್ಪ ವಚನಗಳಾದರೂ ಇಂದು ನಮ್ಮ ಮುಂದಿವೆ.

ಈ ಸಂಗ್ರಹ ಸಂಕಲನದ ಫಲಶ್ರುತಿಯೇ ಶೂನ್ಯಸಂಪಾದನೆಗಳು. ಶೂನ್ಯ ಸಂಪಾದನೆಗಳು ಅನುಭಾವ ಮಂಟಪದ ಯಥಾರ್ಥ ರೂಪವಾಗಿವೆ. 'ಅಲ್ಲಮ ಪ್ರಭುದೇವರು, ಚೆನ್ನಬಸವದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳೊಡನೆ ಮಹಾನುಭಾವ ಪ್ರಸಂಗಮಂ ಮಾಡಿದ ಶೂನ್ಯಸಂಪಾದನೆಯ ಸದ್ಗೋಷ್ಠಿಯ ಕಥಾಪ್ರಸಂಗ' ಎಂದು ಕೃತಿಯ ಪರಿಚಯ ಆರಂಭವಾಗಿದ್ದು ಪ್ರತಿಯೊಂದು ಶೂನ್ಯಸಂಪಾದನೆಯ ಅಂತ್ಯದಲ್ಲಿ..... ಮಹಾನುಭಾವ ಸದ್ಗೋಷ್ಠಿಯಂ ಮಾಡಿದ..... ಎಂಬ ಉಲ್ಲೇಖಗಳಿವೆ. ಈ ಶೂನ್ಯ ಸಂಪಾದನೆಗಳಿಗೆ ಮಹಾಕಾವ್ಯಕ್ಕೆ ಮೀರಿದ ಶಕ್ತಿಯಿದೆ. ಇವು ಒಂದು ರೀತಿಯಲ್ಲಿ ಗ್ರೀಕ್ ತತ್ವಜ್ಞಾನಿಗಳ ಚರ್ಚೆಗೆ ಹೋಲಿಕೆಯಾಗುತ್ತವೆ.'

ಶೂನ್ಯಸಂಪಾದನೆಗಳಲ್ಲಿ ಅಕ್ಕಮಹಾದೇವಿ, ಸಿದ್ಧರಾಮ, ಮತ್ತು ನುಲಿಯ ಚಂದಯ್ಯರ ಸಂಪಾದನೆ ಅತ್ಯಂತ ಮುಖ್ಯವಾಗಿದ್ದು ಅಧಿಕೃತವಾಗಿ ಈ ಪ್ರಸಂಗಗಳು ಅನುಭಾವ ಮಂಟಪದಲ್ಲಿಯೇ ನಡೆದಿವೆ. ಹಾಗಾಗಿ ಅಲ್ಲಲ್ಲಿ ಅನುಭಾವ ಮಂಟಪದ ಪ್ರಸ್ತಾಪವೂ ಇದೆ. ಪ್ರಾತಿನಿಧಿಕವಾಗಿ ನುಲಿಯ ಚಂದಯ್ಯನ ಪ್ರಸಂಗವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ನುಲಿಯ ಚಂದಯ್ಯ-ಲಿಂಗ ಬಿದ್ದಾಗ ಮಡಿವಾಳ ಮಾಚಿದೇವನ ಮಧ್ಯಸ್ಥಿಕೆಯಿಂದ ಸಮಸ್ಯೆ ಬಗೆಹರಿಯದಾಗ ಅನಿವಾರ್ಯವಾಗಿ 'ವಿಷಯ'ವನ್ನು ಅನುಭಾವ ಮಂಟಪದ ಸಾಮೂಹಿಕ ಚರ್ಚೆಗೆ ಹಾಕಬೇಕಾಗಿ ಬರುತ್ತದೆ.

''..........ಹೀಗೆಂದು ಚಂದಯ್ಯಗಳು ಬಿನ್ನೈಸಲು ಆತನ ತಿಳಿಹುವುದಕ್ಕೆ ಅನುಭಾವ ಮಂಟಪದಲ್ಲಿ ಬಸವರಾಜ ದೇವರು ಪ್ರಭುದೇವರು ಮುಂತಾದ ಗಣಂಗಳ ಕೈಯಲ್ಲಲ್ಲದೆ ಶರಣರ ಸಂಗವೇ ಮುಖ್ಯವೆಂದು ಅಲ್ಲಿಗೆ ಕರೆತರುವ ಪ್ರಸ್ತಾವದ ವಚನ :

ಗುರುಪೂಜೆಯನಱಿದೆನೆಂದು ಲಿಂಗಪೂಜೆಯ ಬಿಡಲಾಗದು
ಲಿಂಗಪೂಜೆಯನಱಿದೆನೆಂದು ಜಂಗಮಪೂಜೆಯ ಮಱೆಯಲಾಗದು
ಜಂಗಮಪೂಜೆಯನಱಿದೆನೆಂದು ಶರಣರ ಸಂಗವ ಮರೆಯಲಾಗದು
ಇದು ಕಾರಣ ಶರಣರ ಸಂಗವ ಸಮ್ಯಗ್ ಜ್ಞಾನದಲ್ಲಲ್ಲದೆ
ಕಲಿದೇವಯ್ಯನ ಕೂಡುವ ಕೂಟ ಕಾಣಬಾರದು
ಹೋಹ ಬಾರಾ ಚಂದಯ್ಯ (೪೧೧೮) [80]

ಹೀಗೆ ಮಡಿವಾಳ ತಂದೆಗಳು ಆ ಚಂದಯ್ಯಗಳಿಗೆ ಆತನಂಗದ ಮೇಲಣ ಲಿಂಗವೇ ಚರಸೇವೆಯ ಮಾಡಬೇಕೆಂಬ ಮೋದದಿಂ ಲಿಂಗಮೂರ್ತಿಯನು ಅನುಭಾವಮಂಟಪಕ್ಕೆ ಬಿಜಯಂಗೈಸಿಕೊಂಡು ಬರಲು.....................

ಇಂಥ ಅನೇಕ ಪ್ರಸಂಗಗಳ ಪ್ರಸ್ತಾಪಗಳು ಶೂನ್ಯಸಂಪಾದನೆಯಲ್ಲಿ ಬರುತ್ತವೆ.

೧.೫.೭. ಶಾಸನಗಳು - ಅನುಭಾವಮಂಟಪ :

ಶಾಸನಗಳು ಅರಸರಿಗೆ ಸಂಬಂಧಿಸಿದವಾಗಿರುವುದರಿಂದ (ಧಾರ್ಮಿಕ ಶಾಸನಗಳೂ ಇರುತ್ತವೆ. ಆದರೆ ಅರಸನು ನಂಬಿದ ಧರ್ಮವಾಗಿರಬೇಕು). ಶರಣರಿಗೂ ಅರಸರಿಗೂ ತಾತ್ವಿಕ ವಿರೋಧವಿತ್ತು. ವ್ಯಷ್ಟಿಗಿಂತ ಸಮಷ್ಟಿಯೇ ಮುಖ್ಯವಾಗಿರುವಾಗ ಅರಸನ ಸಂಬಂಧದಿಂದ ಒಂದು ಸಮಾನ ಅಂತರದಲ್ಲಿದ್ದರು. ಅಲ್ಲದೇ ಸ್ವತಃ ವಚನಕಾರರು ''ಪ್ರಚಾರ ಪ್ರಿಯತೆ''ಯಿಂದ ದೂರ ಉಳಿದವರಾಗಿದ್ದರು. ಹಾಗಾಗಿ ಬಹುತೇಕ ಸಮಕಾಲೀನ ಸಂದರ್ಭದ ಶಾಸನಗಳು ಅನುಭಾವಮಂಟಪ ಕುರಿತು ಮೌನವಹಿಸಿವೆ. ಈ ಅನುಭಾವಮಂಟಪ ಬಸವಣ್ಣನ ಮೂಲಕವೇ ಹುಟ್ಟಿ ಅಂದೇ ನಿಲ್ಲಲಿಲ್ಲ. ಅದಕ್ಕೂ ಮೊದಲು ಇದ್ದವೆಂಬುದು ಸ್ಪಷ್ಟಪಡಿಸಲಾಗಿದೆ. ನಂತರದಲ್ಲಿ ಸಹ ಅದರ ಪರಂಪರೆ ಬೆಳೆದುಕೊಂಡು ಬಂದಿದೆ. ಹೀಗಾಗಿ ಇತ್ತೀಚೆಗೆ ಪ್ರಕಟವಾದ ಬೆಂಗಳೂರು ಸಮೀಪದ ಬೇಲಿಮಠದ ಶಾಸನವೊಂದು ಅನುಭಾವಮಂಟಪವನ್ನು ಕುರಿತು ಉಲ್ಲೇಖಿಸಿದೆ.

ಶಾಸನ ಪಾಠ :

೧: ಶ್ರೀಮತು ಶಿವಾನುಭಾವಿಗಳಾದ ಹೊಸಕೋಟೆಯ
ಮಹಂತೇಶ್ವರ ಪ್ರಭ ಎವಿಸು ಸಂವತ್ಸರ

೨. ದ ಮಾರ್ಗಶಿರ ಮಾಸ ಶುದ್ಧ ಪಂಚಮೆಯ
ಸೋಮವಾರದಲ್ಲಿ ಶಿವಯೋಗದೊಳು ನೆಲಸಿ

೩. ದ ಶೂನ್ಯಸಿಂಹ್ವಾಸನದ ಮೇಲಣ ಅನುಭಾವ ಮಂಟಪ
ಪಾಲ್ಗುಣದಲ್ಲಿ ನಿರ್ಮಿತವಾಯ್ತು

೪. ಶ್ರೀಮತು ಸಡುಸ್ಥಲ ಚಕ್ರವರ್ತಿಯೆಂನೊಡೆಯ
ಹೊಸಕೋಟೆಯ ಮಹಂತ ಗುರುಮೂರ್ತಿಯ ಪಾದಾ

೫. ಂಬುಜಭೃಂಗ ಮರಿಸಿದ್ದಲಿಂಗ ದೇಶಿಕ ರಚಿತ
ಮುಕ್ತಿಮಂಟಪ ಕುಸುಮ ತವಚರಣ ಸಮರ್ಪಣಂ

ಶಾಸನಪತ್ಯದ ಸಾರಾಂಶ ಹೀಗಿದೆ : ಶಿವಯೋಗಿಗಳಾದ ಹೊಸಕೋಟೆಯ ಮಹಂತೇಶ್ವರ ಪ್ರಭುಗಳು ಶಿವೈಕ್ಯರಾದಾಗ ಈ ಶೂನ್ಯಸಿಂಹಾಸನ ಮೇಲಣ ಅನುಭಾವ ಮಂಟಪ ಪಾಲ್ಗುಣದಲ್ಲಿ ನಿರ್ಮಿತವಾಯಿತು. ಇದನ್ನು ಷಟಸ್ಥಲ ಚಕ್ರವರ್ತಿಯಾದ ಮಹಂತೇಶ್ವರ ಪ್ರಭುಗಳ ಆಪ್ತ ಶಿಷ್ಯನಾದ ಮರಿಸಿದ್ದಲಿಂಗ ದೇಶಿಕನು ರಚಿಸಿ ಅವರ ಪಾದಗಳಿಗೆ ಅರ್ಪಿಸಿದನು. [81] ಈ ಶಾಸನ (೧೭೬೧)ದಲ್ಲಿ ಮುಖ್ಯವಾಗಿ ಶೂನ್ಯ ಸಿಂಹಾಸನ, ಷಟ್‌ಸ್ಥಲ, ಹಾಗೂ ಅನುಭಾವಮಂಟಪ ಕುರಿತು ಪ್ರಸ್ತಾಪಗಳಿದ್ದು ಅನುಭಾವಮಂಟಪದ ಪರಂಪರೆಯನ್ನು ಸ್ಪಷ್ಟವಾಗಿ ಸೂಚಿಸಲಾಗಿದೆ. ಅನುಭಾವ ಮಂಟಪವು ತುಂಬಾ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಿದ್ದು ಅದರ ಪರಂಪರೆಯ ಜೀವಂತಿಕೆಗೆ ಕಾರಣವೆಂಬುದು ಮರೆಯಬಾರದು. ಇಲ್ಲಿ ಉದ್ಧೃತ ವಾಗಿರುವ ಶಾಸನ ಅನುಭಾವಮಂಟಪಕ್ಕೆ ೧೨ನೆ ಶತಮಾನದ ಬಸವಾದಿ ಶರಣರ ಅನುಭಾವಮಂಟಪವೇ ಮೂಲ ಪ್ರೇರಣೆ. ಬೇಲಿ ಮಠದ ಶಾಸನ ಅಪ್ಪಟ ಧಾರ್ಮಿಕ ಬಲವನ್ನು ಹೊಂದಿದೆ. ಆದರೆ ಬಸವಾದಿ ಶರಣರ ಅನುಭಾವಮಂಟಪ ಸಮಾಜೋ-ಧಾರ್ಮಿಕ ಸಾಂಸ್ಕೃತಿಕ ಅಂಶಗಳನ್ನು ಒಳಗೊಂಡಿತ್ತು.

೧.೫.೮. ಜನಪದ ಕಾವ್ಯಗಳು - ಅನುಭಾವಮಂಟಪ :

ಜಾನಪದವೆಂದರೆ ನಮ್ಮ ಒಟ್ಟಾರೆ ಜೀವನ ವಿಧಾನವೆಂದು ಗುರುತಿಸಿಕೊಳ್ಳುವ ಸಂದರ್ಭದಲ್ಲಿ ಇಂದಿನ ಎಲ್ಲ ಬೆಳವಣಿಗೆಗಳ ಹಿನ್ನೆಲೆ ಜಾನಪದವೆಂದೇ ಕರೆಯ ಬೇಕು. ವಿಜ್ಞಾನ, ಸಾಮಾಜಿಕ ವಿಜ್ಞಾನ ಹಾಗೂ ಕಲೆಗಳೆಲ್ಲಕ್ಕೂ ಜಾನಪದವೇ ತಾಯಿ ಬೇರಾಗಿರುವ ಹಿನ್ನಲೆಯಲ್ಲಿ ಭಾರತದ ಎಲ್ಲ ಸಾಂಸ್ಕೃತಿಕ ಸಂದರ್ಭಗಳಿಗೂ ಪುನರುದ್ಧಾರಗಳಿಗೂ ಜಾನಪದವೇ ಮೂಲ. ವೇದೋಪನಿಷತ್ತಿನಿಂದ ಇಂದಿನ ವರೆಗೆ ಎಲ್ಲ ದರ್ಶನಗಳಿಗೂ ಮೂಲವಾದ ಜಾನಪದದ ಬಹುಮುಖ್ಯ ಅಂಶ ವೆಂದರೆ, ಕೂಡಿ ಬಾಳುವುದು. ಇದೇ ಸಾಂಘಿಕ ಮತ್ತು ಐಕ್ಯತೆಯ ಪ್ರತೀಕವೆಂದು ಗುರುತಿಸಿಕೊಳ್ಳುವಾಗ ವಚನಕಾರರ ಬದುಕಿನ ಧೋರಣೆಗಳು ಇದಕ್ಕೆ ಅಪವಾದ ವೆಂಬಂತೆ ಇರಲಿಲ್ಲ. ಬದಲಾಗಿ ನೆಲಮೂಲದ ಬದುಕಿಗೆ ಹೆಚ್ಚು ಒತ್ತು ಕೊಟ್ಟು ಜಾನಪದೀಯವಾಗಿ ಬದುಕಿದರು. ಅದರ ಫಲಶ್ರುತಿಯೇ ಅನುಭಾವಮಂಟಪ.

ಜನಪದವು ಮೌಖಿಕ ಸಂಪ್ರದಾಯ (oral tradition) ಆಗಿರುವುದರಿಂದ ವೇದ ಸುಳ್ಳಾದರೂ ಗಾದೆ ಸುಳ್ಳಾಗದೆಂಬ ನಾಣ್ಣುಡಿಯಂತೆ ಮೌಖಿಕ ಸಂಪ್ರದಾಯದ

ಜನಪದ ಕಾವ್ಯಗಳನ್ನು ಪ್ರಮಾಣಭೂತ ಪಠ್ಯಗಳೆಂದು ಗ್ರಹಿಸಬೇಕು. ಅಂಥ ಜನಪದ ಕಾವ್ಯಗಳಲ್ಲಿ ಅನುಭಾವ ಮಂಟಪ ಕುರಿತ ಉಲ್ಲೇಖಗಳು ಹೇರಳವಾಗಿವೆ.

''.......ಜಾತಿಭೂತದ ಆಟವ ನೋಡುತ ಮನದೊಳು ಕಸವಿಸಿಗೊಂಡಿಹದು
ಅದಕ್ಕಾಗಿ ದೃಢವ್ರತ ತೊಟ್ಟಿಹನು ಅನುಭಾವಮಂಟಪ ಕಟ್ಟಿದನು.....
ಅಕ್ಕಮಹಾದೇವಿ ಮುಕ್ತಾಯಿ ನೀಲಮ್ಮ ಗಂಗಮ್ಮ ಲಕ್ಕಮ್ಮ ಶರಣೆಯರು
ಲಿಂಗಮ್ಮ ಮಹಾದೇವಿ ಅಕ್ಕನಾಗಾಯಿ ತಾಯಿ ಕಲ್ಯಾಣಮ್ಮ
ಅನುಭವಮಂಟಪದೊಳಿಹರು ಲಿಂಗವೆ ಪತಿಯೆಂದು ನಂಬಿಹರು
ಕಾಯಕದೊಳು ಶಿವನ ಕಂಡಿಹರು''[82]

''ಜನಮನ ತಿದ್ದಲು ಕಟ್ಟಿದ ಸಂಘವು ಕೈಲಾಸದ ಸಿರಿ ತಂದಿತ್ತು
ಅನುಭಾವ ಮಂಟಪವೆಂಬುವ ಧಾರ್ಮಿಕ ಚೇತನ ನಾಮವ ಪಡೆದಿತ್ತು''[83]

''ಜಾತಿ ವಿಜಾತಿಯ ಭೇದವ ತೆಗೆದು
ನೀತಿಯೇ ನಿಜವಾದ ಜಾತಿಯು ಎಂದು
ಮಾತಿನ ಚರ್ಚೆಯ ರಚಿಸಿದ ಅನುಭಾವ ಮಂಟಪವನ್ನು
ಅನುಭವ ಮಂಟಪದ ದಕ್ಷತೆಯನ್ನು ಅಲ್ಲಮ ಪ್ರಭುವಿಗೆ ವಹಿಸಿದನು.
........ಅನುಭವ ಮಂಟಪ ದಿನದಿನ ಬೆಳೆಯಿತು
ಕಲ್ಯಾಣ ಕೈಲಾಸವೆನಿಸಿತು
ಮಾನವಕುಲ ಉದ್ಧಾರವಾಗುವ ವೀರಶೈವಮತ ಹೆಚ್ಚಾಯಿತು.''[84]

ಈ ಮೇಲಿನ ಉಲ್ಲೇಖಗಳು ಅನುಭಾವ ಮಂಟಪದ ರಚನೆಯ ಅನಿವಾರ್ಯತೆ, ಉದ್ದೇಶ, ಆಶಯಗಳನ್ನು ಬಹಳ ನಿಖರವಾಗಿ ಸ್ಪಷ್ಟಪಡಿಸುತ್ತವೆ. ಸಾಮಾಜಿಕ ಸಾಮರಸ್ಯದ ಮುಖ್ಯ ಕಾಳಜಿಗಳೊಂದಿಗೆ ರಚಿತವಾದ ಈ ವೇದಿಕೆ, ಲಿಂಗಭೇದ ಮರೆತು ಮಹಿಳೆಯರಿಗೂ ಸಮಾನಸ್ಥಾನ ನೀಡಿದ ಪರಿಯನ್ನು ವಿವರಿಸುತ್ತದೆ. ಜನತೆಯ ಮನಸ್ಸನ್ನು ತಿದ್ದಿ ಚಾರಿತ್ರ್ಯ-ನೈತಿಕ ನೆಲೆಯ ಬದುಕನ್ನು ಕಟ್ಟಲು ಅನುಭಾವಮಂಟಪ ಶ್ರಮಿಸಿದ ರೀತಿಗಳನ್ನು ದಾಖಲಿಸಿದ ಈ ಕಾವ್ಯ, ಅನುಭಾವ ಮಂಟಪ, ಅದರ ಅಧ್ಯಕ್ಷ ಅಲ್ಲಮನೆಂಬುದು ಸಾಬೀತುಗೊಳಿಸಿದೆ. ಅನುಭಾವ ಮಂಟಪ ದಿನದಿಂದ ದಿನಕ್ಕೆ ಬೆಳೆದು ಕಲ್ಯಾಣ ಕೈಲಾಸವೆನಿಸಿತೆಂದು ಜಾಹೀರುಗೊಳಿಸುವ ಜನಪದ ಕಾವ್ಯಗಳು ಚರಿತ್ರೆಯನ್ನು ಕಟ್ಟಲು ಮಹತ್ವದ ದಾಖಲೆಯನ್ನು ಒದಗಿಸುತ್ತದೆ.

೧.೫.೯. ವೀರಶೈವ ಕವಿಗಳಲ್ಲಿ ಅನುಭಾವ ಮಂಟಪದ ಪರಿಕಲ್ಪನೆ :

ಅನುಭಾವಿಗಳು ಸೇರಿ ನಡೆಸುವ ವೇದಿಕೆಯನ್ನು ಅನುಭಾವಮಂಟಪವೆಂದು ಕರೆಯಲಾಗಿದೆ. ಅನುಭಾವ ಮಂಟಪಕ್ಕೆ ಹಲವಾರು ಪರ್ಯಾಯ ಪದಗಳು ಬಳಕೆಯಲ್ಲಿದ್ದಂತೆ ಕಂಡುಬರುತ್ತದೆ. ಹಾಗಾಗಿ ವೀರಶೈವ ಕವಿಗಳು ಅನುಭಾವಮಂಟಪವನ್ನು ಬೇರೆ ಬೇರೆ ಹೆಸರುಗಳಿಂದ ಉಲ್ಲೇಖಿಸಿದ ಉದಾಹರಣೆಗಳೂ ಇವೆ.

ಶಿವಶರಣರನ್ನು ಅತ್ಯಂತ ಸಮೀಪದಿಂದ ನೋಡಿದ ಕವಿ ಹರಿಹರ- ಚಾಮರಸರು. ಅತ್ಯಂತ ಕೆಳಸ್ತರದವರನ್ನು ತನ್ನ ಕಾವ್ಯದ ನಾಯಕತ್ವಕ್ಕೇರಿಸಿದ್ದು ಹರಿಹರನ ಹೃದಯ ವೈಶಾಲ್ಯತೆ, ಸಾಮಾಜಿಕ ಸಾಮರಸ್ಯಕ್ಕೆ ಹಿಡಿದ ಕನ್ನಡಿ. ಬಸವರಾಜ ದೇವರ ರಗಳೆ ಬರೆದ ಹರಿಹರ, ಆ ಕಾವ್ಯದಲ್ಲಿ ಅನುಭಾವಮಂಟಪವನ್ನು ''ಪುರಾತನ ಗೀತ ಗೋಷ್ಠಿ'' [85] ಎಂದು ಉಲ್ಲೇಖಿಸಿದ್ದಾನೆ.

ಅನುಭಾವಮಂಟಪದ ಕೇಂದ್ರವ್ಯಕ್ತಿಯಾದ ಅಲ್ಲಮನನ್ನು ತನ್ನ ಕಾವ್ಯದ ನಾಯಕನಾಗಿಸಿಕೊಂಡು ಕೃತಿ ರಚಿಸಿದ ಚಾಮರಸನು ತನ್ನ ''ಪ್ರಭುಲಿಂಗ ಲೀಲೆ'' ಯಲ್ಲಿ ಅನುಭಾವಮಂಟಪವನ್ನು ಶಿವಾನುಭವದ ಗೋಷ್ಠಿಯೆಂದು ಪ್ರಸ್ತಾಪ ಮಾಡಿದ್ದಾನೆ.

ಇಷ್ಟಲಿಂಗದ ಮಾರ್ಗದಲಿ ಸಂ
ತುಷ್ಟರಾಗಿ ಶಿವಾನುಭಾವದ
ಗೋಷ್ಠಿಯನು ಸಲೆ ಕೇಳಿ ಕೇಳಿ ಮನೋನುರಾಗದಲಿ
ದುಷ್ಟ ದುರ್ವಾಸನೆಯ ನೀಗಿ ವಿ
ಶಿಷ್ಟವೆನಿಪಾ ಪ್ರಾಣಲಿಂಗದ
ನಿಷ್ಠರಪ್ಪರು.......... [86]

ಎಂಬುದಾಗಿ ಮತ್ತು,

ಭೀಮಕವಿಯ 'ಬಸವ ಪುರಾಣ'ದ ಕಿನ್ನರಿ ಬೊಮ್ಮಯ್ಯನನ್ನು ಕುರಿತ ಭಾಗದಲ್ಲಿ,

''ಮನಮೊಲಿದು ಕೈಯೊಡ್ಡಿಯಾಯ
ಯ್ಯನ ಪದೋದಕಮಂ ಪ್ರಸಾದಮ
ನನುಭವಿಸುತಂ ತತ್ವಗೋಷ್ಠಿಯೊಳಾ ಬಸವನಿರಲು
ಬಸವನಂ ಸಮ್ಯಕ್ ಕೃಪಾಮೃತ

ರಸಪಯೋರಾಶಿಯೊಳಗೋಲಾ
ಡಿಸಲಮಾತ್ಯಾಧೀಶನಂದಾ ಭಕ್ತರುಂ ತಾನುಂ
ಅಸಮಲೀಲೆಯೊಳಿರ್ದನೆಂದಿಂ
ತೊಸೆದು ಮಾಹೇಶ್ವರರು ವಿಭ್ರಾ
ಜಿಸಿ ಮಹಾವೊಡ್ಡಲಗಂಗೊಟ್ಟಿಂತು ಕುಳ್ಳಿರ್ದು'' [87]

ಅನುಪಮಿತ ಶಿವಧರ್ಮಶಾಸ್ತ್ರ
....ಸಾನುಭವ ಪಭೂಷಣ [88]

ಹೀಗೆ ಅನುಭಾವಿಗಳು ಒಂದೆಡೆ ಸೇರಿ ನಡೆಸುವ ಚರ್ಚೆಗೆ ಕವಿಯಾದವನು (ಹರಿಹರ) ಗೀತಗೋಷ್ಟಿಯೆಂದು ಪುರಾಣದ ಕರ್ತೃ ತಾತ್ವಿಕ ವಿವೇಚನೆ ಮಾಡುವುದ ರಿಂದ ತತ್ವಗೋಷ್ಟಿ (ಬಸವಪುರಾಣ) ಎಂದು ಶಿವತತ್ವಗೋಷ್ಟಿ ಎಂದು ಕರೆದದ್ದು ಅನುಭಾವಮಂಟಪದ ಪರಿಕಲ್ಪನೆಯ ಹೆಸರಲ್ಲಿಯೇ ಹೊರತು ಬೇರೆ ಅಲ್ಲ.

೧.೫.೧೦. ಶೂನ್ಯಪೀಠ

ಅನುಭಾವಮಂಟಪಕ್ಕೆ ಒಂದು ಶೂನ್ಯಪೀಠ (ಅದು ಅಧ್ಯಕ್ಷತೆಯ ಮಾದರಿ ಯಲ್ಲಿ) ಇತ್ತು. ಅದನ್ನು ಶೂನ್ಯಸಿಂಹಾಸನವೆಂದೂ ಕರೆಯಲಾಗಿದೆ. ಇದು ಅನೇಕ ವಚನಗಳಲ್ಲಿ ಪ್ರಸ್ತಾಪಿತವಾದ ವಿಷಯವಾಗಿದೆ. ಅನುಭಾವಮಂಟಪವನ್ನು ನಾಸ್ತಿಕ ನೆಲೆಯಲ್ಲಿ ನೋಡಿ ಅಂತಹ ಸಂಸ್ಥೆ ಇಲ್ಲವೆಂದಾಗ ಶೂನ್ಯಪೀಠವೇಕೆ ಬಂತು ಎಂಬ ಪ್ರಶ್ನೆ ಎದುರಾಗುತ್ತದೆ. ಸಂಸ್ಥೆ ಇಲ್ಲದೆ ಅಧ್ಯಕ್ಷನಿರಲು ಸಾಧ್ಯವೇ? ಗಣವಿಲ್ಲದೆ ಗಣ ನಾಯಕನಿದ್ದ ಹಾಗೆ. ಅನುಭಾವಮಂಟಪ ರಚಿಸಿ ಅದಕ್ಕೆ ಸಮರ್ಥ ನಾಯಕ ನೊಬ್ಬನ ಬರುವಿಕೆಗೆ ಬಸವಣ್ಣ ೧೨ ವರ್ಷ ಕಾಯಬೇಕಾಗಿ ಬಂದದ್ದನ್ನು ''ಹಮ್ಮಿ ಹನ್ನೆರಡು ಸಂವತ್ಸರ ಹಿಂದಾಯಿತ್ತು'' [89] ಎಂದು ಬಸವಣ್ಣ ಹೇಳಿದ್ದು ಮಹತ್ವದ ಸಂಗತಿ.

ಚಾಮರಸ ಕವಿಯು ಪ್ರಭುಲಿಂಗಲೀಲೆಯಲ್ಲಿ ಶೂನ್ಯಸಿಂಹಾಸನವನ್ನು ಕುರಿತು ಉಲ್ಲೇಖಿಸುತ್ತ;

''ತನ್ನೊಳಗೆ ತಾ ಸಾಧಿಸಿದ ಸಂ
ಪನ್ನತೆಯನ್ನಿದಿರಿಟ್ಟು ರಚಿಸಿದ
ಶೂನ್ಯ ಸಿಂಹಾಸನವನೆಮ್ಮೆಯ ಬಸವ ದಂಡೇಶಂ'' [90]

"ಅಂಡಪಿಂಡ ನ್ಯಾಯವೊಂದೇ
ಕಂಡಿರೇ ಎಂದೆಂಬುದನು ಭೂ
ಮಂಡಲದೊಳಾ ಶೂನ್ಯ ಸಿಂಹಾಸನದಲಜೀವಂತೆ
ದಂಡಿಯಾಗಿರೆ ನಿರ್ಮಿಸಿದನದ
ಕಂಡವರು ಬೆಱಗಾಗೆ ಬಸವನು
ದಂಡನಾಯಕನಲ್ಲಮನ ಬರುವಿಂಗೆ ಭರದಿಂದ" [91]

"ಪ್ರಾರ್ಥನೆ ಗೆ ಪರಿಣಮಿಸಿ ಕಾರಣ
ಕರ್ತೃವೆನಿಸಿದ ಗುರುಗುಹೇಶ್ವರ
ಮೂರ್ತಿಗೊಂಡನು ಶೂನ್ಯಸಿಂಹಾಸನದ ಶಿಖರದಲಿ" [92]

ಮೇಲೆ ಉಲ್ಲೇಖಿಸಿದ ಮಾತುಗಳು ಬಸವಣ್ಣನೇ ಶೂನ್ಯಸಿಂಹಾಸನ ರಚಿಸಿದ್ದು ಅದಕ್ಕೆ ಅಲ್ಲಮನ ಬರುವಿಕೆಗಾಗಿ ಚಾತಕಪಕ್ಷಿಯಂತೆ ಬಸವಣ್ಣ ಕಾದು ಕುಳಿತದ್ದು ಅಲ್ಲಮ ಬಂದಾಗ ಬಸವಣ್ಣನ ಪ್ರಾರ್ಥನೆ ಮನ್ನಿಸಿ ಅಲ್ಲಮ ಶೂನ್ಯಸಿಂಹಾಸನ ವಲಂಕರಿಸಿದ್ದ ಬಗ್ಗೆ ಸ್ಪಷ್ಟ ಮಾಹಿತಿಯನ್ನು ಒದಗಿಸುತ್ತದೆ. ವಿಶೇಷವೆಂದರೆ ಚಾಮರಸ ಈ ಕಾವ್ಯದ ೨೧ನೆ ಅಧ್ಯಾಯದಲ್ಲಿ "ಬಸವೇಶ್ವರನು ಶೂನ್ಯಸಿಂಹಾಸನವನ್ನು ರಚಿಸಿದುದು" ಮತ್ತು ೨೨ನೆ ಅಧ್ಯಾಯದಲ್ಲಿ "ಪ್ರಭುದೇವರು ಶೂನ್ಯಸಿಂಹಾಸನವನ್ನೇರಿದುದು"ಎಂದು ಸುಮಾರು ೮೮ (೨೧-೩೧, ೨೨-೧೭) ಪದ್ಯಗಳಲ್ಲಿ ವಿಸ್ತೃತವಾಗಿ ಚರ್ಚಿಸಿದ್ದಾನೆ. ಇದರಿಂದ ಅನುಭಾವಮಂಟಪಕ್ಕೆ ಶೂನ್ಯಸಿಂಹಾಸನವೊಂದು ಇದ್ದಿತ್ತೆಂದು ಖಚಿತವಾಗಿ ಹೇಳಬಹುದು.

ಅನುಭಾವಮಂಟಪ ಕುರಿತು ಮಹತ್ವದ ದಾಖಲೆಗಳು :

ಇಂದು ಯಾವುದೇ ಶೋಧಕ್ಕೂ ಮತ್ತು ವ್ಯವಸ್ಥಿತ ಅಧ್ಯಯನಕ್ಕೂ ಮುಖ್ಯ ಆಕರ ಕೃತಿಗಳೆಂದರೆ ವಿಶ್ವಕೋಶ ಹಾಗೂ ಸ್ಥಳೀಯ ಗೆಜೆಟಿಯರ್‌ಗಳು. ಈ ಕೃತಿಗಳು ಒಂದೊಂದು ವಿಷಯದ ಮೇಲೆ ಬಹಳ ಖಚಿತವಾದ ಬೆಳಕನ್ನು ನೀಡುವಲ್ಲಿ ಸಫಲವಾಗಿವೆ. ಸಂಶೋಧನೆ ಎಂದರೆ ಹಳೆಯದನ್ನು ಹುಡುಕುವ, ಹಳೆಯ ಮನಸ್ಥಿತಿಯೆಂಬ ಧೋರಣೆ ಮೀರಿದ ಮತ್ತು ಹಳೆಯದರಲ್ಲಿ ಅಡಗಿ ಹೋದ ಸತ್ಯವನ್ನು ಹೊರಹಾಕುವ ವರ್ತಮಾನದ ಜವಾಬ್ದಾರಿಯೆಂಬುದನ್ನು ಈ ಕೃತಿಗಳು ತೋರಿಸಿಕೊಟ್ಟಿವೆ. ಈ ಮಾತುಗಳು ಪ್ರಸ್ತುತ ಅಧ್ಯಯನಕ್ಕೂ ಅನ್ವಯಿಸುವುದರಿಂದ ಅವುಗಳನ್ನು ಆಧಾರವಾಗಿ ಪಡೆಯಲಾಗಿದೆ.

ಕನ್ನಡ ವಿಶ್ವಕೋಶವು ಅನುಭಾವ ಮಂಟಪ "ಬೀದರ ಜಿಲ್ಲೆಯ ಕಲ್ಯಾಣ ಪಟ್ಟಣದಲ್ಲಿ ಕಲಚೂರ್ಯ ಅರಸನಾದ ಬಿಜ್ಜಳನ ಆಳ್ವಿಕೆಯಲ್ಲಿ ಮುಖ್ಯಮಂತ್ರಿಯಾಗಿದ್ದು ಬಸವೇಶ್ವರ ಸ್ಥಾಪಿಸಿದ್ದ ಒಂದು ತತ್ವಜಿಜ್ಞಾಸೆ ಸಂಸ್ಥೆ. ಪ್ರಾಯಶಃ ಇದು ೧೧೬೦ರಲ್ಲಿ ಕಲ್ಯಾಣಪಟ್ಟಣದ ತ್ರಿಪುರಾಂತ ಕೆರೆಯ ಮೇಲಿನ ತ್ರಿಪುರಾಂತ ಗುಡ್ಡದಲ್ಲಿ ಸ್ಥಾಪಿಸಿತ್ತೆಂದು ಹೇಳುತ್ತಾರೆ. ಇದರ ಅಧ್ಯಕ್ಷ ಪ್ರಭುದೇವ, ಕಾರ್ಯದರ್ಶಿ ಚೆನ್ನಬಸವಣ್ಣ, ಸದಸ್ಯರು ಅಖಿಲ ಭಾರತ ಶಿವಶರಣರು. ಇದು ನಾಲ್ಕು ಮಹಾದ್ವಾರ, ಮೂವತ್ತಾರು ಕಂಬಗಳಿಂದ ಕೂಡಿತ್ತೆಂದು ತಿಳಿದುಬರುತ್ತದೆ. ಇದರ ಅಧ್ಯಕ್ಷಪೀಠವೇ ಶೂನ್ಯ ಸಿಂಹಾಸನ. [93]

ಇಲ್ಲಿ ಅನುಭಾವಮಂಟಪದ ರಚನೆ, ರಚನೆಕಾರ, ಅದರ ಕಾಲ ಮತ್ತು ಅಧಿಕೃತ ಸ್ಥಳವನ್ನು ನಿರ್ದೇಶಿಸಿರುವುದು ಮಹತ್ವದ ಸಂಗತಿಯಾಗಿದೆ.

ಭಾರತ ಸರ್ಕಾರವು ಕರ್ನಾಟಕ ಸರ್ಕಾರದ ಸಹಯೋಗದೊಂದಿಗೆ ತಯಾರಿಸಿದ ಬೀದರ ಜಿಲ್ಲೆಯ ಗೆಜೆಟಿಯರ್‌ನಲ್ಲಿ ಅನುಭಾವಮಂಟಪವನ್ನು ಕುರಿತು "The Anubhava Mantapa (Socio-Spiritual Parliament) was established at Kalyana (Basava Kalyana) which served as an opensublime forum where a number of dedicated men and women called *sharanas* and *sharanes* met and held discussions by free experience, Basaveshvara was the greatest of the *vachankaras* in whom the medium reached its zenith. Saint Allama Prabhu was a mystic, an eminent spiritual leader and a *vachanakara* and was looked upon with deep reverence by others. He presided over the Anubhava Mantapa and was beacon light to the seekers of spiritual enlightenment" [94] ಎಂದು ಹೇಳಲಾಗಿದೆ.

ಇಲ್ಲಿಯೂ ಕೂಡ ಅನುಭಾವಮಂಟಪ ಸಮಾಜೋ-ಧಾರ್ಮಿಕ ಸಂಸತ್ತು ಎಂಬ ಖ್ಯಾತಿಗೆ ಹೆಸರಾಗಿದ್ದು, ಅದರ ಅಸ್ತಿತ್ವ, ಕಾರ್ಯವೈಖರಿ, ಅದರ ಪೀಠಾಧಿಪತಿ ಹಾಗೂ ಪೀಠಾಧಿಪತಿಯು ಬೀರುತ್ತಿದ್ದ ಪ್ರಭಾವದ ಬಗ್ಗೆ ಪ್ರಸ್ತಾಪಿಸಲಾಗಿದೆ.

ಒಟ್ಟಾರೆಯಾಗಿ ಅನುಭಾವಮಂಟಪವೆಂಬ ಸಮಷ್ಟಿ ಪ್ರಜ್ಞೆಯ ಸಂಸ್ಥೆಯೊಂದು ೧೨ನೆ ಶತಮಾನದಲ್ಲಿತ್ತು ಎಂಬುದನ್ನು ಅತ್ಯಂತ ಖಚಿತವಾಗಿ ಹೇಳಲು ಸಾಕಷ್ಟು ಆಧಾರಗಳಿವೆ. ಲಿಂಗ-ವರ್ಣ-ಮಾರ್ಗ-ದೇಶ-ಭಾಷೆ ಭೇದಗಳಿಲ್ಲದೆ ವೃತ್ತಿಪರ ಸಾಮಾಜಿಕ ಕಳಕಳಿಯುಳ್ಳ ಸಮಾನಮನಸ್ಕರು ಸಮಾನ ವೇದಿಕೆಯಡಿ ನೆಲೆನಿಂತು ಚರ್ಚಿಸಿದ್ದು ಮಾತಾಡಿದ್ದು ಸತ್ಯ. ಇದಕ್ಕೆ ಇಂಥದೇ ಸ್ಥಳವೆಂದು ಹೇಳಬೇಕಾದ ಅಗತ್ಯವಿರಲಿಲ್ಲ. ಹಿಂದೆ 'ಚಾವಡಿ'ಗಳು ಚರ್ಚಾಕೇಂದ್ರಗಳಾಗಿ ನ್ಯಾಯನಿರ್ಣಯದ

ಸ್ಥಳಗಳಾಗಿ ಕಾರ್ಯ ನಿರ್ವಹಿಸಿದ್ದು ಇಂದಿಗೂ ಆ ಪದ್ಧತಿ ಅನೇಕ ಕಡೆ ಇದೆ. ಈ ಚಾವಡಿಗಳಿಗೆ ಕಟ್ಟಡಗಳಿಲ್ಲ, ಆದರೆ ಸಾಂಘಿಕ ಬದುಕಿನ ಚರಿತ್ರೆಯಲ್ಲಿ ಇದಕ್ಕೆ ಅತ್ಯಂತ ಮಹತ್ವದ ಸ್ಥಾನವಿದೆ. ಹಾಗೆಯೇ ಅನುಭಾವಮಂಟಪ ಕಟ್ಟಡವಿರದಿದ್ದರೂ ಶಿವಾನುಭಾವಿಗಳು ಸೇರಿದಕ್ಕೆಂದು ಸ್ವಂತ ಸ್ಥಳವೇ ಅನುಭಾವಮಂಟಪವೆಂದು ಗ್ರಹಿಸಬಹುದು.

ಬಹುತೇಕ ಆಧಾರಗಳು ಮಹಾಮನೆಯೆಂದು ಪ್ರಸ್ತಾಪಿಸಿರುವುದರಿಂದ ಬಸವಣ್ಣನ ಮನೆಯಲ್ಲಿ ಅಂಥ Socio-Spiritual ಸಂಸತ್ತಾಗಿ ಕೆಲಸ ನಿರ್ವಹಿಸಿದ ಸಾಧ್ಯತೆಗಳಿವೆ. ಹೆಚ್ಚಿನ ಆಧಾರಗಳು ''ತ್ರಿಪುರಾಂತ ಕೆರೆ - ದೇವಾಲಯದೆದುರಿನ ಅನುಭಾವಮಂಟಪ''ವೆಂದಿರುವುದರಿಂದ ಮಹಾಮನೆಯ ಆವರಣ ಸಾಲದೆ ಇರುವಾಗ ಬಯಲಿಗೆ ಬಂದು ಚರ್ಚೆ ಮಾಡಿರಬಹುದು. ಇಂದಿಗೂ ಸಹ ಅಕ್ಕ ನಾಗಮ್ಮನ ಗವಿ, ನೀಲಮ್ಮ ನಾಗಲಾಂಬಿಕೆ ಗವಿ, ಬಸವಣ್ಣನ ಅರಿವಿನ ಮನೆ, ಅಲ್ಲಮ ಪ್ರಭುದೇವರ ಗದ್ದುಗೆ, ಮಡಿವಾಳ ಮಾಚಿದೇವರ ಹೊಂಡ, ಹರಳಯ್ಯನ ಗವಿ, ನುಲಿಯ ಚಂದಯ್ಯನ ಗವಿ ಮೊದಲಾದವೆಲ್ಲ 'ತ್ರಿಪುರಾಂತ ಕೆರೆ'ಯ ಸುತ್ತ ಸಮೀಪದಲ್ಲಿವೆ. ಅಲ್ಲದೆ ಈ ಶರಣರು ಅನುಭಾವಮಂಟಪದ ಅತ್ಯಂತ ಪ್ರಮುಖ ಸದಸ್ಯರು ಹಾಗೂ ಸಕ್ರಿಯ ಕಾರ್ಯಕರ್ತರು ಆಗಿದ್ದರು. ಹಾಗಾಗಿ ಅನುಭಾವಮಂಟಪ ತ್ರಿಪುರಾಂತ ಕೆರೆಯ - ದಡದ ತ್ರಿಪುರಾಂತಕ ದೇವಾಲಯದ ಸುತ್ತಲಿನ ಬಯಲಲ್ಲಿದ್ದಿತು. ಸ್ಥಾವರ ವಿರೋಧಿಯಾದ ಶರಣರು ವಾಸ್ತುಶಿಲ್ಪಕ್ಕೆ ಮನ್ನಣೆಯನ್ನು ನೀಡಿರಲಿಲ್ಲ. ಅವರ ಗುಹೆಗಳು ಸಹ ಕಲಾಕೃತಿಗಳಿಂದ ಕೂಡಿಲ್ಲ, ನೈಸರ್ಗಿಕವಾಗಿವೆ. ಬಯಲ ತತ್ವವನ್ನು ಒಪ್ಪಿಕೊಂಡ ಶರಣರ ಅನುಭಾವಮಂಟಪವು ಬಯಲಲ್ಲಿದ್ದ ಸಾಧ್ಯತೆಗಳೇ ಇವೆ.

****

ಭಾಗ - ೨

ಅನುಭಾವಮಂಟಪದ ತೌಲನಿಕತೆ

ಅನುಭಾವಮಂಟಪದ ತೌಲನಿಕತೆ

೨. ಹಿನ್ನೆಲೆ :

ವೈವಿಧ್ಯತೆಯೆನ್ನುವುದು ವಿಶ್ವದ ಬಹುಮುಖ್ಯ ಲಕ್ಷಣವಾಗಿದೆ. ಜಗತ್ತಿನಲ್ಲಿ ಭಿನ್ನಭಿನ್ನವಾದ ಭಾಷೆ, ಪ್ರಾದೇಶಿಕತೆ, ಸಮಾಜ, ಜನಾಂಗ, ಆಡಳಿತ, ಸಂಪ್ರದಾಯ, ನಂಬಿಕೆ, ಧರ್ಮ, ತತ್ವ, ದರ್ಶನ ಮೊದಲಾದ ಬಗೆಬಗೆಯ ವೈವಿಧ್ಯತೆಗಳಿವೆ. ಗಂಡು ಹೆಣ್ಣಿನ ವಿಭಜಿತ ಕಲ್ಪನೆ ಬಾಲ್ಯ, ಯೌವನ, ಮುಪ್ಪಿನ ಅವಸ್ಥೆ ಜನನ ಮರಣದ ಸಂಕ್ರಮಣ ಹೀಗೆ ಪ್ರತ್ಯೇಕವಾದ ಹಲವಾರು ಸಾಂಸ್ಕೃತಿಕ ಆಯಾಮಗಳಿರುತ್ತವೆ. ಇವೆಲ್ಲಾ ಕಾಲದಿಂದ ಕಾಲಕ್ಕೆ ದೇಶದಿಂದ ದೇಶಕ್ಕೆ ಧರ್ಮ ದರ್ಶನಗಳಿಂದ ಧರ್ಮ ದರ್ಶನಕ್ಕೆ ಒಂದು ಸಾಂಸ್ಕೃತಿಕ ಪ್ರಕ್ರಿಯೆಯಿಂದ ಮತ್ತೊಂದು ಸಾಂಸ್ಕೃತಿಕ ಪ್ರಕ್ರಿಯೆಗೆ ಭಿನ್ನವಾಗಿರುತ್ತವೆ. ಆದರೆ ಮನುಷ್ಯರ ಮೂಲಭೂತ ಆಶಯ, ಕಾಳಜಿಗಳು ಮಾತ್ರ ಒಂದೇ ಆಗಿರುತ್ತವೆ. ಜಾಗತಿಕ ಧರ್ಮ ದರ್ಶನಗಳನ್ನು ನೋಡಿದರೆ ಈ ಮಾತುಗಳು ವಿದಿತವಾಗುತ್ತವೆ. ಆದರೆ ಆಶ್ಚರ್ಯದ ಸಂಗತಿ ಎಂದರೆ ಯಾವುದೂ ಯಥಾವತ್ತಾಗಿರುವುದಿಲ್ಲ. ಮೂಲದ ಎಳೆಗಳು ಕೂಡಾ ಭಿನ್ನ- ಭಿನ್ನವಾಗಿರುತ್ತವೆ. ಪ್ರತ್ಯೇಕವಾದ ಆಶಯಗಳು ಎಲ್ಲೋ ಒಂದು ಬಿಂದುವಿನಲ್ಲಿ ಒಂದೇ ಆಗಿರುತ್ತವೆ.

ಮನುಕುಲದ ಏಳಿಗೆಗಾಗಿ ಸಾಂಘಿಕ ಪ್ರಯತ್ನಗಳಿಗೆ ನಮ್ಮಲ್ಲಿ ಕೊರತೆಯಿಲ್ಲ. ಅಂತಹ ಐತಿಹಾಸಿಕ ಬೆಳವಣಿಗೆಯಲ್ಲಿ ಮಧ್ಯಕಾಲವೂ ಒಂದು. ೧೨ನೆ ಶತಮಾನದ ಅನುಭಾವಮಂಟಪವು ಚಾರಿತ್ರಿಕ ಬೆಳವಣಿಗೆಯ ಒಂದು ಭಾಗವಾಗಿದೆ. ಈ ಅನುಭಾವಮಂಟಪವು ಆಧ್ಯಾತ್ಮಿಕಚರಿತ್ರೆಯಲ್ಲಿ ಮೊದಲ ಸಂಸತ್ತು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಅದು ಏಕಾಏಕಿ ಹುಟ್ಟಿದ್ದಲ್ಲ. ಜೀವಪರ ಕಾಳಜಿಯೊಂದಿಗೆ ಹುಟ್ಟಿದ ಅನುಭಾವಮಂಟಪಕ್ಕೆ ಹಿನ್ನೆಲೆಯಾಗಿ ಕೆಲ ಸಂಘಟನೆಗಳು, ದಾರ್ಶನಿಕ ಸಿದ್ಧಾಂತಗಳು ಕಾರ್ಯ ನಿರ್ವಹಿಸಿವೆ. ಅವುಗಳನ್ನು ತೌಲನಿಕವಾಗಿ ನೋಡುವುದು ಇಲ್ಲಿನ ಉದ್ದೇಶವಾಗಿದೆ.

ತೌಲನಿಕ ಅಧ್ಯಯನವೆನ್ನುವುದು ಒಂದರ್ಥದಲ್ಲಿ ಅನ್ವಯಿಕ ಅಥವಾ ಅಂತರ್ ಶಿಸ್ತೀಯ ಅಧ್ಯಯನ ಕೂಡ ಆಗಿರುತ್ತದೆ. ಏಕೆಂದರೆ ತೌಲನಿಕ ಅಧ್ಯಯನವೆಂದಾಗ ನಮ್ಮಲ್ಲಿ ಕೆಲವು ತಪ್ಪು ಗ್ರಹಿಕೆಗಳಿವೆ. ಒಂದು ಶ್ರೇಷ್ಠ ಇನ್ನೊಂದು ಕನಿಷ್ಠವೆಂಬ

ಸಂಕುಚಿತತೆ. ಇಂತಹ ತಪ್ಪು ಗ್ರಹಿಕೆ ತೌಲನಿಕ ಅಧ್ಯಯನದಿಂದ ಆಯಾ ಕಾಲದ ಬಹುಮುಖ್ಯ ಆಶಯಗಳನ್ನು ಅರ್ಥೈಸಿಕೊಳ್ಳಲು ನೆರವಾಗುತ್ತವೆ. ಆ ಮೂಲಕ ವಿವಿಧ ನೋಟಗಳ ಒಡನಾಟ, ಕಣ್ಣಿಗೆ ಮೀರಿ ನಿಲ್ಲುವ ಮುನ್ನೋಟಗಳನ್ನು ಕಾಣ ಬಹುದು. ವಿವಿಧ ತತ್ವಸಿದ್ಧಾಂತಗಳನ್ನು ಮುಖಾಮುಖಿಯಾಗಿ ಗ್ರಹಿಸಿದಾಗ ಆಂತರಿಕ ಸಂಬಂಧಗಳ ವಿವಿಧ ಆಯಾಮಗಳು ತೆರೆದುಕೊಳ್ಳುತ್ತವೆ. ಹೊಸ ಅರ್ಥಗಳು ಹುಟ್ಟಿ ಕೊಳ್ಳುತ್ತವೆ. ನಮ್ಮ ನಮ್ಮ ಮಡಿವಂತಿಕೆಗಳು ಸಡಿಲಗೊಳ್ಳುತ್ತವೆ. ಅದರಿಂದ ಹೊಸ ಪರಿಣಾಮ ಉಪಯುಕ್ತತೆಗಳುಂಟಾಗುತ್ತವೆ. ಅದರೊಂದಿಗೆ ಪರಮತ ಪರವಿಚಾರ ಗಳ ಸಹಿಷ್ಣುತಾಭಾವವು ಬೆಳೆಯುತ್ತದೆ. ನಮ್ಮ ಭ್ರಮೆ ಹಾಗೂ ಪೂರ್ವಾಗ್ರಹಗಳು ದೂರಾಗಿ ಅನನ್ಯತೆ ಹೆಚ್ಚಾಗುತ್ತದೆ. ಅದರಿಂದ ಅನುಭಾವ ಮಂಟಪದೊಂದಿಗೆ ಇತರ ಧಾರ್ಮಿಕ ದಾರ್ಶನಿಕ ತತ್ವಗಳನ್ನು ಇಲ್ಲಿ ಚರ್ಚಿಸಲಾಗಿದೆ. ಇಲ್ಲಿ ಯಾವುದೇ ಸಿದ್ಧಾಂತ ದೊಡ್ಡದೂ ಅಲ್ಲ ಮತ್ತು ಅದು ತನ್ನಷ್ಟಕ್ಕೆ ತಾನು ಸಣ್ಣದೂ ಅಲ್ಲ. ಸಮಕಾಲೀನ ಸಂದರ್ಭಕ್ಕೆ ಮುಖ್ಯವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಅನುಭಾವ ಮಂಟಪವನ್ನು ಬೌದ್ಧರ ಸಂಘ, ಜೈನರ ಸಮವಸರಣ ಮಂಟಪ, ಸಾಕ್ರೆಟಿಸ್‌ನ ಚರ್ಚೆ ಮತ್ತು ಪ್ಲೇಟೋವಿನ ಅಕಾಡೆಮಿಗಳೊಂದಿಗಿಟ್ಟು ತೌಲನಿಕವಾಗಿ ಚರ್ಚಿಸ ಲಾಗಿದೆ.

****

೨.೧. ಬೌದ್ಧ ಸಂಘ - ಅನುಭಾವಮಂಟಪ

ಹಿನ್ನೆಲೆ :

ಕಾರಣೀಪುರುಷನ ಉದಯ, ವ್ಯಕ್ತಿತ್ವ ರೂಪಿತವಾಗುವುದಕ್ಕೆ ಸಮಕಾಲೀನ ಕೂಗು ಕಾರಣವಾಗಿರುತ್ತದೆ ಎಂಬ ಪುರಾಣದ ಮಾತು ಇಂದಿಗೂ ಪ್ರಸ್ತುತವೆನಿಸುತ್ತಿದೆ. ಈ ಹಿನ್ನೆಲೆಯಲ್ಲಿ ಬುದ್ಧನ ಆಗಮನ ಮತ್ತು ಅವನು ರೂಪಿಸಿದ ಬೌದ್ಧ ಧರ್ಮ ಸಂಘಗಳನ್ನು ವಿವೇಚಿಸುವುದು ಸೂಕ್ತ. ಏಕೆಂದರೆ ಹೊಸ ವ್ಯಕ್ತಿ, ಸಮಾಜ ಮತ್ತು ಧರ್ಮ ಏನೇ ಇರಲಿ ಅದು ಹೊಸದಾಗಿ ಹುಟ್ಟಲು ಯುಗಧರ್ಮದಲ್ಲಾಗುವ ಬದಲಾವಣೆಯೇ ಕಾರಣ. ಇದಕ್ಕೆ ಬುಧ್ಧ ಮತ್ತು ಬೌದ್ಧ ಧರ್ಮ ಹೊರತಾಗಿಲ್ಲ.

ಬುದ್ಧನ ಬರುವಿಕೆಯ ಪೂರ್ವದ ಮಾನವರ ಬದುಕನ್ನು ನೆನಪಿಸಿದರೆ ಅಸಹ್ಯ ಹುಟ್ಟುವ ರೀತಿಯಲ್ಲಿ ಮಲಿನಗೊಂಡಿತ್ತು. ಬುದ್ಧನಿಗಿಂತ ಪೂರ್ವದಲ್ಲಿ ವೈದಿಕ (ವೇದಾಗಮಗಳು) ಮತತತ್ವಗಳು ಚಲಾವಣೆಯಲ್ಲಿದ್ದವು. ಶತಮಾನಗಳಿಂದ ಜನತೆಯ ಅಧ್ಯಾತ್ಮಿಕ, ಸಾಮಾಜಿಕ ಬದುಕಿನ ಗುತ್ತಿಗೆದಾರರಾಗಿ ಕೆಲಸ ನಿರ್ವಹಿಸಿದ ವೈದಿಕರು, ವೇದಕಾಲದ ಜ್ಞಾನಮಾರ್ಗದಿಂದ ಕರ್ಮಸಿದ್ಧಾಂತಕ್ಕೆ ವಾಲಿದರು. ಹಲವಾರು ಕರ್ಮಠತನಗಳು ರೂಢಿಗೆ ತರುವುದರೊಂದಿಗೆ 'ಅನಾಚಾರವಾದರೂ ಆಚಾರ ಕೆಡಬಾರದು' ಎಂಬ ನಿಲುವಿಗೆ ಬಂದರು. ವೇದಗಳಲ್ಲಿರುವ ನೀತಿ ಮೌಲ್ಯಗಳಿಗಿಂತ ಕರ್ಮ(ಯಜ್ಞ ಯಾಗ)ಗಳೇ ಮುಖ್ಯವೆಂದು ಪ್ರತಿಪಾದಿಸಿದರು. ವೇದದ ಮೂಲದ ಮಾನವೀಯ ಆಚರಣೆಗಳಿಗಿಂತ ವೇದಾಧ್ಯಯನವೇ ಮುಖ್ಯವೆಂದು ಬಿಂಬಿಸಿ, ನಂಬಿಸಿದರು. ವೇದೋತ್ತರದ ಉಪನಿಷತ್ತಿನಲ್ಲಿ ಇದಕ್ಕೆ ವಿರೋಧವಿತ್ತು. ಉಪನಿಷತ್ತುಗಳು, ಯಜ್ಞಯಾಗಗಳನ್ನು ಕಟುವಾಗಿ ಟೀಕಿಸುತ್ತ ವೈದಿಕರ ಕರ್ಮಾಚರಣೆಗಳನ್ನು ತೂತು ಬಿದ್ದ ಅದೃಢವಾದ ದೋಣಿಗೆ ಹೋಲಿಸಿದರು. ಉಪನಿಷತ್ ಕಾಲದ ನಂತರ ವೈದಿಕ ಕರ್ಮಠತನಗಳನ್ನು ಮೊಟ್ಟ ಮೊದಲು ಪ್ರಶ್ನಿಸಿ ವಿರೋಧಿಸಿದವನೆಂದರೆ ಬುದ್ಧ. ಇವನು ಯಜ್ಞ, ಯಾಗ, ಹಿಂಸೆ, ಬಲಿ, ಮೌಢ್ಯತೆ ಮತ್ತು ಅನಿಷ್ಟ ಕಂದಾಚಾರಗಳನ್ನು ಬಹಿಷ್ಕರಿಸಿದನು. ಪರಿಶುದ್ಧವಾದ ವಿಚಾರವಾದವೊಂದನ್ನು ಹುಟ್ಟುಹಾಕಲು ಸ್ವತಃ ಧರ್ಮ ರೂಪಿಸಿದ ಬುದ್ಧ ಸಂಘವನ್ನೂ ಕಟ್ಟಿ, ಮಾನವರಲ್ಲಿ ಪ್ರೀತಿ, ಶಾಂತಿ ನೆಲೆಸುವಂತೆ ನೋಡಿಕೊಂಡನು.

೨.೧.೧. ಗೌತಮ ಬುದ್ಧ;

ಬುದ್ಧನ ಮೊದಲ ಹೆಸರು ಸಿದ್ಧಾರ್ಥ. ಸಿದ್ಧಾರ್ಥನು ಇಂದಿನ ನೇಪಾಳ
ಬೆಟ್ಟಗಳ ತಪ್ಪಲು ಪ್ರದೇಶದಲ್ಲಿನ ಕಪಿಲವಸ್ತುವಿನ ಶಾಕ್ಯವೆಂಬ ಕ್ಷತ್ರಿಯ ಮನೆತನದಲ್ಲಿ
ಕ್ರಿ.ಪೂ. ಸು. ೫೬೩ರಲ್ಲಿ ಜನಿಸಿದನು.[95] ಇವನ ತಂದೆ ಕಪಿಲವಸ್ತುವಿನ ಚುನಾಯಿತ
ಪ್ರತಿನಿಧಿ ಅರಸನಾಗಿ ಶಾಕ್ಯಗಣರಾಜ್ಯದ ಮುಖ್ಯಸ್ಥನಾಗಿದ್ದ ಶುದ್ಧೋಧನ. ತಾಯಿ
ಕೋಸಲದ ರಾಜಮನೆತನದವಳು. ಹೀಗೆ ಸಿದ್ಧಾರ್ಥನು ಅರಸು ಮನೆತನದಿಂದ
ಬಂದಿರುವುದರಿಂದ ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವದ ಭಾವನೆಗಳು
ಅವನಲ್ಲಿದ್ದವು. ಬಾಲ್ಯದಿಂದಲೇ ಅವನು ವಿಚಾರಪೂರ್ಣ ದೃಷ್ಟಿ, ಆಲೋಚನಾ
ಗುಣಗ್ರಾಹಿಯಾಗಿದ್ದನು. ಅಪ್ರಾಪ್ತ ವಯಸ್ಸಿನಲ್ಲಿಯೇ 'ಯಶೋದೆ'ಯನ್ನು ಮದುವೆ
ಯಾಗಿ 'ರಾಹುಲ' ಎಂಬ ಮಗನನ್ನು ಪಡೆದನು. ಸಿದ್ಧಾರ್ಥ ಬೆಳೆದು ದೊಡ್ಡವನಾ
ದಂತೆ ಶಾಕ್ಯ ಗಣಪರಿಷತ್ತಿನ ಸದಸ್ಯನಾದನು. ರೋಹಿಣಿ ನದಿ ವಿವಾದದಲ್ಲಿ ಶಾಕ್ಯ -
ಕೋಹಿಲ ಮನೆತನ (ಸಾಮ್ರಾಜ್ಯ)ಗಳ ಮಧ್ಯದಲ್ಲಿ ಹಿಂದಿನಿಂದಲೂ ಕಂಡುಬರುತ್ತಿದ್ದ
ಹಿಂಸಾತ್ಮಕ ಯುದ್ಧ ತಪ್ಪಿಸಿ ಶಾಶ್ವತ ಪರಿಹಾರಕ್ಕಾಗಿ ಹೋರಾಡಿದ ಸಿದ್ಧಾರ್ಥನು ಶಾಕ್ಯ
ಪರಿಷತ್ತಿನ ಜೀವಜಲ, ನೆಲ ರಕ್ಷಣೆಯಲ್ಲಿ ವಿಫಲನಾದನೆಂಬ ಪಿತೂರಿಗಾರರ ವರದಿ
ಯಿಂದ ಗಡೀಪಾರು ಶಿಕ್ಷೆಗೆ ಗುರಿಯಾಗಬೇಕಾಯಿತು.[96] ಶಿಕ್ಷೆಗೆ ಮುನ್ನವೇ ತನ್ನ ೨೯ನೆ
ವಯಸ್ಸಿನಲ್ಲಿ ಮನೆಯನ್ನು (ಸಾಮ್ರಾಜ್ಯ ಸಂಬಂಧಗಳನ್ನು) ತ್ಯಜಿಸಿ ಜೀವ ಜಗತ್ತಿನ
ಒಳಿತಿಗಾಗಿ ಹೋರಾಡಲು ಅನುವಾದನು. ಸುಮಾರು ೬ ವರ್ಷಗಳ ಕಠಿಣ ಜೀವನ
ದೊಂದಿಗೆ ದೇಶ ಪರ್ಯಟನ ಮಾಡಿ ತನ್ನ ಮೂವತ್ತೈದನೆಯ ವರ್ಷದಲ್ಲಿ ಬುದ್ಧ
ಗಯೆಯ ಆಲದ ಮರದ ಕೆಳಗೆ ಜ್ಞಾನ ಪಡೆದು ಬುದ್ಧನಾದನು. ಮುಂದೆ ದೇಶ
ಪರ್ಯಟನಕ್ಕೆ ನಿಂತು ಧರ್ಮಬೋಧನೆ ಮಾಡಿದನು. ತದನಂತರ ಸಂಘ ಸ್ಥಾಪಿಸಿ
ದನು. ಅದಕ್ಕೆ ಯಾವುದೇ ಭೇದಭಾವಗಳಿಲ್ಲದೆ ಉಚ್ಚನೀಚವೆನ್ನದೆ ಸಮತಾಭಾವದ
ಮೇಲೆ ತಾತ್ವಿಕ ಜೀವನ ನಡೆಸಲು ಉತ್ತೇಜಿಸಿದನು. ಕ್ರಿ.ಪೂ. ೪೮೩ರಲ್ಲಿ ಅವನು ತನ್ನ
೮೦ನೆ ವಯಸ್ಸಿನಲ್ಲಿ ಪೂರ್ವ ಉತ್ತರ ಪ್ರದೇಶದ ದಿಯೋರಿಯಾ ಜಿಲ್ಲೆಯ ಕಾಶಿಯಾ
ಎಂಬ ಹಳ್ಳಿ (ಇಂದಿನ ಕುಶೀನಹರ)ಯಲ್ಲಿ ನಿರ್ವಾಣ ಹೊಂದಿದನು.

೨.೧.೨. ಬೌದ್ಧ ಸಂಘ

ಮಾನವರು ಸಮಾಜಜೀವಿಗಳಾಗಿರುವಂತೆ ಸಂಘಜೀವಿಗಳೂ ಆಗಿದ್ದಾರೆ.
ಹೀಗಾಗಿ ಸಂಘವು ಹಲವಾರು ಸಮಾನ ಮನಸ್ಸು ಒಂದು ನಿಶ್ಚಿತ ಗುರಿ ಸಾಧನೆಗಾಗಿ
ಕಟ್ಟಿಕೊಂಡ ಸಂಸ್ಥೆಯಾಗುತ್ತದೆ. ಬದುಕಿನ ಹಲವಾರು ಕ್ಷೇತ್ರಗಳಲ್ಲಿ ಸಂಘಗಳ ಪಾತ್ರ

ಹಿರಿದಾಗಿದೆ. ಬಹುತೇಕ ಸಂಘಗಳು ವ್ಯಕ್ತಿಸಮಾಜವು ನಿಶ್ಚಿತ ಫಲಾಪೇಕ್ಷಿತವಾದ ನೆಲೆಯಲ್ಲಿ ರಚನೆಯಾಗಿದ್ದರೆ ಮಾನವತಾವಾದಿಗಳು ಕಟ್ಟಿರುವ ಸಂಘಗಳು ವ್ಯಕ್ತಿಸಮಾಜ ಮೀರಿದ ಪ್ರತಿಫಲಾಪೇಕ್ಷೆಯಿಲ್ಲದವುಗಳಾಗಿರುತ್ತವೆ. ಅಂಥ ಸಂಘಗಳಲ್ಲಿ ಬೌದ್ಧ ಸಂಘವೂ ಒಂದು.

'ಸಂಘ' ಎನ್ನುವ ಪದವು 'ಸಂಗೋಷ್ಠಿ' ಎಂಬ ಪದದ ಸಂವಾದಿ ಪದವಾಗಿದೆ. ಅದು ಸಂಗಮ, ಸೇರು, ಕೂಡು ಎಂಬ ಅರ್ಥವನ್ನು ಹೊಳೆಸುವುದರೊಂದಿಗೆ ಗುಂಪು, ಸಮೂಹ ಎಂಬ ಅರ್ಥವನ್ನೂ ಕೂಡ ಕೊಡುತ್ತದೆ. ಕೂಡಿರುವುದೆಲ್ಲ ನಿಯಮಬದ್ಧವಾದರೆ ಸಂಘವಾಗುತ್ತದೆ.

ಒಟ್ಟು ಸಭೆ, ಸಮಿತಿ, ಸಂಸ್ಥೆ ಎಂಬ ಹಲವಾರು ಅರ್ಥಗಳು ಸಂಘಕ್ಕೆ ಇವೆ. ಬೌದ್ಧಧರ್ಮದ ಪರಿಭಾಷೆಯಲ್ಲಿ ಸಂಘವೆಂದರೆ ''ಬುದ್ಧ ಧರ್ಮ ಮತ್ತು ಸಂಘಗಳೆಂಬ ರತ್ನತ್ರಯಗಳಲ್ಲಿ ಒಂದು. ಬುದ್ಧಭಿಕ್ಷುಗಳ ಪರಿಷತ್ತು'[97] ಎಂದು ಅರ್ಥೈಸಲಾಗಿದೆ. ವಾಸ್ತವವಾಗಿ ಬೌದ್ಧ ಸನ್ಯಾಸಿಗಳು, ಸನ್ಯಾಸಿನಿಯರು ಇದ್ದ ಗುಂಪಿನ ವರ್ಗಕ್ಕೆ ಸಂಘವೆಂದು ಬುದ್ಧನು ಹೆಸರಿಸಿದನು. ಸಂಘದ ಮೂಲಕ ಎರಡು ರೀತಿಯ ದೀಕ್ಷೆಗಳನ್ನು ಕೊಡಲು ಅಪೇಕ್ಷಿಸಿದನು. ಒಂದು ಪಬ್ಬಜ್ಜಾ ಇನ್ನೊಂದು ಉಪಸಂಪದಾ. ಇಲ್ಲಿ ಮೊದಲನೆಯದು ಜನರು ಸಮಾಜದ ಹೊರಗೆ ಹೋಗುವ ಕುರಿತು, ಎರಡನೆಯದು ಭಿಕ್ಷುಗಳು ಸಂಘ ಜೀವನದ ಒಳಗೆ ಬರುವ ಕುರಿತು. ಇಲ್ಲಿ ಸಂಘಕ್ಕೂ ಸಮಾಜಕ್ಕೂ ಅಜಗಜಾಂತರ ವ್ಯತ್ಯಾಸವಿದ್ದು ಇಡೀ ಮನುಕುಲ ಊರ್ಧ್ವಮುಖವಾಗಿ ಬೆಳವಣಿಗೆಯತ್ತ ಸಾಗಬೇಕು ಎಂಬ ನಿಲುವು ಅವನ ಸಂಘದ್ದಾಗಿತ್ತು. ''ಬುದ್ಧನ ಸಂಘಗಳು ವರ್ಗ ವಿಂಗಡಣೆಗೆ ಉಂಟಾಗಿದ್ದು, ಸಮಾಜಗಳ ಒಳಗೆಯೂ ವರ್ಗಭೇದಗಳಿಲ್ಲದ ಸಮಾಜಗಳಾಗಿದ್ದವು.''[98] ಅದರಿಂದಾಗಿ ಬುದ್ಧನು ಸಂಘವನ್ನು ತನ್ನ ತತ್ವಪ್ರತಿಪಾದನೆಗೆ ಬಳಸಿಕೊಂಡನು. ಬುದ್ಧನ ಸಂಘವು ೧೨ನೆ ಶತಮಾನದ ಅನುಭಾವಮಂಟಪವನ್ನು ಹೋಲುತ್ತದೆ. ಬಹುಶಃ ಅನುಭಾವಮಂಟಪಕ್ಕೆ ಬೌದ್ಧ ಸಂಘವು ಪ್ರೇರಣೆ ಒದಗಿಸಿರುವ ಸಾಧ್ಯತೆಗಳಿವೆ.

ಬೌದ್ಧ - ವೀರಶೈವ ಧರ್ಮ :

ಬೌದ್ಧಧರ್ಮಕ್ಕೂ ವೀರಶೈವಧರ್ಮಕ್ಕೂ ಹಲವಾರು ವಿಷಯಗಳಲ್ಲಿ ಸಾಮ್ಯತೆಗಳಿವೆ. ಬೇರೆಬೇರೆ ಮಾರ್ಗದ ಒಂದೇ ಗುರಿ ಹೊಂದಿದ ಧಾರ್ಮಿಕಕ್ರಿಯೆಗಳು ಅತ್ಯಂತ ಅಪರೂಪ. ಅಂತಹದರಲ್ಲಿ ಬೌದ್ಧ-ವೀರಶೈವ ಕಾಲ, ದೇಶ, ಪರಿಸರಗಳೆಲ್ಲವೂ ಭಿನ್ನಭಿನ್ನವಾಗಿವೆ. ಆದರೂ ಬುದ್ಧ-ಶರಣರ ತುಡಿತ ಒಂದೇ ಆಗಿವೆ. ಅದೇ ಮನುಕುಲದ ಪ್ರೀತಿ, ಶಾಂತಿ. ಇಂಗ್ಲಿಷ್‌ನಲ್ಲಿ ಶ್ರೇಷ್ಠ ಗಾದೆಮಾತೊಂದಿದೆ.

'ಶ್ರೇಷ್ಠರು ಸಮಾನವಾಗಿ ಆಚರಿಸುತ್ತಾರೆ' ಎಂದು. ಇಲ್ಲಿ ಆಲೋಚನೆ ಮತ್ತು ಆಚರಣೆಗಳೆರಡು ಶ್ರೇಷ್ಠವಾಗಿವೆ. ಧರ್ಮ, ಸಮಾಜ, ನೀತಿ, ಚಾರಿತ್ರ್ಯ ಮತ್ತು ಅಧ್ಯಾತ್ಮಿಕ ಚಿಂತನೆಗಳಲ್ಲಿ ಸಾಮ್ಯತೆಗಳಿವೆ. ಬುದ್ಧನು ಶೀಲ, ಸಮಾಜ ಮತ್ತು ಪ್ರಜ್ಞೆಗೆ ಮಾನ್ಯತೆ ನೀಡಿದರೆ ವೀರಶೈವರಲ್ಲಿ ಕಾಯಕ, ಅರಿವು ಮತ್ತು ಅನುಭಾವಕ್ಕೆ ಮಾನ್ಯತೆ ಇದೆ. ಬುದ್ಧನು ಅಷ್ಟಾಂಗಮಾರ್ಗಗಳನ್ನು ಸೂಚಿಸಿದರೆ ವೀರಶೈವರಲ್ಲಿ ಷಟ್‌ಸ್ಥಲವಿದೆ. ಬುದ್ಧನ ನಿರ್ವಾಣತತ್ವವೇ ವೀರಶೈವರಲ್ಲಿ ಶೂನ್ಯ(ಬಯಲು)ತತ್ವವಾಗಿದೆ (ಬುದ್ಧ ಶೂನ್ಯವನ್ನು ಪ್ರತ್ಯೇಕವಾಗಿ ಚರ್ಚಿಸಿದ್ದಾನೆ). ಬುದ್ಧನ ಅನುಯಾಯಿಗಳು ಬೌದ್ಧರಾದರೆ ವೀರಶೈವರ ಅನುಯಾಯಿಗಳು ಶರಣರೆಂದು ಕರೆಸಿಕೊಂಡರು. ಹೀಗೆ ತಾತ್ವಿಕವಾಗಿ ಬೌದ್ಧ-ಶರಣ ಧರ್ಮಗಳು ಹಲವಾರು ಅಂಶಗಳಲ್ಲಿ ಸಮಾನ ನೆಲೆಯಲ್ಲಿರುವುದು ಕಂಡುಬರುತ್ತದೆ.

೨.೧.೩. ಬೌದ್ಧ ಸಂಘ - ಅನುಭಾವ ಮಂಟಪ ತೌಲನಿಕತೆ

ಬೌದ್ಧಸಂಘವು ಬುದ್ಧನಿಂದ ರಚಿತವಾದರೆ ಅನುಭಾವ ಮಂಟಪವು ಬಸವಣ್ಣನವರಿಂದ ರೂಪಿತವಾಗಿದೆ. ಈ ಎರಡೂ ಅಧ್ಯಾತ್ಮಿಕ ಚರಿತ್ರೆಯ ಮಹಾನ್ ಸಂಸ್ಥೆಗಳಾಗಿದ್ದು ಬುದ್ಧ-ಬಸವರಿಗೆ ಇರುವ ಸಾಮಾಜಿಕ, ಸಾಂಸ್ಕೃತಿಕ ಹಿನ್ನೆಲೆಗಳು, ಯುಗಧರ್ಮದ ಒತ್ತಡಗಳು, ಜನತೆಯ ಆಶೋತ್ತರಗಳು, ಸಾಮಾನ್ಯವಾಗಿ ಒಂದೇ ರೀತಿಯವು. ಇಬ್ಬರ ಕಾಲ-ದೇಶಗಳಲ್ಲಿ ಮಾತ್ರ ಭಿನ್ನವಾಗಿದ್ದರೂ ಮಾನವೀಯ ಕಾಳಜಿಯ ನೆಲೆಗಳು ಒಂದೇ ಆಗಿರುವುದರಿಂದ ಇವರಿಬ್ಬರೂ ಹುಟ್ಟುಹಾಕಿದ ಸಂಘಟನಾರೂಪದ ಸಂಸ್ಥೆಗಳಲ್ಲಿ ಹಲವಾರು ಅಂಶಗಳು ಸಾಮ್ಯತೆಯಿಂದ ಕೂಡಿವೆ. ಅದನ್ನು ಚರ್ಚಿಸುವುದು ಸೂಕ್ತವೆನಿಸುತ್ತದೆ.

ಬೌದ್ಧ ಸಂಘ [99]	ವೀರಶೈವ ಅನುಭಾವಮಂಟಪ
೧. ಅಧ್ಯಾತ್ಮಕ್ಕೆ ತಳಹದಿಯಾದ ಭಕ್ತಿಯು ಇಲ್ಲದಂತೆ ಕಂಡರೂ ಶ್ರದ್ಧಾ ಮೂಲ ಭಕ್ತಿ ಪ್ರಧಾನವಾಗಿದೆ.	೧. ಭಕ್ತಿಯ ಹಿನ್ನೆಲೆಯಿಂದಲೇ ಆರಂಭವಾದ ಚಳುವಳಿಯಾದ್ದರಿಂದ ನಿಷ್ಠೆಯ ಭಕ್ತಿಯೇ ಪ್ರಧಾನವಾಗಿದೆ.
೨. ಆತ್ಮವು ಕೇವಲ ಕಲ್ಪನೆ ಮಾತ್ರ.	೨. ಆತ್ಮವು ಚೈತನ್ಯವಾಗಿದೆ.
೩. ನಿರ್ವಾಣ ಸ್ಥಿತಿಯೇ ಅಂತಿಮ ಸತ್ಯ.	೩. ಶೂನ್ಯ (ಬಯಲು) ತತ್ವವೇ ಅಂತಿಮ ಸತ್ಯ.
೪. ನಿರ್ವಾಣ ಸ್ಥಿತಿಯ ಪ್ರತಿಪಾದನೆ.	೪. ಐಕ್ಯ ಸ್ಥಿತಿಯ ಪ್ರತಿಪಾದನೆ.
೫. ಹುಟ್ಟು ಸಾವು, ಮುಪ್ಪು ರೋಗ, ನಿರಾಶೆ	೫. ಅಹಂ ನಿರಶನವೇ ಭವರೋಗ ನಿವಾರಣೆ

ಯಾವುದೂ ಇಲ್ಲದ ಸ್ಥಿತಿ ನಿರ್ವಾಣವೇ ಮೋಕ್ಷ.	ಮಾಡುತ್ತದೆ, ಐಕ್ಯವೇ ಪರಮ ಸಾಕ್ಷಾತ್ಕಾರ.
೬. ನಿರ್ವಾಣಕ್ಕೆ ಶ್ರದ್ಧೆ ಸಮಾಧಿ, ಪ್ರಜ್ಞೆ ಬೇಕು. ಇವು ಅಷ್ಟಾಂಗ ಮಾರ್ಗಗಳ ಮೂಲಕ ಸಾಧ್ಯ.	೬. ಐಕ್ಯ ಸ್ಥಿತಿ ತಲುಪಲು ಅಷ್ಟಾವರಣ, ಪಂಚಾಚಾರ ಷಟ್‌ಸ್ಥಲಗಳನ್ನು ಅಳವಡಿಸಿ ಕೊಳ್ಳುವುದರ ಮೂಲಕ ಸಾಧ್ಯ.
೭. ಅಷ್ಟಾಂಗ ಮಾರ್ಗಗಳು [100]	೭. ಷಟ್‌ಸ್ಥಲಗಳು
೮. ವಿಚಾರವಾದ, ನೇರ ಗ್ರಹಿಕೆ, ಪ್ರಜ್ಞೆ ಇತ್ತು.	೮. ವಿಚಾರವಾದ ನೇರಗ್ರಹಿಕೆ ಪ್ರಜ್ಞೆ ಇತ್ತು.
೯. ಪೂಜೆಗಿಂತ ಧ್ಯಾನ, ಕಟ್ಟುಕತೆಗಿಂತ ನೀತಿಗೆ ಮಹತ್ವ ನೀಡಲಾಗಿದೆ.	೯. ಪೂಜೆಗಿಂತ ಕಾಯಕ, ದಾಸೋಹತತ್ವಗಳಿಗೆ ಹೆಚ್ಚಿನ ಮಹತ್ವವಿದೆ.
೧೦. ಪಂಚಶೀಲ ತತ್ವಗಳು : ಕೊಲ್ಲದಿರುವುದು, ಕಳ್ಳತನ ಮಾಡದಿರುವುದು, ವ್ಯಭಿಚಾರ ಮಾಡದಿರುವುದು, ಸುಳ್ಳು ಹೇಳದಿರುವುದು, ಮದ್ಯಪಾನ ಮಾಡದಿರುವುದು, ಇವುಗಳನ್ನು ಕಡ್ಡಾಯಗೊಳಿಸಲಾಗಿತ್ತು.	೧೦. ಪಂಚಾಚಾರಗಳು : ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ, ಲಿಂಗಾಚಾರ ಕಡ್ಡಾಯ ವಾಗಿದ್ದವು.
೧೧. ಪರಿವ್ರಾಜಕರಿದ್ದರು (ಪರಿವ್ರಾಜಕ ರೆಂದರೆ ಗೃಹಸ್ಥ ಜೀವನ ತ್ಯಜಿಸಿದ್ದು ಎಲ್ಲೂ ನೆಲೆ ನಿಲ್ಲದೆ ತಿರುಗಾಡುವವರು.	೧೧. ಜಂಗಮರಿದ್ದರು (ಜಂಗಮರೆಂದರೆ ಜನನ-ಮರಣ ಗೆದ್ದವರು, ಹೆಂಡತಿ-ಮಕ್ಕಳು ಮನೆಯಿಲ್ಲದೆ ನಿರಂತರ ಸಂಚಾರಕ್ಕೊಳಗಾದವರು, ಚಲನೆವುಳ್ಳದ್ದು ಜಂಗಮ).
೧೨. ಪರಿವ್ರಾಜಕರು ಅನೇಕ ಗುರುಗಳು ತತ್ವಜ್ಞಾನಿಗಳೊಂದಿಗೆ ಸಂಪರ್ಕಿಸಿ ಅವರೊಂದಿಗೆ ನೀತಿ-ತತ್ವಶಾಸ್ತ್ರ ಕುರಿತು ಚರ್ಚಿಸಿ ಪ್ರಕೃತಿ ಅನುಭಾವದ ಚಿಂತನೆ ಮಾಡಿ ಸತ್ಯ ಸಿದ್ಧಿ ಪಡೆಯಲು ಸಂಚರಿಸುತ್ತಿದ್ದರು.	೧೨. ಜಂಗಮರು ಸ್ವತಃ ಜ್ಞಾನಿಗಳಾಗಿದ್ದು ನಿರಂತರ ನೀತಿ, ತತ್ವಶಾಸ್ತ್ರ ಕುರಿತ ಚಿಂತನ-ಮಂಥನ ಮಾಡುತ್ತ ಅನುಭಾವ ಗೋಷ್ಟಿ ನಡೆಸುತ್ತಿದ್ದರು, ಸತ್ಯದ ಸಾಕ್ಷಾತ್ಕಾರಕ್ಕಾಗಿ ಹಂಬಲಿಸುತ್ತ ಜಗದೇಳಿಗೆಗಾಗಿ ಸಂಚರಿಸುತ್ತಿದ್ದರು.
೧೩. ಪರಿವ್ರಾಜಕರಲ್ಲಿ ಕೆಲವು ಪರ್ಯಟಕ ಸ್ತ್ರೀಯರು ಇದ್ದರು. ಈ ಸ್ತ್ರೀಪರಿವ್ರಾಜಕರು ಕೆಲವೊಮ್ಮೆ ಪುರುಷ ಪರಿವ್ರಾಜಕರೊಂದಿಗೆ ವಾಸಿಸುತ್ತಿದ್ದರು. ಕೆಲವೊಮ್ಮೆ ಒಂಟಿಯಾಗಿರುತ್ತಿದ್ದರು.	೧೩. ಇಲ್ಲಿ ಮಹಿಳಾ ಶರಣೆಯರೂ ಇರುತ್ತಿದ್ದರು. ಎಲ್ಲರೂ ವಿವಾಹವಾಗುವ ಅವಕಾಶ ಪಡೆದಿರು ವುದರಿಂದ ಕುಟುಂಬದೊಂದಿಗೆ ಇರುತ್ತಿದ್ದರು. (ಮಹಿಳೆಯರಿಗೆ ಮುಕ್ತ ಅವಕಾಶವಿತ್ತು).

೧೪. ಸಂಘಕ್ಕೆ ಹಲವಾರು ನಿಯಮ-ಆದರ್ಶಗಳನ್ನು ರೂಪಿಸಿ ಅವನ್ನು ಅನುಸರಿಸಿ ಸಾಕ್ಷಾತ್ಕರಿಸಿಕೊಳ್ಳುವಂತೆ ತಿಳಿಸಿದರು.	೧೪. ಅನುಭಾವ ಮಂಟಪಕ್ಕೂ ಕೆಲವು ನಿಯಮಗಳನ್ನು ರೂಪಿಸಿ ಆದರ್ಶಗಳ ಮೂಲಕ ಆಚರಣೆಗೆ ತರುವಂತೆ ನಿರ್ದೇಶಿಸಲಾಗಿತ್ತು.
೧೫. ಎಲ್ಲರಿಗೂ ಮುಕ್ತ ಅವಕಾಶ.	೧೫. ಇಲ್ಲಿಯೂ ಎಲ್ಲರಿಗೂ ಮುಕ್ತ ಅವಕಾಶ.
೧೬. ಜಾತಿ, ವರ್ಗ, ವರ್ಣ, ಲಿಂಗ, ಭಾಷೆ, ಮೊದಲಾದ ಭೇದಭಾವಗಳಿರಲಿಲ್ಲ.	೧೬. ಯಾವುದೇ ತರತಮ ಭೇದವಿಲ್ಲದೆ ಎಲ್ಲರೂ ಸಮಾನರೆಂಬ ಭಾವನೆಯಿತ್ತು.
೧೭. ಎಲ್ಲರೂ ಸಮಾನರು, ಅಂತಸ್ತು ಯೋಗ್ಯತೆಯ ಮೇಲೆ ನಿರ್ಧಾರವಾಗುತ್ತಿತ್ತು.	೧೭. ಎಲ್ಲರೂ ಸಮಾನರಾಗಿದ್ದು ಬೌದ್ಧಿಕತೆಯೇ ಅಂತಸ್ತು ಮತ್ತು ಯೋಗ್ಯತೆ ಆಗಿತ್ತು.
೧೮. ಸಂಘವು ಒಂದು ಸಮುದ್ರದಂತೆ, ಭಿಕ್ಕುಗಳು ಸಮುದ್ರದಲ್ಲಿ ಬೀಳುವ ನದಿಗಳಂತೆ ಭಿಕ್ಕು ಬುದ್ಧನಾಗುವನು (ನದಿಗೆ ಪ್ರತ್ಯೇಕ ಹೆಸರು, ಅಸ್ತಿತ್ವಗಳಿದ್ದರೂ ಸಾಗರ ಸೇರಿದಾಗ ಪ್ರತ್ಯೇಕತೆ ಇಲ್ಲವಾಗಿ ಸಾಗರವಾಗುತ್ತದೆ).	೧೮. ಅನುಭಾವಮಂಟಪವು ಸಾಗರದಂತಿದ್ದು ಶರಣರೆಲ್ಲ ಸಾಗರದಲ್ಲಿ ಸೇರುವ ನದಿಗಳಂತೆ ಶರಣರು ಅನುಭಾವಿಯಾಗುವರು (ಜ್ಯೋತಿ ಮುಟ್ಟಿ ಜ್ಯೋತಿಯಾದಂತೆ ಲಿಂಗ ಮುಟ್ಟಿ ಲಿಂಗವಾದಂತೆ).
೧೯. ಭಿಕ್ಷು ಬುದ್ಧನಾದರೆ ಜಾತಿ ಮತ್ತು ಪಂಥ, ಅಂತಸ್ತು ಇಲ್ಲವಾಗುತ್ತದೆ (ಮೀರಿ ನಿಲ್ಲುತ್ತಾನೆ).	೧೯. ಶರಣ ಅನುಭಾವಿಯಾದರೂ ಜಾತಿ, ಮತ, ಪಂಥ ಮತ್ತು ಅಂತಸ್ತುಗಳನ್ನು ಇಲ್ಲದವನಾಗುತ್ತಾನೆ (ಅವೆಲ್ಲಾ ಇವನಿಗೆ ಗೌಣ).
೨೦. ಬುದ್ಧನನ್ನು, ತ್ರಿಕರಣ ಧರ್ಮ ಮತ್ತು ಸಂಘವನ್ನು ಅನುಸರಿಸುವುದು.	೨೦. ಆರಾಧನಾತ್ರಯಗಳು, ಗುರು, ಲಿಂಗ, ಜಂಗಮರ ಆರಾಧನೆ.
೨೧. ಸಂಘದ ದಶಾದೇಶಗಳು	**೨೧. ಅನುಭಾವಮಂಟಪದ ಸೂತ್ರಗಳು**
೧. ಹಿಂಸೆ ಮಾಡದಿರುವುದು.	೧. ಕಳಬೇಡ.
೨. ಕಳ್ಳತನ ಮಾಡದಿರುವುದು.	೨. ಕೊಲಬೇಡ.
೩. ಮದ್ಯಪಾನ ಮಾಡದಿರುವುದು.	೩. ಹುಸಿಯ ನುಡಿಯಲು ಬೇಡ.
೪. ಅಕಾಲ ಆಹಾರ ಸೇವನೆ ಮಾಡದಿರುವುದು.	೪. ಮುನಿಯಬೇಡ.
೫. ಅಸಭ್ಯ, ಅನೈತಿಕ ಕಾರ್ಯಮಾಡದಿರುವುದು.	೫. ಅನ್ಯರಿಗೆ ಅಸಹ್ಯ ಪಡಬೇಡ.
೬. ಚಿನ್ನ, ಬೆಳ್ಳಿಯ ಆಸೆ ಪಡದಿರುವುದು.	೬. ತನ್ನ ಬಣ್ಣಿಸಬೇಡ.

೭. ಬ್ರಹ್ಮಚರ್ಯ ಪಾಲಿಸುವುದು.	೭. ಇದಿರ ಹಳಿಯಲು ಬೇಡ.
೮. ಅಸತ್ಯವನ್ನು ಹೇಳದಿರುವುದು.	೮. ಪರಧನವನ್ನು ಅಪೇಕ್ಷಿಸದಿರುವುದು.
೯. ಆಭರಣ, ಶೃಂಗಾರದಿಂದ ದೂರವಿರುವುದು.	೯. ಪರಸ್ತ್ರೀಯನ್ನು ಅಪೇಕ್ಷಿಸದಿರುವುದು.
೧೦. ವೈಭವಗಳಿಂದ ದೂರವಿರುವುದು.	೧೦. ಕಾಯಕವನ್ನು ಮಾಡುವುದು.
	೧೧. ದಾಸೋಹವನ್ನು ಪಾಲಿಸುವುದು.
೧೨. (ಸಂಘದಲ್ಲಿ) ಧರ್ಮಕ್ಕೆ ವಿಧೇಯನಾಗಿರಬೇಕೇ ಹೊರತು ಗುರುಗಳಿಗಲ್ಲ.	೧೨. ಜ್ಞಾನಕ್ಕೆ ವಿಧೇಯನಾಗಿರಬೇಕೇ ಹೊರತು ವ್ಯಕ್ತಿಗಲ್ಲ.
೧೩.ಸಂಘವೆನ್ನುವುದು ಒಂದು ಸಂಸ್ಥೆ ಮೂರ್ತ ರೂಪದ ಕಟ್ಟಡ ಹೊಂದಿರಲಿಲ್ಲ.	೧೩. ಅನುಭಾವ ಮಂಟಪವೆನ್ನುವುದು ಒಂದು ಸಂಸ್ಥೆ ಮೂರ್ತರೂಪದ ಕಟ್ಟಡ ಹೊಂದಿರಲಿಲ್ಲ.

ಹೀಗೆ ಹಲವಾರು ಅಂಶಗಳಲ್ಲಿ ಸಾಮ್ಯತೆಗಳಿರುವುದು ಕಂಡುಬರುತ್ತದೆ. ಆದರೆ ಕೆಲ ಅಂಶಗಳಲ್ಲಿ ಭಿನ್ನತೆಯೂ ಇದೆ. ''ಸಂಘದಲ್ಲಿ ಗಮನಿಸುತ್ತಿದ್ದ ಒಂದು ಭೇದವೆಂದರೆ ಲಿಂಗಭೇದ. ಭಿಕ್ಷುಗಳ ಸಂಘವು ಭಿಕ್ಷಿಣಿಯರ ಸಂಘದಿಂದ ವ್ಯವಸ್ಥೆಯಲ್ಲಿ ಬೇರೆಯಾಗಿತ್ತು.[101] ಅಂದರೆ ಆರಂಭದಲ್ಲಿ ಮಹಿಳಾ ಭಿಕ್ಷಿಣಿಯರಿಗೆ ಸಂಘದಲ್ಲಿ ಅವಕಾಶಗಳಿರಲಿಲ್ಲ. ನಂತರ ಅವಕಾಶಕೊಟ್ಟು ಬೇರೆ ವ್ಯವಸ್ಥೆ ಕಲ್ಪಿಸಿ ವರ್ಗಭೇದ ಮಾಡಲಾಗಿತ್ತು. ಆದರೆ ಅನುಭಾವಮಂಟಪದಲ್ಲಿ ಲಿಂಗಭೇದವಿರಲಿಲ್ಲ. ಹೀಗಾಗಿ ಮಹಿಳೆಯರಿಗೆ ಪ್ರತ್ಯೇಕ ವ್ಯವಸ್ಥೆ ಮಾಡುವ ಅವಶ್ಯಕತೆ ಬೀಳಲಿಲ್ಲ. ಇನ್ನೊಂದು, ಸಂಘದ ಸದಸ್ಯರಾಗಲು ಗೃಹಸ್ಥಾಶ್ರಮ ಬಿಟ್ಟಿರಬೇಕು, ಅಧ್ಯಾತ್ಮಕ್ಕೆ ಸಂಸ್ಕಾರ ಅಡ್ಡಿಯಾಗುವುದೆಂದು ನಂಬಲಾಗಿತ್ತು. ಆದರೆ ಅನುಭಾವಮಂಟಪದಲ್ಲಿ ಸನ್ಯಾಸಿಯಾಗಲೇಬೇಕೆಂಬ ನಿಯಮವಿರಲಿಲ್ಲ. ಹೆಣ್ಣು, ಹೊನ್ನು, ಮಣ್ಣು ಮಾಯೆಗಳೆಲ್ಲ ಬದಲಾಗಿ ಮನಸ್ಸಿನ ಮುಂದಿನ ಆಸೆಗಳು ಎಂದು ನಂಬಿ ಪ್ರಪಂಚದಿಂದ ಪಾರಮಾರ್ಥ ಸಾಧ್ಯವೆಂದು ನಂಬಲಾಗಿತ್ತು. ಬುದ್ಧ ಸನ್ಯಾಸತ್ವ ಪಡೆದರೆ ಬಸವ ಪ್ರಪಂಚದ ಮೂಲಕ ಪಾರಮಾರ್ಥ ಸಾಧಿಸಿದ. ಇಂಥ ಕೆಲ ವ್ಯತ್ಯಾಸಗಳನ್ನು ಹೊರತುಪಡಿಸಿದರೆ ಬೌದ್ಧ ಮತ್ತು ವೀರಶೈವ ಧರ್ಮದ ತಾತ್ವಿಕನೆಲೆಗಳಲ್ಲಿ ಸಾಮ್ಯತೆಗಳೇ ಹೆಚ್ಚಾಗಿವೆ.

****

೨.೨. ಜೈನರ ಸಮವಸರಣಮಂಟಪ -ಅನುಭಾವಮಂಟಪ :

ಹಿನ್ನೆಲೆ :

ಭಾರತದ ಕೆಲವೇ ಪ್ರತಿಷ್ಠಿತಧರ್ಮಗಳಲ್ಲಿ ಒಂದಾದ ಜೈನಧರ್ಮಕ್ಕೆ ಮಹಾವೀರನೇ ಗುರು. ಆದರೆ ಮಹಾವೀರನು ೨೪ನೆ ತೀರ್ಥಂಕರನೆಂದು ಕರೆಯುವುದರಿಂದ ಇವನಿಗಿಂತ ಮೊದಲು ೨೩ ಜನ ತೀರ್ಥಂಕರರು (ಗುರುಗಳು) ಇದ್ದರೆಂಬ ನಂಬಿಕೆ ಇದೆ. ಈ ನಂಬಿಕೆ ಸತ್ಯವಾದಲ್ಲಿ ಜೈನಮತದ ಪ್ರಾಚೀನತೆ ಕ್ರಿ.ಪೂ. ೯ನೆ ಶತಮಾನ ದಷ್ಟು ಹಿಂದೆ ಸರಿಯುತ್ತದೆ. ಆದರೆ ಆರಂಭದ ೧೫ ಜನ ತೀರ್ಥಂಕರರು ಪೂರ್ವ ಉತ್ತರ ಪ್ರದೇಶದ ಹಾಗೂ ಬಿಹಾರದ ಪ್ರಾಂತದವರೆಂದು ಹೇಳಲಾಗಿದೆ. ಕ್ರಿ.ಪೂ. ೯ನೆ ಶತಮಾನಕ್ಕಿಂತ ಪೂರ್ವದಲ್ಲಿ ಈ ಗಂಗಾ ಬಯಲಿನಲ್ಲಿ 'ಜನವಸತಿ' ಇತ್ತು ಎನ್ನುವ ಬಗ್ಗೆ ಖಚಿತವಾದ ಚಾರಿತ್ರಿಕ ಮಾಹಿತಿ ಇಲ್ಲ. ಹೀಗಾಗಿ ಆ ಕಾಲ ಹಲವಾರು ಅನುಮಾನ, ಸಂದೇಹಕ್ಕೆ ಎಡೆ ಮಾಡಿಕೊಡುತ್ತದೆ. ಜೈನ ಮತದ ಬೋಧನೆಗಳ ಆರಂಭ ಮಾಡಿದವನು ಪ್ರಾಯಶಃ ೨೩ನೆ ತೀರ್ಥಂಕರನಾದ ಪಾರ್ಶ್ವನಾಥನೇ ಮೊದಲಿಗನಿರಬೇಕು. ಇವನು ಮೂಲತಃ ವಾರಣಾಸಿಯವನು. ಅರಸೊತ್ತಿಗೆ (ರಾಜ ಜೀವನ) ತ್ಯಜಿಸಿ ಸನ್ಯಾಸಿಯಾದ ಪಾರ್ಶ್ವನಾಥನ ಬೋಧನೆಯ ಪ್ರಭಾವಕ್ಕೆ ಒಳಗಾಗಿ ಅವನು ಅಧ್ಯಾತ್ಮಿಕ ಉತ್ತರಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ವರ್ಧಮಾನ ಮಹಾವೀರನು ಜೈನಮತದ ಸ್ಥಾಪನೆ ಮಾಡಿ ಆ ಧರ್ಮಕ್ಕೆ ಸೈದ್ಧಾಂತಿಕ ನೆಲೆಯನ್ನು ರೂಪಿಸಿದನು.

ಮಹಾವೀರ :

ಕ್ರಿ.ಪೂ. ೫೪೦ರಲ್ಲಿ ಬಿಹಾರದ ವೈಶಾಲಿ ಜಿಲ್ಲೆಯ ಬಸಾರ್ ಎಂಬ ಹಳ್ಳಿಯಲ್ಲಿ ವರ್ಧಮಾನ ಮಹಾವೀರ ಹುಟ್ಟಿದನು.[102] ಇವನ ತಂದೆ ಪ್ರಸಿದ್ಧ ಕುಲದ ಮುಖ್ಯಸ್ಥ ಸಿದ್ಧಾರ್ಥ. ತಾಯಿ ತ್ರಿಶೂಲಚ್ಛವಿ ಕುಲದ ನಾಯಕ ಚೇತಕನ ಸಹೋದರಿ. ಚೇತಕನ ಮಗಳು ಮಗಧ ಅರಸನಾದ ಬಿಂಬಸಾರನ ಹೆಂಡತಿ. ಹೀಗೆ ಮಹಾವೀರನ ಪರಿವಾರವು ಅರಸುಮನೆತನಕ್ಕೆ ಸಂಬಂಧಿಯಾಗಿತ್ತು. ಇದರಿಂದ ಮಹಾವೀರನಿಗೆ ಮತಧರ್ಮಪ್ರಚಾರಕ್ಕಾಗಿ ಅರಸುಮನೆತನದ ಸಹಾಯ ಸರಳವಾಗಿ ದಕ್ಕಿತು.

ಮಹಾವೀರನು ಗೃಹಸ್ಥ ಜೀವನ ನಡೆಸಿ ಒಂದು ಹೆಣ್ಣು ಮಗುವನ್ನು ಪಡೆದನು. ತನ್ನ ಮೂವತ್ತನೇ ವಯಸ್ಸಿನಲ್ಲಿ ಸತ್ಯಾನ್ವೇಷಣೆಗಾಗಿ ಸಂಸಾರತ್ಯಾಗ ಮಾಡಿ, ಸನ್ಯಾಸಿಯಾದನು. ಸುಮಾರು ೧೨ ವರ್ಷ ದೀರ್ಘ ಪ್ರವಾಸ ಕೈಕೊಂಡನು. ಈ ಸಂದರ್ಭದಲ್ಲಿ ಅವನು ಭಾರತದ ಅನೇಕ ಕಡೆ ತಪಸ್ಸನ್ನು ಮಾಡಿದನು.

ಈ ಮಧ್ಯೆ ಅವನು ಎಲ್ಲಿಯೂ ಒಂದೆಡೆ ನೆಲೆ ನಿಲ್ಲದೆ ನಿರಂತರ ಸಂಚರಿಸಿದನು. ಹಳ್ಳಿಯಾದರೆ ಒಂದು ರಾತ್ರಿ, ಊರಾದರೆ ಐದು ರಾತ್ರಿ ಮೀರದ ಹಾಗೆ ಸಂಚರಿಸಿದನು. ಈ ೧೨ ವರ್ಷಗಳ ಕಾಲ ಬದಲಾಯಿಸದೆ ಇದ್ದ ಬಟ್ಟೆಗಳನ್ನು ಕೈವಲ್ಯ (ಕೇವಲ)ಜ್ಞಾನ ಪಡೆದ ನಂತರ ಪೂರ್ತಿ ಬಟ್ಟೆಯನ್ನೇ ತ್ಯಜಿಸಿದ. ಆ ಮೂಲಕ ಸುಖ-ದುಃಖಗಳನ್ನು ಜಯಿಸಿ 'ಜಿನ'ನಾದ. ಮುಂದೆ ಅವನ ಅನುಯಾಯಿಗಳು ಜೈನರಾದರು. ಪುನಃ ಮೂವತ್ತು ವರ್ಷಗಳ ಕಾಲ ತಾನು ಕಂಡ ಸತ್ಯದರ್ಶನದ ಫಲವನ್ನು ಮತ-ತತ್ವಗಳ ರೂಪದಲ್ಲಿ ಪ್ರಚಾರ ಮಾಡಿದನು. ಕೋಸಲ, ಮಗಧ, ಮಿಥಿಲಾ, ಚಂಪಾ ಮೊದಲಾದ ರಾಜ್ಯಗಳಲ್ಲಿ ಅವನಿಗೆ ಪ್ರೋತ್ಸಾಹ ದೊರೆಯಿತು. ತನ್ನ ೭೦ನೆ ವಯಸ್ಸಿನಲ್ಲಿ ಅಂದರೆ ಕ್ರಿ.ಪೂ. ೪೬೮ರಲ್ಲಿ ಇಂದಿನ ರಾಜಗೀರ ಬಳಿ ಇರುವ ಪಾವಾಪುರಿಯಲ್ಲಿ ನಿರ್ವಾಣ ಹೊಂದಿದನು. ಅವನ ತತ್ವ, ಉಪದೇಶಗಳು ಅಮರವಾದವು. ಮುಂದೆ ಹಲವಾರು ರಾಜರು, ಚಕ್ರವರ್ತಿಗಳು ಅವುಗಳಿಗೆ ಆಶ್ರಯ ನೀಡಿ ಪ್ರೋತ್ಸಾಹಿಸಿದರು.

ಮಹಾವೀರನು ಜೈನ, ಮತ-ತತ್ವವನ್ನು ಪ್ರಸಾರ ಮಾಡಲು ಒಂದು ವೇದಿಕೆ ಕಟ್ಟಿದನು. ಅದನ್ನು 'ಸಮವಸರಣಮಂಟಪ'ವೆಂದು ಕರೆಯುತ್ತಾರೆ. ಜೈನರಲ್ಲಿ ಮೋಕ್ಷ ಪ್ರಾಪ್ತವಾಗಲು ಸಮವಸರಣಮಂಟಪದ ಮೂಲಕ ಸಾಧ್ಯವೆಂಬ ಕಲ್ಪನೆ ಸಹ ಇತ್ತು. ಆ ಸಮವಸರಣಮಂಟಪ ಮೋಕ್ಷಕ್ಕೆ ನಿಚ್ಚಣಿಕೆಯಾಗಿ ಮಹತ್ವದ ಕಾರ್ಯ ನಿರ್ವಹಿಸಿದೆ.

೨.೨.೩. ಜೈನರ ಸಮವಸರಣಮಂಟಪ

ಪದ ವಿವೇಚನೆ :

ಸಮವಸರಣಮಂಟಪದ ಹೆಸರಿನ ಕುರಿತು ಕುತೂಹಲಕರ ರೀತಿಯಲ್ಲಿ ಚರ್ಚೆ ನಡೆದಿದೆ. ಅದೆಲ್ಲಕ್ಕೂ ಜೈನಪುರಾಣಗಳೇ ಆಧಾರ ಒದಗಿಸಿಕೊಡುತ್ತವೆ. ಬೇರೆ-ಬೇರೆ ಪುರಾಣಗಳಲ್ಲಿ ಈ ಮಂಟಪವನ್ನು ಬೇರೆ ಬೇರೆ ಹೆಸರಿನಿಂದ ಕರೆಯಲಾಗಿದೆ. ಆದರೆ ಆ ಎಲ್ಲ ಪದಗಳ ಮೂಲ ಅರ್ಥ ಒಂದೇ ಆಗಿದೆ. ಸಮವಸರಣಮಂಟಪವನ್ನು ''ಸಮವಸರಣ ಆಸ್ಥಾನ, ಸಮವಶೃತಿ, 'ಸಮವಸರಣಸ್ಥಲ' ಮತ್ತು ಸಮ

ವಸರಣಭೂಮಿ'' ಎಂಬ ಅನೇಕ ಹೆಸರುಗಳಿಂದ ಕರೆಯಲಾಗಿದೆ. ಆದರೆ ಈ ಪದಗಳ ಬಗ್ಗೆ ಖಚಿತ ದಾಖಲೆಗಳು ದೊರೆಯಲಾರವು. ಆದರೂ ತಾರ್ಕಿಕವಾಗಿ ಇದನ್ನು ವಿವರಿಸಲು ಸಾಧ್ಯವಿದೆ.

''ಸಮವಸರಣಮಂಟಪ ಎಂದರೆ ಕೇವಲಜ್ಞಾನಿಯಾದ ನಂತರ ತೀರ್ಥಂಕರನ ಉಪದೇಶಕ್ಕಾಗಿ ಇಂದ್ರನ ಅಪ್ಪಣೆಯಂತೆ ಕುಬೇರನಿಂದ ರಚಿತವಾದ ಮಂಟಪ'' [103]

ಸಮವಸರಣ ಎಂಬ ಶಬ್ದದಲ್ಲಿ ಸಂ+ ಅವಸರ, ಸಂ+ ಅವ+ಸೃ ಎಂಬ ಪದಗಳು ಸೇರಿದಂತೆ ಕಂಡುಬರುತ್ತದೆ. ಇಲ್ಲಿ ಸಂ ಎಂದರೆ ಉದಾತ್ತ, ಒಳ್ಳೆಯ, ಉತ್ತಮ ಎಂಬಿತ್ಯಾದಿ ಅರ್ಥಗಳು ಸಿದ್ಧಿಸುತ್ತವೆ.

ದೇವರು, ರಾಕ್ಷಸರು ತೀರ್ಥಂಕರರಲ್ಲಿ ಬಂದು ಜ್ಞಾನ-ಬೋಧನೆ ಪಡೆಯಲು ಅವಕಾಶಕ್ಕಾಗಿ ಕಾಯುತ್ತಿದ್ದರೆಂದು ಕಲ್ಪಿಸಿಕೊಂಡರೆ ಸ+ಅವಸರ ಎಂಬ ಅರ್ಥಕ್ಕೆ ಹತ್ತಿರವಾಗುತ್ತದೆ. ಇದೇ ಬಹುಶಃ ತೀರ್ಥಂಕರ ಧರ್ಮೋಪದೇಶ ಮಾಡುವ ಸ್ಥಳವಾದ್ದರಿಂದ ಅದನ್ನು ವೇದಿಕೆಯೆಂತಲೋ, ಮಂಟಪವೆಂತಲೋ ಕರೆಯುತ್ತ ಸಮ ವಸರಣಮಂಟಪವಾಗಿರಬೇಕು. ಈ ಮಾತಿಗೆ ಸಮರ್ಥನೆಗಾಗಿ,

''ಸವೇತ್ಯಾವಸರೇ ಪ್ರೇಕ್ಷಾಸ್ತಿಸ್ಥಂತ್ಯಸ್ಮಿನ್ಸುರಾಸುರಾಃ
ಇತಿ ತಜ್ಞ್ಯೈರ್ಗಿರುಕ್ತಂ ತತ್ಸರಣಂ ಸಮವಾದಿಕಂ'' [104]

ಅಂದರೆ ದೇವತೆಗಳು ಅಸುರರು ಬಂದು ಈ ಮಂಟಪದಲ್ಲಿ ನಿಯಮಿತ ಅವಸರ, ಅವಕಾಶವನ್ನು ನೋಡುತ್ತಿರುವುದರಿಂದ ನಿರುಕ್ತಿಯನ್ನು ತಿಳಿದವರು. ಅದಕ್ಕೆ ಸಮ್+ ಅವ ಪೂರ್ವಕವಾದ ಸರಣವೆಂದು ಊಹಿಸಿದ್ದಾರೆ.

ಸಂ+ಅವ+ಸೃ ಎನ್ನುವಲ್ಲಿ ಸಹ ಉದಾತ್ತವಾದದ್ದನ್ನು ಕೇಳು, ಅಪೇಕ್ಷಿಪಡು ಎಂಬ ಭಾವವಿದ್ದು ಜ್ಞಾನದಾಹದಿಂದ ಬಂದವರಿಗೆ ತೀರ್ಥಂಕರ ಅದನ್ನು ಶ್ರುತ ಪಡಿಸುವ ವಿಚಾರ ಅದರಲ್ಲಿ ಅಡಗಿದಂತಿದೆ.

ಸಮವಸರಣ ಎಂಬ ಶಬ್ದವನ್ನು ಇನ್ನೊಂದು ನೆಲೆಯಲ್ಲಿ ವಿವರಿಸಲು ಸಾಧ್ಯವಿದೆ. ಸಮಯ್+ಶ್ರವಣ ಎಂಬುದಾಗಿ ವಿಭಾಗಿಸುವಾಗ 'ಸಮಯ' ಎಂದರೆ ಆಧ್ಯಾತ್ಮ ನೆಲೆಯಲ್ಲಿ 'ಧರ್ಮ' ಎಂದರ್ಥ. ಮುಂದೆ ಶ್ರವಣ ಎಂದರೆ 'ಕೇಳು' ಎಂದರ್ಥ. ಅಂದರೆ ಧರ್ಮವನ್ನು ಕೇಳು, ಅರಿವನ್ನು ಪಡೆ, ಜ್ಞಾನವನ್ನು ಹೊಂದು ಎನ್ನುವ ಸಾರ್ಥಕ ಬದುಕಿನ ಬಗ್ಗೆ ಇರುವ ಒಂದು ಸಾತ್ವಿಕ ವೇದಿಕೆ ಎಂದು ಅರ್ಥೈಸಬಹುದು.

ಈ ಮೇಲಿನ ಅರ್ಥಗ್ರಹಿಕೆಗಳ ಹಿನ್ನೆಲೆಯಲ್ಲಿ ಸಮವಸರಣವೆಂಬುದು ಒಂದು ಧಾರ್ಮಿಕ ಗೋಷ್ಠಿಯಾಗಿತ್ತು. ಅನುಭಾವಿಗಳ ತೋಟವಾಗಿತ್ತು. ಜೀವರಾಶಿಗಳ

ಒಳಿತಿಗಾಗಿ ರೂಪಿತವಾದ ಮಹಾನ್ ವೇದಿಕೆ ಇದಾಗಿತ್ತು ಎಂದು ಹೇಳಬಹುದು. ಮಾನವನಾಗಲಿ, ದೇವನಾಗಲಿ, ರಾಕ್ಷಸನಾಗಲಿ ಯಾರೇ ಬಂದರೂ ಅವರನ್ನು ಮುಕ್ತಾತ್ಮರನ್ನಾಗಿಸುವ ವೇದಿಕೆಯೇ ಸಮವಸರಣಮಂಟಪವೆಂದು ಕರೆಯಬಹುದು.

ಸಮವಸರಣಮಂಟಪದ ರಚನೆ :

ಜೈನತತ್ವ ಸಿದ್ಧಾಂತಗಳ ಪ್ರಕಾರ ಈ ಜಗತ್ತು ಅನಾದಿ, ಅನಂತ. ಇದೊಂದು ಸೃಷ್ಟಿಯ ಸ್ವಯಂ ರಚನೆ. ಇದು ಯಾರೂ ನಿರ್ಮಿಸಿದ್ದಲ್ಲ. ಹಾಗೇ ಇದನ್ನು ಯಾರೂ ನಾಶ ಮಾಡುವಂತಿಲ್ಲ. ಈ ಸೃಷ್ಟಿಯ ಮೇಲೆ ಉತ್ತಮ ನಾಗರಿಕತೆ ಆರಂಭವಾದದ್ದು ಚತುರ್ದಶಮನುಗಳಿಂದ. ಅವರು ಕಾಲಕಾಲಕ್ಕೆ ಜೀವ-ಜಗತ್ತಿಗೆ ಭಿನ್ನವಾದ ಜ್ಞಾನ ದ್ವಾರಗಳನ್ನು ಅರುಹಿದರು. ಜೈನರ ಬಹುತೇಕ ಪುರಾಣಗಳಲ್ಲಿ ನಾಗರಿಕತೆಯ ನಿರ್ಮಾಣ ವೃಷಭನಿಂದ ಆರಂಭವಾದವು ಎಂದು ಹೇಳುತ್ತವೆ. ಆದರೆ ವೃಷಭನಿಗೆ ಹಿಂದಿನ ಹದಿನಾಲ್ಕು ಮನುಗಳು ಪ್ರೇರಣೆ ಒದಗಿಸಿದ್ದು ಮರೆಯುವಂತಿಲ್ಲ. ಹಾಗೆಯೇ ೧೪ ಮನುಗಳು ಸಹ ಈ ಜಗದ ರಚನೆಗಾಗಲಿ ಬದಲಾವಣೆಗಾಗಲೀ ಶ್ರಮಿಸಿಲ್ಲ. ಇರುವ ಸೃಷ್ಟಿಯ ಮೇಲೆ ಹೊಸ ಪ್ರಯೋಗ ಸಾಧ್ಯತೆಗಳಿಗಾಗಿ ಪ್ರಯತ್ನಿಸಿದ್ದಾರೆ. ಆದರೆ ನಾಗರಿಕತೆಯ ಭದ್ರ ಅಡಿಪಾಯ ಹಾಕಿದವ ಮಾತ್ರ ವೃಷಭ. ಆದ್ದರಿಂದ ವೃಷಭನು ಜೈನಪುರಾಣಗಳ ಪ್ರಕಾರ ೧೫ನೆ ಮನುವಾದ.

೧೫ನೆ ಮನುವಾದ ಆದಿತೀರ್ಥಂಕರ ವೃಷಭನೇ ಸಮವಸರಣಮಂಟಪದ ರಚನೆಯ ಪರಿಕಲ್ಪನೆಯನ್ನು ಹುಟ್ಟುಹಾಕಿದವನೆಂದು ಹೇಳಬಹುದು. ಇದೇ ಬಹುಶಃ ತೀರ್ಥಂಕರ ಸಭಾಮಂಟಪವಾಗಿರಬೇಕು. ಇದರ ಸಮರ್ಥನೆಗೆ ಯಾವ ಆಧಾರ ಗಳೂ ದೊರೆಯಲಾರವು. ಆದರೆ ಕೆಲ ಜೈನ ಪುರಾಣಗಳು ಈ ಸಮವಸರಣ ಮಂಟಪ ಇಂದ್ರ ನಿರ್ಮಿತವೆಂದು ಸಾರುತ್ತವೆ. ಹಾಗೆ ಮನುಗಳು ಈ ಮಂಟಪ ರಚಿಸಿದರೆಂದು ದಾಖಲೆಗಳಿಲ್ಲ.

ವೃಷಭನ ಪರಿಕಲ್ಪನೆಯಲ್ಲಿ ಮೂಡಿದ ಈ ಸಮವಸರಣಮಂಟಪವು ಆರಂಭ ದಲ್ಲಿ ವಾಸ್ತುರೂಪದ ನಾಗರಿಕತೆಯ ಪ್ರತೀಕವಾಗಿ ರೂಪು ಪಡೆದಿರಬೇಕು. ಮುಂದಿನ ತೀರ್ಥಂಕರರಲ್ಲಿ ಅದು ಬೆಳೆದು ವಿಸ್ತೃತವಾಗಿರಬೇಕು.

ಇದೊಂದು ಅಧ್ಯಾತ್ಮಿಕವಾದ ಧಾರ್ಮಿಕ ಚೌಕಟ್ಟಿನಲ್ಲಿಯೇ ಗುರುತಿಸುವುದ ರಿಂದ ಇದರ ರಚನೆ ವಿನ್ಯಾಸ ಕುರಿತು ಪುರಾಣಗಳು ಅಷ್ಟೊಂದು ಮುತುವರ್ಜಿ ವಹಿಸಿಲ್ಲವೆಂದು ಕಾಣುತ್ತದೆ. ಆದರೂ ಅಲೌಕಿಕವಾದ ಭಕ್ತಿ-ಭಾವಗಳ ಜೊತೆಗೆ ಪುರಾಣ ಕವಿಗಳು ಸಮವಸರಣಮಂಟಪವನ್ನು ವಿವರಿಸಿದ್ದಾರೆ. ವಾಸ್ತವದಲ್ಲಿ ಸಮವಸರಣ ಮಂಟಪವು ಒಂದು ಬಯಲು ಜಿನಾಲಯವಾಗಿದ್ದು, ಕೃತ್ರಿಮವಲ್ಲದ ಚೈತ್ಯಾಲಯ

ವಾಗಿರಬೇಕು. ಈ ನಾಲ್ಕು ಗೋಡೆಗಳು ಜಿನಾಲಯದ ಮೊದಲಿನ ಸ್ಥಿತಿಯೇ ಅದು. ಬಹುಶಃ ಇದರ ಮುಂದಿನ ಬೆಳವಣಿಗೆಯೇ ವ್ಯವಸ್ಥಿತವಾದ ಜಿನಾಲಯಗಳದು ಎಂದು ಹೇಳಬಹುದು.

ಸಮವಸರಣಮಂಟಪದ ಮಹತ್ವ:

ಪ್ರತಿಯೊಂದು ಧರ್ಮ, ತತ್ವ ಹಾಗೂ ದರ್ಶನದ ಅಂತಿಮ ನೆಲೆ ಜೀವಿಯ ಸಾರ್ಥಕತೆಯಲ್ಲಿ ಪರ್ಯಾವಸನಗೊಳ್ಳುತ್ತದೆ. ಆದ್ದರಿಂದ ಸಮವಸರಣಮಂಟಪದ ಅಂತಿಮ ಉದ್ದೇಶ ಜೀವಿಯ ಸಾರ್ಥಕತೆಯೇ ಆಗಿರುವುದರಿಂದ ಜೈನ ತತ್ವಸಿದ್ಧಾಂತ ದಲ್ಲಿ ಇದಕ್ಕೆ ಅತ್ಯಂತ ಮಹತ್ವದ ಸ್ಥಾನ ಕಲ್ಪಿಸಲಾಗಿದೆ. ಸಮವಸರಣಮಂಟಪ ಅತ್ಯಂತ ಜನ ಸಮ್ಮುಖವಾಗಿದ್ದು ಇಡೀ ಜೈನಸಿದ್ಧಾಂತಗಳ ಒಟ್ಟು ಸಾರದ ಚರ್ಚೆ ಇಲ್ಲಿ ನಡೆದಿದೆ.

ಈ ಸಮವಸರಣಮಂಟಪ ಅಧ್ಯಾತ್ಮ ಮೂಲವಾದರೂ ಸಹ ಧಾರ್ಮಿಕತೆ ಯಂತೆ ಲೌಕಿಕದೃಷ್ಟಿಯಿಂದ ಗ್ರಹಿಸಲು ಸಾಧ್ಯವಿದೆ. ಜೀವನ್ಮರಣಗಳ ಚಿಂತನ ಕೇಂದ್ರ ವಾದ ಇದು ಧಾರ್ಮಿಕ ಪಾಠಶಾಲೆಯಾದಂತೆ. ಲೌಕಿಕ ಬದುಕಿನ ತರಬೇತಿ ಕೇಂದ್ರವೂ ಆಗಿತ್ತು. ಇಲ್ಲಿನ ಚರ್ಚೆಗೆ ಜೈನತತ್ವ ಸಿದ್ಧಾಂತಗಳನ್ನು ಆಯ್ಕೆ ಮಾಡಿ ಕೊಂಡರು. ಮೇಲ್ನೋಟಕ್ಕೆ ಧರ್ಮಪ್ರಸಾರದಂತೆ ಕಂಡುಬಂದರೂ ಸಹ ಮನು ಕುಲದ ಬದುಕನ್ನು ನೇರಗೊಳಿಸುವ ಆಶಯಗಳು ಇಲ್ಲಿವೆ. ಹೀಗಾಗಿಯೇ ಅದು ಒಂದು ಸೀಮಿತತೆಗೆ ಮೀರಿ ಬೆಳೆದದ್ದು ಸತ್ಯ. ಇಲ್ಲಿ ಪ್ರಾದೇಶಿಕ, ಭಾಷಿಕ ಭಿನ್ನತೆ ಗಳಾಗಲಿ ಇರಲಿಲ್ಲ. ವಿವಿಧ ವಸ್ತು-ವಿಷಯ ಕುರಿತ ಚರ್ಚೆ ನಡೆದ ಬಗ್ಗೆ ಜೈನ ಪುರಾಣಗಳು ಅಧಿಕೃತ ಮಾಹಿತಿ ಒದಗಿಸುತ್ತವೆ. ಪುರಾಣ ಮೂಲದ ಸಾಂಕೇತಿಕ ಸಂಖ್ಯೆಯ ವಿವರಗಳಾಗಲಿ, ದೇವತೆಗಳ ಗುಣಲಕ್ಷಣಗಳಾಗಲಿ ಬದಿಗಿರಿಸಿದಾಗ ಸಮವಸರಣಮಂಟಪದ ಕುರಿತು ಆಲೋಚನೆ ಮಾಡಲು ಸಾಧ್ಯವಿದೆ. ಅದಕ್ಕೆ ಇಡೀ ಜೀವರಾಶಿಗಳ ಅಭ್ಯುದಯದ ಹಿನ್ನೆಲೆಯಿದೆ. ಅದರ ಮಹತ್ವ ಪೌರಾಣಿಕ ವೈಭವ ಅತಿಶಯೋಕ್ತಿಯನ್ನು ಮೀರಿದ ಅಂಶಗಳೆಂದರೆ ದಾರ್ಶನಿಕರ ಜಿಜ್ಞಾಸೆಗಳ ಸಿದ್ಧಾಂತ ಗಳು ಪ್ರತಿಜೀವಿಯೂ ಅಳವಡಿಸಿಕೊಳ್ಳಬಹುದಾದ ರೀತಿಯನ್ನು, ಅದರಿಂದ ವ್ಯಕ್ತ ವಾಗುವ ಪ್ರಯೋಜನವನ್ನು ವಿವರಿಸುವ ವೇದಿಕೆ ಅದಾಗಿತ್ತು. ಈ ಪ್ರಯತ್ನವನ್ನು ಸಾಮಾನ್ಯ ಎಂದು ಗ್ರಹಿಸಲು ಸಾಧ್ಯವಿಲ್ಲ. ಆದ್ದರಿಂದ ಅದು ಎಲ್ಲರ ಪ್ರಯೋಜನ ಮೂಲ ಮಂಟಪವಾಗಿತ್ತು.

ಸಮವಸರಣಮಂಟಪಕ್ಕೆ ಎರಡು ಮುಖಗಳಿವೆ. ಒಂದು ಅಧ್ಯಾತ್ಮ ಮುಖ. ಅಲ್ಲಿ ಧಾರ್ಮಿಕ ಅಂಶಗಳು ಚರ್ಚೆಗೆ ಒಳಗಾಗುವುದು. ಇನ್ನೊಂದು ಸಮಾಜ

ಮುಖ. ಇಡೀ ಜೈನ ಸಮುದಾಯವು ಸಾಮಾಜಿಕವಾಗಿ ಸಂಘಟನೆಗೊಳ್ಳುವ ವೇದಿಕೆಯಾಗಿತ್ತು. ಬಹುತೇಕ ಪುರಾಣಗಳಲ್ಲಿ ಸಮವಸರಣಮಂಟಪದಲ್ಲಿ ವರ್ಗ, ವರ್ಣ, ಲಿಂಗಭೇದಗಳಿಲ್ಲದ ಎಲ್ಲರಿಗೂ ಮುಕ್ತವಾದ ಅವಕಾಶಗಳಿದ್ದವು. ಸುರಾಸುರರೆಂಬ ಮನುಷ್ಯ-ಪ್ರಾಣಿಗಳೆಂಬ ಅಂತರವಿರಲಿಲ್ಲ. ಭಿನ್ನಭಾಷೆ ಭಾವಗಳ ಸಂಗಮವಾಗಿತ್ತು. ಜೀವ-ಜೀವಿ ಮಧ್ಯೆ ಯಾವುದೇ ಕಂದರವಿರಲಿಲ್ಲ. ಸಕಲ ಜೀವರಾಶಿಗಳು ಸಮಾನವಾಗಿ ಪರಿಗಣಿಸಲ್ಪಡುತ್ತಿದ್ದವು. ಮಂಟಪದಲ್ಲಿದ್ದವರು ದುರಾಸೆ, ದುರಾಲೋಚನೆಗಳಿಂದ ಮುಕ್ತರಾಗಿರುತ್ತಿದ್ದರು. ಇದೊಂದು ಜೀವನ ಕರ್ಮಠವಾಗಿದ್ದು ಜ್ಞಾನಶಾಖೆಯಾಗಿತ್ತು. ಅಂತೆಯೇ ಅನೇಕರು ನಡೆಯಲು ಕಲಿತರು, ನುಡಿಯಲು ಹಾಗೂ ಬದುಕಲು ಕಲಿತರು. ಹೀಗಾಗಿ ಸಮವಸರಣಮಂಟಪ ಅತ್ಯಂತ ಮಹತ್ವದ ವೇದಿಕೆಯಾಗಿತ್ತು.

೨.೨.೪. ಜೈನರ ಸಮವಸರಣಮಂಟಪ - ಅನುಭಾವಮಂಟಪ :

ಹಿನ್ನೆಲೆ :

ಜೈನಮತತತ್ವ ಹಾಗೆಯೇ ವೀರಶೈವಮತತತ್ವಗಳು ಭಿನ್ನಭಿನ್ನ ಕಾಲಘಟ್ಟದಲ್ಲಿ ಮೈತಳೆದು ನಿಂತಿದ್ದು, ಜೈನಮತದ ಬೆನ್ನಲ್ಲಿ ವೀರಶೈವ ಹುಟ್ಟಿಕೊಂಡಿರುವುದಕ್ಕೆ ಚಾರಿತ್ರಿಕವಾದ ಸಂಬಂಧವಿದೆ. ಈ ಮತತತ್ವಗಳ ಹಿನ್ನೆಲೆಯ ಚರ್ಚೆ ಏನೇ ಇದ್ದರೂ ಎರಡರ ಆಶಯ ಒಂದೇ ಆಗಿರುವುದು ಗಮನಾರ್ಹ. ಆದರೆ ವ್ಯತ್ಯಾಸವಿಷ್ಟೇ, ಜೈನ ತತ್ವಗಳು ಜಡವಾದಾಗ ಜನಸಾಮಾನ್ಯರಿಗೆ ನಿಲುಕದೇ ಇರುವಾಗ ಮತ್ತು ಬರುಬರುತ್ತ ಜೈನತತ್ವ ಕೆಲ ಅವೈಜ್ಞಾನಿಕತೆಗಳನ್ನು ರೂಪಿಸಿಕೊಂಡಂತೆ ಅದು ತನ್ನ ಪ್ರಚಾರತೆ ಕಳೆದುಕೊಳ್ಳಬೇಕಾಗಿ ಬಂತು. ಆದರೆ ಜೈನಮತತತ್ವದ ಪ್ರಭಾವ ವೀರಶೈವರ ಮೇಲಾಗಿಲ್ಲವೆಂದು ಹೇಳಲಿಕ್ಕಾಗದು. ವೀರಶೈವ ಆಧ್ಯಾತ್ಮಿಕಸಂಸತ್ತಾಗಿದ್ದು, ಅನುಭಾವಮಂಟಪದ ರಚನೆಯೂ ಜೈನರ ಸಮವಸರಣಮಂಟಪವನ್ನು ಹೋಲುವುದು.

ಜೈನರ ಸಮವಸರಣಮಂಟಪಕ್ಕೂ ವೀರಶೈವರ ಅನುಭಾವಮಂಟಪಕ್ಕೂ ಅನೇಕ ರೀತಿಯ ಸಂಬಂಧಗಳಿವೆ. ರಚನೆ, ಮಾದರಿ, ಉದ್ದೇಶ ಮೊದಲಾದ ಅಂಶಗಳಲ್ಲಿ ಸಾಮ್ಯತೆಗಳಿವೆ. ಅಂತೆಯೇ ಅನುಭಾವಮಂಟಪಕ್ಕೆ ಜೈನರ ಸಮವಸರಣಮಂಟಪವೂ ಪ್ರೇರಣೆ ಒದಗಿಸಿದೆ ಎಂದು ಹೇಳಬಹುದು. ಅನುಭಾವಮಂಟಪದ ರಚನೆಯ ಹಿನ್ನೆಲೆಯಲ್ಲಿರುವ ವಾದ-ಜಿಜ್ಞಾಸೆಗಳೇ ಸಮವಸರಣಮಂಟಪ ಕುರಿತೂ ಇವೆ. ಆರಂಭದಲ್ಲಿ ಸಮವಸರಣಮಂಟಪ ಬಯಲಾಗಿತ್ತು. ಅನುಭಾವಮಂಟಪವೂ ಬಯಲೇ ಆಗಿದ್ದು, ಮುಂದೆ ಅವು (ಸಮವಸರಣಮಂಟಪ) ಜಿನಾಲಯಗಳಾದಂತೆ ಅನುಭಾವಮಂಟಪ ಮಹಾಮನೆಯಾಗಿ ಶೂನ್ಯಪೀಠವಾಗಿರುವುದು ಗಮನಿಸಬೇಕು.

ವೃಷಭಾದಿ ವ್ಯಕ್ತಿಗಳಿರುವಂತೆ ಶರಣರಿದ್ದಾರೆ. ಎರಡೂ ಕಡೆ ತಾತ್ವಿಕ ಸೈದ್ಧಾಂತಿಕ ಚರ್ಚೆ ನೆರವೇರುತ್ತಿದ್ದವು. ಮೇಲ್ನೋಟಕ್ಕೆ ಎರಡೂ ಆಧ್ಯಾತ್ಮಿಕ ನೆಲೆಯೇ ಹೊಂದಿದ್ದರೂ ಮನುಕುಲದ ಒಳಿತಿಗಾಗಿ ಕೈಗೊಳ್ಳಬೇಕಾದ ಕ್ರಮ ಹಾಗೂ ಸಾಮಾಜಿಕ ಸಂಘಟನೆಗೆ ಹೆಚ್ಚು ಒತ್ತು ನೀಡಿರುವುದು ಗಮನಿಸಬೇಕು.

ವೀರಶೈವರಲ್ಲಿ ಬರುವ ೭೭೦ ಅಮರಗಣಂಗಳು, ಮುಕ್ತಾತ್ಮರು, ಅನುಭಾವಿ ಶರಣರು, ಕಾಯಕ-ದಾಸೋಹ ಜೀವಿಗಳು ಮೊದಲಾದ ವಿವರಗಳಿಗೆ ಸಮಾನಾಂತರದಲ್ಲಿ ಜೈನರ ಸಮವಸರಣಮಂಟಪದಲ್ಲಿ ಸತ್ಯರು, ಸಾತ್ವಿಕರು, ಮಹಾಜ್ಞಾನಿಗಳು, ಗಣಗಳು ಕಂಡುಬರುತ್ತಾರೆ.

ಸಮವಸರಣಮಂಟಪದ ರಚನೆಯ ಹಿನ್ನೆಲೆಯೂ ಜೈನ ಪುರಾಣಗಳು ವಿವರಗಳನ್ನು ಒದಗಿಸಿದಂತೆ ವೀರಶೈವ ಕೃತಿಗಳು ಅನುಭಾವಮಂಟಪದ ವಿವರಗಳನ್ನು ಒದಗಿಸುತ್ತವೆ (ಅನುಭಾವಮಂಟಪದ ರಚನೆಯ ಹೆಚ್ಚಿನ ವಿವರಗಳಿಗಾಗಿ: ಅನುಭಾವ ಮಂಟಪ ಅಸ್ತಿತ್ವ ಕುರಿತ ಭಾಗ ಗಮನಿಸಬೇಕು). ಬಹುಮುಖ್ಯವಾಗಿ ಸಮವಸರಣ ಮಂಟಪದ ವಿಸ್ತೀರ್ಣ ನಿಯೋಜನೆಯಾಗಿದ್ದಂತೆ ಅನುಭಾವಮಂಟಪದ ವಿಸ್ತೀರ್ಣವೂ ಅಷ್ಟೇ ಆಗಿದ್ದು ಗಮನಾರ್ಹ.

ಜೈನರಲ್ಲಿ ಕಂಡುಬರುವ ಸಾಂಕೇತಿಕ ಹಾಗೂ ಒಮ್ಮೊಮ್ಮೆ ಅತಿಶಯೋಕ್ತಿ ಸಂಖ್ಯಾವಿವರಗಳು ಅನುಭಾವ ಮಂಟಪದಲ್ಲಿ ಸಹ ಕಂಡುಬರುತ್ತದೆ. ಸಮವಸರಣ ಮಂಟಪದಲ್ಲಿ ಜಿನ ಮುಖ್ಯವಾದರೆ, ಇಲ್ಲಿ ಜೀವ ಮುಖ್ಯನಾಗುತ್ತಾನೆ. ಸಮವಸರಣ ಮಂಟಪ ಹಾಗೂ ಅನುಭಾವಮಂಟಪ ಈ ಎರಡೂ ವೇದಿಕೆಗಳು ಸಮಾನತೆ ಹಾಗೂ ತಾತ್ವಿಕ ತಳಹದಿಯನ್ನು ಹೊಂದಿವೆ. ಹಾಗಾಗಿ ಈ ಎರಡೂ ವೇದಿಕೆಗಳು ವಿಶ್ವಮಾನವ ಪ್ರೇಮವನ್ನೂ ಹೊಂದಿವೆ.

ಇವುಗಳಲ್ಲದೆ ಜೈನರ ಸಮವಸರಣಮಂಟಪಕ್ಕೂ, ಬಸವಾದಿ ಶರಣರ ಅನುಭಾವಮಂಟಪಕ್ಕೂ ಇನ್ನೂ ಅನೇಕ ರೀತಿಯ ಸಾಮ್ಯತೆಗಳಿರುವುದನ್ನು ಗಮನಿಸಬಹುದು. ಅವುಗಳನ್ನು ಸ್ಥೂಲವಾಗಿ ಈ ರೀತಿ ಪಟ್ಟಿ ಮಾಡಲಾಗಿದೆ : [105]

ಸಮವಸರಣಮಂಟಪ	**ಅನುಭಾವಮಂಟಪ**
೧. ಜೈನರಲ್ಲಿ ಸಿಂಹಪೀಠದ ಪರಿಕಲ್ಪನೆ ಇದೆ.	೧. ಶರಣರಲ್ಲಿ ಶೂನ್ಯಪೀಠದ ಪರಿಕಲ್ಪನೆ ಇದೆ.
೨. ತತ್ವ-ಜಿಜ್ಞಾಸೆಯ ಜಿನಮುನಿಗಳಿದ್ದಾರೆ.	೨. ತಾತ್ವಿಕ ಚಿಂತನೆಯ ನಿವೇದಕರಾಗಿ ಅನುಭಾವಿ ಶರಣರಿದ್ದಾರೆ.

೩. ಲೌಕಿಕ ರಚನೆ ಅಧ್ಯಾತ್ಮಿಕ ಉದ್ದೇಶ ಹೊಂದಿದೆ.	೩. ಲೌಕಿಕ ರಚನೆ ಅಧ್ಯಾತ್ಮಿಕ ಉದ್ದೇಶ ಹೊಂದಿದೆ.
೪. ಈ ಪರಿಕಲ್ಪನೆಯ ರೂವಾರಿ ವೃಷಭ.	೪. ಅನುಭಾವ ಮಂಟಪದ ಪರಿಕಲ್ಪನೆಯ ರೂವಾರಿ ಬಸವಣ್ಣ ಮತ್ತು ಅವನ ಒಡನಾಡಿಗಳು.
೫. ಬ್ರಹ್ಮಾಂಡವೇ ಪಿಂಡಾಂಡದ ಪ್ರತಿರೂಪವಾಗಿದ್ದಂತಿದೆ.	೫. ಪಿಂಡಾಂಡವೇ ಬ್ರಹ್ಮಾಂಡದ ಪ್ರತಿರೂಪವಾಗಿದ್ದಂತಿದೆ.
೬. ಬಯಲು ವೇದಿಕೆ.	೬. ಬಯಲು ವೇದಿಕೆ.
೭. ಸಿಂಹಪೀಠವು ತ್ರಿಪೀಠಗಳ ಮೇಲೆ ರಚನೆಯಾಗಿದ್ದು ಮಣಿಖಚಿತವಾದ ಸೋಪಾನಗಳಿವೆ.	೭. ಶೂನ್ಯಪೀಠವು ಉಪ್ಪರಿಗೆ ಶಿಖರಗಳ ಮೇಲಿದ್ದು ಮಣಿಖಚಿತವಾದ ಷಟ್‌ಸ್ಥಲವೆಂಬ ಸೋಪಾನಗಳನ್ನು ಹೊಂದಿದೆ.
೮. ಸಿಂಹಪೀಠಾಧಿಪತಿ ತೀರ್ಥಂಕರ.	೮. ಶೂನ್ಯಸಿಂಹಾಸನ ಪೀಠಾಧಿಪತಿ ಅಲ್ಲಮ.
೯. ತೀರ್ಥಂಕರ ಸಹಸ್ರದಳ ಕಮಲದ ಮೇಲೆ ನಾಲ್ಕು ಬೆರಳು ಅಂತರದ ಮೇಲೆ ಆಸೀನ.	೯. ಅಲ್ಲಮ ಅಷ್ಟದಳ ಕಮಲದ (ಸಹಸ್ರದಳ ಕಮಲವೆಂಬ ವಿಚಾರವೂ ಇದೆ)ಬಯಲು ಗದ್ದುಗೆ ಮೇಲೆ ಆಸೀನ.
೧೦. ತ್ರಿಕಾಲಜ್ಞಾನಿಯ ಸಿಂಹಾಸನ ಪೀಠ.	೧೦. ಸುಜ್ಞಾನಿಯ ಸಿಂಹಾಸನ, ಶೂನ್ಯಪೀಠ, ಅಂಬರಾಸನ, ಬಯಲು ಸಿಂಹಾಸನ.
೧೧. ಮಂಟಪದ ಒಳಗೆ ಎಂಟು ಮುಖ್ಯ ಭಾಗಗಳು : ಪ್ರಾಕಾರಗಳು, ಗುಡಿಗೋಪುರಗಳು, ಕೋಟೆ, ಧ್ವಜಗಳಿವೆ (ಪುರಾಣಗಳ	೧೧. ಉಪ್ಪರದ ಗುಡಿ ತೋರಣ, ಅಷ್ಟದ್ವಾರ ದಂಗಡಿ, ಧ್ವಜ ರಾಜಬೀದಿಗಳುಂಟು (ಶೂನ್ಯಸಂಪಾದನೆ ಮೂಲದಿಂದ).
೧೨. ಮಂಟಪದ ಒಳಗೆ ದ್ವಾದಶ ಗಣಗಳ ಜನರಿರುತ್ತಾರೆ ಮತ್ತು ಸಕಲ ಜೀವಜಂತುಗಳಿರುತ್ತವೆ.	೧೨. ಇಲ್ಲಿ ಅವರ ಗಣಂಗಳು ಅನುಭಾವಿ ಶರಣರು ಇರುತ್ತಾರೆ (ದ್ವಾದಶ ಗಣಗಳ ಉಲ್ಲೇಖವೂ ಬರುತ್ತದೆ. ಆದರೆ ಜೀವ ರಾಶಿಗಳ ಪ್ರಸ್ತಾಪ ಇಲ್ಲಿಲ್ಲ).
೧೩. ಆಲಯ, ದ್ವಾರ ಮಂಟಪ ಮೊದಲಾದ ಒಳರಚನೆಗಳಿದ್ದು, ಬಯಲು ಜಿನಾಲಯದಂತೆ ಕಂಡುಬರುತ್ತದೆ.	೧೩. ಆಲಯ, ದ್ವಾರ, ಕಂಬ, ಪೌಳಿ, ಮೇಲುಪ್ಪರಿಗೆ, ಆಸನ ಮೊದಲಾದವು ಸೇರಿದ್ದು ಮಂಟಪವನ್ನು ಮಠವೆಂದೂ ಕರೆಯಲಾಗಿದೆ. ಬಯಲು ಗದ್ದುಗೆಯಿದೆ.
೧೪. ಸ್ಫಟಿಕ ಚಂದ್ರಕಾಂತಶಿಲೆಯ ಬಳಕೆಯಿದೆ.	೧೪. ಧವಳಾಲಯವಿದೆ.
೧೫. ಕೆಲ ವರ್ಣನೆಗಳಲ್ಲಿ ಅತಿಶಯತೆ, ಅಲೌಕಿಕತೆಗಳಿವೆ.	೧೫. ಅತಿಶಯತೆ, ಅಲೌಕಿಕತೆಯೊಂದಿಗೆ ಬೆಡಗಿನ ಛಾಯೆಯಿದೆ.

೧೬. ಇದೊಂದು ಸಾಮಾಜಿಕ ಧಾರ್ಮಿಕ ಸಂಸ್ಥೆ.	೧೬. ಇದು ಸಮಾಜೋ-ಧಾರ್ಮಿಕ ಶೈಕ್ಷಣಿಕ ಸಂಸ್ಥೆಯಾಗಿದ್ದು ಸಾಹಿತ್ಯಕೃಷಿ ಸಹ ನೆರವೇರುತ್ತಿತ್ತು.
೧೭. ಇದೊಂದು ವ್ಯವಸ್ಥಿತವಾದ ಯೋಜನೆಯ ಮಾದರಿಯಂತಿದೆ.	೧೭. ಇಡೀ ಕಲ್ಯಾಣಪುರವೇ ಸಾಕ್ಷಿಯಾಗಿದ್ದು ಮಹಾಮನೆಗಳೇ ಅನುಭಾವಮಂಟಪಗಳಾಗಿದ್ದವು.
೧೮. ದಿವ್ಯಧ್ವನಿ.	೧೮. ಮಾತೆಂಬುದು ಜ್ಯೋತಿರ್ಲಿಂಗ.
೧೯. ಮೂರ್ತರೂಪದ (ಜಿನಾಲಯ) ಪರಿಕಲ್ಪನೆ.	೧೯. ಅಮೂರ್ತರೂಪದ (ಅನುಭಾವಮಂಟಪದ ಸಂಸ್ಥೆ) ಪರಿಕಲ್ಪನೆ.

ಹೀಗೆ ಹಲವಾರು ಅಂಶಗಳಲ್ಲಿ ಸಾಮ್ಯತೆ ಕಂಡುಬಂದಿದ್ದರೂ ಈ ಎರಡೂ ವೇದಿಕೆಗಳ ಕಾಲಘಟ್ಟಗಳು ಮಾತ್ರ ಭಿನ್ನಭಿನ್ನವಾದವುಗಳಾಗಿವೆ. ಭಿನ್ನ ಭಿನ್ನ ಧಾರ್ಮಿಕ ಸಿದ್ಧಾಂತಗಳನ್ನು ರೂಪಿಸಿಕೊಂಡವುಗಳಾಗಿವೆ. ಹಾಗಾಗಿ ಈ ಎರಡೂ ಧ್ರುವಗಳು ಎಲ್ಲೋ ಒಂದೆಡೆ ಸೇರಿದಂತೆ ಕಂಡು ಬಂದರೆ ಅದು ಅತಿಶಯೋಕ್ತಿ ಏನಲ್ಲ. ಸಾಮಾನ್ಯವಾಗಿ ವೀರಶೈವ ಎಂದರೆ ಸರ್ವ-ಧರ್ಮ-ತತ್ವ ಸಿದ್ಧಾಂತಗಳ ಸಾರರೂಪವಾಗಿ ಪ್ರತ್ಯೇಕ ತತ್ವ ಸಿದ್ಧಾಂತಗಳನ್ನು ರೂಪಿಸಿಕೊಂಡಿದೆ. ಹಲವಾರು ಸಿದ್ಧಾಂತಗಳು ಇದರಲ್ಲಿ ಅಡಕವಾಗಿವೆ. ಜೈನಧರ್ಮವೂ ಇದಕ್ಕೆ ಹೊರತಾಗಿಲ್ಲ.

****

೨.೩. ಬೌದ್ಧಸಂಘ, ಜೈನರ ಸಮವಸರಣಮಂಟಪ ಮತ್ತು ಅನುಭಾವಮಂಟಪಗಳ ಸೈದ್ಧಾಂತಿಕ ನೆಲೆಗಳು :

ಜಗತ್ತಿನ ಧರ್ಮಗಳು ಹಲವು ಸಿದ್ಧಾಂತಗಳನ್ನು ಚರ್ಚಿಸಿವೆ. ಅದರಲ್ಲಿ ಅತ್ಯಂತ ಪ್ರಮುಖ ಚರ್ಚೆ-ಚಿಂತನೆಗಳೆಂದರೆ; ಸೃಷ್ಟಿ, ಹುಟ್ಟು, ಸಾವು, ಆತ್ಮ, ಪುನರ್ಜನ್ಮ, ಶೂನ್ಯ ಮತ್ತು ಮಾಯೆ ಮೊದಲಾದ ಅಂಶಗಳು. ಈ ವಿಧಾನವನ್ನು ಬಹುತೇಕ ಎಲ್ಲ ಧರ್ಮಗಳೂ ಚರ್ಚಿಸಿವೆ. ಎಲ್ಲ ಧರ್ಮಗಳ ತತ್ವ-ಸಿದ್ಧಾಂತಗಳ ಚರ್ಚೆಯ ಗುರಿ ಒಂದೇ ಆಗಿದ್ದರೂ ಭಿನ್ನಭಿನ್ನ ಮಾರ್ಗಗಳ ಮೂಲಕ ಚರ್ಚಿಸಿದ್ದಾರೆ. ಆದರೆ ಅವರೆಲ್ಲರ ಸತ್ಯದ ಸಾಕ್ಷಾತ್ಕಾರ ಒಂದೇ. ಏಕೆಂದರೆ ನಮಗಿರುವ ಸೃಷ್ಟಿಯೂ ಒಂದೇ. ಸತ್ಯವೂ ಒಂದೇ. ನೋಡುವ ಕಣ್ಣು ಬೇರೆಬೇರೆಯಾದರೂ ದೃಷ್ಟಿ ಮಾತ್ರ ಒಂದೇ. ಈ ನೆಲೆಯಲ್ಲಿ ಬೌದ್ಧ ಸಂಘ, ಜೈನರ ಸಮವಸರಣಮಂಟಪ ಮತ್ತು ಅನುಭಾವ ಮಂಟಪದ ಸಿದ್ಧಾಂತಗಳ ಚರ್ಚೆ ಪ್ರಸ್ತುತವೆನಿಸುತ್ತದೆ.

ಆತ್ಮದ ಪರಿಕಲ್ಪನೆ :

ಆತ್ಮವನ್ನು ಕುರಿತು ಚಿಂತಿಸದ ಧರ್ಮದರ್ಶನಗಳೇ ಜಗತ್ತಿನಲ್ಲಿಲ್ಲ. ಆತ್ಮವೆನ್ನುವುದು ಒಂದು ಅಮೂರ್ತ ಪರಿಕಲ್ಪನೆ. ಅದೊಂದು ಮನೋಧರ್ಮ ಅಥವಾ ಬಲವಾದ ನಂಬಿಕೆ. ಆತ್ಮವನ್ನು ಕುರಿತು ಎರಡು ರೀತಿಯ ಜಿಜ್ಞಾಸೆಗಳಿವೆ. ಒಂದು ಆತ್ಮವು ಸಾವನ್ನು ಮೀರಿದ್ದು, ಆದ್ದರಿಂದ ಎಲ್ಲರೂ ಆತ್ಮತತ್ವವನ್ನು ಒಪ್ಪಿಕೊಳ್ಳುತ್ತಾರೆ. ಇನ್ನೊಂದು ಕೆಲ ಧರ್ಮಗಳು ಆತ್ಮತತ್ವವನ್ನು ನಿರಾಕರಿಸುತ್ತವೆ. ಕೆಲವರಿಗೆ ಆತ್ಮವು ನಿತ್ಯವಾದರೆ ಮತ್ತೆ ಕೆಲವರಿಗೆ ಆತ್ಮ ಅನಿತ್ಯ. ಈ ಹಿನ್ನೆಲೆಯಲ್ಲಿ ಸಂಘ, ಸಮವಸರಣ ಮಂಟಪ ಮತ್ತು ಅನುಭಾವಮಂಟಪಗಳ ನಿಲುವುಗಳನ್ನು ಗಮನಿಸುವುದು ಸೂಕ್ತ.

ಬೌದ್ಧರ ಸಂಘ - ಆತ್ಮದ ಪರಿಕಲ್ಪನೆ :

ಇವರು ಆತ್ಮತತ್ವವನ್ನು ಒಪ್ಪುವುದಿಲ್ಲ. ''ಬುದ್ಧನು ಸಕಲ ದುಷ್ಕಾರ್ಯ ಮತ್ತು ದುಷ್ಪವೃತ್ತಿಗೆ ಮೂಲದಲ್ಲಿ ಆತ್ಮವಾದವನ್ನೇ ಕಾರಣವೆಂಬುದಾಗಿ ಪರಿಗಣಿಸಿ ಆತ್ಮವೆಂಬ ಪದಾರ್ಥದ ಇರುವಿಕೆಯನ್ನು ನಿರಾಕರಿಸುತ್ತಾನೆ. ಬದಲಿಗೆ ಮಾನಸಿಕ ಅನುಭವ

ಮತ್ತು ವಿಭಿನ್ನ ಪ್ರವೃತ್ತಿಗಳನ್ನು ಸ್ವೀಕರಿಸುತ್ತಾನೆ. ಆದರೆ ಆತ್ಮವನ್ನು ಅವರ ಸಂಪಾತ (ಸಮೂಹ)ದಿಂದ ಬೇರೆಯಾದ ಪದಾರ್ಥವೆಂಬುದಾಗಿ ಬುದ್ಧ ಅಂಗೀಕರಿಸುವುದಿಲ್ಲ. ಆತ್ಮವು ಪ್ರತ್ಯಕ್ಷ ಗೋಚರವಾದ ಮಾನಸಿಕ ಪ್ರವೃತ್ತಿಗಳ ಪುಂಜ ಮಾತ್ರವಾಗಿರುತ್ತದೆ.''[106] ಇಲ್ಲಿ ಆತ್ಮವೆಂದರೆ ನಾಮರೂಪದ ಸಂಜ್ಞೆ. ಇಲ್ಲಿ ಸಂಜ್ಞೆ ಎಂದರೆ ನಾಲ್ಕು ಭೂತಗಳಿಂದ ತಯಾರಾದ ರೂಪ ಮಾತ್ರ. ಆತ್ಮ ಹೇಗೆ ಅನಿತ್ಯವೋ ಜಗತ್ತು ಮತ್ತು ಸಂಬಂಧಗಳು ಅನಿತ್ಯವಾಗಿದ್ದು ಕ್ಷಣಿಕವಾಗಿವೆ. ಆದ್ದರಿಂದ ಆತ್ಮವೆಂಬುದಿಲ್ಲವೆಂದು ಪ್ರತಿಪಾದಿತವಾಗಿದೆ.

ಜೈನರ ಸಮವಸರಣಮಂಟಪ - ಆತ್ಮದ ಪರಿಕಲ್ಪನೆ :

ಇಲ್ಲಿ ಆತ್ಮದ ಅಸ್ತಿತ್ವವನ್ನು ಒಪ್ಪಿಕೊಳ್ಳಲಾಗಿದೆ. ಜೀವಿಯ ಶುದ್ಧರೂಪವೇ ಆತ್ಮ. ಅದು ತಾನಾಗಿಯೇ ಇದ್ದಿರುತ್ತದೆ. ಆದರೆ ಜೀವಿಯ ಕರ್ಮಗಳು ಆತ್ಮನನ್ನು ಬಂಧಿಸಿರುತ್ತದೆ. ಅದು (ಆತ್ಮ) ಅನಾದಿ, ಅನಂತ. ಜೈನರ ಪ್ರಕಾರ ಆತ್ಮವೆನ್ನುವುದು ಭೋಕ್ತೃವೂ ಕರ್ತೃವೂ ಆಗಿರುತ್ತದೆ. ಜೀವಾತ್ಮನು ಪ್ರಯತ್ನದ ಮೂಲಕ ಪರಮಾತ್ಮನಾಗುತ್ತಾನೆ. ಅದಕ್ಕೆ ಅವನು ರತ್ನತ್ರಯಗಳಿಗೆ ಒಳಗಾಗಬೇಕು. ಕೇವಲಜ್ಞಾನ ಪಡೆದು ಮುಕ್ತರಾದ ಆತ್ಮವನ್ನು ಅರ್ಹಂತವೆಂದು ಕರೆಯಲಾಗಿದೆ. ಹೀಗೆ ಆತ್ಮತತ್ವವನ್ನು ಜೈನರ ಸಮವಸರಣಮಂಟಪ ಒಪ್ಪಿಕೊಂಡಿದೆ.

ಅನುಭಾವಮಂಟಪ : ಆತ್ಮದ ಪರಿಕಲ್ಪನೆ

ಶರಣರು ಆತ್ಮತತ್ವವನ್ನು ಒಪ್ಪಿಕೊಳ್ಳುತ್ತಾರೆ. ಇಲ್ಲಿ ಆತ್ಮವೆಂದರೆ ಲಿಂಗದಿಂದ ಹೊರಹೊಮ್ಮಿದ ಜೀವದ ಅನುರೂಪ ಎಂದರ್ಥ. ಶರಣರ ಪ್ರಕಾರ ಜೀವವೆಂದರೆ ವಿಶ್ವನಿಯಂತ್ರವಾದ ಲಿಂಗದಿಂದ ಹುಟ್ಟಿರುತ್ತದೆ. ಆತ್ಮವು ದೇಹರೂಪ ಪಡೆದೊಡನೆ ಮಲತ್ರಯಕ್ಕೆ ಒಳಗಾಗಿ ಸಂಕುಚಿತವಾಗುತ್ತದೆ. ಇಷ್ಟಲಿಂಗವು ಚೈತನ್ಯರೂಪವಾಗಿದ್ದು ಜೀವಸೃಷ್ಟಿ ಇದರಿಂದ ಹುಟ್ಟಿಕೊಳ್ಳುತ್ತದೆ. ಮುಂದೆ ಅನುಭಾವವು ಜೀವನು ಪಡೆವ ಸುಖ ತೃಪ್ತಿಗಳಿಗೆ ಆಶ್ರಯವಾಗಿ ಅದರಿಂದ ಆತ್ಮದ ಅರಿವಾಗುತ್ತದೆ. ಇಲ್ಲಿ ಆತ್ಮವೆಂಬುದು ಒಂದೇ ಬಿಂದು ಇದ್ದು ಸರ್ವವ್ಯಾಪಕವಾದುದಾಗಿದೆ. ಭಿನ್ನಭಿನ್ನ ಜೀವರಾಶಿಗಳಿಗೂ ಒಂದೇ ಆತ್ಮ. ವ್ಯಕ್ತಿಯ (ಸಾಧಕ-ಶರಣ) ಕ್ರಿಯಾಶೀಲತೆಗಳ ಆಧಾರದ ಮೇಲೆ ಅಂತಿಮ ಸ್ಥಿತಿ ತಲುಪಿದಾಗ ಅನುಭಾವದ ಉತ್ತುಂಗದಲ್ಲಿರುವವನು ಮುಕ್ತಾತ್ಮನಾಗುತ್ತಾನೆ. ಅದನ್ನು ಲಿಂಗೈಕ್ಯ-ಶಿವೈಕ್ಯವೆಂದು ಕರೆಯುವರು. ಅದನ್ನೇ 'ಲಿಂಗಾಂಗ ಸಾಮರಸ್ಯ'ವೆಂದು ಕರೆಯಬಹುದಾಗಿದೆ. ಇದು ಸತ್ಯದ ಅಂತಿಮ ಪ್ರಜ್ಞೆ. ಎಲ್ಲವೂ ಏಕೋಭಾವವಾಗಿ ನಿಲ್ಲುವ ಆತ್ಮದ ಸ್ಥಿತಿಯೇ ಬಯಲಿನ ಬಯಲು.

ಸಾವಿನ ಪರಿಕಲ್ಪನೆ :

ಸಾಮಾನ್ಯವಾಗಿ ಕಾಡುವ ಸಮಸ್ಯೆಯೆಂದರೆ ಅಪರಿಹಾರ್ಯವಾದ ಸಾವು. ಇದು ಸಕಲ ಜೀವರಾಶಿಗಳಿಗೆ ವ್ಯಾಪಿಸಿದೆ. 'ಜಾತಸ್ಯಂ ಮರಣಂ ಧೃವಂ', ಅಂದರೆ ಹುಟ್ಟಿದ್ದೆಲ್ಲ ಸಾಯಲೇ ಬೇಕು. ಅಂದರೆ, ಚರಾಚರಾ ವಸ್ತು, ಜೀವರಾಶಿಗಳೆಲ್ಲ ಇದರ ಕಕ್ಷೆಯೊಳಗೆ ಬರುತ್ತವೆ. ಹಾಗಾಗಿ ಸಾವು ಮನುಕುಲವನ್ನು ಕಾಡಿದ ಬಹುದೊಡ್ಡ ಮತ್ತು ಅಂತಿಮ ಭಯ. ಸಾವಿನ ಕುರಿತು ಭಯವನ್ನು ಎರಡು ನೆಲೆಗಳಲ್ಲಿ ಗುರುತಿಸ ಬಹುದು. ಒಂದು ಸಾವಿನಿಂದ ನೋವಾಗುವುದು ಮತ್ತು ಸಾವಿನಾಚೆಗಿನ ಬದುಕು ಹೇಗೆ ಎಂಬುದರಿಂದ. ಎರಡನೆಯದು ಸಾವಿನ ಮೂಲಕ ವ್ಯಕ್ತಿ ಬಿಟ್ಟುಹೋಗುವ ಸಂಬಂಧಗಳು, ಆಸ್ತಿ ಮತ್ತು ಕ್ಷಯವಾಗುವ ದೇಹ ಸಾವನ್ನು ಗೆಲ್ಲುವ ಅನಾದಿಕಾಲ ದಿಂದಲೂ ನಡೆಸಿದ ಮನುಷ್ಯನ ಪ್ರಯತ್ನಗಳೆಲ್ಲ ಫಲಕಾರಿಯಾಗಲಿಲ್ಲ. ಬದಲಾಗಿ ಸಾವಿನ ಸುತ್ತ ಅಂತೆಕಂತೆ ಪುರಾಣಕತೆಗಳೇ ಹೆಚ್ಚಾಗಿ ಹುಟ್ಟಿಕೊಂಡವು. ಆದ್ದರಿಂದ ಎಲ್ಲ ಧರ್ಮ, ತತ್ವ, ಹಾಗೂ ದರ್ಶನಗಳು ಸಾವನ್ನು ಕುರಿತು ಚಿಂತಿಸಿವೆ. ಅವುಗಳಲ್ಲಿ ಬೌದ್ಧ, ಜೈನ, ವೀರಶೈವಗಳ ಚಿಂತನೆ ವಿಶಿಷ್ಟವಾಗಿದೆ.

ಬೌದ್ಧರ ಸಂಘ - ಸಾವಿನ ಪರಿಕಲ್ಪನೆ :

ಇಲ್ಲಿ ಸಾವು ಒಂದು ಅನಿವಾರ್ಯ ಪ್ರಕ್ರಿಯೆ. ಆದು ಭಯದಿಂದ ಕೂಡಿರು ತ್ತದೆಂದು ನಂಬಲಾಗಿದೆ. ಸಾಮಾನ್ಯವಾಗಿ ಪ್ರತಿ ಜೀವಿಯ ಅಂತ್ಯ ಸಾವಿನೊಂದಿಗಿದೆ ಎಂದು ಸಾರುತ್ತಲೇ ಹುಟ್ಟಿದವರೆಲ್ಲ ಸಾಯಲೇಬೇಕೆಂಬ ನಿಲುವು ತಾಳಲಾಗಿದೆ. ಆಸೆಯೇ ದುಃಖಕ್ಕೆ ಕಾರಣವಾಗುವ ಹಿನ್ನೆಲೆಯಲ್ಲಿ ಸಾವು ಭೌತಿಕ ಮತ್ತು ನೈತಿಕ ನೆಲೆಯಲ್ಲಿ ದುಃಖಕ್ಕೆ ಎಡೆಮಾಡಿಕೊಡುತ್ತದೆ. ಸಾವಿನ ಮೂಲಕ ಹೊಸ ಜೀವನದ ಆರಂಭವಾಗಿ ಜೀವಿತ ಕರ್ಮಗಳ ಶಿಕ್ಷೆಯೂ ಆರಂಭವಾಗುತ್ತದೆಂದು ಹೇಳಲಾಗಿದೆ. ''ಪ್ರಪಂಚದ ವಸ್ತುಗಳ ಮೇಲಿನ ಆಸೆಯನ್ನು ತೊರೆಯುವುದರ ಮೂಲಕ ಸಾವಿನ ಭಯವನ್ನು ಗೆಲ್ಲಬಹುದು''[107] ಎಂದು ಸಾವಿನ ಕುರಿತಿರುವ ಭಯ ಹಾಗೂ ಜಿಜ್ಞಾಸೆಗೆ ಸರಳವಾದ ಪರಿಹಾರೋಪಾದಿಯಲ್ಲಿ ದುಃಖ ನಿವಾರಣೆ ಕುರಿತು ಚರ್ಚಿಸಿದ್ದಾರೆ.

ಜೈನರ ಸಮವಸರಣಮಂಟಪ - ಸಾವಿನ ಪರಿಕಲ್ಪನೆ :

ಸಮವಸರಣಮಂಟಪದ ಸಾವಿನ ಪರಿಕಲ್ಪನೆಯೆಂದರೆ ಸಾವು ಒಂದು ಸಹಜ ಹಾಗೂ ಅನಿವಾರ್ಯ ಅಂಶ. ಜೀವಿಯ ಕರ್ಮ ನಾಶವಾಗುವವರೆಗೆ ಹುಟ್ಟು-ಸಾವು ಗಳು ನಿರಂತರವೆಂದು ಸಾರುತ್ತಾ, ಜೀವಿ ಮಾಡಿದ ಸತ್ಕರ್ಮ ಮತ್ತು ದುಷ್ಕರ್ಮ

ಧಾರಿತವಾದ ಹುಟ್ಟು-ಸಾವುಗಳು ಉಂಟಾಗುತ್ತವೆ. ಕೇವಲಜ್ಞಾನ ಪಡೆದವನು ಪಂಚಾಣುವ್ರತ ಪಾಲಿಸಿ ರತ್ನತ್ರಯ ಹೊಂದಿದ(ಪಡೆದ)ವನಿಗೆ ಕರ್ಮವಿರುವುದಿಲ್ಲ. ಅಂತಹವನು ಮಾತ್ರ ನಿರ್ವಾಣ ಹೊಂದಲು ಸಾಧ್ಯ ಎಂದು ಗ್ರಹಿಸಲಾಗಿದೆ.

ಅನುಭಾವಮಂಟಪ - ಸಾವಿನ ಪರಿಕಲ್ಪನೆ :

ಅನುಭಾವಮಂಟಪದ ಶರಣರ ಸಾವಿನ ಪರಿಕಲ್ಪನೆಯು ಎಲ್ಲ ಮತ ಧರ್ಮಗಳಿಗಿಂತ ಭಿನ್ನವಾಗಿದೆ. ಇಲ್ಲಿ ಸಾವು ಒಂದು ರೀತಿಯ ಅವಸಾನ. ಲಿಂಗದ ವಿನೋದದಿಂದ ಅಂಗನಾಗುತ್ತಾನೆ ಮತ್ತು ಅಷ್ಟಾವರಣ, ಪಂಚಾಚಾರಗಳನ್ನು ಅಳವಡಿಸಿಕೊಂಡು ಷಟ್‌ಸ್ಥಲದ ಮೂಲಕ ಅಂಗವು ಲಿಂಗವಾಗುತ್ತದೆ. ಇಲ್ಲಿ ಅಂಗ ಲಿಂಗವಾಗಿ ಬದುಕುವುದು ಶಿವಪ್ರೀತಿಗಾಗಿ. ಹಾಗಾಗಿ ಸಾವು ಒಂದು ಪರ್ವವಿದ್ದಂತೆ. ಅದಕ್ಕೆಂದೇ ಬಸವಣ್ಣ ಮರಣವನ್ನು 'ಮಹಾನವಮಿ' ಎಂದು ಕರೆದ. ವೀರಶೈವರಿಗೆ ಸಾವು ಒಂದು ವಿಜಯದ ಯಾತ್ರೆ. ಸಾವಿನ ಮೂಲಕ ಮಲತ್ರಯಕ್ಕೆ ಒಳಗಾದ ಅಂಗನು ಲಿಂಗವಾಗುತ್ತಾನೆ. ಸಾವು ಬರೀ ಸಾವಲ್ಲ, ಶಿವೈಕ್ಯ ಅಂದರೆ ಲಿಂಗೈಕ್ಯವೆಂದರ್ಥ. ಬಯಲಿನಲ್ಲಿ ಬಯಲಾಗಿ ಹೋಗುವುದು. ಶ್ರೇಷ್ಠ ಚಿಂತನಕ್ರಮವಾಗಿ ಇಲ್ಲಿ ಬಳಲಿಕೆ ರಾಗದ್ವೇಷಗಳಾವುವೂ ಇಲ್ಲ.

ಪುನರ್‌ಜನ್ಮದ ಪರಿಕಲ್ಪನೆ :

ಒಂದು ದೇಹದ ಅವಸಾನದ ಮೂಲಕ ಮತ್ತೊಂದು ದೇಹ ಸೃಷ್ಟಿಯಾಗುವ ಪ್ರಕ್ರಿಯೆಯಲ್ಲಿ ಆತ್ಮ ಜೀವ (ದೇಹ) ಬಿಟ್ಟು ದೇಹ ಸೇರುವುದನ್ನು ಪುನರ್‌ಜನ್ಮವೆಂದು ಕರೆಯಲಾಗಿದೆ. ಆತ್ಮ/ಜೀವಕ್ಕೆ ಸಾವಿಲ್ಲ, ಅದು ನಿತ್ಯ ಮತ್ತು ಚಿರಂತನ. ಸಕಲ ಜೀವರಾಶಿಗಳಲ್ಲಿ ಸಂಚರಿಸುವ ಚೈತನ್ಯವೆಂದು ಗ್ರಹಿಸಲಾಗಿದೆ. ಈ ಪುನರ್‌ಜನ್ಮದ ಪರಿಕಲ್ಪನೆ ಪೂರ್ವ, ಪಶ್ಚಿಮ ರಾಷ್ಟ್ರಗಳಲ್ಲಿ ಪ್ರಾಚೀನಕಾಲದಿಂದ ಬಂದಂತಹ ನಂಬಿಕೆಯಾಗಿದೆ. ಸಾಮಾನ್ಯವಾಗಿ ಹಿಂದೂ, ಬೌದ್ಧ ಹಾಗೂ ಜೈನ ಧರ್ಮಗಳು ಪುನರ್‌ಜನ್ಮವನ್ನು ಒಪ್ಪಿಕೊಂಡರೆ, ವೀರಶೈವಧರ್ಮ ನಿರಾಕರಿಸಿದೆ.

ಬೌದ್ಧಸಂಘ - ಪುನರ್‌ಜನ್ಮದ ಪರಿಕಲ್ಪನೆ :

ಆತ್ಮ ತತ್ವವನ್ನು ನಿರಾಕರಿಸಿದ ಬೌದ್ಧಸಂಘವು ಪುನರ್‌ಜನ್ಮವನ್ನು ಒಪ್ಪಿಕೊಳ್ಳುತ್ತದೆ. ಸತ್ಯ ಕುರಿತ ಅಜ್ಞಾನಿಗಳಿಗೆ ಮಾತ್ರ ಹುಟ್ಟು-ಸಾವುಗಳು ಬರುತ್ತಿತ್ತು. ಉಳಿದವರಿಗೆ ಇದನ್ನು ಅನ್ವಯಿಸದಿರುವುದರಿಂದ ಆತ್ಮತತ್ವವನ್ನು ನಿರಾಕರಿಸಲಾಗಿದೆ. ಇಲ್ಲಿ

ಆತ್ಮ, ಜಗತ್ತು ಎರಡೂ ಅನಿತ್ಯವಾಗಿವೆ ಮತ್ತು ಅತ್ಯಂತ ಪರಿಣಾಮಕಾರಿಯಾಗಿವೆ. ನಿರ್ವಾಣ ಹೊಂದಿದವನು ಪುನರ್ಜನ್ಮದಿಂದ ಮುಕ್ತನಾಗುವುದನ್ನು ವಿವರಿಸುತ್ತಾ ನಿರ್ವಾಣವಾಗಲು ಆರ್ಯಮಾರ್ಗಗಳಾದ ಅಷ್ಟಾಂಗಮಾರ್ಗಗಳಿಂದ ಸಾಧ್ಯ, ಇಲ್ಲದಿದ್ದರೆ ಭವಬಾಧೆ ತಪ್ಪಿದ್ದಲ್ಲವೆಂದು ಹೇಳುತ್ತಾರೆ. ಸ್ಪಷ್ಟವಾಗಿ ಹೇಳುವುದಾದರೆ ನಿರ್ವಾಣವನ್ನು ಹೊಂದಿದವರು ಪುನರ್ಜನ್ಮಕ್ಕೆ ಒಳಗಾಗುತ್ತಾರೆ (ಬೌದ್ಧ ಪುನರ್ಜನ್ಮ[108]).

ಜೈನರ ಸಮವಸರಣಮಂಟಪ : ಪುನರ್ಜನ್ಮದ ಪರಿಕಲ್ಪನೆ

ಕೇವಲಜ್ಞಾನ ಪಡೆಯದವರಿಗೆ ಮಾತ್ರ ಪುನರ್ಜನ್ಮವಿದೆ ಎಂಬ ವಾದವನ್ನು ಮಂಡಿಸುತ್ತಲೇ ಪುನರ್ಜನ್ಮವನ್ನು ಒಪ್ಪಿಕೊಳ್ಳಲಾಗಿದೆ. ಪುನರ್ಜನ್ಮವು ಅನಾದಿಯಾಗಿದ್ದು ಅನಂತದವರೆಗೆ ಇರುವಂತಹದ್ದಾಗಿದೆ. ಮನುಷ್ಯನ ಕರ್ಮಗಳು ಆತ್ಮವನ್ನು ಕಲುಷಿತಗೊಳಿಸುವ ಮೂಲಕ ಹೆಚ್ಚು ಕರ್ಮದ ಅಣುಗಳು ಸೃಷ್ಟಿಯಾಗುತ್ತವೆ. ಕರ್ಮವು ಭೌತ ಶರೀರ ಸಂಬಂಧಿಯಾದ್ದರಿಂದ ಆತ್ಮವನ್ನು ಬಂಧಿಸಿ ಅದು ಪುನರ್ಜನ್ಮಕ್ಕೆ ಕಾರಣವಾಗುತ್ತದೆ. ಆದರೆ ರತ್ನತ್ರಯಗಳಾದ ಸಮ್ಯಕ್‌ಚಾರಿತ್ರ್ಯ, ಸಮ್ಯಕ್‌ಜ್ಞಾನ, ಸಮ್ಯಕ್‌ದರ್ಶನಗಳ ಮೂಲಕ ಜೀವಿಯ ಕರ್ಮಕ್ಷಯವಾಗುತ್ತವೆ. ಆ ಮೂಲಕ ಮೋಕ್ಷ ಪ್ರಾಪ್ತವಾಗುವುದೆಂಬ ನಂಬಿಕೆಯೊಂದಿಗೆ ಅನಂತಜ್ಞಾನ, ಅನಂತ ವೀರ್ಯ, ಅನಂತಶ್ರದ್ಧಾ ಮತ್ತು ಅನಂತಶಾಂತತೆ ಎಂಬ ಅನಂತಚತುಷ್ಟಯವನ್ನು ಆತ್ಮವು ಮುಕ್ತಾವಸ್ಥೆಯಲ್ಲಿ ಪಡೆಯುವುದು. ಇಲ್ಲವಾದಲ್ಲಿ ಪುನರ್ಜನ್ಮದ ಸಾಧ್ಯತೆಗಳಿವೆ ಎಂದು ಪ್ರತಿಪಾದಿಸಲಾಗಿದೆ.

ಅನುಭಾವಮಂಟಪ - ಪುನರ್ಜನ್ಮದ ಪರಿಕಲ್ಪನೆ :

ಅನುಭಾವಮಂಟಪದ ವೀರಶೈವಧರ್ಮವು ಪುನರ್ಜನ್ಮವನ್ನು ಸಾರಾಸಗಟಾಗಿ ಅಲ್ಲಗಳೆದಿದೆ. ಕೆಲ ವಚನಕಾರರ ಸಾಂಕೇತಿಕ ಪರಿಕಲ್ಪನೆ ಬಿಟ್ಟರೆ ಮುಂದಿನ ಜನ್ಮವಿಲ್ಲ, ಅಂಗನು ಲಿಂಗನಾದರೆ ಲಿಂಗಾಂಗಸಾಮರಸ್ಯವಾಗುತ್ತದೆ. ಅದೇ ಷಟ್‌ಸ್ಥಲದ ಕೊನೆಯ ಘಟ್ಟವಾದ ಐಕ್ಯಸ್ಥಲ. ಐಕ್ಯವೆಂದರೆ ಜೀವ ಶಿವನಲ್ಲಿ ಒಂದಾಗುವುದು, ಅಂದರೆ ಪಂಚಭೂತಗಳಿಂದಾದ ಜೀವ(ಜೀವಿ)ಪಂಚಭೂತಗಳಲ್ಲಿ ವಿಲೀನವಾಗುವುದೇ ಐಕ್ಯವೆಂದು ಕರೆಯಲಾಗುವುದು. ಅದನ್ನೇ ಬಯಲಿನಲ್ಲಿ ಬಯಲಾಗುವುದು ಎಂದು ಪ್ರತಿಪಾದಿಸಿದರು. ಹಾಗಾಗಿ ಪರವನ್ನು ನಿರಾಕರಿಸುವ ಇಲ್ಲಿನ ತತ್ವ ಪುನರ್ಜನ್ಮವನ್ನು ನಿರಾಕರಿಸಿದ್ದು ಉನ್ನತ ವಿಚಾರವಾಗಿದೆ.

ಹೆಣ್ಣಿನ ಪರಿಕಲ್ಪನೆ :

ಜಗತ್ತಿನಲ್ಲಿ ಹೆಣ್ಣನ್ನು ಕುರಿತು ಚರ್ಚಿಸದ, ಚಿಂತಿಸದ ತತ್ವ ಮತ್ತು ದರ್ಶನಗಳೇ ಇಲ್ಲ. ಪ್ರಕೃತಿ ಮೂಲದ ಮಿಲಿಯನ್ ಜೀವರಾಶಿಗಳಲ್ಲಿ ಹೆಣ್ಣು ಗಂಡು ಎಂಬ ಮಾನವ ಜೀವಿ ಅದ್ಭುತವಾದ ಸೃಷ್ಟಿ. ಆದರೆ ಈ ಎರಡೂ ಒಂದೊಂದು ಕಾಲದ ಜೀವನವಿಧಾನದ ಮೇಲೆ ಪ್ರಭುತ್ವ ಸಾಧಿಸಿ ಮಾತೃಪ್ರಧಾನ, ಪಿತೃಪ್ರಧಾನವೆಂಬ ಹೆಗ್ಗಳಿಕೆಯನ್ನು ಪಡೆದುಕೊಳ್ಳುವಾಗ ಪ್ರತಿಷ್ಠೆಯನ್ನು ಮುಂದುಮಾಡಿಕೊಂಡು ಬೀಜ-ವೃಕ್ಷ ನ್ಯಾಯವನ್ನು ಹುಟ್ಟು ಹಾಕಿದವು. ಇದರ ಫಲವಾಗಿ ಹೆಣ್ಣು ಒಮ್ಮೆ ಆರಾಧನೆಯ ವಸ್ತು ಮತ್ತೊಮ್ಮೆ ಆಳಾಗಿ ನಾಗರಿಕತೆಯ ಬೆಳವಣಿಗೆಯೊಂದಿಗೆ ವಿಲೀನವಾಗಿದ್ದಾಳೆ. ಆಶ್ಚರ್ಯವೆಂದರೆ ಮಾತೃಪ್ರಧಾನ ವ್ಯವಸ್ಥೆಯಲ್ಲಿ ಗಂಡಿಗಾಗಿಯೇ ಹೆಣ್ಣು ಯಾವ ನಿಯಮಗಳನ್ನೂ ರಚಿಸಿದ ದಾಖಲೆಗಳಿಲ್ಲ, ಆದರೆ ಪಿತೃಪ್ರಧಾನ ವ್ಯವಸ್ಥೆಯಲ್ಲಿ ಗಂಡು ಹೆಣ್ಣಿಗಾಗಿ ಹಲವಾರು ರೀತಿ, ನೀತಿ- ನಿಯಮಗಳು ರಚಿತವಾಗಿರುವುದು ಚರಿತ್ರೆಯ ವಿಪರ್ಯಾಸ. ಹೀಗಾಗಿ ಹೆಣ್ಣನ್ನು ನೋಡುವ ದೃಷ್ಟಿಕೋನಗಳು ಭಿನ್ನವಾದವು. ''ಜಗತ್ತಿನ ಸಕಲಸೃಷ್ಟಿಯ ಮೂಲದಲ್ಲಿರುವ ಪರತತ್ವವನ್ನು ಸ್ತ್ರೀಯ ರೂಪದಲ್ಲಿ ಕಂಡಂತಹ ಧಾರ್ಮಿಕ ಪಂಥಗಳ ದೃಷ್ಟಿ ಹೆಣ್ಣನ್ನು ಅತ್ಯುಚ್ಚ ಸ್ಥಾನದಲ್ಲಿರಿಸುತ್ತದೆ. ಧಾರ್ಮಿಕ, ಅಧ್ಯಾತ್ಮಿಕ ಸ್ತರಗಳಲ್ಲಿ ಹೆಣ್ಣು ಒಂದು ಸ್ವತಂತ್ರ ವ್ಯಕ್ತಿಯಾಗಲಿ, ಮೋಕ್ಷದ ಹಕ್ಕು ಇರುವ ಮಾನವಜೀವಿ ಎಂದಾಗಲೀ, ಆತ್ಮವೆಂದಾಗಲೀ ಗುರುತಿಸದೆ ಆಕೆಯನ್ನು ನಿಕೃಷ್ಟ ಪ್ರಾಣಿಯಂತೆ ಕಾಣುವ ಧಾರ್ಮಿಕ ಪರಿಕಲ್ಪನೆಗಳು ಈ ಚರಿತ್ರೆಯ ಇನ್ನೊಂದು ತುದಿಯಾಗಿದೆ.'' [109] ಹೀಗೆ ಸಂಸಾರಪರವಾದ ಧರ್ಮ ದರ್ಶನಗಳಿಗೂ ಮತ್ತು ಸಂಸಾರವನ್ನು ಒಪ್ಪುವ ಧರ್ಮದರ್ಶನಗಳ ನಿಲುವಿನಲ್ಲಿ ಹೆಣ್ಣು ಭಿನ್ನ ಭಿನ್ನ ದೃಷ್ಟಿಯಲ್ಲಿ ಕಾಣಿಸಿಕೊಂಡು ನಿರ್ದಿಷ್ಟ ಸಮಾಜವೊಂದರಲ್ಲಿ ಭೇದನೀತಿಯ ದೃಷ್ಟಿ-ಧೋರಣೆಗಳ ಹುಟ್ಟುವಿಕೆಗೆ ಕಾರಣವಾಗಿದ್ದಾಳೆ. ಈ ಹಿನ್ನೆಲೆಯಲ್ಲಿ ಬೌದ್ಧರ ಸಂಘ, ಜೈನರ ಸಮವಸರಣ ಹಾಗೂ ಅನುಭಾವಮಂಟಪಗಳು ಹೆಣ್ಣಿನ ಬಗ್ಗೆ ತಳೆದ ನಿಲುವು ಎಂತಹುದು ಎಂಬುದನ್ನು ಗುರುತಿಸುವುದು ಸೂಕ್ತ.

ಬೌದ್ಧ ಸಂಘ ಮತ್ತು ಹೆಣ್ಣಿನ ಪರಿಕಲ್ಪನೆ :

ಬೌದ್ಧಧರ್ಮವು ಶ್ರವಣ ಧರ್ಮವಾದ್ದರಿಂದ ಹೆಣ್ಣಿನ ಆದರ್ಶವಾಗಲೀ, ಕರ್ತವ್ಯವಾಗಲಿ ಬೌದ್ಧಸಂಘದ ಚಿಂತನೆಯ ಆದ್ಯತೆಯ ಕಕ್ಷೆಯೊಳಗೆ ಬರಲಾರದ್ದು. ಸನ್ಯಾಸ ಜೀವನವನ್ನು ಎತ್ತಿ ಹಿಡಿಯುವುದರಿಂದ ಸಹಜವಾಗಿ ಹೆಣ್ಣನ್ನು ನಿರಾಕರಿಸಲಾಯಿತು. ಆದರೆ ಕಾಲಾಂತರದಲ್ಲಿ ಬುದ್ಧನು ತನ್ನ ಸಂಘದಲ್ಲಿ ಹೆಣ್ಣು ಸನ್ಯಾಸ ದೀಕ್ಷೆ ಪಡೆದರೆ ಮೋಕ್ಷಸಾಧನೆಗೆ ಯೋಗ್ಯಳೆಂದು ಪ್ರತಿಪಾದಿಸಿದನು. ಸಂಘಕ್ಕೆ ಸೇರಿದ

ಭಿಕ್ಷಿಣಿಯರು ಭಿಕ್ಷುಗಳೊಂದಿಗಲ್ಲದೆ ಒಂಟಿಯಾಗಿ ತಿರುಗುವಂತಿಲ್ಲ. ಅಲ್ಲದೆ ಒಬ್ಬ ಭಿಕ್ಷಿಣಿ ನೂರು ವರ್ಷದವಳೇ ಆದರೂ ಭಿಕ್ಷುವೊಬ್ಬ ಅವನು ಅದೇ ತಾನೇ ದೀಕ್ಷೆ ಪಡೆದವನಾದರೂ ಅವನಿಗೆ ಎದ್ದು ನಿಂತು ಗೌರವಿಸಬೇಕು. ಹೀಗೆ ಹೆಣ್ಣು ಗಂಡು ಗಳೆಂಬ ಲಿಂಗ ಭೇದ ಮೊದಲಾಗುತ್ತಿತ್ತು. ವಿಶೇಷವೆಂದರೆ ಧಾರ್ಮಿಕ ಪ್ರಸಾರ ಹಾಗೂ ಅಧ್ಯಾತ್ಮಿಕ ಅವಕಾಶಗಳನ್ನು ದೊರಕಿಸಿ ಕುಟುಂಬಕ್ಕೆ ಸೀಮಿತವಾದ ಹೆಣ್ಣಿನ ಬದುಕಿನ ಪರಿಧಿಯನ್ನು ಒಂದಿಷ್ಟು ಹೆಚ್ಚಿಸಿತು. ಆ ಮೂಲಕ ಹೆಣ್ಣು ಮೋಕ್ಷಕ್ಕೆ ಅಡ್ಡಿಯಲ್ಲವೆಂದು ಸಂಘ ಪ್ರತಿಪಾದಿಸಿತು. ಹೆಣ್ಣಿಗೆ ವೈವಾಹಿಕ ಬಂಧನದ ಬಿಡುಗಡೆ ಮಾಡಿತು. ಅಲ್ಲದೆ ಭಿನ್ನಭಿನ್ನ ಸ್ತರದ ಅಂದರೆ ಕನ್ನೆಯರು, ಸಂಸಾರ ತ್ಯಾಗ ಮಾಡಿದ ವರು, ವಿವಾಹವನ್ನು ಧಿಕ್ಕರಿಸಿದವರು ಮೊದಲಾದವರು ಸಂಘದಲ್ಲಿ ಸೇರಿದರು. ಆದರೂ ಸಹ ಹೆಣ್ಣನ್ನು ಅನುಮಾನದಿಂದ ನೋಡುವುದು ನಿಲ್ಲಲಿಲ್ಲ. ಹೀಗೆ ಬೌದ್ಧ ಸಂಘವು ಹೆಣ್ಣನ್ನು ಹಲವಾರು ಮಿತಿಗಳ ಮಧ್ಯೆಯೂ ಉದಾತ್ತೀಕರಿಸಿರುವುದು ಕಂಡುಬರುತ್ತದೆ.

ಜೈನರ ಸಮವಸರಣಮಂಟಪ : ಹೆಣ್ಣಿನ ಪರಿಕಲ್ಪನೆ

ಜೈನಧರ್ಮವೂ ಸಹ ಒಂದು ಶ್ರವಣ ಧರ್ಮವಾಗಿದ್ದು, ಹೆಣ್ಣಿನ ಆದರ್ಶ ಹಾಗೂ ಕರ್ತವ್ಯಕ್ಕೆ ಹೆಚ್ಚು ಲಕ್ಷ್ಯವಹಿಸಿದ್ದು ಕಂಡುಬರುವುದಿಲ್ಲ. ದೀಕ್ಷೆ ಇಲ್ಲದೆ ಹೆಣ್ಣಿಗೆ ಮೋಕ್ಷವಿಲ್ಲವೆಂದು ಪ್ರತಿಪಾದಿಸಹೊರಟ ಜೈನಧರ್ಮ, ಅದರ ಸಮವಸರಣ ಮಂಟಪದಲ್ಲಿ ಹೆಣ್ಣಿಗೆ ಆದ್ಯತೆ ನೀಡಿದ ಬಗ್ಗೆ ಉಲ್ಲೇಖಗಳೇ ಇಲ್ಲ. ದಿಗಂಬರ ಜೈನಪಂಥವು ಸ್ತ್ರೀಗೆ ಅದೇ ಜನ್ಮದಲ್ಲಿ ಮೋಕ್ಷವಿಲ್ಲವೆಂಬ ಮಾತಿನ ಹಿಂದಿರುವ ಉದ್ದೇಶ ಎಂದರೆ ಹೆಣ್ಣು ಮೋಕ್ಷಕ್ಕೆ ಅರ್ಹಳಲ್ಲ. ಮುಂದೆ ಅವಳು ಭವಾವಳಿಯನ್ನು ದಾಟಿ ಗಂಡಿನ ಸೇವೆಯನ್ನು ಮಾಡಿದಾಗ ಗಂಡಾಗಿ ಮೋಕ್ಷ ಪಡೆಯಬಹುದೆಂಬ ಆಶಯ ಹೊಂದಿತ್ತು. ಶ್ವೇತಾಂಬರದಲ್ಲಿ ಹೆಣ್ಣು ಮೋಕ್ಷಕ್ಕೆ ಅಡ್ಡಿಯಲ್ಲವೆಂದು ಪ್ರತಿ ಪಾದಿಸಿತು. ಇಲ್ಲಿಯೂ ವಿವಾಹವನ್ನು ಕಡ್ಡಾಯಗೊಳಿಸಲಿಲ್ಲ, ಬದಲಾಗಿ ಮದುವೆ ಒಂದು ಬಂಧನವೆಂಬಂತೆ ಪ್ರತಿಪಾದಿಸಿ ಅದರಿಂದ ಮುಕ್ತವಾಗುವಂತೆ ಬೋಧಿಸ ಲಾಯಿತು. ಇದರಿಂದ ಕುಟುಂಬದ ಸಂಕಷ್ಟಗಳಿಂದ ಪಾರಾಗಲು ಇದೊಂದು ಅನುಕೂಲಮಾರ್ಗವಾಗಿ ಪರಿಣಮಿಸಿತು. ಆದರೂ ಹೆಣ್ಣಿನ ಬಗ್ಗೆ ಇರುವ ಜೈನರ ದೃಷ್ಟಿಕೋನವೆಂದರೆ ''ವಂಚಕತನವು ಸ್ತ್ರೀ ಸಹಜ ಗುಣ. ತಪಸ್ಸು, ಧ್ಯಾನ, ಸಂಚಾರ ಮತ್ತು ಧರ್ಮೋಪದೇಶಗಳು ಸಾಧುಗಳ ಸಹಜ ಗುಣ'' [110] ಎಂಬ ಲಿಂಗಭೇದ ನೀತಿ ಹೆಣ್ಣಿನ ಪರಿಕಲ್ಪನೆಗೆ ಕುರಿತು ಸಾಕ್ಷಿಯಾಗಿದೆ.

ಅನುಭಾವಮಂಟಪ ಮತ್ತು ಹೆಣ್ಣಿನ ಪರಿಕಲ್ಪನೆ :

೧೨ನೆ ಶತಮಾನದ ಅನುಭಾವಮಂಟಪದಲ್ಲಿ ಹೆಣ್ಣನ್ನು ಸಮಾನತೆಯ ತುಟ್ಟ ತುದಿಯಲ್ಲಿಟ್ಟು ಸಾಮಾಜಿಕ, ಆರ್ಥಿಕ, ಧಾರ್ಮಿಕ ವಲಯದಲ್ಲಿ ಸ್ವಾತಂತ್ರ್ಯ ಕಲ್ಪಿಸಿತು. ಹೆಣ್ಣನ್ನು ಬಾಹ್ಯರಚನೆಯ ಅಂದರೆ, ಆಂಗಿಕರಚನೆಯಲ್ಲಿನ ಹೆಣ್ಣು-ಗಂಡೆಂಬ ವ್ಯತ್ಯಾಸಗಳನ್ನು ನಿರಾಕರಿಸುವ ಮೂಲಕ ಎರಡರಲ್ಲಿಯೂ ಆತ್ಮ ಒಂದೇ ಎಂದು ಪ್ರತಿಪಾದಿಸಲು ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲ ಎಂದು ಸಾರಲಾಯಿತು. ಜಗವೆಲ್ಲ ಹೆಣ್ಣು ಶಿವನೊಬ್ಬ ಗಂಡು ಎಂದು ಹೇಳುತ್ತಾ ಶರಣ ಸತಿ ಲಿಂಗ ಪತಿ ಎಂಬ ಭಾವ ಹೊಂದಲಾಯಿತು. ಹೆಣ್ಣು ಇಲ್ಲಿ ಧಾರ್ಮಿಕ ಅವಕಾಶ ಪಡೆದುಕೊಂಡಂತೆ ನೈವಾಹಿಕ ಜೀವನವನ್ನು ನಡೆಸುತ್ತಿದ್ದಳು. ಪಾರಮಾರ್ಥಕ್ಕೆ ಪ್ರಪಂಚ ಅಡ್ಡಿಯಾಗುತ್ತದೆಂಬುದನ್ನು ಇಲ್ಲಿ ನಿರಾಕರಿಸಲಾಗಿದೆ. ಸುಮಾರು ೬೦ ಜನ ಮಹಿಳೆಯರು ಅನುಭಾವ ಮಂಟಪದ ಸದಸ್ಯರಾದುದು, ಸಮಾಜದ ಅತ್ಯಂತ ಕೆಳಸ್ತರದವರಿಂದ ಮೇಲುಸ್ತರದವರೆಗಿನ ಎಲ್ಲರೂ ಸಮಾನ ವೇದಿಕೆಯಲ್ಲಿ ಸಮಾನ ಮನಸ್ಸಿನಿಂದ ಚಿಂತನೆ ಮಾಡಿದ್ದಾರೆ, ಅನುಭಾವಿಗಳಾಗಿದ್ದಾರೆ, ಕಾಯಕ ಜೀವಿಗಳಾಗಿದ್ದಾರೆ. ಹಾದರದ ಕಾಯಕ ಗಂಗಮ್ಮ, ಸೂಳೆ ಸಂಕವ್ವೆ, ಬಸವಣ್ಣನ ಹೆಂಡತಿ ನೀಲಲೋಚನೆ ಎಲ್ಲರೂ ಲಿಂಗಭೇದ-ವರ್ಗಭೇದವಿಲ್ಲದೆ ಬಾಳಿದ್ದು, ಬದುಕಿದ್ದು, ಬರೆದದ್ದು ಇತಿಹಾಸದಲ್ಲಿ ಅಪೂರ್ವವಾಗಿದೆ. ಹಾಗಾಗಿ ಅನುಭಾವಮಂಟಪದಲ್ಲಿ ಹೆಣ್ಣು ಪಡೆದ ಸ್ಥಾನ ಜಗತ್ತಿನಲ್ಲಿ ಯಾವ ಧರ್ಮ ದರ್ಶನವೂ ಕೊಡಲಿಲ್ಲ. ಬಹುಶಃ ಮಾತೃಪ್ರಧಾನ ವ್ಯವಸ್ಥೆಯನ್ನು ಮೀರಿದ ಸ್ವಾತಂತ್ರ್ಯ ಪ್ರಾಪ್ತವಾಗಿದ್ದು ಅನುಭಾವಮಂಟಪದಲ್ಲಿ ಮಾತ್ರ.

****

೨.೪. ಸಾಕ್ರೆಟೀಸ್‌ನ ಚರ್ಚೆ - ಅನುಭಾವಮಂಟಪ :

೨.೪.೧. ಹಿನ್ನೆಲೆ :

ಅತ್ಯಂತ ಗಾಢವಾದ ಕತ್ತಲೆಯ ಕೋಣೆಯಲ್ಲಿ ಒಂದು ಸಣ್ಣ ಬೆಳಕಿನ ಕಿರಣ ಇಡೀ ಕತ್ತಲೆಯನ್ನು ಓಡಿಸುವಂತೆ, ಪ್ರಪಂಚದ ಅತಿ ಸಣ್ಣ ರಾಷ್ಟ್ರವಾದ ಗ್ರೀಕ್ ತತ್ತ್ವಜ್ಞಾನದ ಬೆಳಕಿನ ಕಿರಣ ಬೀರಿದ್ದು ಜಾಗತಿಕ ಚರಿತ್ರೆಯಲ್ಲಿ ಮಹತ್ವದ ಸಂಗತಿ. ಜಗತ್ತಿನ ಎಲ್ಲ ತತ್ವಜ್ಞಾನಗಳು, ಅಧ್ಯಯನಗಳು, ಗ್ರೀಕ್‌ನ ತತ್ವಜ್ಞಾನಕ್ಕೆ ಋಣಿಯಾಗಿರುವುದು ಬಹುತೇಕ ಎಲ್ಲರೂ ಒಪ್ಪಿಕೊಳ್ಳುವ ಮಾತಾಗಿದೆ. ''ಗ್ರೀಕ್ ತತ್ವಜ್ಞಾನದ ತೊಟ್ಟಿಲು'' ಎನ್ನುವುದು ಅತ್ಯಂತ ಪ್ರಚಲಿತ ನುಡಿಯಾಗಿದೆ. ಅಂತೆಯೆ ಜಗತ್ತಿನಲ್ಲಿಯೆ ಗ್ರೀಕ್ ದಾರ್ಶನಿಕ ಸಾಹಿತ್ಯ ವಿಚಾರಧಾರೆಗೆ ತಲೆದೂಗದ ದೇಶವಿಲ್ಲ. ಇಡೀ ಜಗತ್ತಿನ ಜ್ಞಾನ, ಶಿಸ್ತುಗಳಿಗೆ ಭದ್ರ ಅಡಿಪಾಯ ಹಾಕಿದ ಪುಟ್ಟ ದೇಶ ಅದು. ಇಂಥ ತತ್ವಜ್ಞಾನದ ತವರೂರಾದ ಗ್ರೀಕ್ ಮತ್ತು ಗ್ರೀಕ್‌ನ ಅಥೆನ್ಸ್‌ನ ಗತಚರಿತ್ರೆ ಧರ್ಮದೇವತೆಗಳೆಂಬ ಕುರುಡುನಂಬಿಕೆಗಳ ಮೂಲಕ ನಡೆಸಲಾಗುತ್ತಿದ್ದು, ಆಡಳಿತ ಪದ್ಧತಿ ವಿಚಾರಪೂರ್ಣವಾಗಿರದೇ ಅರ್ಥಹೀನವಾಗಿತ್ತು. ಆದ್ದರಿಂದ ಅಥೆನ್ಸ್‌ನ ಒಟ್ಟಾರೆ ಬದುಕನ್ನು (ಸಾಮಾಜಿಕ, ರಾಜಕೀಯ, ಧಾರ್ಮಿಕ ಮತ್ತು ಸಾಂಸ್ಕೃತಿಕ) ವೈಚಾರಿಕ ತಳಹದಿಯ ಮೇಲೆ ಕಟ್ಟಲು ಯತ್ನಿಸಿದ ವ್ಯಕ್ತಿಯೆಂದರೆ ಸಾಕ್ರೆಟೀಸ್. ಇವನು ಇಡೀ ಜಗತ್ತಿಗೆ ವೈಚಾರಿಕತೆಯ ಮೂಲಕ ತಾತ್ವಿಕ ತಳಹದಿ ಹಾಕಿಕೊಟ್ಟು, ನಿಷ್ಠೂರತೆ, ಸತ್ಯ, ಮತ್ತು ಜೀವನಪ್ರೀತಿಗಳನ್ನು ಬದುಕಿನ ಮೌಲ್ಯವಾಗಿಸಿಕೊಂಡುದರ ಫಲವಾಗಿ ಜೀವ ಕೊಡಬೇಕಾಗಿ ಬಂದಾಗ ಸಂತೋಷವಾಗಿಯೇ ಸಾವನ್ನು ಪ್ರೀತಿಸಿದವನು. ಸಾಕ್ರೆಟೀಸ್ ಒಬ್ಬ ಸರಳ ವ್ಯಕ್ತಿ. ಸಾಮಾಜಿಕವಾಗಿ ಅವನೆಷ್ಟು ಸಣ್ಣವನೆಂದರೆ ಬಹುಶಃ ಅವನಿಗಿಂತ ಬೇರೆ ಯಾರೂ ಸಣ್ಣವರು, ಕುರೂಪಿಗಳು ಇರಲಿಕ್ಕಿಲ್ಲ. ಆದರೂ ದೊಡ್ಡ ಜ್ಞಾನಿ. ಅವನೊಬ್ಬ ಶ್ರೇಷ್ಠ ಚಿಂತಕ. ಅವನಿಗಿಂತ ದೊಡ್ಡ ಚಿಂತಕರನ್ನು ಜಗತ್ತು ಎಂದಿಗೂ ಕೂಡ ಕಾಣಲಾರದೇನೋ ಎಂದು ಅನುಮಾನ ಹುಟ್ಟಿಸುವಷ್ಟು ದೊಡ್ಡವನು. ಅವನು ನಿರಂತರ ಜನಸ್ತೋಮವಿರುವ ಕಡೆ ನಿಂತು ಚರ್ಚೆ ಮಾಡಿ ಜನರನ್ನು ತನ್ನೆಡೆಗೆ ಆಕರ್ಷಿಸುತ್ತಿದ್ದನು. ನೆಲ ಮೂಲದ ಸಮಸ್ಯೆಗಳನ್ನು ಮತ್ತು ಮೌಢ್ಯತೆಗಳ

ವಿರುದ್ಧ ಮಾತನಾಡುವ, ಪ್ರಶ್ನಿಸುವ ಸಾಕ್ರೆಟೀಸ್‌ನ ಚರ್ಚೆಯ ಸಾರ ಎಂದರೆ ಸತ್ಯ ಮತ್ತು ವಿಚಾರವಾದ. ಸಾಂಘಿಕ ರೂಪದಲ್ಲಿ ನಡೆಸುವ ಇವನ ಸಾಮೂಹಿಕ ಚರ್ಚೆ ಮುಂದೆ ಪ್ಲೇಟೋ ಅಕಾಡೆಮಿ ಸ್ಥಾಪಿಸಲು ಮಾದರಿಯಾಯಿತು. ಕ್ರಿ.ಶ. ೧೨ನೆ ಶತಮಾನದ ಅನುಭಾವ ಮಂಟಪದ ತಾತ್ವಿಕ ಜಿಜ್ಞಾಸೆಗೂ ಸಾಕ್ರೆಟೀಸ್‌ನ ಚರ್ಚೆಗೂ ಬಹುತೇಕ ಹೋಲಿಕೆಗಳಿರುವುದು ಗಮನಾರ್ಹ.

೨.೪.೨. ಸಾಕ್ರೆಟೀಸ್ (ಕ್ರಿ.ಪೂ. ೪೭೯-೩೯೬)[111]

ಗ್ರೀಕ್ ದೇಶದ ಅಥೆನ್ಸ್ ಒಂದು ಸಣ್ಣ ಪಟ್ಟಣವಾದರೂ ಸಾಕ್ರೆಟೀಸ್ ಬಹುತೇಕ ವಾಗಿ ಎಲ್ಲರೂ ಗುರುತಿಸುವಷ್ಟು ಪರಿಚಿತ ವ್ಯಕ್ತಿ. ಜಗತ್ತಿನ ಶ್ರೇಷ್ಠ ಕುರೂಪಿಯೊಬ್ಬನು ಅಥೆನ್ಸ್‌ನ್ನು ಬಿಟ್ಟು ಹೊರಗಿನವರನ್ನೂ ಸಹ ಆಕರ್ಷಿಸಿ ಗ್ರೀಕ್‌ನ ಇತರ ಪಟ್ಟಣ ಗಳಿಂದಲೂ ಅಥೆನ್ಸ್‌ಗೆ ಬರುವಂತೆ ಮಾಡಿದ್ದು ಸಾಕ್ರೆಟೀಸ್‌ನ ಸತ್ಯ ಕುರಿತ ಚರ್ಚೆ, ಬದುಕಿನ ವಾಸ್ತವಗಳ ಅನಾವರಣಗೊಳಿಸುವಿಕೆಗಳು ಮಾತ್ರ. ಇಂತಹ ಪ್ರಸಿದ್ಧ ವ್ಯಕ್ತಿ ಹುಟ್ಟಿದ್ದು ಸಾಮಾನ್ಯ ಕುಟುಂಬದಲ್ಲಿ.

ಸಾಕ್ರೆಟೀಸ್‌ನ ತಂದೆ ಒಬ್ಬ ಶಿಲ್ಪಿ. ಅವನ ಹೆಸರು ಸಾಪ್ರೊನಿಸ್ಕಸ್. ತಾಯಿ ಫೀನಾರೀಟ. ಸೂಲಗಿತ್ತಿತನ ಮಾಡುವವಳು. ಹೆಂಡತಿ ಸಾಂತಿಪಿ. ಸಾಕ್ರೆಟೀಸ್‌ನ ದಾಂಪತ್ಯ ಜೀವನ ಸಾಮರಸ್ಯದಿಂದಿರಲಿಲ್ಲವೆಂಬ ಮಾತುಗಳಿವೆ. ಅದಕ್ಕೂ ಕಾರಣ ಗಳೆಂದರೆ ಇವನ ಕುರೂಪಿತನ ಮತ್ತು ಎಂದೂ ಆತನು ಸಮಯಕ್ಕೆ ಸರಿಯಾಗಿ ಮನೆಗೆ ಬರದೇ ಇರುವುದು. ಇವೆರಡೂ ಹೆಂಡತಿ ಸಾಂತಿಪಿಯನ್ನು ಗಯ್ಯಾಳಿ ಯನ್ನಾಗಿ ಮಾಡಿರಬೇಕು. ಇದರ ಮಧ್ಯೆ ಅವನು ಮೂರು ಮಕ್ಕಳನ್ನು ಪಡೆದುದಾಗಿ ಕಂಡುಬರುತ್ತದೆ.[112] ಸಾಕ್ರೆಟೀಸ್‌ನು ನಿರ್ದಿಷ್ಟವಾದ ಯಾವ ವೃತ್ತಿಯನ್ನೂ ಹೊಂದಿರ ಲಿಲ್ಲ. ಸ್ವಲ್ಪ ದಿನ ತಂದೆಯ ಶಿಲ್ಪವೃತ್ತಿಯನ್ನು ಅಭ್ಯಾಸ ಮಾಡಿದನು. ಮುಂದೆ ಕೆಲ ಕಾಲದ ನಂತರ ಅಂದರೆ ಕ್ರಿ.ಪೂ. ೪೩೨ರಿಂದ ಈಚೆಗೆ ಪೇಟಿಡಿಯಾ ಡೀಲಿಯ ಆಂಫಿಪೊಲೀಸ್ ಎಂಬ ಸ್ಥಳಗಳಲ್ಲಿ ನಡೆದ ಯುದ್ಧದಲ್ಲಿ ಸೈನಿಕನಾಗಿ ಕಾದಿದನು. [113] ಇದರಿಂದಾಗಿ ಬದುಕಿನ ದಟ್ಟ ಅನುಭವವನ್ನು ಪಡೆದನು. ಸಾಕ್ರೆಟೀಸ್‌ನ ಚರ್ಚೆಯ ಮೂಲಕ ಕ್ರಾಂತಿಕಾರಿ ವಿಚಾರಗಳು ಹುಟ್ಟಿಕೊಂಡವು. ಇದರಿಂದ ಪಟ್ಟಭದ್ರ ಹಿತಾಸಕ್ತಿ ಗಳಿಗೆ ಸಾಕ್ರೆಟೀಸ್ ನುಂಗಲಾರದ ತುತ್ತಾದ. ಮೂಲಭೂತವಾದಿಗಳ ವಿಚಾರ ಧಾರೆಗಳೆಲ್ಲ ಮೂಲೋತ್ಪಾಟನೆಗೊಂಡವು. ಈ ಮಧ್ಯೆ ಅಥೆನ್ಸ್ ತನ್ನಷ್ಟಕ್ಕೆ ತಾನು ಇಡೀ ವ್ಯವಸ್ಥೆಯಲ್ಲಿ ಸಡಿಲಿಕೆಗೊಂಡಾಗ ಸಹ ಅಲ್ಲಿನ ಮೂರ್ಖ ಜನರು ಆಡಳಿತ ವಂಶ ದವರು ಹಾಳಾಗುತ್ತಿರುವ ವ್ಯವಸ್ಥೆಗೆ ಕಾರಣ ಹುಡುಕುತ್ತ ಸಾಕ್ರೆಟೀಸ್‌ನನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿ ಪ್ರಮುಖವಾದ ಮೂರು ಆಪಾದನೆಗಳನ್ನು ಹೊರಿಸಿದರು.

೧. ರಾಷ್ಟ್ರೀಯ ದೇವತೆಗಳನ್ನು ಅವಮಾನಿಸಿದ್ದಾನೆ.[114]

೨. ರಾಷ್ಟ್ರೀಯ ದೇವತೆಗಳ ಸ್ಥಾನದಲ್ಲಿ ಕಲ್ಪಿತ ದೇವತೆಗಳನ್ನು ಕುಳ್ಳಿರಿಸುವ ಪ್ರಯತ್ನ ಮಾಡಿದ್ದಾನೆ.

೩. ಅಥೆನ್ಸ್‌ನ ಯುವರಾಜರನ್ನೂ ಪಥಭ್ರಷ್ಟಗೊಳಿಸಿದ್ದಾನೆ.

ಈ ಆಪಾದನೆಗಳ ಮೇರೆಗೆ ಸಾಕ್ರೆಟೀಸ್‌ನನ್ನು 'ಹೆಮ್‌ಲಾಕ್' ಎಂಬ ಸಸ್ಯದ ವಿಷ ಕೊಟ್ಟು ಕೊಲ್ಲಲಾಯಿತು. ಇಂಥ ಘೋರ ಶಿಕ್ಷೆಗೆ ಗುರಿಯಾದ ಸಾಕ್ರೆಟೀಸ್ ಸಾವಿನ ಕೊನೆಯ ಕ್ಷಣಗಳಲ್ಲಿ ಸಹ ವಿಚಲಿತನಾಗಲಿಲ್ಲ. ಬದಲಾಗಿ ವಿಷಪ್ರಾಶನದ ನಂತರ ತಿರುಗಾಡಿದನು. ಅಷ್ಟೊಂದು ಕ್ರಿಯಾಶೀಲನಾಗಿದ್ದ ಅವನು ಸಾವು ಬದುಕಿನ ಜಂಜಾಟಗಳ ಬಿಡುಗಡೆಯೇ ಮುಕ್ತಿಯೆಂದು ಭಾವಿಸಿದ.

೨.೪.೩. ಸಾಕ್ರೆಟೀಸ್ ಚರ್ಚೆ - ಅನುಭಾವಮಂಟಪ :

ಸಾಕ್ರೆಟೀಸನು ನಡೆಸಿದ ಚರ್ಚೆಯ ನೆಲೆಗಳಿಗೂ ಅನುಭಾವ ಮಂಟಪದಲ್ಲಿ ನಡೆದ ತಾತ್ವಿಕ ಚರ್ಚೆಗಳಿಗೂ ಮೇಲ್ನೋಟಕ್ಕೆ ಸಂಬಂಧ ಇಲ್ಲವೆಂದು ಕಂಡು ಬರುತ್ತದೆ. ಈ ಎರಡೂ ಚರ್ಚೆಗಳ ಕಾಲ, ದೇಶ, ಪರಿಸರ ಮತ್ತು ಹಿನ್ನೆಲೆಗಳಲ್ಲಿ ಅನಂತ ಭಿನ್ನತೆಗಳಿವೆ. ಸಾಕ್ರೆಟೀಸನು ಪ್ರಾಚೀನ ಕಾಲಕ್ಕೆ ಸಂಬಂಧಿಸಿದರೆ, ಅನುಭಾವ ಮಂಟಪ ಮಧ್ಯಕಾಲೀನಕ್ಕೆ ಸಂಬಂಧಿಸಿದೆ. ಅನುಭಾವಮಂಟಪವು ಅಧ್ಯಾತ್ಮ ಮೂಲದ ಚರ್ಚೆ ನಡೆಸಿದರೆ ಸಾಕ್ರೆಟೀಸನು ವಿಚಾರ ಮೂಲದ ಚರ್ಚೆ ನಡೆಸಿದನು. ಅನುಭಾವಮಂಟಪಕ್ಕೆ ಸಮಾನ ಮನಸ್ಸಿನವರು ಸದಸ್ಯರಾದರೆ ಸಾಕ್ರೆಟೀಸಿನ ಚರ್ಚೆಗೆ ವಿಭಿನ್ನ ಮನಸ್ಸುಳ್ಳ ಜನರು ಚರ್ಚೆಯಲ್ಲಿ ಭಾಗಿಗಳಾಗುತ್ತಿದ್ದರು. ಇಷ್ಟೆಲ್ಲ ವ್ಯತ್ಯಾಸ ಗಳಿದ್ದರೂ ಅನುಭಾವಮಂಟಪ ಮತ್ತು ಸಾಕ್ರೆಟೀಸ್‌ರ ಚರ್ಚೆಯ ಹಿಂದಿರುವ ಮೂಲ ಉದ್ದೇಶ ಮತ್ತು ಆಶಯಗಳು ಒಂದೇ ಆಗಿವೆ. ಮಾನವತಾವಾದವನ್ನು ಪ್ರತಿಪಾದಿಸುವ, ಜೀವನವನ್ನು ಪ್ರೀತಿಸುವ ಮತ್ತು ಸತ್ಯವನ್ನು ಸಾಕ್ಷಾತ್ಕರಿಸುವ ವೈಚಾರಿಕ ಹೋರಾಟವೆ ಎರಡೂ ಚರ್ಚೆಯ ಕೇಂದ್ರ ನೆಲೆಗಳಾಗಿವೆ.

ಸಾಕ್ರೆಟೀಸ್‌ನ ಒಟ್ಟು ಚರ್ಚೆಯಲ್ಲಿ ಸಂದೇಹ ಪದ್ಧತಿ, ವಾದ-ವಿವಾದ ಪದ್ಧತಿ, ಪ್ರತ್ಯಯಾತ್ಮಕ ಪದ್ಧತಿಗಳು ಅತ್ಯಂತ ಪ್ರಸಿದ್ಧವಾಗಿವೆ. ಈ ಚರ್ಚೆಗಳನ್ನು ಎರಡು ನೆಲೆ ಗಳಲ್ಲಿ ಗುರುತಿಸಬಹುದು. ಒಂದು ವೈಜ್ಞಾನಿಕ ಪಾತಳಿಯ ವೈಚಾರಿಕ ನೆಲೆಯದ್ದು, ಇನ್ನೊಂದು ನೈತಿಕ ನೆಲೆಯದ್ದು.

ಅನುಭಾವಮಂಟಪದ ಒಟ್ಟು ವಾದಗಳು ಅಧ್ಯಾತ್ಮ ಮೂಲದವೆಂದು ಕಂಡು ಬಂದರೂ ಅದು ವಿಚಾರವಾದ ಹಾಗೂ ನೈತಿಕತೆಯನ್ನು ಪ್ರಧಾನವಾಗಿ ಚರ್ಚಿಸಿದೆ.

ಸಾಕ್ರೆಟೀಸನ ಚರ್ಚೆಗಳಿಗೆ ಈಲಿಸ್, ಥೀಬ್ಬ, ಮೆಗಾರಾ, ಸೈರಿನಿ ಕಡೆಯವರೆಲ್ಲ ಆಕರ್ಷಿತರಾಗಿ ಚರ್ಚೆಯಲ್ಲಿ ಭಾಗವಹಿಸುತ್ತಿದ್ದರು.

ಅನುಭಾವಮಂಟಪದಲ್ಲಿಯೂ ಸಹ ಕಾಶ್ಮೀರ, ಅಫಘಾನಿಸ್ತಾನ, ಆಂಧ್ರ, ಮಹಾರಾಷ್ಟ್ರ, ಕರ್ನಾಟಕದ ಬಿಜಾಪುರ, ಕಲ್ಬುರ್ಗಿ, ಶಿವಮೊಗ್ಗ ಮೊದಲಾದ ಕಡೆಗಳಿಂದ ಶರಣರು ಬಂದು ಸೇರುತ್ತಿದ್ದರು.

ಸಾಕ್ರೆಟೀಸನ ಚರ್ಚೆಯಲ್ಲಿ ವಿವಿಧ ಸ್ತರದ, ವಿವಿಧ ಮನೋವೃತ್ತಿಯ ಜನರು ಭಾಗವಹಿಸುತ್ತಿದ್ದರು. ''ಕೈಟೋ ಎಂಬುವನು ಬುದ್ಧಿಶಕ್ತಿ ಸ್ವಲ್ಪ ಕಡಿಮೆಯುಳ್ಳ ಧನಿಕ ವೃದ್ಧ; ಸಿಮಿಯಾಸ್, ಸಿಬಿಸ್ ಎಂಬುವರು ತತ್ವವಿಚಾರದಲ್ಲಿ ಆಸಕ್ತಿಯುಳ್ಳ ಯುವಕರು. ಆಂಡಿಸ್ಥೆನೀಸ್ ಅರಿಸ್ಟಿಪಸ್ ಎಂಬುವರು ನೀತಿಶಾಸ್ತ್ರದಲ್ಲಿ ಬೇರೆ ಬೇರೆ ಮತಗಳನ್ನು ಸ್ಥಾಪಿಸಿದರು. ಪ್ಲೇಟೋ ಅದ್ಭುತ ಪ್ರತಿಭಾಶಾಲಿ, ತತ್ವವೇತ್ತ ರಸಋಷಿ. ಸೆನೋಫನ್ನನು ಸೇನಾನಾಯಕ. ಆಲ್ಕಿ ಬಿಯಡೀಸ್, ಕ್ರಿಂಟಿಯಿಸ್ ಮೊದಲಾದವರು ಐಶ್ವರ್ಯ, ದರ್ಪ ಮತ್ತು ವಿಷಯಸುಖದ ಲೋಲುಪ್ತತೆಯಿಂದ ತಮ್ಮ ಜೀವನವನ್ನು ವ್ಯರ್ಥ ಮಾಡಿಕೊಂಡಿದ್ದಲ್ಲದೆ ರಾಷ್ಟ್ರಕ್ಕೆ ಶತ್ರುಗಳಾಗಿ ಪರಿಣಮಿಸಿದ್ದರು.''[115] ಇವರೆಲ್ಲರು ಚರ್ಚೆಯ ಮುಖ್ಯ ಚಾಲಕಶಕ್ತಿಗಳಾಗಿದ್ದರು.

ಅನುಭಾವಮಂಟಪಕ್ಕೂ ಬೇರೆ ಬೇರೆ ಸ್ತರದ ವಿಭಿನ್ನ ಮೂಲದ ಬೇರೆ ಬೇರೆ ವೃತ್ತಿಯ ಮೂಲದವರು ಬಂದು ಸೇರಿ ಅನುಭಾವಗೋಷ್ಠಿ ನಡೆಸುತ್ತಿದ್ದರು.

ಸಾಕ್ರೆಟೀಸ್‌ನ ಚರ್ಚೆಯಲ್ಲಿ ಬಡವ, ಬಲ್ಲಿದ, ವೃದ್ಧ ಬಾಲಕ ಹೀಗೆ ಯಾವುದೇ ಭಿನ್ನ ಭಾವವಿಲ್ಲದೆ ಭಾಗವಹಿಸುತ್ತಿದ್ದರು. ಅನುಭಾವಮಂಟಪದಲ್ಲಿ ಸಹ ಯಾವುದೇ ಭೇದ-ಭಾವಗಳಿರಲಿಲ್ಲ. ಎಲ್ಲರಿಗೂ ಮುಕ್ತ ಅವಕಾಶಗಳಿದ್ದವು. ಆದರೆ ಸಾಕ್ರೆಟೀಸನ ಚರ್ಚೆಯಲ್ಲಿ ಮಹಿಳೆಯರು ಭಾಗವಹಿಸಿದ ಬಗ್ಗೆ ಉಲ್ಲೇಖವಿಲ್ಲ. ಮಹಿಳೆಯರಿಗೆ ಅನುಭಾವಮಂಟಪದಲ್ಲಿ ಮುಕ್ತ ಅವಕಾಶವಿತ್ತು.

ಸಾಕ್ರೆಟೀಸನು ಜನರಿಂದ ಹಣ ಸಂಪಾದಿಸುತ್ತಿರಲಿಲ್ಲ. ಐಶ್ವರ್ಯಕ್ಕೂ ಪ್ರಾಪಂಚಿಕ ಸುಖಕ್ಕೂ ಎಂದೂ ಮನಸೋತವನಲ್ಲ. ಜ್ಞಾನವೊಂದೇ ನಿಜವಾದ ಬೆಲೆಯುಳ್ಳದ್ದೆಂದು ನಂಬಿ ಅದನ್ನೇ ಅರಸಿಕೊಂಡು ತಿರುಗುತ್ತಿದ್ದನು. ಆದರೆ ಅವನು ಸನ್ಯಾಸಿಯನ್ನಾಗಲಿ, ಪ್ರಾಪಂಚಿಕನನ್ನಾಗಲಿ ದ್ವೇಷಿಸಿದವನಲ್ಲ.

ಅನುಭಾವಮಂಟಪದ ಶರಣರು ಸಹ ಹಣಸಂಪಾದನೆಯಿಂದ ದೂರವಿದ್ದವರು. ಬದಲಾಗಿ ಐಶ್ವರ್ಯವನ್ನು ತೃಣಸಮಾನವಾಗಿ ಕಂಡರು. ಪ್ರಾಪಂಚಿಕ ಸುಖಕ್ಕೂ ಹೆಚ್ಚಿನ ಮಹತ್ವ ನೀಡಲಿಲ್ಲ. ಪ್ರಪಂಚದಿಂದ ಪಾರಮಾರ್ಥ ಸಾಧ್ಯವೆಂದು ಪ್ರತಿಪಾದಿಸಿದರು.

ಸಾವು ಬಂದರೆ ಬರಲಿ ಅಧರ್ಮವನ್ನು ಆಚರಿಸಲಾರೆ ಎಂಬ ಸಾಕ್ರೆಟೀಸನ ನಿಲುವಿಗೆ ವಚನಕಾರರು ಸಾವಿನ ಭಯದಿಂದ ಮುಕ್ತರಾಗಿದ್ದು 'ಮರಣವೇ ಮಹಾನವಮಿ' ಎಂದು ನಂಬಿದ್ದರು.

ಜ್ಞಾನವೆನ್ನುವುದಿದೆ, ಅದನ್ನು ಪ್ರತಿಯೊಬ್ಬರೂ ಪಡೆಯಬೇಕು ಎಂದು ಸಾಕ್ರೆಟೀಸನು ನುಡಿದರೆ, ಅರಿವೇ ಗುರು ಎಂದು ಶರಣರು ನುಡಿದರು. ಸಾಕ್ರೆಟೀಸ್ ಹಾಗೂ ಶರಣರಲ್ಲಿ ಆತ್ಮಸಂಯಮ ಮತ್ತು ಜ್ಞಾನದ ಒಲವುಗಳಿದ್ದವು.

ಸಾಕ್ರೆಟೀಸನ ಚರ್ಚೆ ಸಾಧಾರಣವಾದ ಪ್ರಸಂಗವೊಂದರಿಂದ ಪ್ರಾರಂಭವಾಗಿ ತತ್ವ ವಿಮರ್ಶೆಯಲ್ಲಿ ಕೊನೆಗಾಣುತ್ತಿತ್ತು. ಅನುಭಾವಮಂಟಪದ ಚರ್ಚೆ ಸಹ ದಿನನಿತ್ಯದ ಬದುಕಿನ ಸಣ್ಣ ಎಳೆ, ಸಾಧಾರಣ ಘಟನೆಯೊಂದಿಗೆ ಆರಂಭವಾಗಿ ಶ್ರೇಷ್ಠ ತತ್ವವನ್ನು ಪ್ರತಿಪಾದಿಸುತ್ತಿದ್ದರು. ಇದಕ್ಕೆ ಅವರ ಬೆಡಗಿನ ವಚನಗಳು ಸೂಕ್ತ ಉದಾಹರಣೆಯಾಗುತ್ತವೆ.

ಶರಣರಂತೆ ಸಾಕ್ರೆಟೀಸನು ಸಂಪ್ರದಾಯದ ಕಟ್ಟನ್ನು ಸಡಿಲಿಸಿ ವ್ಯಕ್ತಿಯ ಹಕ್ಕಿಗೆ ಪ್ರಾಶಸ್ತ್ಯ ಕೊಟ್ಟನು. ಸಾಕ್ರೆಟೀಸನು ಕೇಡಿನ ನಿವಾರಣೆಗೆ ಶಿಕ್ಷಣವೇ ಪರಿಹಾರವೆಂದು ಸೂಚಿಸಿದರೆ ಅನುಭಾವಮಂಟಪದಲ್ಲಿ ಕೆಡುಕಿನ ನಿರ್ಮೂಲನೆಗೆ ಅರಿವು ಜ್ಞಾನವೇ ಪರಿಹಾರವೆಂದು ಸೂಚಿಸಿದರು.

ಶರಣರಂತೆ ಸಾಕ್ರೆಟೀಸನು ಸಹ ಸನ್ಯಾಸ ಹಾಗೂ ಸಾವನ್ನು ಕುರಿತು ಚರ್ಚಿಸಿದ್ದಾನೆ. ಹೊರಗೆ ಸಂಸಾರಸ್ಥನಾದರೂ ಒಳಗೆ ಸನ್ಯಾಸದಂತೆ ಬದುಕಿದನು. ನ್ಯಾಯಾಲಯದ ಆದೇಶದಂತೆ ವಿಷಪ್ರಾಶನ ಮಾಡುವಾಗ ''ನಾನೇನೋ ಸಾಯುವುದಕ್ಕೆ ಹೋಗುತ್ತಿರುವೆ, ನೀವು ಬದುಕಿ ಬಾಳಲು ಹೋಗುತ್ತಿದ್ದೀರಿ. ಇವೆರಡರಲ್ಲಿ ಯಾವುದು ಉತ್ತಮ ಸ್ಥಿತಿಯೋ ಭಗವಂತನಿಗೊಬ್ಬನಿಗೆ ಗೊತ್ತು'' [116] ಎಂದು ಮಾರ್ಮಿಕವಾಗಿ ನುಡಿದನು. ಬದುಕಿನ ಬೆಲೆ ಸಾಯುವುದರಲ್ಲಿದೆ ಎಂದು ನಂಬಿದವನು.

ಹೀಗೆ ಹಲವಾರು ಅಂಶಗಳನ್ನು ಸಾಕ್ರೆಟೀಸನು ಪ್ರಾಚೀನಕಾಲದಲ್ಲಿಯೇ ಚರ್ಚಿಸಿದ್ದು ಅತ್ಯಂತ ಪ್ರಗತಿಪರ ವಿಚಾರಗಳನ್ನು ಹುಟ್ಟುಹಾಕುವ ಮೂಲಕ ಶತಮಾನಗಳ ಮೌಢ್ಯತೆಗೆ ಅಸ್ತ್ರವಾಗಿ ವೈಚಾರಿಕ ತಳಹದಿಯನ್ನು ಹಾಕಿಕೊಟ್ಟವನು. ಭವಿಷ್ಯತ್ತಿನ ವಿಚಾರವಾದಿ ಹಾಗೂ ತತ್ವಜ್ಞಾನಿಗಳಿಗೆ ಮಾರ್ಗದರ್ಶಕ ರೂಪದ ದಿಕ್ಸೂಚಿಯಾಗಿ ಪರಿಶ್ರಮಿಸಿದವನು. ಅವನ ನಂತರದ ಎಲ್ಲ ವಿಚಾರವಾದಿಗಳು ಅವನಿಗೆ ಋಣಿಯಾಗಿದ್ದಾರೆ. ಮುಂದಿನ ಹಲವಾರು ಸಂಘಟನೆಗಳಿಗೆ ಪ್ರೇರಣೆಯಾಗಿದ್ದಾನೆ. ದೇಶ, ಕಾಲ, ಪರಿಸರ, ಭೌಗೋಳಿಕತೆ ಮುಂತಾದವುಗಳು ಭಿನ್ನವಾದರೂ, ಮನುಕುಲದ ವಿಕಾಸವನ್ನು ಗಮನದಲ್ಲಿಟ್ಟುಕೊಂಡು ಸಮಾನ ಅವಕಾಶಗಳನ್ನು ಎಲ್ಲರಿಗೂ ತಲುಪಿಸಬೇಕೆಂಬ ಕಾಳಜಿ ಉಳ್ಳವರು ಒಂದೇ ತೆರನಾಗಿ ಚಿಂತಿಸಿ ತತ್ವ ನಿರೂಪಣೆ ಮಾಡಿರುವುದು ಕಂಡುಬರುತ್ತದೆ.

****

೨.೫. ಪ್ಲೇಟೋ ಅಕಾಡೆಮಿ ಮತ್ತು ಅನುಭಾವಮಂಟಪ :

೨.೫.೧. ಹಿನ್ನೆಲೆ :

ಸಂಘಟನೆ ಹಾಗೂ ಸಂಘರ್ಷಗಳ ಮೂಲ ಉದ್ದೇಶ ಆದರ್ಶ ಸಮಾಜವೊಂದರ ಕಲ್ಪನೆ ಕಟ್ಟಿಕೊಡುವುದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಹಲವಾರು ಸಂಘಟನೆಗಳು, ಸಂಘರ್ಷಗಳು ಪ್ರಾಚೀನ ಕಾಲದಿಂದಲೂ ನೆರವೇರುತ್ತಲೇ ಬಂದಿದ್ದರೂ, ಆದರ್ಶ ಸಮಾಜ ರೂಪುಗೊಳ್ಳುವುದು ಅಪೂರ್ಣವಾಗಿಯೇ ಉಳಿದಿದೆ. ಅದಕ್ಕೆ ಮನುಷ್ಯನಲ್ಲಿರುವ ದ್ವಂದ್ವತೆಗಳೇ ಕಾರಣವೆನ್ನಬಹುದು. ಕೆಲವರಿಗೆ ವಾಸ್ತವ ಸಮಾಜ ಇಷ್ಟವಾದರೆ ಮತ್ತೆ ಕೆಲವರಿಗೆ ಆದರ್ಶ ಸಮಾಜ ಇಷ್ಟವಾಗಬಹುದು.

ಸಮಾಜ, ಸಂಘಟನೆ ಮತ್ತು ರಾಜ್ಯಗಳ ಪರಿಕಲ್ಪನೆಗೆ ಮೂರ್ತ ಅರ್ಥವನ್ನು ಕಲ್ಪಿಸಿದವರು ಗ್ರೀಕರೇ. ಗ್ರೀಕ್‌ನ ತಾತ್ವಿಕ ಚರಿತ್ರೆಯಲ್ಲಿಯೆ ಈ ವಾಸ್ತವ ಆದರ್ಶವೆಂಬ ದ್ವಂದ್ವತೆಗಳಿವೆ. ಕೆಲವರು ವಾಸ್ತವವಾದಿ ರಾಜ್ಯ ಕಟ್ಟಬಯಸಿದರೆ ಮತ್ತೆ ಕೆಲವರು ಆದರ್ಶರಾಜ್ಯ ಕಟ್ಟಲು ಅಪೇಕ್ಷೆ ಪಟ್ಟರು. ಆದರ್ಶರಾಜ್ಯದ ಕಲ್ಪನೆಯ ಮೂಲಕ ತನ್ನ ಪರಿಕಲ್ಪನೆ ಸಾಕಾರಗೊಳಿಸಲು ಒಂದು ವೇದಿಕೆಯನ್ನು ರಚಿಸಿ ಅದಕ್ಕೆ **'ಅಕಾಡೆಮಿ'** ಎಂದು ಹೆಸರು ಕೊಟ್ಟ ಶ್ರೇಷ್ಠ ತತ್ವಜ್ಞಾನಿಯೆಂದರೆ ಪ್ಲೇಟೋ.

ಪ್ಲೇಟೋನ ಆದರ್ಶರಾಜ್ಯವೆಂದರೆ ಸಮತಾವಾದದ ಪ್ರತಿಪಾದನೆಯೇ ಆಗಿದೆ. ಆ ಮೂಲಕ ಮನುಕುಲದ ಬದುಕನ್ನು ಪೂರ್ಣಗೊಳಿಸುವ ನೆಲೆಯಲ್ಲಿ ವೈಚಾರಿಕವಾದ, ತಾತ್ವಿಕವಾದ, ಪರಿಶುದ್ಧ ಸಮಾಜ(ರಾಜ್ಯ)ವೊಂದನ್ನು ಕಟ್ಟ ಬಯಸಿದನು.

ಪ್ಲೇಟೋ ಅಕಾಡೆಮಿಯೊಂದನ್ನು ಸ್ಥಾಪಿಸಲು ಮತ್ತು ಸಮಕಾಲೀನ ವ್ಯವಸ್ಥೆಗೆ ಭಿನ್ನವಾದ ಈ ಆದರ್ಶ ರಾಜ್ಯದ ಕಲ್ಪನೆಯನ್ನು ಕಟ್ಟಿಕೊಳ್ಳಲು ಮುಖ್ಯ ಕಾರಣವೆಂದರೆ, ತನ್ನ ಗುರುವಾಗಿದ್ದ ಸಾಕ್ರೆಟೀಸನ ಸಾವು. ಈ ಕಾಲಕ್ಕೆ ಇಡೀ ವ್ಯವಸ್ಥೆ ಮೂರ್ಖರ ಸಾಮ್ರಾಜ್ಯವಾಗಿ ಕಂಡುಬಂದಿತ್ತು. ಅದನ್ನು ಪ್ರತಿಭಟಿಸಲು ಅಕಾಡೆಮಿಯನ್ನು ಸ್ಥಾಪಿಸಿದ್ದು ಚಾರಿತ್ರಿಕವಾಗಿ ಮಹತ್ವದ ಸಂಗತಿ.

೨.೫.೨. ಪ್ಲೇಟೊ (ಕ್ರಿ.ಪೂ. ೪೨೮-೩೪೭)

ಶ್ರೇಷ್ಠ ದಾರ್ಶನಿಕ, ಚಿಂತಕನಾದ ಪ್ಲೇಟೋ ಶ್ರೇಷ್ಠ ತತ್ವಜ್ಞಾನಿಯೂ ಆಗಿದ್ದನು.

ಪ್ಲೇಟೋನ ಒಟ್ಟಾರೆ ವಿದ್ವತ್ತು, ಚಿಂತನೆಗಳು ಸಾಕ್ರೆಟೀಸನ ಮೂಲಕ ಬಳುವಳಿಯಾಗಿ ಬಂದಂತಿವೆ. ಮುಂದೆ ಶ್ರೇಷ್ಠ ತತ್ವಜ್ಞಾನಿಯಾದ ಅರಿಸ್ಟಾಟಲ್‌ಗೆ ಪ್ಲೇಟೋ ಗುರುವಾಗಿದ್ದನು. ಜಗತ್ತಿನ ತತ್ವಜ್ಞಾನಿಗಳ ತತ್ವಗಳಿಗೆಲ್ಲ ಈ ಮೂರು ವ್ಯಕ್ತಿತ್ವಗಳ ಚಿಂತನಕ್ರಮವೇ ಆಧಾರಸ್ತಂಭವಾಗಿರುವುದು ಚರಿತ್ರೆಯ ಸತ್ಯಗಳಲ್ಲಿ ಒಂದು. ''ಈ ಮೂವರು ಮಹಾನುಭಾವರು ಚಿರಸ್ಮರಣೀಯರು. ಪ್ರಾಚೀನ ಗ್ರೀಕ್ ಸಂಸ್ಕೃತಿಯ ಚಿಂತಾಮಣಿಗಳು. ಅಷ್ಟೇ ಅಲ್ಲ ಪ್ರಪಂಚ ಕಂಡ ಅಚ್ಚರಿ ಪಡುವ ಅಪೂರ್ವ ಗುರು-ಶಿಷ್ಯ ಪರಂಪರೆಗೆ ಸೇರಿದವರು. ಪಾಶ್ಚಾತ್ಯ ವಿದ್ವತ್ ಪ್ರಪಂಚದ ಮಹಾನ್ ದಿಗ್ಗಜರು. ಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಅಪ್ರತಿಮ ಪರಿಣತಿಯನ್ನು ಪಡೆದ ಅಭೃತಿಗಳು. ಜ್ಞಾನ ಭಂಡಾರವನ್ನು ಸೂರೆಗೈದ ದಾರ್ಶನಿಕತ್ರಯರು.''[117] ಎಂಬ ಮಾತುಗಳು ತುಂಬಾ ವಾಸ್ತವವೆನ್ನಬಹುದು. ಚಿಂತಕ ಪ್ಲೇಟೋ ಅಥೆನ್ಸ್‌ನ ಉಚ್ಚ ಹಾಗೂ ಶ್ರೀಮಂತ ಕುಲದಲ್ಲಿ ಜನಿಸಿದವನು. ಸಣ್ಣ ವಯಸ್ಸಿನಲ್ಲಿ ತನ್ನ ಬುದ್ಧಿಶಕ್ತಿಯಿಂದ ಜಗತ್ತಿನ ವಿದ್ವಾಂಸರ ಗಮನ ಸೆಳೆದ ವ್ಯಕ್ತಿ. ವಯಸ್ಸಿಗೆ ಮೀರಿದ ಬುದ್ಧಿ, ತತ್ವಜ್ಞಾನದ ಪಾಂಡಿತ್ಯ ಅವನಲ್ಲಿದ್ದು ತತ್ವಶಾಸ್ತ್ರ ನೀತಿಶಾಸ್ತ್ರ ತರ್ಕಶಾಸ್ತ್ರ ಗಣಿತ, ಸಾಹಿತ್ಯ, ಸಂಗೀತ ಇತ್ಯಾದಿ ವಿಷಯಗಳಲ್ಲಿ ಅಪಾರ ಪಾಂಡಿತ್ಯ ಗಳಿಸಿದವನು. ಉತ್ತಮ ಭಾಷಣಕಾರ. ಸ್ಫುರದ್ರೂಪಿ, ವಿಶಾಲ ಸದೃಢಬಾಹು ಹೊಂದಿದ್ದರಿಂದ ಪ್ಲೇಟೋ ಎಂಬ ಹೆಸರು ಅನ್ವರ್ಥಕವಾಗಿದೆ. ''ಪ್ಲೇಟೋರವರ ಮೂಲ ಹೆಸರು ಅರಿಸ್ಟಾಟಲ್ಸ್ ಎಂದಿತ್ತು.''[118] ಮಲ್ಲಯುದ್ಧದಲ್ಲಿ ಎತ್ತಿದ ಕೈ. ದೇಶಕ್ಕಾಗಿ ಹೋರಾಡಿದ ಕೀರ್ತಿ ಇವನದು. ಹಾಗಾಗಿ ಪ್ಲೇಟೋ ಕವಿಯಾಗಿ, ಕಲಿಯಾಗಿ, ತತ್ವಜ್ಞಾನಿಯಾಗಿ, ಮಹಾದಾರ್ಶನಿಕನಾಗಿ, ಎಲ್ಲರ ಆಕರ್ಷಣೆಗೆ ಒಳಗಾದವನು. ಪ್ಲೇಟೋನ ಮೂಲ ನೆಲೆಯಾದ ಅಥೆನ್ಸ್‌ನ ಆಳ್ವಿಕೆ ಮತ್ತು ಆಡಳಿತವ್ಯವಸ್ಥೆಯಲ್ಲಿನ ಲೋಪ-ದೋಷಗಳ ಫಲವಾಗಿ ಬುದ್ಧಿಜೀವಿ ಚಿಂತಕನಾಗಿದ್ದ ಸಾಕ್ರೆಟೀಸ್ ಸಾಯಬೇಕಾಗಿ ಬಂದುದರಿಂದ ಅತ್ಯಂತ ನೋವುಂಡ ಪ್ಲೇಟೋ ತತ್ಕಾಲದ ರಾಜಕಾರಣದಲ್ಲಿ ಜಿಗುಪ್ಸೆ ತಾಳಿ ಅಥೆನ್ಸ್‌ನ್ನು ತೊರೆದು ಮೆಗರಾ, ಸಿರಿನ್, ಈಜಿಪ್ತ, ಸಿರಾಕಸ್ ಮೊದಲಾದ ದೇಶಗಳನ್ನು ಅಲೆದು ಸುಮಾರು ೧೨ ವರ್ಷಗಳ ಕಾಲ ದೇಶಪರ್ಯಟನೆ ಮಾಡಿದನು. ಆ ಮೂಲಕ ಅಪಾರ ಜ್ಞಾನಾನುಭವಗಳನ್ನು ಸಂಪಾದನೆ ಮಾಡಿಕೊಂಡು ಅಥೆನ್ಸ್‌ಗೆ ಹಿಂದಿರುಗಿದನು. ಇತಿಪೋಕ್ರಿಟೊ, ಅಪೋಲಜಿ, ಫಿಲಿಬಸ್ ಮೊದಲಾದ ಮೂವತ್ತಾರು ಕೃತಿಗಳನ್ನು ರಚಿಸಿದನು. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ರಿಪಬ್ಲಿಕ್, ಪೊಲಿಟಿಕ್ಸ್ ಅಥವಾ ಸ್ಟೇಟ್ಸ್ ಮ್ಯಾನ್, ಲಾಜ್. ಪ್ಲೇಟೋ ''ಆದರ್ಶ-ರಾಜ್ಯ'' ಪ್ರತಿಪಾದಿಸಿದನು. ಶಿಕ್ಷಣಕ್ಕೆ ಅತ್ಯಂತ ಮಹತ್ವವನ್ನು ನೀಡಿ ಅಕಾಡೆಮಿಯೊಂದನ್ನು ಸ್ಥಾಪಿಸಿದನು. ಶಾಸ್ತ್ರಾಭ್ಯಾಸ, ಅಕಾಡೆಮಿಯ ಆಡಳಿತ ನಿರ್ವಹಣೆ ಮತ್ತು ಗ್ರಂಥರಚನೆಯಲ್ಲಿ ತುಂಬು ಜೀವನ ನಡೆಸಿ, ತನ್ನ ಎಂಭತ್ತೊಂದನೆಯ ವಯಸ್ಸಿನಲ್ಲಿ ಮರಣ ಹೊಂದಿದನು.

೨.೫.೩. ಅಕಾಡೆಮಿ

'ಬುದ್ಧಿಯ ವಿಕಾಸದಲ್ಲಿ ಮನುಕುಲದ ವಿಕಾಸ ಅಡಗಿದೆ' ಎಂಬುದನ್ನು ಮನಗಂಡ ಪ್ಲೇಟೋ; ತನ್ನ ಪರಿಕಲ್ಪನೆಯ ಆದರ್ಶ ರಾಜ್ಯಕ್ಕೆ ಬೇಕಾದುದು ಉತ್ತಮ ಶಿಕ್ಷಣವೆಂದು ಪರಿಗಣಿಸಿ, ಪ್ಲೇಟೋ ಬೌದ್ಧಿಕ ಅಕಾಡೆಮಿಯನ್ನು ಸ್ಥಾಪಿಸಿದನು. ಈ ಅಕಾಡೆಮಿಯು ವಿಶ್ವವಿಖ್ಯಾತವಾಗಿದ್ದು ಇದು ಇಂದಿನ ವಿಶ್ವವಿದ್ಯಾಲಯಗಳ ಮಾದರಿ ಯಾಗಿತ್ತು. ಪ್ಲೇಟೋನ ಆದರ್ಶ ರಾಜ್ಯದ ಕಲ್ಪನೆಯ ಕನಸು ನನಸಾಗದಿದ್ದರೂ ಸಹ, ಅವನ ಅಕಾಡೆಮಿ ಮಾತ್ರ ಸುಮಾರು ಒಂಬೈನೂರು ವರ್ಷಗಳವರೆಗೆ ಶಿಕ್ಷಣದ ಮಹಾನ್ ಕ್ಷೇತ್ರವಾಗಿ ದೀರ್ಘಕಾಲದವರೆಗೆ ಮೆರೆಯಿತು. ಇಂದು ನಾವು ರೂಪಿಸಿ ಕೊಂಡ ಸಾಹಿತ್ಯ ಅಕಾಡೆಮಿ, ನಾಟಕ, ಸಂಗೀತ ಮೊದಲಾದ ಅಕಾಡೆಮಿಗಳ ಪರಿಕಲ್ಪನೆ ಪ್ಲೇಟೋ ಅಕಾಡೆಮಿಯಿಂದಲೇ ಬಂದವು. ಅಷ್ಟೇ ಅಲ್ಲ ಅಕಾಡೆಮಿ ಎಂಬ ಪದದ ಹರಿಕಾರನಾದ ಪ್ಲೇಟೋ. ಇಲ್ಲಿ ಅಕಾಡೆಮಿ ಎಂದರೆ ಪಂಡಿತ ಪರಿಷತ್ತು ವಿದ್ವನ್ಮಂಡಲ, ಸಾಹಿತ್ಯ, ವಿಜ್ಞಾನ, ಶಾಸ್ತ್ರ ಕೃತಿಗಳ ಅಭಿವೃದ್ಧಿ ಪ್ರೋತ್ಸಾಹಗಳಿಗಾಗಿ ಏರ್ಪಟ್ಟಿರುವ ಪರಿಣಿತರ ಒಂದು ಸಂಸ್ಥೆ.[119] ಅಕಾಡೆಮಿಯಲ್ಲಿ ಉನ್ನತಮಟ್ಟದ ಅಧ್ಯಯನ, ವ್ಯಾಸಂಗ ನಡೆಯುತ್ತಿದ್ದು ದೇಶವಿದೇಶಗಳಿಂದ ಹಲವಾರು ವಿದ್ಯಾರ್ಥಿ ಗಳನ್ನು, ವಿದ್ವಾಂಸರನ್ನು ಆಕರ್ಷಿಸಿತು. ಆ ಕಾಲಕ್ಕೆ ಇಲ್ಲಿ ಪ್ರವೇಶ ಪಡೆಯುವುದೇ ಒಂದು ಪುಣ್ಯವೆಂದು ಪರಿಗಣಿಸಲಾಗಿತ್ತು. ಅಕಾಡೆಮಿಯಲ್ಲಿ ಪ್ರತಿಭಾವಂತರಿಗೆ ಮಾತ್ರ ಅವಕಾಶವಿತ್ತು. ವಿದ್ವಜನರ ಕೇಂದ್ರವಾದ ಇದು ಆದರ, ಗೌರವಗಳಿಗೆ ಪಾತ್ರ ವಾಗಿತ್ತು. ಅದರ ಒಟ್ಟು ಶ್ರೇಯಸ್ಸು ಪ್ಲೇಟೋಗೆ ಸಲ್ಲುತ್ತದೆ.

ಪ್ಲೇಟೋನ ಅಕಾಡೆಮಿಯೇ ಮುಂದೆ ೧೨ನೆ ಶತಮಾನದ ಅನುಭಾವ ಮಂಟಪಕ್ಕೆ ಮಾದರಿ ಎಂಬಂತಿತ್ತು. ಪ್ಲೇಟೋ ಆದರ್ಶ ರಾಜ್ಯ ಕುರಿತು ಚಿಂತಿಸಿದರೆ, ಅನುಭಾವಮಂಟಪವು ಆದರ್ಶ ಸಮಾಜವನ್ನು ಕುರಿತು ಚರ್ಚಿಸಿತು. ಬಸವಣ್ಣನ ಸಮತಾವಾದವು ಕೂಡ ಪ್ಲೇಟೋನ ಸಮತಾವಾದಕ್ಕೆ ಹೋಲಿಕೆಯಾಗುತ್ತದೆ.

೨.೫.೪. ಪ್ಲೇಟೋನ ೧೨ನೆ ಶತಮಾನದ ಅಕಾಡೆಮಿ - ಅನುಭಾವಮಂಟಪ :

ಆದರ್ಶವಾದದ ತುಡಿತಗಳು ಎಲ್ಲ ಕಾಲದಲ್ಲೂ ಮತ್ತು ಎಲ್ಲ ದೇಶದಲ್ಲೂ ಇದ್ದು ಅದರ ಹಿಂದಿರುವ ಆಶಯ ಕೂಡ ಒಂದೇ ಆಗಿರುವುದರಿಂದ ಒಂದು ಇನ್ನೊಂದು ಕಾಲ-ದೇಶದ ಮೇಲೆ ಪ್ರಭಾವ ಬೀರಲು ಸಾಧ್ಯವಾಗಿದೆ. ಈ ಮಾತನ್ನು ಪ್ಲೇಟೋನ ಅಕಾಡೆಮಿ ಮತ್ತು ಅನುಭಾವಮಂಟಪಗಳ ಮುಖಾಂತರ ದೃಢಪಡಿಸ ಬಹುದು. ಅನುಭಾವಮಂಟಪಕ್ಕೂ ಪ್ಲೇಟೋನ ಅಕಾಡೆಮಿಗೂ ರಚನಾಕ್ರಮ ಮತ್ತು

ಉದ್ದೇಶದಲ್ಲಿ ವ್ಯತ್ಯಾಸವೆಂಬಂತೆ ಕಂಡುಬರುತ್ತದೆ, ನಿಜ. ಆದರೆ ಅವೆರಡರ ಮೂಲ ಕಾಳಜಿಯ ಸೆಲೆಗಳು ಮಾತ್ರ ಒಂದೇ ಆಗಿವೆ. ಆದರ್ಶರಾಜ್ಯ ಕಟ್ಟುವುದು ಅಕಾಡೆಮಿಯ ಉದ್ದೇಶವಾದರೆ, ಆದರ್ಶಸಮಾಜ ಕಟ್ಟುವುದು ಅನುಭಾವ ಮಂಟಪದ ಉದ್ದೇಶ ವಾಗಿತ್ತು. ಉತ್ತಮ ಸಮಾಜದಿಂದ ಉತ್ತಮ ರಾಜ್ಯ ನಿರ್ಮಾಣವಾಗುವಂತೆ ಉತ್ತಮ ರಾಜ್ಯವು ಉತ್ತಮ ಸಮಾಜವನ್ನು ಹೊಂದಿರುತ್ತದೆ. ಸಮಾಜವಾಗಲಿ, ರಾಜ್ಯವಾಗಲಿ ವ್ಯಕ್ತಿಯನ್ನು ಹೊರತು ಪಡಿಸಿಲ್ಲವೆಂಬುದು ಇಲ್ಲಿ ಮುಖ್ಯವಾಗುತ್ತದೆ. ಪ್ಲೇಟೋನ ಕೃತಿ ರಚನೆಯಲ್ಲಿ ಸಂವಾದ(dialogue)ಪದ್ಧತಿಯನ್ನು ಅನುಸರಿಸಿದ್ದಾನೆ. ಇದು ಅನುಭಾವ ಮಂಟಪದ ಗೋಷ್ಠಿಗೆ ಮಾದರಿಯಾಗಿದೆ. ಇವನ ಪ್ರಮುಖ ಕೃತಿ ''ರಿಪಬ್ಲಿಕ್''ನಲ್ಲಿ ಮುಖ್ಯವಾಗಿ ೧. ಆದರ್ಶರಾಜ್ಯ (Ideal State), ೨. ಧರ್ಮ (ನ್ಯಾಯ)(Justice) ಮತ್ತು ೩. ಸಮತಾವಾದ (Communism)ವನ್ನು ಚರ್ಚಿಸಲಾಗಿದೆ.

ಪ್ಲೇಟೋ ಧರ್ಮದ ಚೌಕಟ್ಟಿನಲ್ಲಿ ಆದರ್ಶರಾಜ್ಯದ ಕನಸು ಕಂಡರೆ, ಅನುಭಾವ ಮಂಟಪವು ಅಧ್ಯಾತ್ಮದ ಚೌಕಟ್ಟಿನಲ್ಲಿ ಆದರ್ಶಸಮಾಜ ಕಟ್ಟಲು ಪ್ರಯತ್ನಿಸಿತು. ಪ್ಲೇಟೋನ ಪ್ರಕಾರ ಆದರ್ಶರಾಜ್ಯವೆಂದರೆ, ಸಂಪತ್ತಿನ ಸಮಾನತೆ ಮತ್ತು ಕೌಟುಂಬಿಕ ಸಮಾನತೆ. ಇಲ್ಲಿ ಕುಟುಂಬ ಸಮಾನತೆ ಎಂದರೆ ಹೆಣ್ಣು-ಗಂಡು ಮತ್ತು ಮಕ್ಕಳು ಎಂಬ ತಾರತಮ್ಯವಿಲ್ಲದ ಸಾಮೂಹಿಕ ಒಡೆತನ. ಸಂಪತ್ತಿನ ಸಮಾನ ವಿತರಣೆಗೆ ಮಹತ್ವ ನೀಡಿದ ಪ್ಲೇಟೋ ಹಣಸಂಗ್ರಹಣೆಯನ್ನು ವಿರೋಧಿಸಿದನು. ಇದೇ ಧರ್ಮ (ನ್ಯಾಯ)ವೆಂದು ಸಾರಿದನು.

ಅನುಭಾವಮಂಟಪದ ಮೂಲ ಉದ್ದೇಶವು ಪ್ಲೇಟೋನ ಸಮತಾವಾದಕ್ಕಿಂತ ಭಿನ್ನವಾಗಿರಲಿಲ್ಲ, ಮಾರ್ಗಗಳು ಮಾತ್ರ ಭಿನ್ನವಾಗಿದ್ದವು. ಆದರ್ಶಸಮಾಜದ ನಿರ್ಮಿತಿ ಯಲ್ಲಿ ಸಂಪತ್ತಿನ ಸಮತೆ, ಕೌಟುಂಬಿಕ ಸಮಾನತೆಯನ್ನು ಪ್ರತಿಪಾದಿಸುವಾಗ ಸಾಮಾಜಿಕ ಸಾಮರಸ್ಯಕ್ಕೆ ಒತ್ತುಕೊಟ್ಟದ್ದು ಮಹತ್ವದ್ದಾಗಿದೆ.

ಪ್ಲೇಟೋ ಜನಸಾಮಾನ್ಯರೆಲ್ಲ ಅಂಗೀಕರಿಸಿದ ಮತಧರ್ಮದ ಹಾಗೂ ಪುರಾಣದ ಕತೆಗಳನ್ನು ನಿರಾಕರಿಸಿದನು. ಅವುಗಳನ್ನು ಮಾನ್ಯ ಮಾಡುವ ಸ್ಥಿತಿಯಲ್ಲಿರಲಿಲ್ಲ. ತನ್ನ ಸಮಕಾಲೀನ ಸಂದರ್ಭವಂತೂ ಅಧೋಗತಿಗೆ ಇಳಿದಿದೆ ಎಂಬುದು ಅವನ ನಿಲು ವಾಗಿತ್ತು. ಹಾಗಾಗಿ ವರ್ತಮಾನದ ಬಗೆಗೆ ಅವನಲ್ಲಿ ಅಸಮಾಧಾನವಿತ್ತು. ಅನುಭಾವ ಮಂಟಪದ ನಿಲುವು ಕೂಡ ಅದೇ ಆಗಿತ್ತು. ಅವರು ತಮ್ಮ ಹಿಂದಿನ ವೇದ, ಶಾಸ್ತ್ರ ಪುರಾಣಗಳನ್ನು ನಿರಾಕರಿಸಿದರಲ್ಲದೆ ಸಮಕಾಲೀನ ವ್ಯವಸ್ಥೆ ಬಗ್ಗೆ ಅಸಮಾಧಾನಿ ಗಳಾಗಿದ್ದರು.

ಅಕಾಡೆಮಿ ಕೊಡಮಾಡುವ ಶಿಕ್ಷಣವು ಕೇವಲ ಬಾಹ್ಯಜ್ಞಾನ ಸಂಪಾದಿಸುವು

ದಲ್ಲ. ಬದಲಿಗೆ ಸಮಾಜದ ಆಶೋತ್ತರ ಈಡೇರಿಕೆಗಾಗಿ ಮತ್ತು ಸಾಮಾಜಿಕ ಅರಿವಿನಿಂದ ಸಹಜ ಪ್ರವೃತ್ತಿಯನ್ನು ಹೊಂದಲು ಇರುವ ಸಾಮಾಜಿಕ ಪ್ರಕ್ರಿಯೆಯಾಗಿ ಅದು ನೆರವಾಗಿದೆ. ಪ್ಲೇಟೋ ಅಕಾಡೆಮಿಯ ಶಿಕ್ಷಣದ ಗುರಿಗಳು ಇವು :

೧. ಆತ್ಮವಿಕಾಸದ ಸಲುವಾಗಿ ಅದನ್ನು ತಕ್ಕ ಪರಿಸರದೊಡನೆ ಸ್ಪಂದಿಸುವುದು.

೨. ಆತ್ಮವು ಹೊಂದಿದ ಕಣ್ಣನ್ನು ಬೆಳಕಿನೆಡೆಗೆ ತಿರುಗಿಸುವುದು.

೩. ಮನಸ್ಸಿನ ರೋಗವನ್ನು ಮನಸ್ಸಿನ ಔಷಧಿಯಿಂದ ಚಿಕಿತ್ಸೆ ನೀಡಲು ಪ್ರಯತ್ನಿಸುವುದು.

೪. ಆತ್ಮದಲ್ಲಿ ಅಪ್ರಕಟಿತ ವಸ್ತುಗಳ ಪೈಕಿ ಉತ್ತಮವಾದ ವಸ್ತುಗಳನ್ನು ಹೊರ ತರುವುದು. ಮರಳು (Sand) ಉಸುಕನ್ನು ಚಿನ್ನದಲ್ಲಿ ಪರಿವರ್ತಿಸುವುದು.

೫. ಸಾರ್ವತ್ರಿಕ ಕಲ್ಯಾಣವನ್ನು ಕಾಪಾಡಿ ಹಕ್ಕುಗಳ ಮತ್ತು ಕರ್ತವ್ಯಗಳ ಬಗ್ಗೆ ವ್ಯಕ್ತಿಯನ್ನು ತರಬೇತಿಗೊಳಿಸುವುದು.

೬. ದುರ್ಗುಣಿಯನ್ನು ಸದ್ಗುಣಿಯಾಗಿ ಪರಿವರ್ತಿಸಿ ಒಳ್ಳೆಯದೆಂಬುದರ ಕಲ್ಪನೆಯನ್ನು ಮನಗಾಣಿಸುವುದು

೭. ಆಳುವವರಲ್ಲಿ ಮುತ್ಸದ್ದಿತನ, ಸತ್ಯ, ನ್ಯಾಯ, ಧೈರ್ಯ, ಬುದ್ಧಿ, ಸ್ಮೃತಿಶಕ್ತಿ ವಿವೇಕ, ಗಾಂಭೀರ್ಯ, ಶಿಷ್ಟಾಚಾರ ಮುಂತಾದ ಗುಣಗಳನ್ನು ಬೆಳೆಸುವುದು. [120]

ಇವೇ ತತ್ವ ಮತ್ತು ಉದ್ದೇಶಗಳನ್ನು ಅನುಭಾವಮಂಟಪವು ಹೊಂದಿದ್ದು ವ್ಯಕ್ತಿ ಸಮಾಜವನ್ನು ಪರಿಶುದ್ಧಗೊಳಿಸುವಲ್ಲಿ ಬಾಹ್ಯಕ್ಕಿಂತ ಆಂತರಿಕ ಬೆಳವಣಿಗೆ ಮುಖ್ಯವೆಂದು ಗ್ರಹಿಸಲಾಗಿತ್ತು. ವ್ಯಷ್ಟಿ ಸಮಷ್ಟಿಯ ಊರ್ಧ್ವಮುಖದ ವಿಕಾಸದಲ್ಲಿ ಈ ಎರಡೂ ವೇದಿಕೆಗಳು ಸಮಾನ ಕಾಳಜಿ ಹೊಂದಿದವು. ಮನುಕುಲವನ್ನು ನೇರಗೊಳಿಸುವಲ್ಲಿ ಇವು ಹೆಚ್ಚು ಪ್ರಸ್ತುತವೆಂಬಂತೆ ರೂಪುಗೊಂಡಿದ್ದವು.

ಅಕಾಡೆಮಿಯ ಪ್ರಭಾವ ಪರೋಕ್ಷವಾಗಿ ಮಾನವೀಯ ನೆಲೆಯಲ್ಲಿ ಪ್ರಭಾವ ಬೀರಿದ್ದನ್ನು ಅಲ್ಲಗಳೆಯಲಾಗದು. ಅನುಭಾವಮಂಟಪದ ಚರ್ಚೆಗಳು ಶೂನ್ಯ ಸಂಪಾದನೆಯಲ್ಲಿ ಪ್ರತಿಪಾದಿತವಾಗಿವೆ ಎಂಬುದನ್ನು ಒಪ್ಪಿಕೊಳ್ಳುವುದಾದರೆ ಪ್ಲೇಟೋ ಸಂವಾದಕ್ಕೂ ಈ ಗೋಷ್ಠಿಗೂ ಸಾಮ್ಯವಿರುವುದನ್ನು ಆರ್.ಡಿ. ರಾನಡೆಯವರು ಹೀಗೆ ಉಲ್ಲೇಖಿಸಿದ್ದಾರೆ. "It is a very extraordinary work the dialogue in Sunya sampadane are planned very much on the lines of the Platonic dialogues" [121] ಈ ಮಾತು ವಾಸ್ತವದಲ್ಲಿ ಅನುಭಾವಮಂಟಪಕ್ಕೂ ಮತ್ತು ಪ್ಲೇಟೋ ಅಕಾಡೆಮಿಗೂ ಇರುವ ಸಾಮ್ಯತೆ ಮತ್ತು ಸಂಬಂಧಗಳನ್ನು ಪ್ರತಿಪಾದಿಸುತ್ತದೆ.

ಈ ಎಲ್ಲ ವಿಚಾರಧಾರೆಗಳನ್ನು ನೋಡಿದರೆ ಬಹುತೇಕ ವಿಚಾರಧಾರೆಗಳು

ಸೈದ್ಧಾಂತಿಕ ತತ್ವ, ಭಿನ್ನಭಿನ್ನವಾದ ವಾದಗಳನ್ನು ಪ್ರತಿಪಾದಿಸುತ್ತವೆ. ಆಗ ಎಡ ಪಂಥೀಯ-ಬಲ ಪಂಥೀಯ, ಭೌತವಾದ-ಭಾವವಾದ, ಜಡವಾದ- ಚೇತನವಾದ ಮೊದಲಾದ ಭಿನ್ನತೆಗಳು ಹುಟ್ಟಿಕೊಳ್ಳುತ್ತವೆ. ಆದರೆ ವಚನಕಾರರ ಜೀವನ ಮತ್ತು ಸಿದ್ಧಾಂತ ವೈರಾಗ್ಯವನ್ನು ಬೋಧಿಸುವ ಪಲಾಯನವಾದವಲ್ಲ, ನೆಲದ ಬದುಕನ್ನು ಪ್ರೀತಿಸಿ ಜೀವಮುಖಿ ತತ್ವವನ್ನು ಬದುಕಿ ಬೋಧಿಸಿದರು. ಹಾಗಾಗಿ ಅನುಭಾವ ಮಂಟಪದ ತಾತ್ವಿಕ ನಿಲುವೆಂದರೆ ವಸ್ತು ಮತ್ತು ಚೈತನ್ಯವನ್ನು ಭೌತ ಮತ್ತು ಭಾವ ವನ್ನು, ಬದುಕಿನಲ್ಲಿ ಅಭಿನ್ನವೆಂದು ಕಂಡದ್ದಾಗಿದೆ. ಅದಕ್ಕಾಗಿ ಮನುಷ್ಯರ ಅಧೋ ಗತಿಗೆ ಕಾರಣವಾಗುವ ಪರಾವಲಂಬಿ ಅಂಶಗಳನ್ನು ಹೊಡೆದುಹಾಕಿ ಸ್ವಾವಲಂಬನೆ ಗಾಗಿ ಎಲ್ಲರನ್ನೂ ಪ್ರೇರೇಪಿಸಿರುವುದು. ಬದುಕಿನ ಎಲ್ಲ ರಂಗದ ಉತ್ಪಾದನೆಗಳಿಗೆ 'ಕಾಯಕ' ಎಂದು ಕರೆದ ಅನುಭಾವಮಂಟಪವೇ ಒಂದು ಕಮ್ಮಟಶಾಲೆ. ವಚನ ಕಾರರಿಗೆ ತತ್ವಸಿದ್ಧಾಂತಕ್ಕಿಂತ ಮನುಷ್ಯರೇ ಮುಖ್ಯರಾಗಿದ್ದು ಜ್ಞಾನಕ್ಕಿಂತ ನಡತೆ ಕೂಡ ಮುಖ್ಯವಾಗಿತ್ತು. ಮನುಷ್ಯ ಮನುಷ್ಯರ ಮಧ್ಯದ ನೋವು-ನಲಿವು, ಅರಿವು-ಇರವು ಮೊದಲಾದ ಸಂವೇದನೆಗಳ ಅನುಸಂಧಾನ ಏರ್ಪಡುತ್ತಿದ್ದುದರಿಂದ ಅದು ದುಡಿವವರ ಸಂಸತ್ತಾಗಿತ್ತು. ಹೀಗೆ ಬೇರೆ ತತ್ವಸಿದ್ಧಾಂತ, ಧಾರ್ಮಿಕ ಸಿದ್ಧಾಂತಗಳಿಗಾಗಿ ಅನುಭಾವಮಂಟಪ ಭಿನ್ನವಾಗಿ ಕಾಣಿಸುತ್ತದೆ.

****

ಕೊನೆಯ ಮಾತುಗಳು

ಅನುಭಾವಮಂಟಪದ ಬಗ್ಗೆ ಇಲ್ಲಿ ಹೇಳಿರುವುದಕ್ಕಿಂತ ಹೇಳದೇ ಇರುವ ವಿಷಯಗಳು ಹೆಚ್ಚಾಗಿವೆ. ಅದಕ್ಕೆ ಪ್ರಸ್ತುತ ವಿಷಯದ ವಿಶಾಲವ್ಯಾಪ್ತಿ ಕಾಲ ಹಾಗೂ ಅಧ್ಯಯನದ ಮಿತಿಯೇ ಕಾರಣ ಎಂದು ಹೇಳಬಹುದು.

ಆಧುನಿಕ ಮನುಷ್ಯನು ಸ್ವಾತಂತ್ರ್ಯವನ್ನು ಹೆಚ್ಚು ಹೆಚ್ಚಾಗಿ ಅನುಭವಿಸುವಂತೆ ಹೆಚ್ಚು ಹೆಚ್ಚು ಏಕಾಂಗಿ ಕೂಡ ಆಗುತ್ತಿದ್ದಾನೆಂದು ಖ್ಯಾತ ಮನೋವಿಜ್ಞಾನಿ ಎರಿಕ್ ಫ್ರಾಂ ಹೇಳುತ್ತಾನೆ. ಈ ಒಂಟಿತನಕ್ಕೆ ಕಾರಣ ಮನುಷ್ಯನಿಗಿರುವ ಸಾಮಾಜಿಕ ನ್ಯಾಯ ಮತ್ತು ಕಾಳಜಿಯ ಕೊರತೆಯೆ ಎನ್ನಬಹುದು. ಮನುಷ್ಯನ ಬದುಕಿನ ಅತ್ಯಂತ ದುರಂತದ ದಿನಗಳೆಂದರೆ ಅವನು ಕೊಡುವ ಪ್ರೀತಿಯನ್ನು ತೆಗೆದುಕೊಳ್ಳುವ ಮನುಷ್ಯರಿಲ್ಲದೇ ಇರುವುದು ಮತ್ತು ಅವರಿಗೆ ಪ್ರೀತಿಯನ್ನು ಕೊಡಲು ಮನುಷ್ಯರಿಲ್ಲದೇ ಇರುವುದು. ಬಸವಣ್ಣನ ಆತಂಕ ಕೂಡ ಬೇಡುವವರಿಲ್ಲದೆ ಬಡವನಾದೆ ಎಂಬಂತ್ತಿತ್ತು. ಆಧುನಿಕ ರಿಗೆ ಹೆಚ್ಚು ಕಾಡುತ್ತಿರುವ ಇಂತಹ ಬಡತನವು ದೂರವಾಗಬೇಕಾದರೆ ಅನುಭಾವ ಮಂಟಪದಂತಹ ಚಟುವಟಿಕೆಗಳ ಅವಶ್ಯಕತೆ ಇದೆ. ಗೌರವ ನನಗೆ ಸಿಗಬೇಕು ಅಷ್ಟೇ ಅಲ್ಲ ಇತರರೂ ನನ್ನಂತೆಯೇ ಗೌರವಕ್ಕೆ ಬಾಧ್ಯರಾಗಬೇಕು ಎಂದಾಗ ಮಾತ್ರ ಪ್ರೀತಿಯ ಬಡತನ ಇರುವುದೇ ಇಲ್ಲ. ಅನುಭಾವಮಂಟಪದ ಶರಣರು ಮಾಡಿದ್ದು ಅದನ್ನೇ.

ಕನ್ನಡ ಸಾಹಿತ್ಯವನ್ನು ಒಟ್ಟಾರೆ ಗಮನಿಸಿದರೆ ವಚನಕಾರರ ಬಗ್ಗೆ ನಡೆದಷ್ಟು ಚರ್ಚೆ, ವಿಮರ್ಶೆ, ಸಂಶೋಧನೆ, ವಾಗ್ವಾದ, ಸಂವಾದಗಳು ಬೇರೆ ಸಾಹಿತ್ಯ ಪ್ರಕಾರ ವನ್ನು ಕುರಿತು ನಡೆದಿಲ್ಲ. ನೋವಿನ ಹಲ್ಲಿಗೆ ನಾಲಿಗೆ ಪುನಃ ಪುನಃ ಹೊರಳುತ್ತದೆ ಎಂಬ ಮಾತು ಇಲ್ಲಿ ತುಂಬ ಪ್ರಸ್ತುತ. ಅದಕ್ಕೆ ಮುಖ್ಯ ಕಾರಣವೆಂದರೆ ಒಂದು ವಿಷಯ ವಸ್ತುವನ್ನು ಹೊದ್ದು ಕೊಂಡ ಚಲನಶೀಲ ಗುಣ, ಅಲ್ಲಮನಂತಹ ಒಂದು ಶಕ್ತಿ. ಇವನು ಇಡೀ ಜಗತ್ತಿನ ತತ್ವಜ್ಞಾನಿ, ದಾರ್ಶನಿಕರ ನಡೆನುಡಿ ಮತ್ತು ಜೀವನ ಪ್ರೀತಿಗೆ ಮಾದರಿಯಾಗಿ ಒಂದು ಹೆಜ್ಜೆ ಮುಂದೆ ನಿಲ್ಲುತ್ತಾನೆ. ಇದುವರೆಗೂ ತಿಳಿದ ಜ್ಞಾನ ವೈಶಾಲ್ಯದ ನಂತರವೂ ಅನುಭಾವಮಂಟಪದಂತಹ ಒಂದು ಸಂಸ್ಥೆಯನ್ನು ಚಾರಿತ್ರಿಕ ವಾಗಿ ಈ ಜಗತ್ತು ಕಂಡುದಿಲ್ಲ. ಅದಕ್ಕಾಗಿಯೇ ಇಂದು ಅನುಭಾವಮಂಟಪದ ಪರಿಕಲ್ಪನೆಯು ಅಚ್ಚರಿಯನ್ನೂ ಹುಟ್ಟಿಸುತ್ತದೆ. ಒಬ್ಬರಿಗೊಬ್ಬರು ಕನ್ನಡಿಯಾಗಿ ಒಬ್ಬರ

ತಪ್ಪನ್ನು ಇನ್ನೊಬ್ಬರು ತಿದ್ದುವ ಹಾಗೂ ಏಕಕಾಲಕ್ಕೆ ಒಬ್ಬರಿಂದ ಇನ್ನೊಬ್ಬರು ಗೌರವದಿಂದ ಸ್ಫೂರ್ತಿಗೊಳ್ಳುವ ರೀತಿಯು ಮನುಕುಲ ಇರುವವರೆಗೂ ಅನುಸರಿಸಬೇಕಾದ ಮೌಲ್ಯವಾಗಿದೆ.

ಇಂದು ಜನರ ಏಳಿಗೆಗಾಗಿ ಹುಟ್ಟಿಕೊಂಡಿರುವ ಸಂಸ್ಥೆಗಳು ತಮ್ಮ ನಿರ್ದಿಷ್ಟ ಗುರಿಯನ್ನು ತಲುಪಲಾಗುತ್ತಿಲ್ಲ. ಅನುಭಾವ ಮಂಟಪಕ್ಕೆ ಇರುವ ಕಾಳಜಿ, ಬದ್ಧತೆ ಇರದಿರುವುದೇ ಅದಕ್ಕೆ ಮುಖ್ಯ ಕಾರಣ. ಒಬ್ಬರಿಗೊಬ್ಬರು ಸೋಲಿಸಲು ಬೇಕಾದ ಎಲ್ಲ ಮಾರ್ಗಗಳನ್ನು ಅನುಸರಿಸುತ್ತಿರುವ ಇಂದಿನ ದಿನಗಳಲ್ಲಿ ಪ್ರೀತಿಯ ಮೂಲಕ ಸೋಲುವ ಮತ್ತು ಗೆಲ್ಲುವ ರೀತಿಯನ್ನು ಬದುಕಿ ತೋರಿದವರು ಅನುಭಾವ ಮಂಟಪದ ಶರಣರು.

ಬಹುತೇಕ ಇಂದಿನ ಚಳುವಳಿಗಳಲ್ಲೆಲ್ಲ ಮನುಷ್ಯರ ಬದುಕಿನ ಯಾವುದೋ ಒಂದು ಕ್ಷೇತ್ರವನ್ನು ಗಮನವಿಟ್ಟು ಗುರಿ ತಲುಪಿದರೆ, ಅನುಭಾವಮಂಟಪವು ಆಶ್ಚರ್ಯ ಹಾಗೂ ದಿಗ್ಭ್ರಮೆಗಳನ್ನು ಹುಟ್ಟಿಸುವಷ್ಟು ಕ್ಷೇತ್ರಗಳಲ್ಲಿ ತನ್ನ ಅನುಸಂಧಾನವನ್ನು ನಡೆಸಿದೆ. ಏಕೆಂದರೆ ಭಿನ್ನಭಿನ್ನವಾದ ಅನ್ಯಜ್ಞಾನಶಿಸ್ತುಗಳು ಬದುಕಿಗೆ ಪೂರಕಗೊಳ್ಳುವಾಗ ಆಂತರಿಕ ಸಂಬಂಧವನ್ನು ಹೊಂದಿರುತ್ತವೆಂದು ತಿಳಿದವರು ಶರಣರು.

ವಚನಕಾರರ ಮುಖ್ಯ ಒತ್ತಾಸೆ ಉತ್ತಮವಾದ, ಪರಿಶುದ್ಧವಾದ ಸಮಾಜವನ್ನು ಕಟ್ಟುವುದಾಗಿತ್ತು. ಅದು ಆ ಕಾಲದ ಅವಶ್ಯಕ ಆಶೋತ್ತರವೂ ಆಗಿತ್ತು. ಅತ್ಯಂತ ಜಡವಾದ ಜಿಡ್ಡುಗಟ್ಟಿದ್ದ ಭಾರತೀಯ ಸಾಮಾಜಿಕ ವ್ಯವಸ್ಥೆಯನ್ನು ಒಡೆದು ಆ ಮೂಲಕ ಲಿಂಗ, ಜಾತಿ, ವರ್ಗ, ವರ್ಣಭೇದವಿಲ್ಲದ ಮೌಢ್ಯರಹಿತವಾದ ಸ್ತ್ರೀ ಸಮಾನತೆಯ ಪ್ರಗತಿಪರ ಚಲನ ಶೀಲವಾದ ಪರ್ಯಾಯ ಸಮಾಜವನ್ನು ಕಟ್ಟಿದರು. ಹೀಗೆ ಪರ್ಯಾಯ ಸಮಾಜವನ್ನು ಕಟ್ಟುವಾಗ ಮನೆಯನ್ನು ಮಠವಾಗಿಸಿ ಮಠವನ್ನು ಮಹಾಮನೆಯನ್ನಾಗಿ ಮಾಡಿದರು. ಆಗ ಜಾತಿ ಮನೆಯಿಂದ ಮಹಾಮನೆಗೆ, ಬಹು ದೇವೋಪಾಸನೆಯಿಂದ ಏಕದೇವೋಪಾಸನೆಗೆ, ಸ್ಥಾವರದಿಂದ ಜಂಗಮದೆಡೆಗೆ, ಕರ್ಮದಿಂದ ಕಾಯಕದೆಡೆಗೆ, ದಾನದಿಂದ ದಾಸೋಹದೆಡೆಗೆ, ಆಧ್ಯಾತ್ಮದಿಂದ ಅನುಭಾವದೆಡೆಗೆ, ವೈದಿಕ ಸಂಸ್ಕೃತಿಯಿಂದ ಗಣಸಂಸ್ಕೃತಿ ಕಡೆಗೆ, ರಾಜಧರ್ಮದಿಂದ ಪ್ರಜಾಧರ್ಮದೆಡೆಗೆ, ವ್ಯಷ್ಟಿಯಿಂದ ಸಮಷ್ಟಿಯೆಡೆಗೆ ಕರೆದೊಯ್ಯುವ ಪರ್ಯಾಯ ಸಮಾಜವನ್ನು ಅನುಭಾವಮಂಟಪದ ಮೂಲಕ ಕಟ್ಟಲಾಯಿತು. ಇದರಿಂದ ಸಾಮಾಜಿಕ ಸಮಾನತೆಯ ಐಕ್ಯತೆ ತರಲು ಸಾಧ್ಯವಾಗಿ ಸ್ಥಾಪಿತ ಮೌಢ್ಯಗಳು ನಿರಾಕರಣೆಗೆ ಒಳಗಾದವು. ಹೀಗೆ ಸೈದ್ಧಾಂತಿಕವಾಗಿ ಪರ್ಯಾಯವ್ಯವಸ್ಥೆಯನ್ನು ಕಟ್ಟಿದರಲ್ಲದೆ ಅದನ್ನು ಕಾಯಕ ದಾಸೋಹಗಳ ಮೂಲಕ ಪ್ರಾಯೋಗಿಕತೆಗೆ ಒಳಪಡಿಸಿದರು.

ಪಾರಂಪರಿಕವಾದ ಕರ್ಮಸಿದ್ಧಾಂತಗಳ ಬದಲು ಅನುಭಾವಮಂಟಪ 'ಕಾಯಕ-ದಾಸೋಹ' ಸಂಸ್ಕೃತಿಯನ್ನು ಪರಿಚಯಿಸಿ ಅದರ ಮಹತ್ವವನ್ನು ಎತ್ತಿ ಹಿಡಿಯಿತು. ಅನುಭಾವಮಂಟಪದ ಸದಸ್ಯತ್ವಕ್ಕೆ ಕಾಯಕವೇ ಅರ್ಹತೆಯಾಗಿ ಪರಿಗಣಿಸಿದ್ದರಿಂದ ಕಾಯಕ ಕಡ್ಡಾಯವಾಯಿತು. ಅಂತೆಯೇ ಗುರು, ಲಿಂಗ, ಜಂಗಮಕ್ಕೂ ಕಾಯಕ ಅನಿವಾರ್ಯ. ಈ ಕಾಯಕಕ್ಕೆ ಸತ್ಯ, ಶುದ್ಧತೆಗಳು ಮಾನದಂಡವಾಗಿಸಿದ್ದರಿಂದ ಕಾಯಕ ಮೌಲ್ಯವಾಗಿ ಆಧ್ಯಾತ್ಮಕ್ಕೆ ಸೋಪಾನವೂ ಆಯಿತು, ಸಮತೆಗೆ ದೀಪವೂ ಆಯಿತು. ಹೀಗೆ ಕಾಯಕ ಆರ್ಥಿಕ ಪ್ರಗತಿಗೆ ನಾಂದಿಯಾಗಿ ದೇವರ ಪೂಜೆಗೂ ಮಿಗಿಲಾಯಿತು. ಆದ್ದರಿಂದ ಕಾಯಕ ಆತ್ಮಸ್ಥೈರ್ಯ(will-power)ದೊಂದಿಗೆ ಸ್ವಾಭಿಮಾನದ ಬದುಕನ್ನು ಕಟ್ಟಿಕೊಟ್ಟಿತು.

ಕಾಯಕದ ಸಾರ್ಥಕತೆ ಅಡಗಿದ್ದು ದಾಸೋಹದಲ್ಲಿ. ದಾಸೋಹವು ಸಂಗ್ರಹದ ಅಪಮೌಲ್ಯವನ್ನು ತಡೆಗಟ್ಟಿ ಅಸಂಗ್ರಹ ತತ್ವವನ್ನು ಪ್ರತಿಪಾದಿಸುತ್ತದೆ. ಸಂಗ್ರಹವಾಗುವ ಸಾಮಾಜಿಕ ಸಂಪತ್ತು ದಾಸೋಹದಿಂದ ಮಾತ್ರ ಸಮಾನ ವಿತರಣೆಯಾಗುತ್ತದೆ. ಕಾರ್ಲ್‌ಮಾರ್ಕ್ಸ್ ಹೇಳುವ ಈ 'ಮಿಗತಾಯ ಮೌಲ್ಯ' (Surpluse Volume) ದಾರಿಯಿಂದ ಮಾತ್ರ ಫಲಾನುಭವಿಗಳಿಗೆ ತಲುಪಬಲ್ಲದು. ದಾಸೋಹದಿಂದ ವ್ಯಕ್ತಿಯು ಮಾನಸಿಕ ಧೈರ್ಯವನ್ನು ಸಾಮಾಜಿಕ ಸುರಕ್ಷತೆಯನ್ನು ಅನುಭವಿಸುತ್ತಾನೆ. ಏಕೆಂದರೆ ದಾಸೋಹದ ನಿಜವಾದ ಆಶಯವೇ ಅಹಂನಿರಶನ. ಹಾಗಾಗಿ 'ಅಹಂ'ನ ಮೂಲವಾದ ದಾನದ ಬದಲಾಗಿ 'ಸೋಹಂ' ಎನಿಸದ ದಾಸೋಹವನ್ನು ಅನುಭಾವ ಮಂಟಪ ಪ್ರಸ್ತುತಪಡಿಸಿತು. ದಾಸೋಹದ ತಾತ್ವಿಕ ನೆಲೆಗಳನ್ನು ನಿಸರ್ಗಮೂಲದ ಪ್ರಾಣಿ, ಪಕ್ಷಿ, ಸಸ್ಯ, ಗಿಡ ಮರಗಳನ್ನೊಳಗೊಂಡ ಜೀವದ ರಾಶಿಗಳಲ್ಲಿ ಕಂಡುಕೊಂಡ ಶರಣರು, ಅವುಗಳನ್ನು ಮನುಷ್ಯರ ಬದುಕಲ್ಲಿ ಅಳವಡಿಸಿಕೊಳ್ಳುವಂತೆ ಪ್ರೋತ್ಸಾಹಿಸುತ್ತಾರೆ. ಹಾಗಾಗಿ ಸಾಮಾಜಿಕ ಸಮತೆ ಭ್ರಷ್ಟಾಚಾರರಹಿತವಾದ ಚಾರಿತ್ರಿಕ ಮತ್ತು ನೈತಿಕವಾದ ಸಮಾಜ ಕಟ್ಟಲು ಸಾಧ್ಯವಾದದ್ದು ಅನುಭಾವಮಂಟಪದ ದಾಸೋಹ ತತ್ವದಿಂದ.

ಅನುಭಾವಮಂಟಪವು ಒಂದು ಉತ್ತಮವಾದ ಶೈಕ್ಷಣಿಕ ಕ್ಷೇತ್ರವಾಗಿತ್ತು. ಶತಮಾನದಿಂದ ಶೋಷಣೆಗೆ ಒಳಗಾದ ಜನಸಮುದಾಯ, ಮಹಿಳೆಯರು ವಚನ-ರಚನೆಗೆ ಕೈಹಾಕಿರುವುದು ಚಾರಿತ್ರಿಕ ಅಪೂರ್ವವಾದದ್ದು. ಅನುಭಾವಮಂಟಪದ ಶಿಕ್ಷಣ 'ಅರಿವು' ಎಂಬರ್ಥದಲ್ಲಿ ಬಳಕೆಯಾಗಿ ವ್ಯಕ್ತಿಯಲ್ಲಿರುವ ಆಂತರಿಕ ಭಯ ನಿವಾರಣೆ ಮೂಲ ಕಾಳಜಿಯಾಗಿದ್ದಿತು. ವ್ಯಕ್ತಿತ್ವ ವಿಕಾಸಕ್ಕೆ ಪೂರಕವಾದ ಶಿಕ್ಷಣ ಅನುಭಾವಮಂಟಪದಲ್ಲಿ ನೀಡಲಾಯಿತು. ಪಾರಂಪರಿಕವಾದ ಶೈಕ್ಷಣಿಕ ನೀತಿ ಸಂಹಿತೆಗಳನ್ನು ಮುರಿದು ವೇದ ಓದಬಾರದ, ಕೇಳಬಾರದ, ಪಠಿಸಬಾರದ ಸಂದರ್ಭದಲ್ಲಿ ವೇದವನ್ನು ಒರೆಗೆ ಹಚ್ಚುವುದನ್ನು ಕಲಿಸಿದ್ದು, ಅನುಭಾವಮಂಟಪ.

ವ್ಯಕ್ತಿತ್ವ ವಿಕಾಸ ಕುರಿತ ಶೈಕ್ಷಣಿಕ ಆಯಾಮಗಳಿಗೆ ಚಾರಿತ್ರಿಕ, ನೈತಿಕ ಅಂಶಗಳಿಗೆ ಹೆಚ್ಚಿನ ಒತ್ತು ನೀಡಲಾಗಿತ್ತು. ಅಂತೆಯೇ ನೆಲಕ್ಕೆ ನಾಲಿಗೆ ಬಂದಂತೆ ಸಮಾಜದ ಎಲ್ಲ ಸ್ತರದ ಜನರು ಮುಖ್ಯವಾಗಿ ಮಹಿಳೆಯರು ಅನುಭಾವಮಂಟಪದ ಮೂಲಕ ಅಕ್ಷರ ಸಂಸ್ಕೃತಿಯ ದಾಸರಾದರು. ಸಾವಿರಾರು ವಚನಗಳಲ್ಲಿ ಸಾಹಿತ್ಯದ ಅಭಿವ್ಯಕ್ತಿಯಾಗಿ ಹೊರಹೊಮ್ಮಿದ್ದು ಗಮನಾರ್ಹ. ಅಲ್ಲದೆ, ವಚನಕಾರರು ತಮ್ಮ ರಚನೆಗೆ ದಿನನಿತ್ಯದ ಬದುಕನ್ನೇ ಆಕರ-ಪರಿಕರವಾಗಿ ಬಳಸಿರುವುದು ನೋಡಿದರೆ ನೆಲನಿಷ್ಠ ಬದುಕನ್ನು, ದೇಸಿ ಸಂಸ್ಕೃತಿಯನ್ನು ವಚನಗಳ ವಾಹಕವಾಗಿಸಿರುವುದು ಮಹತ್ವದ ಸಂಗತಿ.

ಅನುಭಾವಮಂಟಪದ ಶರಣರು ಪರ್ಯಾಯಸಮಾಜವನ್ನು ಕಟ್ಟುವಾಗ ಅದನ್ನು ಧಾರ್ಮಿಕ ನೆಲೆಗಳ ಮೂಲಕ ಕಟ್ಟಿದರು. ಒಂದರ್ಥದಲ್ಲಿ ವಚನಕಾರರಿಗೆ ಧರ್ಮ ಕ್ಕಿಂತ ಸಮಾಜವೇ ಮುಖ್ಯವಾದ್ದರಿಂದ ಧರ್ಮವನ್ನು ಕೂಡ ಸಾಮಾಜಿಕ ಒಳಿತಿನ ಆಶಯದಿಂದಲೇ ಕಟ್ಟಿರುವರು. ಆದ್ದರಿಂದ ಸ್ಥಾಪಿತ ಧರ್ಮದ ಪರಿಭಾಷೆಯನ್ನೇ ಬದಲಾಯಿಸಿ ಧರ್ಮವನ್ನೇ ಸರಳೀಕರಿಸಿ ಹೊಸ ವ್ಯಾಖ್ಯಾನ ಬರೆದರು. ''ದಯವೇ ಧರ್ಮದ ಮೂಲ'' ಎಂದು ಸಾರುವ ಮೂಲಕ ಎಲ್ಲ ಮನುಷ್ಯರಲ್ಲಿ ಏಕಸೂತ್ರ ದಡಿಯ ಬದುಕನ್ನು ಕಲ್ಪಿಸಿದರು. ಇಂದು ಮಾಹಿತಿ ತಂತ್ರಜ್ಞಾನಗಳ ವೇಗ ಚಲನೆಯ ಬದಲಾವಣೆಯಲ್ಲಿ ಕೂಡ ಅನೇಕ ಮೌಢ್ಯತೆಗಳು ಬೆಳೆಯುತ್ತಿವೆ. ಆದರೆ ಅನುಭಾವ ಮಂಟಪದ ಮೂಲಕ ಅತ್ಯಂತ ವೈಚಾರಿಕ, ವೈಜ್ಞಾನಿಕ ನೆಲೆಯಲ್ಲಿ ಧರ್ಮದ ತಾತ್ವಿಕ ಸಿದ್ಧಾಂತಗಳನ್ನು ರೂಪಿಸಿ ಅವುಗಳನ್ನು ಅಚ್ಚಗನ್ನಡದ ಮೂಲಕ ಜನಸಾಮಾನ್ಯರಿಗೆ ಪರಿಚಯಿಸಿದರು. ಹೀಗೆ ಅನುಭಾವಮಂಟಪದ ಕಾರ್ಯಕ್ಷೇತ್ರದ ಹರವು ವಿಶಾಲ ವಾಗಿದೆ.

ಇಂದು ವಿಶ್ವಮಾನವ ಪ್ರಜ್ಞೆಯನ್ನು ಬೆಳೆಸಬೇಕೆಂಬ ಕೂಗು ಎಲ್ಲೆಡೆ ಕೇಳಿ ಬರುತ್ತಿದೆ. ಆದರೆ ೧೨ನೆ. ಶತಮಾನಕ್ಕೇ ಸತ್ಯಶುದ್ಧತೆ, ಅಹಿಂಸೆ, ಮನುಷ್ಯ ಪ್ರೀತಿ, ಜೀವನೋತ್ಸಾಹ ಮೊದಲಾದ ಅಂಶಗಳ ಮೂಲಕ ಎಲ್ಲ ಸ್ತರದ ಜನತೆಯನ್ನು ತನ್ನ ಒಡಲಲ್ಲಿ ಇಂಬಿಟ್ಟುಕೊಂಡ ಅನುಭಾವಮಂಟಪ ವಿಶ್ವಪ್ರಜ್ಞೆಯನ್ನು ಬೆಳೆಸಿತು. ಪ್ರಕೃತಿಯ ಜೀವವಿಕಾಸದ ಹಂತದಲ್ಲಿ ಮೂಡಿ ಬಂದ ಮಾನವನು ತನಗಾಗಿ ಅಷ್ಟೇ ಅಲ್ಲದೆ ಇತರರಿಗಾಗಿ ಬದುಕ ಬೇಕೆಂದು ಹೇಳುವುದು; ತಾನು ಇತರರಿಗೆ ಮಾಡುವ ಉಪಕಾರವಲ್ಲ, ಬದಲಾಗಿ ತಾನೇ ಮಾಡಿಕೊಳ್ಳುವ ಸಹಾಯವೆಂಬಂತಹ ಜರೂರಿ ಯನ್ನು ಅನುಭಾವಮಂಟಪ ರೂಪಿಸಿಕೊಟ್ಟಿದೆ.

ಜಾಗತೀಕರಣದ ನೆರಳಲ್ಲಿ ಕೋಮುವಾದದಿಂದ ನರಳುತ್ತಿರುವ ನಮ್ಮ ಸಮಕಾಲೀನಬದುಕು ಅನುಭಾವಮಂಟಪದಂತಹ ಸಂಸ್ಥೆಗಳಿಗೆ ಮೊರೆ ಹೋಗ ಬೇಕಾದ ಅನಿವಾರ್ಯತೆ ಇದೆ. ಏಕೆಂದರೆ ಧರ್ಮದಂತಹ ಸಂಗತಿಗಳನ್ನು ಮುಖ್ಯ

ವಾಗಿಟ್ಟುಕೊಂಡು ಧಾರ್ಮಿಕ ಕಾರಣಕ್ಕಾಗಿ ನೆತ್ತರು ಹರಿಸುತ್ತಿರುವ ಜನರಿಗೆ ಧರ್ಮವೆಂದರೇನು ಎಂಬುದನ್ನು ತಿಳಿಸಬೇಕಾಗಿದೆ. ಇಂದಿನ ಜಗತ್ತಿನ ಎಲ್ಲ ಚಟುವಟಿಕೆಗಳ ಹಿಂದಿರುವ ಈ ಮನೋಭಾವಕ್ಕೆ ಧರ್ಮವೆಂದರೇನು? ಎಂದು ತಿಳಿಸಿದವರು ಮತ್ತು ತಿಳಿಸಿದಂತೆ ಬದುಕಿ, ನಡೆನುಡಿಯನ್ನು ಸಿದ್ಧಾಂತವಾಗಿಸಿದವರು ಅನುಭಾವ ಮಂಟಪದ ಶರಣರು. ಧರ್ಮ ಎನ್ನುವುದು ಅವರಿಗೆ ಕಂತೆಯಾಗದೆ ಮನುಷ್ಯ-ಮನುಷ್ಯರ ಸಂಬಂಧಗಳನ್ನು ಉತ್ತಮಗೊಳಿಸುವ ರೀತಿಯಾಗಿದೆ. ಸಂಬಂಧಗಳ ಸಾಕ್ಷಾತ್ಕಾರವೇ ಅಧ್ಯಾತ್ಮವೆಂದು ಅನುಭಾವಿಗಳು ತೋರಿಸಿಕೊಟ್ಟಿದ್ದಾರೆ. ಭೂಮಿಯಾಚೆಗಾಗಲಿ ಬಾನಿನಾಚೆಗಾಗಲಿ ಯಾವ ಅನುಭಾವವಿಲ್ಲ ಎಂಬುದನ್ನು ಅವರು ಬಲ್ಲವರಾಗಿದ್ದರು.

ಈ ಭುವಿ, ಬಾನುಗಳ ನಡುವಿನ ಬದುಕು ಅವರಿಗೆ ಮುಖ್ಯವಾಗಿರುವುದರಿಂದಲೇ ಅನುಭಾವಿಗಳು ಇಹದ ಬದುಕನ್ನು ಅದಮ್ಯವಾಗಿ ಪ್ರೀತಿಸಿ ಜೀವನ ಪ್ರೀತಿಯನ್ನು ಕಲಿಸಿದರು.

ಸಾಹಿತ್ಯದ ಸೃಷ್ಟಿಗೆ ಸಾಹಿತ್ಯೇತರ ಕಾರಣಗಳನ್ನು ಮುಖ್ಯವಾಗಿಟ್ಟುಕೊಂಡು ಬದುಕನ್ನು ಸ್ಪರ್ಶಿಸಿದವರು ಅನುಭಾವಿಗಳು. ಸೃಜನಶೀಲತೆಯೆನ್ನುವುದು ಮಿದುಳಿನಲ್ಲಿಲ್ಲ ಹೃದಯದಲ್ಲಿದೆ ಎಂದು ಮನಗಾಣಿಸಿದವರು ವಚನಕಾರರು. ಸೃಜನಶೀಲತೆಯು ಚಲನಶೀಲವಾಗಿರಬೇಕಾದರೆ ಸಾಮೂಹಿಕಬದುಕು ಮತ್ತು ಅದರ ಚಟುವಟಿಕೆಗಳು ಕೂಡ ಅವಧಾರಣಾತ್ಮಕವಾಗಿರಬೇಕೆಂಬುದನ್ನು ಅವರು ಸಾಧಿಸಿ ತೋರಿಸಿದರು. ಅಂತೆಯೇ ವಿದ್ಯೆ ಅವರಿಗೆ ಗಿಳಿಪಾಠ ಅಲ್ಲ, ಪುಟಿವ ಬದುಕಿಗೆ ಇರುವ ನೆಲವಾಗಿದೆ.

ವಿಶ್ವದ ಜೀವರುಗಳೆಲ್ಲ ತಮ್ಮ ಅವಶ್ಯಕತೆಗೆ ಚಾರಿತ್ರಿಕ ಒತ್ತಡಗಳನ್ನು ವಿವರಿಸಿಕೊಳ್ಳುತ್ತಿರುವ ಇಂದಿನ ಸಂದರ್ಭದಲ್ಲಿ ಅನುಭಾವಮಂಟಪದಂತಹ ಸಂಸ್ಥೆಯೊಂದು ನಮಗಿಂದು ಜಾಗತಿಕ ಮಟ್ಟದಲ್ಲಿ ಎದ್ದು ನಿಲ್ಲಬಲ್ಲ ಶಕ್ತಿಯನ್ನು ನೀಡುತ್ತದೆ. ಆದ್ದರಿಂದಲೇ ಅನುಭಾವಿಗಳು ಇಂದಿಗೂ ನಮ್ಮ ನಡುವೆ ನಮ್ಮೆದುರು ನಿಂತು ಮುಖಾಮುಖಿಯಾಗಬೇಕಾಗಿರುವ ಕನಸನ್ನು ನಾವು ಕಾಣಬೇಕಾಗಿದೆ.

****

ಕೊನೆಯ ಟಿಪ್ಪಣಿಗಳು

1. ಸುರೇಂದ್ರರಾವ ಬಿ.; ಕರ್ನಾಟಕ ಚರಿತ್ರೆ ಸಂ. ೨, ಪು. ೨

2. Vijnanesvara; (ವಿಜ್ಞಾನೇಶ್ವರ ಮಿತಾಕ್ಷರ) Ed. by Sri Chandravanshi, Vol. III, p-494

3. ೬ನೇ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ - ನಾಗಯ್ಯ ಜೆ. ಎಂ., ಪು. ೪

4. ಮಲ್ಲಾಪುರ ಬಿ.ವ್ಹಿ (ಸಂ), ಚನ್ನಬಸವಣ್ಣನವರ ವಚನ ಸಂಪುಟ-೨, ವ.ಸಂ. ೧೭೫೧, ಪು. ೬೪೬-೪೯

5. ಚಿದಾನಂದಮೂರ್ತಿ ಎಂ. ಮಧ್ಯಕಾಲೀನ ಕನ್ನಡ ಸಾಹಿತ್ಯದಲ್ಲಿ ಅಸ್ಪೃಶ್ಯತೆಯ ಪರಿಕಲ್ಪನೆ, ಪು. ೬೯

6. ಶಿವಗಂಗಾ ರು-ಮ್ಮಾ; ಬಸವಣ್ಣ ಮತ್ತು ಕಾರ್ಲಮಾರ್ಕ್ಸ್ ಒಂದು ತೌಲನಿಕ ಅಧ್ಯಯನ; ಅಪ್ರಕಟಿತ ಪಿಎಚ್.ಡಿ. (ಸಂಶೋಧನ) ಮಹಾಪ್ರಬಂಧ, ಪು. ೭, ಗುಲ್ಬರ್ಗಾ ವಿಶ್ವವಿದ್ಯಾಲಯ, ೧೯೯೬

7. ಮಲ್ಲೇಪುರಂ ಜಿ. ವೆಂ.- ಭಾರತೀಯ ಕಾವ್ಯಶಾಸ್ತ್ರ ಪರಿಭಾಷೆ, ಪು. ೨೭

8. ಅದೇ

9. ಬಾಲಸುಬ್ರಹ್ಮಣ್ಯ ಎನ್. (ಪ್ರ.ಸಂ.), ಇಂಗ್ಲಿಷು-ಕನ್ನಡ ನಿಘಂಟು ಸಂಪುಟ-೩, ಪು. ೩೪೬೩

10. ತಿಪ್ಪೇರುದ್ರಸ್ವಾಮಿ ಎಚ್. ಶರಣರ ಅನುಭಾವ ಸಾಹಿತ್ಯ , ಪು. ೧೬೧

11. Hastings-James Ed., Encyclopaedia of Religion and Ethics, p-83

12. William Benton Londa-Encyclopaedia of Britannica, Vol. XII, London, 1981

13. Happoled F. C.-Mysticism, New York, p-18

14. ತಿಪ್ಪೇರುದ್ರಸ್ವಾಮಿ ಎಚ್.-ಶರಣರ ಅನುಭಾವ ಸಾಹಿತ್ಯ, ಪು. ೧೬೮

15. ವಿವರಕ್ಕಾಗಿ ನೋಡಿ ; Kumaraswamy-Mirror of Veerashaivism, 1960

16. Das Gupta S. N.-Hindu Mysticism, p-17

17. ದಿವಾಕರ ರಂ. ರಾ.-ಶರಣರ ಅನುಭವ ಅನುಭಾವ ಅನುಭೂತಿ - ಪು. ೩

18. ನರಸಿಂಹಚಾರ್ಯ ಡಿ. ಎಲ್. (ಪ್ರ.ಸಂ.)-ಕನ್ನಡ-ಕನ್ನಡ ನಿಘಂಟು ಸಂ. ೧, ಪು. ೨೪೨

19. ಬಸವಾರಾಧ್ಯ ಎನ್. (ಪ್ರ.ಸಂ.)-ಕನ್ನಡ-ಕನ್ನಡ ನಿಘಂಟು ಸಂ. ೭, ಪು. ೬೭೩೬

20. ನರಸಿಂಹಾಚಾರ್ಯ ಡಿ.ಎಲ್. (ಪ್ರ.ಸಂ.)-ಕನ್ನಡ-ಕನ್ನಡ ನಿಘಂಟು ಸಂ. ೧, ಪು. ೨೪೨

21. ಅದೇ, ಪು. ೨೫೬

22. ವೆಂಕಟಸುಬ್ಬಯ್ಯ ಜಿ. (ಪ್ರ.ಸಂ.)- ಕನ್ನಡ-ಕನ್ನಡ ನಿಘಂಟು ಸಂ. ೬, ಪು. ೫೫೩೫

23. ತಿಪ್ಪೇರುದ್ರಸ್ವಾಮಿ ಎಚ್.-ಶರಣರ ಅನುಭಾವ ಸಾಹಿತ್ಯ , ಪು. ೧೬೪

24. ಮಲ್ಲಾಪುರ ಬಿ. ವ್ಹಿ. (ಸಂ)-ಪ್ರಭುದೇವರ ವಚನಸಂಪುಟ ೨ ವ.ಸಂ.೫, ಪು. ೪

25. ಕಲ್ಬುರ್ಗಿ ಎಂ.ಎಂ. (ಸಂ)-ಬಸವಣ್ಣನವರ ವ.ಸಂ. ೧, ವ.ಸಂ. ೭೧೭, ಪು. ೧೮೦

26. ವಿದ್ಯಾಶಂಕರ ಎಸ್. (ಸಂ)-ಸಿದ್ದರಾಮೇಶ್ವರ ವ.ಸಂ. ೪, ವ.ಸಂ. ೬೧೨, ಪು. ೧೬೯

27. ಪುರುಷೋತ್ತಮ ಸಿ.ಜಿ.-ಯಜುರ್ವೇದ, ಪು. ೪

28. ಆನವಟ್ಟಿ ಎಂ.ಆರ್. (ಅನು)-ಪ್ರಾಚೀನ ಭಾರತ, ಪು. ೪೩

29. ಹೆಚ್ಚಿನ ವಿವರಕ್ಕಾಗಿ ನೋಡಿ ; ಸದಾಶಿವ ಕೆ.-ಭಾರತದ ಇತಿಹಾಸ, ಪು. ೧೧೨, ೧೯೯೩

30. ತಿಪ್ಪೇರುದ್ರಸ್ವಾಮಿ ಎಚ್.-ಶರಣರ ಅನುಭಾವ ಸಾಹಿತ್ಯ ಪು. ೧೬೮

31. ನರಸಿಂಹಾಚಾರ್ಯ ಡಿ.ಎಲ್. (ಪ್ರ.ಸಂ.)- ಕನ್ನಡ-ಕನ್ನಡ ನಿಘಂಟು ಸಂ. ೧, ಪು. ೯೪೧

32. ಉಡುಪ ಯಜ್ಞನಾರಾಯಣ (ಸಂ.)-ಪುರಾಣ ಭಾರತ ಕೋಶ, ಪು. ೭೧

33. ಕರೂರ ಎನ್. ಜಿ.(ಪ್ರ.ಸಂ)-ಅಂತರಂಗದ ರತ್ನ, ಪು. ೨೨೦

34. ತಿಪ್ಪೇರುದ್ರಸ್ವಾಮಿ ಎಚ್.-ಶರಣರ ಅನುಭಾವ ಸಾಹಿತ್ಯ , ಪು. ೧೬೯

35. ಕರೂರ ಎನ್. ಜಿ.(ಪ್ರ.ಸಂ)-ಅಂತರಂಗದ ರತ್ನ, ಪು. ೨೨೨

36. ಅದೇ, ಪು. ೨೨೭

37. ಅದೇ, ಪು. ೨೨೭

38. ಸ್ವಾಮಿ ರಂಗನಾಥಾನಂದ-ಪರಿವರ್ತನಾಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು ಸಂ. ೧, ಪು. ೬೪

39. ಅದೇ

40. ವಿವರಕ್ಕಾಗಿ ನೋಡಿ ; ತಿಪ್ಪೇರುದ್ರಸ್ವಾಮಿ ಎಚ್.-ವಚನಗಳಲ್ಲಿ ವೀರಶೈವ ಧರ್ಮ, ಪು. ೬೦

41. ನಾಗಭೂಷಣಸ್ವಾಮಿ ಓ.ಎಲ್.-ಇಂದಿನ ಹೆಜ್ಜೆ, ಪು. ೭೧-೭೨

42. ಕಲ್ಬುರ್ಗಿ ಎಂ.ಎಂ. (ಸಂ.)-ಬಸವಣ್ಣನವರ ವ.ಸಂ. ೧, ವ.ಸಂ. ೯೮೧, ಪು. ೨೬೪

43. ವಿದ್ಯಾಶಂಕರ್ ಎಸ್. (ಸಂ)-ಸಂಕೀರ್ಣ ವಚನ ಸಂ-೨, ಜೇಡರ ದಾಸಿಮಯ್ಯನ ವಚನ ಸಂ. ೨೩೧, ಪು. ೨೪೨

44. ಕಲ್ಬುರ್ಗಿ ಎಂ.ಎಂ.(ಸಂ)-ಸಂಕೀರ್ಣ ವಚನಸಂಪುಟ-೧, ಅಂಬಿಗರ ಚೌಡಯ್ಯನ ವಚನ.ಸಂ. ೫೬, ಪು. ೨೨

45. ಮಲ್ಲಾಪುರ ಬಿ. ವ್ಹಿ (ಸಂ)-ಚನ್ನಬಸವಣ್ಣ ವಚನ ಸಂ. ೩, ವ.ಸಂ. ೧೫೦೧, ಪು. ೫೫೪

46. ವೀರಣ್ಣರಾಜೂರ (ಸಂ)-ಶಿವಶರಣೆ ಅಕ್ಕಮಹಾದೇವಿ ವಚನಗಳು, ವ.ಸಂ.೫, ವ.ಸಂ. ೨೨೦, ಪು. ೬೯

47. ಅದೇ, ವ.ಸಂ. ೨೨೭. ಪು. ೩೦

48. ವಿದ್ಯಾಶಂಕರ್ ಎಸ್.(ಸಂ)-ವೀರಶೈವ ಪಾರಿಭಾಷಿಕ ಪದಕೋಶ, ಪು. ೫೦೪

49. ಕಲ್ಬುರ್ಗಿ ಎಂ. ಎಂ.(ಸಂ)-ಬಸವಣ್ಣನವರ ವಚನ ಸಂ. ೧, ವ.ಸ. ೮೫೯, ಪು. ೨೨೪

50. ವೀರಣ್ಣ ರಾಜೂರ (ಸಂ)-ಶಿವಶರಣೆಯರ ವ.ಸಂ. ೫, ವ.ಸಂ. ೨೭೦, ಪು. ೮೪

51. ಕಲ್ಬುರ್ಗಿ ಎಂ.ಎಂ.(ಸಂ)-ಬಸವಣ್ಣನವರ ವ.ಸಂ. ೧, ವ.ಸಂ. ೧೨೨,ಪು. ೩೩

52. ವಿವರಕ್ಕಾಗಿ ನೋಡಿ; ನಾಗಭೂಷಣಸ್ವಾಮಿ ಓ.ಎಲ್.-ಇಂದಿನ ಹೆಜ್ಜೆ ಪು. ೬೪

53. ಕರೂರ ಎನ್. ಜಿ.(ಪ್ರ.ಸಂ)-ಅಂತರಂಗದ ರತ್ನ, ಪು. ೧೮೩

54. ತರೀಕೆರೆ ರಹಮತ್ (ಸಂ)-ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ - ೩, ಧರ್ಮ, ಪು. ೩

55. ಮಲ್ಲಾಪುರ ಬಿ.ವ್ಹಿ(ಸಂ)-ಚೆನ್ನಬಸವಣ್ಣನವರ ವ.ಸಂ. ೩, ವ.ಸಂ. ೪೯೧, ಪು. ೧೫೬

56. ಕರೂರ ಎನ್.ಜಿ.(ಪ್ರ.ಸಂ)-ಅಂತರಂಗದ ರತ್ನ, ಪು. ೧೯೩

57. ಹಿರೇಮಠ ಬಿ.ಆರ್.(ಸಂ)-ಸಮಗ್ರ ವಚನ ಸಂಪುಟ-೯, ವ.ಸಂ. ೪೨೯, ಪು. ೧೫೯

58. ಮಲ್ಲಾಪುರ ಬಿ.ವ್ಹಿ(ಸಂ)-ಚನ್ನಬಸವಣ್ಣನವರ ವಚನ, ವ.ಸಂ. ೩, ವ.ಸಂ. ೫೧೮, ಪು. ೧೬೬

59. ಕಲ್ಬುರ್ಗಿ ಎಂ.ಎಂ.(ಸಂ)-ಬಸವಣ್ಣನವರ ವಚನಗಳು ವ.ಸಂ. ೧, ವ.ಸಂ. ೯೭೯, ಪು. ೨೬೩

60. ಕಪಟರಾಳ ಕೃಷ್ಣರಾಯರು-ಶಿವಾನುಭಾವಮಂಟಪ ಐತಿಹಾಸಿಕನೆಲೆ, 'ಜಯಂತಿ' ಪತ್ರಿಕೆ ಸಂಪುಟ. ೬, ಸಂಚಿಕೆ ೮, ಪು. ೩೦೫-೦೭

61. ವೀರಣ್ಣ ರಾಜೂರ (ಸಂ.)-ಶಿವಶರಣೆಯರ ವ. ಸಂ. ೫, ನೀಲಮ್ಮನ ವಚನಗಳು, ವ.ಸಂ. ೭೩೭, ಪು. ೨೪೦ ರಿಂದ ೨೪೨

62. ಕಲ್ಬುರ್ಗಿ ಎಂ. ಎಂ. (ಸಂ.)-ಬಸವಣ್ಣನವರ ವಚನ, ಸಂ. ೧, ಸಂ. ೩೪೭, ಪು. ೮೩

63. ಅದೇ, ವ.ಸಂ. ೧೩೫, ಪು. ೩೬

64. ಅದೇ, ವ.ಸಂ. ೩೫೬, ಪು. ೮೫

65. ಅದೇ, ವ.ಸಂ. ೫೭೪, ಪು. ೧೩೨

66. ಮಲ್ಲಾಪುರ ಬಿ.ವ್ಹಿ(ಸಂ)-ಅಲ್ಲಮ ಪ್ರಭುದೇವರ ವಚನಗಳು, ವ.ಸಂ.೨, ವ.ಸಂ. ೧೪೫೯, ಪು. ೪೩೩

67. ಮಲ್ಲಾಪುರ ಬಿ.ವ್ಹಿ(ಸಂ)-ಅಲ್ಲಮದೇವರ ಸಮಗ್ರ ವಚನ ಸಂಪುಟ ೨, ವ. ಸಂ. ೮೯೨, ಪು. ೨೬೫

68. ವಿದ್ಯಾಶಂಕರ್ ಎಸ್.(ಪ್ರ.ಸಂ.)-ವೀರಶೈವ ಪಾರಿಭಾಷಿಕ ಪದಕೋಶ, ಪು. ೪೩೩

69. ಜವರೇಗೌಡ ಡಿ. (ಪ್ರ.ಸಂ.)-ವಿಶ್ವಕೋಶ ಸಂಪುಟ ೧, ಪು. ೭೨೦

70. ರವೀಂದ್ರನಾಥ ಕೆ.(ಸಂ.)-ಬಸವಯುಗದ ವಚನೇತರ ಸಾಹಿತ್ಯ, ಪು. ೪೭-೫೦

71. ಅದೇ, ಪು. ೨೫೪-೨೫೯

72. ವಿವರಕ್ಕಾಗಿ ನೋಡಿ : ಚಿದಾನಂದಮೂರ್ತಿ ಎಂ.-ಶೂನ್ಯಸಂಪಾದನೆಯನ್ನು ಕುರಿತು ಪು. ೩೫-೫೯ ಮತ್ತು ಶಿವಲಿಂಗಯ್ಯ ಕೆ.ಪಿ.-ಶೂನ್ಯಸಂಪಾದನೆ ಸೃಷ್ಟಿ-ದೃಷ್ಟಿ ಪು. ೫೫-೬೩

73. ವಿವರಕ್ಕಾಗಿ ನೋಡಿ: ಕಪಟರಾಳ ಕೃಷ್ಣರಾಯ-ಶಿವಾನುಭವ ಮಂಟಪವು ಐತಿಹಾಸಿಕವೆ ? ಕರ್ನಾಟಕ ಸಂಸ್ಕೃತಿಯ ಸಂಶೋಧನೆ, ಪು. ೧೭೦-೧೭೭

74. ರವೀಂದ್ರನಾಥ ಕೆ. (ಸಂ.)-ಬಸವಯುಗದ ವಚನೇತರ ಸಾಹಿತ್ಯ, ಪು. ೧೬೬

75. ಚಂದ್ರಶೇಖರ ಎಂ. (ಗದ್ಯಾನುವಾದ)-ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣಂ, ಸಂ. ೧, ೪/೮, ಪು. ೪೮

76. ಬಸವನಾಳ ಶಿ.ಶಿ. (ಸಂ., ಗದ್ಯಾನುವಾದ ಚಂದ್ರಶೇಖರ ಎಂ.)-ವಿರೂಪಾಕ್ಷ ಪಂಡಿತ ವಿರಚಿತ ಚೆನ್ನಬಸವ ಪುರಾಣ ೪/೧೮, ಪು. ೪/೧೮

77. ಬಸವಪುರಾಣ ಸಂಧಿ ೫, ಪದ್ಯ ೭೪; ಉಲ್ಲೇಖ : ಉತ್ತಂಗಿ ಚನ್ನಪ್ಪ-ಅನುಭಾವ ಮಂಟಪ ಐತಿಹಾಸಿಕತೆ ಮುನ್ನುಡಿ ನಂತರ

78. ಶಿವಲಿಂಗಯ್ಯ ಕೆ.ಪಿ.-ಶೂನ್ಯಸಂಪಾದನೆ ಸೃಷ್ಟಿ-ದೃಷ್ಟಿ, ಪು. ೧೬-೧೭

79. ಪುರಾಣಿಕ ಬುದ್ಧಯ್ಯ ಸ್ವಾಮಿ ಮ. (ಸಂ.)-ಪ್ರಭುದೇವರ ಪುರಾಣ ಅಧ್ಯಾಯ ೭, ಪದ್ಯ ೨೬೭

80. ಭೂಸನೂರು ಮಠ ಸಂ.ಶಿ. (ಸಂ.)-ಗೂಳೂರು ಸಿದ್ದವೀರಣ್ಣೊಡೆಯರು ಪ್ರಭುದೇವರ ಶೂನ್ಯಸಂಪಾದನೆ ಸಂ. ೧, ಪು. ೨೫೫-೨೫೬

81. ಪರಶಿವಮೂರ್ತಿ ಡಿ.ವಿ.(ಸಂ)-ಬೇಲಿಮಠದ ಶಾಸನ; ಇತಿಹಾಸ ದರ್ಶನ, ಸಂಪುಟ ೩, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು, ೧೯೮೮

82. ಗುಬ್ಬಣ್ಣವರ ಶಿವಾನಂದ, (ಪ್ರ.ಸಂ.)-ಬಸವಣ್ಣ ನಿನ್ನೆಸರು ದೆಸೆದೆಸೆಗೆ ಶಿವಮಂತ್ರ, ಪು. ೫೮-೫೯

83. ಅದೇ, ಪುಟ ೬೬

84. ಅದೇ, ಪುಟ ೧೦೦-೧೦೧

85. ಉತ್ತಂಗಿ ಚನ್ನಪ್ಪ-ಅನುಭಾವ ಮಂಟಪದ ಐತಿಹಾಸಿಕತೆ, ಪು. ೪೦

86 ವಿದ್ಯಾಶಂಕರ್ ಎಸ್.(ಸಂ)-ಚಾಮರಸನ ಪ್ರಭುಲಿಂಗ ಲೀಲೆ, ಪು. ೨೭೫

87. ಉತ್ತಂಗಿ ಚನ್ನಪ್ಪ-ಅನುಭಾವ ಮಂಟಪದ ಐತಿಹಾಸಿಕತೆ, ಪು. ೪೦-೪೧

88. ಅದೇ, ಪು. ೪೬

89. ಕಲ್ಬುರ್ಗಿ ಎಂ.ಎಂ. (ಸಂ.)- ಬಸವಣ್ಣನವರ ವಚನ ಸಂ.೧, ವ.ಸಂ. ೧೪೦೫, ಪು. ೩೯೧

90. ವಿದ್ಯಾಶಂಕರ್ ಎಸ್. (ಸಂ)-ಚಾಮರಸನ ಪ್ರಭುಲಿಂಗಲೀಲೆ ಪದ್ಯ ೧, ಪು. ೩೩೧

91. ಅದೇ, ಪದ್ಯ ೨೧, ಪು. ೩೩೮

92. ಅದೇ, ಗತಿ ೨೨, ಸೂಚನಾಪದ್ಯ ಪು. ೩೪೨

93. ಜವರೇಗೌಡ ಡಿ.(ಪ್ರ.ಸಂ)-ವಿಶ್ವಕೋಶ ಸಂಪುಟ ೧, ಪು. ೩೨೦

94. Abhishankar K.(C.Ed)-Gazzetteer of India, Karnataka State Bidar District, p-481

95. ಶರ್ಮಾ ಆರ್. ಎಸ್.-ಪ್ರಾಚೀನ ಭಾರತ, ಪು.

96. ಮ ನ ಜ ಹೊಸತು ಸಂಪುಟ ೧, ಸಂಚಿಕೆ ೨, ಪುಟ ೨೪ ರಿಂದ ೨೬, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಸೆಪ್ಟೆಂಬರ್ ೧೯೯೯

97. ಬಸವಾರಾಧ್ಯ ಎನ್. (ಪ್ರ.ಸಂ.)-ಕನ್ನಡ-ಕನ್ನಡ ನಿಘಂಟು ಸಂ. ೮, ಪು. ೨೧೦-೨೧೧

98. ಸದಾಶಿವ ಕೆ.-ಭಾರತದ ಇತಿಹಾಸ, ಪು. ೧೬೭

99. ಬೌದ್ಧಸಂಘ ಕುರಿತು ಹೆಚ್ಚಿನ ವಿವರಕ್ಕಾಗಿ ನೋಡಿ ; ರಾಜಶೇಖರಯ್ಯ ಎಂ.ಎ. - ಡಾ|| ಬಾಬಾ ಸಾಹೇಬ ಅಂಬೇಡ್ಕರ - ಬರಹಗಳು ಮತ್ತು ಭಾಷಣಗಳು, ಸಂ. ೧೧, ಭಾಗ ೨, ಪು. ೫೯೭ ರಿಂದ ೬೭೪ರವರೆಗೆ

100. ಅಷ್ಟಾಂಗ ಮಾರ್ಗಗಳು.	ಷಟ್‌ಸ್ಥಲಗಳು.
೧. ಸಮ್ಯಕ್ ದೃಷ್ಟಿ: ಅಧ್ಯಯನ ಮನನದಿಂದ ವಿವೇಕ ಜ್ಞಾನ ಸಂಪಾದಿಸುವುದು.	೧. ಭಕ್ತಸ್ಥಲ : ಮಮಕಾರ ತೊಡೆದು ಶ್ರದ್ಧೆಯಿಂದ ಬಾಳು ಸಾಗಿಸುವುದು.
೨. ಸಮ್ಯಕ್ ಸಂಕಲ್ಪ: ಉದಾತ್ತ ಧ್ಯೇಯ ಉನ್ನತ ಅಭೀಷ್ಟೆಗಳಿಂದ ಲೋಕಕಲ್ಯಾಣ ಹಿತಸಾಧನೆ ಗೈಯುವುದು.	೨. ಮಹೇಶಸ್ಥಲ : ಅಂಧಶ್ರದ್ಧೆ ಕಳೆದು ನಿಷ್ಠೆಯಿಂದ ಸಾಧನೆಯಲ್ಲಿ ತೊಡಗುವುದು.
೩. ಸಮ್ಯಕ್‌ವಾಕ್ : ಸತ್ಯ, ಸಾವ್ಯ, ಪ್ರೀತಿಯುಕ್ತವಾದ ಮಾತಾಡುವುದು.	೩. ಪ್ರಸಾದಿಸ್ಥಲ : ಸದಾ ಎಚ್ಚರಿಕೆಯಿಂದ ಪ್ರಸನ್ನವಾಗಿರುವುದು.

೪. ಸಮ್ಯಕ್ ಕರ್ಮಾಂತ : ಪ್ರಾಮಾಣಿಕವಾಗಿ ನಿಸ್ವಾರ್ಥದಿಂದ ಲೋಕೋಪಕಾರ್ಯದಲ್ಲಿ ನಿರತನಾಗಿರುವುದು.
೫. ಸಮ್ಯಕ್ ಅಜೀವಿಕಾ : ಸರ್ವಸಮ್ಮತವಾದ ಉನ್ನತ ಜೀವನ ನಡೆಸುವುದು.
೬. ಸಮ್ಯಕ್ ವ್ಯಾಯಾಮ : ಶೀಲ ಸಂವರ್ಧನೆಗೆ ದುಃಖ ನಿವಾರಣೆಗೆ ನಿರಂತರ ಪ್ರಯತ್ನ ದಲ್ಲಿರುವುದು.
೭. ಸಮ್ಯಕ್ ಸ್ಮೃತಿ : ಶ್ರದ್ಧೆಯಿಂದ ಉತ್ಸಾಹಶೀಲನಾಗಿರುವುದು.
೮. ಸಮ್ಯಕ್ ಸಮಾಧಿ : ಏಕಾಗ್ರತೆಯಿಂದ ಸಂತೃಪ್ತ ಜೀವನ ಸಾಧನೆ ಮಾಡುವುದು.

೪. ಪ್ರಾಣಲಿಂಗಸ್ಥಲ : ವಿಕಾರವಿಚಾರ ತೊರೆದು ಏಕಾಗ್ರತೆಯಲ್ಲಿ ಲೀನವಾಗುವುದು.
೫. ಶರಣಸ್ಥಲ : ಸಮರ್ಪಣ ಭಾವದೊಂದಿಗೆ ಸಂತೋಷದಿಂದ ಸಾಧನೆಗೈಯುವುದು.
೬. ಐಕ್ಯಸ್ಥಲ : ಅಹಂಭಾವ ಅಳಿದು ಸಮರಸ ಗೊಳ್ಳುವುದು.

ಕಲ್ಯಾಣರಾವ ಜಿ. ಪಾಟೀಲ(ಸಂ)-ರಚನಾ, ಪು. ೧೯೭-೧೯೮

101. ರಾಜಶೇಖರಯ್ಯ ಎ.ಎಂ. (ಸಂ)-ಡಾ. ಬಾಬಾ ಸಾಹೇಬ ಅಂಬೇಡ್ಕರ ಬರಹಗಳು ಮತ್ತು ಭಾಷಣಗಳು, ಸಂ. ೧೧, ಭಾಗ ೨, ಪು. ೬೦೩

102. ಶರ್ಮಾ ಆರ್.ಎಸ್.-ಪ್ರಾಚೀನ ಭಾರತ, ಪು. ೯೫

103. ಬಸವಾರಾಧ್ಯ ಎನ್. (ಪ್ರ.ಸಂ.)-ಕನ್ನಡ ನಿಘಂಟು, ಸಂ. ೮, ಪು. ೮೩೪೭

104. ಶಾಂತರಾಜ ಶಾಸ್ತ್ರಿ ಎಂ. (ಪ್ರ.ಸಂ.)-ಮಹಾಪುರಾಣ ಆಶ್ವಾಸ, ೩೩, ಪದ್ಯ ೭೩, ಪು. ೫೩೩

105. ಈ ತೌಲನಿಕ ಪಟ್ಟಿಯಲ್ಲಿ ಕೆಲವು ಅಂಶಗಳನ್ನು ಪ್ರೊ. ಶಿವಾನಂದ ಎಸ್. ಅವರು ಗುಲ್ಬರ್ಗ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲಾದ ''ಜೈನಪುರಾಣಗಳಲ್ಲಿ ಸಮವಸರಣ ಮಂಟಪದ ಕಲ್ಪನೆ'' ಎಂಬ ಕಿರು (ಎಂ.ಫಿಲ್.) ಸಂಶೋಧನಾ ಪ್ರಬಂಧದ ನೆರವನ್ನು ಪಡೆಯಲಾಗಿದೆ, ೧೯೯೪(ಅಪ್ರಕಟಿತ)

106. ತರೀಕೆರೆ ರಹಮತ್ (ಸಂ)-ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ಸಂ. ೩, ಧರ್ಮ, ಪು. ೪೨೮

107. ಅದೇ, ಪು. ೪೩೨

108. ಅದೇ, ಪು. ೪೩೩

109. ಅದೇ, ಪು. ೫೦೪

110. ಅದೇ, ಪು. ೫೦೫

111. ಅದೇ, ಪು. ೨೨೪

112. ಮೂರ್ತಿರಾವ ಎ.ಎನ್.-ಸಾಕ್ರೆಟೀಸನ ಕೊನೆಯ ದಿನಗಳು, ಪು. iv

113. ಅದೇ, -''-

114. ತರೀಕೆರೆ ರಹಮತ್(ಸಂ)-ಕನ್ನಡ ವಿಶ್ವವಿದ್ಯಾಲಯ, ವಿಶ್ವಕೋಶ ಸಂ. ೩, ಧರ್ಮ, ಪು. ೨೨೫

115. ಮೂರ್ತಿರಾವ ಎ.ಎನ್.-ಸಾಕ್ರೆಟೀಸನ ಕೊನೆಯ ದಿನಗಳು, ಅವತರಣಿಕೆ, ಪು. ii

116. ತರೀಕೆರೆ ರಹಮತ್-ಕನ್ನಡ ವಿಶ್ವವಿದ್ಯಾಲಯ, ವಿಶ್ವಕೋಶ ಸಂ ೩, ಧರ್ಮ ಪು. ೪೦೨

117. ಮಲ್ಲಪ್ಪ ಡಿ.-ಆಧುನಿಕ ರಾಜಕೀಯ ಸಿದ್ಧಾಂತ ದಾರ್ಶನಿಕರು, ಪು. ೧೦೪

118. ಕವಂಟೆ ಎಚ್. ಎಸ್.-ರಾಜಕೀಯ ಸಿದ್ಧಾಂತ ಮತ್ತು ರಾಜಕೀಯ ಚಿಂತಕರು, ಪು. ೨೯೮

119. ರಂಗಣ್ಣ ಎಸ್. ವಿ. ಮತ್ತು ಸಂಗಡಿಗರು (ಪ್ರ.ಸಂ.)-ಇಂಗ್ಲೀಷ್-ಕನ್ನಡ ನಿಘಂಟು, ಪು. ೨೬

120. ಕವಂಟೆ ಎಚ್. ಎಸ್.-ರಾಜಕೀಯ ಸಿದ್ಧಾಂತ ಮತ್ತು ರಾಜಕೀಯ ಚಿಂತಕರು, ಪು. ೩೦೯

121. Ranade R. D.-Pathway to God in Kannada Literature, p-6-7

****

ಸಾಂದರ್ಭಿಕ ಮತ್ತು ಸಹಾಯಕ ಪುಸ್ತಕಗಳು

ಲೇಖಕರ ಹೆಸರು	ಪುಸ್ತಕಗಳ ಹೆಸರು	ಪ್ರಕಾಶಕರು
ಅನವಟ್ಟಿ ಎಂ.ಆರ್. (ಅನು)	ಪ್ರಾಚೀನ ಭಾರತ	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಉತ್ತಂಗಿ ಚನ್ನಪ್ಪ	ಅನುಭವ ಮಂಟಪದ ಐತಿಹಾಸಿಕತೆ	ಶ್ರೀ ಮುರುಘಾಮಠ, ಮೃತ್ಯುಂಜಯ ನಗರ, ಧಾರವಾಡ
ಕಪಟರಾಳ ಕೃಷ್ಣರಾಯ	ಕರ್ನಾಟಕ ಸಂಸ್ಕೃತಿ ಸಂಶೋಧನೆ	ಉಷಾ ಸಾಹಿತ್ಯ ಮಾಲೆ, ಮೈಸೂರು
ಕರೂರ ಎನ್.ಜಿ. (ಪ್ರ.ಸಂ.)	ಅಂತರಂಗದ ರತ್ನ	ಡಾ|| ಕಾಪಸೆ ಗುರುಲಿಂಗ ಅಭಿನಂದನಾ ಸಮಿತಿ, ಹಲಸಂಗಿ
ಕಲ್ಯಾಣರಾವ ಪಾಟೀಲ (ಸಂ)	ರಚನಾ ಮೇಳಕುಂದಿ ಎಸ್.ಜಿ. ಅಭಿನಂದನಾ ಪುಸ್ತಕ	ರಚನಾ ಪಬ್ಲಿಕೇಶನ್, ಕಲಬುರ್ಗಿ
ಕಲಬುರ್ಗಿ ಎಂ.ಎಂ. (ಸಂ)	ಬಸವಣ್ಣನವರ ವಚನ ಸಂಪುಟ -1	ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು
ಕಲಬುರ್ಗಿ ಎಂ.ಎಂ. (ಸಂ)	ಸಂಕೀರ್ಣ ವಚನ ಸಂಪುಟ -1	ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು
ಕವಟಗಿ ಎಸ್.ಎಚ್.	ರಾಜಕೀಯ ಸಿದ್ಧಾಂತ-ಚಿಂತಕ ರು	ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ
ಗುಬ್ಬಣ್ಣವರ ಶಿವಾನಂದ (ಸಂ)	ಬಸವಣ್ಣ ನಿನ್ನ ಹೆಸರು ದೆಸೆದೆಸೆಗೆ ಶಿವಮಂತ್ರ	ಬಸವ ಸಮಿತಿ, ಬೆಂಗಳೂರು
ಚಂದ್ರಶೇಖರ ಎಂ. (ಸಂ)	ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣ ಸಂ-1	ವೀರಶೈವ ಅಧ್ಯಯನ ಸಂಸ್ಥೆ, ಡಂಬಳ, ಗದಗ
ಚಂದ್ರಶೇಖರ ಟಿ.ಆರ್. (ಅನು)	ಅನುಭಾವಿಗಳ ಕ್ರಾಂತಿ	ವೀರಶೈವ ಅಧ್ಯಯನ ಸಂಸ್ಥೆ, ಡಂಬಳ, ಗದಗ
ಚಿದಾನಂದ ಮೂರ್ತಿ ಎಂ.	ಮಧ್ಯಕಾಲೀನ ಕನ್ನಡ ಸಾಹಿತ್ಯ, ಅಸ್ಪೃಶ್ಯತೆಯ ಪರಿಕಲ್ಪನೆ	ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಚಿದಾನಂದ ಮೂರ್ತಿ ಎಂ.	ಶೂನ್ಯ ಸಂಪಾದನೆಯನ್ನು ಕುರಿತು	ಸ್ನೇಹ ಪ್ರಕಾಶನ, ಬೆಂಗಳೂರು
ತರೀಕೆರೆ ರಹಮತ್	ಪ್ರತಿ ಸಂಸ್ಕೃತಿ	ಕನ್ನಡ ಸಂಘ, ಕ್ರೈಸ್ಟ್ ಕಾಲೇಜ್, ಬೆಂಗಳೂರು
ತಿಪ್ಪೇರುದ್ರಸ್ವಾಮಿ ಎಚ್.	ವಚನ ಸಾಹಿತ್ಯ : ವೈಚಾರಿಕ ಅಧ್ಯಯನ	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ತಿಪ್ಪೇರುದ್ರಸ್ವಾಮಿ ಎಚ್.	ಶರಣರ ಅನುಭಾವ ಸಾಹಿತ್ಯ	ಡಿ.ವಿ.ಕೆ. ಮೂರ್ತಿ, ಮೈಸೂರು
ತಿಪ್ಪೇರುದ್ರಸ್ವಾಮಿ ಎಚ್.	ವಚನಗಳಲ್ಲಿ ವೀರಶೈವ ಧರ್ಮ	ಡಿ.ವಿ.ಕೆ. ಮೂರ್ತಿ, ಮೈಸೂರು
ದಿವಾಕರ್ ರಂ.ರಾ.	ಶರಣರ ಅನುಭವ ಅನುಭಾವ ಅನುಭೂತಿ	ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿ.ವಿ., ಧಾರವಾಡ
ದಂಡೆ ಜಯಶ್ರೀ	ವಚನಗಳಲ್ಲಿ ಶೈವ ಹಾಗೂ ವೀರಶೈವ	ಕವಿಮಾರ್ಗ ಪ್ರಕಾಶನ, ಕಲಬುರ್ಗಿ
ನಂದಿಮಠ ಎಸ್.ಸಿ. (ಮೂಲ)	ವೀರಶೈವ ಧರ್ಮ ಕೈಪಿಡಿ	ಬಸವೇಶ್ವರ ಅಧ್ಯಯನ ಪೀಠ, ಕರ್ನಾಟಕ ವಿ.ವಿ., ಧಾರವಾಡ
ನಾಗಭೂಷಣ ಸ್ವಾಮಿ ಓ.ಎಲ್.	ಇಂದಿನ ಹೆಜ್ಜೆ	ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ
ನಾಗಯ್ಯ ಜೆ.ಎಂ.	೬ನೇ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ	ವೀರಶೈವ ಅಧ್ಯಯನ ಅಕಾಡೆಮಿ, ಶ್ರೀನಾಗನೂರು ರುದ್ರಾಕ್ಷಿಮಠ, ಬೆಳಗಾವಿ
ಪುರಾಣಿಕ ಬುದ್ದಯ್ಯ ಸ್ವಾಮಿ	ಪ್ರಭುದೇವರ ಪುರಾಣ	ತೋಂಟದಾರ್ಯ ಮುದ್ರಣಾಲಯ, ಧಾರವಾಡ
ಪುರುಷೋತ್ತಮ ಸಿ.ಜಿ.	ಯಜುರ್ವೇದ	ಪ್ರಸಾರಾಂಗ, ಕರ್ನಾಟಕ ವಿ.ವಿ., ಧಾರವಾಡ
ಪೂಜಾರ ವ್ಹಿ.ಜಿ.	ಶರಣ ಸಾಹಿತ್ಯ ಮಾರ್ಗ	ವಿದ್ಯಾನಿಧಿ ಪ್ರಕಾಶನ, ಗದಗ
ಬಸವನಾಳ ಶಿ.ಶಿ. (ಸಂ)	ಚನ್ನಬಸವ ಪುರಾಣ	ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ, ಧಾರವಾಡ
ಭೂಸನೂರಮಠ ಸಂ.ಶಿ. (ಸಂ)	ಪ್ರಭುದೇವರ ಶೂನ್ಯ ಸಂಪಾದನೆ	ರಾವೂರ ಶ್ರೀಸಿದ್ದಲಿಂಗೇಶ್ವರ ಮತ್ತು ಆದವಾನಿಯ ಕಲ್ಲುಮಠದ ಅಧಿಪತಿಗಳು

ಭೂಸನೂರಮಠ ಸಂ.ಶಿ. (ಸಂ)	ಶೂನ್ಯ ಸಂಪಾದನೆಯ ಪರಾಮರ್ಶೆ	ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
ಮಲ್ಲಪ್ಪ ಟಿ.	ಆಧುನಿಕ ರಾಜಕೀಯ ಸಿದ್ಧಾಂತ ಮತ್ತು ದಾರ್ಶನಿಕರು	ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲ್ಬರ್ಗಾ
ಮಲ್ಲಾಪೂರ ಬಿ.ವ್ಹಿ. (ಸಂ)	ಅಲ್ಲಮ ಪ್ರಭುದೇವರ ವಚನ ಸಂಪುಟ-೨	ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು
ಮಲ್ಲಾಪೂರ ಬಿ. ವ್ಹಿ. (ಸಂ)	ಚನ್ನಬಸವಣ್ಣನವರ ವಚನ ಸಂಪುಟ - ೩	ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು
ಮೂರ್ತಿರಾವ ಎ.ಎನ್.	ಸಾಕ್ರೇಟೀಸನ ಕೊನೆಯ ದಿನಗಳು	ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು
ರಂಜಾನ ದರ್ಗಾ	ಬಸವ ಪ್ರಜ್ಞೆ	ಲೋಹಿಯಾ ಪ್ರಕಾಶನ, ಬಳ್ಳಾರಿ
ರವೀಂದ್ರನಾಥ ಕೆ. (ಸಂ)	ಬಸವಯುಗದ ವಚನೇತರ ಸಾಹಿತ್ಯ	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ರಾಜಶೇಖರಯ್ಯ ಎ.ಎಂ. (ಸಂ)	ಡಾ|| ಬಾಬಾಸಾಹೇಬ ಅಂಬೇಡ್ಕರರ ಬರಹಗಳು - ಭಾಷಣಗಳು ಸಂ-೧೧, ಭಾಗ-೨	ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ಲತ್ತೆ ಎಂ.ಎಸ್.	ಶರಣರ ಜೀವನ ಸಾಧನೆ	ಬಿ.ಸಿ. ಪಾಟೀಲ, ಗಂಜ, ಗುಲಬರ್ಗಾ
ವಿದ್ಯಾಶಂಕರ ಎಸ್. (ಸಂ)	ಸಿದ್ಧರಾಮೇಶ್ವರ ವಚನ ಸಂಪುಟ-೪	ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ವಿದ್ಯಾಶಂಕರ ಎಸ್. (ಸಂ)	ಸಂಕೀರ್ಣ ವಚನ ಸಂಪುಟ-೨	ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ವಿದ್ಯಾಶಂಕರ ಎಸ್. (ಸಂ)	ಚಾಮರಸನ ಪ್ರಭುಲಿಂಗಲೀಲೆ	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ವಿದ್ಯಾಶಂಕರ ಎಸ್. (ಪ್ರ.ಸಂ)	ವೀರಶೈವ ಪಾರಿಭಾಷಿಕ ಪದಕೋಶ	ಬಸವ ಸಮಿತಿ, ಬೆಂಗಳೂರು
ವೀರಣ್ಣ ಸಿ.	ಹನ್ನೆರಡನೆ ಶತಮಾನದ ಕಾಯಕ ಜೀವಿಗಳ ಚಳುವಳಿ	ನವ ಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು

ವೀರಣ್ಣ ರಾಜೂರ (ಸಂ)	ಶಿವಶರಣೆಯರ ವಚನ ಸಂಪುಟ-೫	ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
ಶರ್ಮಾ ಆರ್.ಎಸ್. (ಮೂಲ)	ಪ್ರಾಚೀನ ಭಾರತ	ನವ ಕರ್ನಾಟಕ ಪಬ್ಲಿಕೇಶನ್ಸ್, ಬೆಂಗಳೂರು
ಶಾಂತರಾಜ ಶಾಸ್ತ್ರಿಗಳು ಎ. (ಸಂ)	ಮಹಾಪುರಾಣ	ರಾಜಶಾಸ್ತ್ರೀ ಟ್ರಸ್ಟ್, ಬೆಂಗಳೂರು
ಶಿವರುದ್ರಪ್ಪ ಜಿ.ಎಸ್. (ಸಂ)	ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಸಂ-೩	ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
ಶಿವಲಿಂಗಯ್ಯ ಕೆ.ಪಿ.	ಶೂನ್ಯ ಸಂಪಾದನೆಯ ಸೃಷ್ಟಿ-ದೃಷ್ಟಿ	ಮೂರು ಸಾವಿರ ಮಠ, ಹುಬ್ಬಳ್ಳಿ
ಷೇಕ್ ಅಲಿ ಬಿ. (ಪ್ರ.ಸಂ)	ಕರ್ನಾಟಕ ಚರಿತ್ರೆ ಸಂ-೨	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಸದಾಶಿವ ಕೆ.	ಭಾರತದ ಇತಿಹಾಸ	ಪ್ರಿಯದರ್ಶಿನಿ ಪ್ರಕಾಶನ, ಮೈಸೂರು
ಸ್ವಾಮಿ ರಂಗನಾಥಾನಂದ	ಪರಿವರ್ತನಾಶೀಲ ಸಮಾಜಕ್ಕೆ ಶಾಶ್ವತ ಮೌಲ್ಯಗಳು ಸಂ-೧	ಪ್ರಸಾರಾಂಗ, ಬೆಂಗಳೂರು ವಿ.ವಿ., ಬೆಂಗಳೂರು
ಸಿದ್ದೇಶ್ವರ ಸ್ವಾಮಿಗಳು	ಅಲ್ಲಮ ಪ್ರಭುದೇವರ ವಚನ ನಿರ್ವಚನ	ಜಗದ್ಗುರುಶಿವರಾತ್ರೀಶ್ವರಗ್ರಂಥಮಾಲೆ,ಮೈಸೂರು
ಸುರೇಂದ್ರರಾವ್ ಬಿ.	ಕರ್ನಾಟಕ ಚರಿತ್ರೆ, ಸಂ-೨	ಕನ್ನಡ ವಿಶ್ವವಿದ್ಯಾಲಯ, ಹಂಪಿ
ಸೋಮನಾಥಾನಂದ	ಉಪನಿಷತ್ ಪರಿಚಯ	ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು
ಹಳಕಟ್ಟಿ ಫ.ಗು. (ಸಂ)	ಶಿವಾನುಭವ ಶಬ್ದಕೋಶ	ಸಮಾಜ ಪುಸ್ತಕಾಲಯ, ಧಾರವಾಡ
ಹಿರೇಮಠ ಬಿ.ಆರ್. (ಸಂ)	ಸಮಗ್ರ ವಚನ ಸಂಪುಟ-೯	ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು
ಹಿರೇಮಠ ಎಸ್.ಎಮ್.	ಅನುಭಾವ ಮಂಟಪ ದರ್ಶನ	ಜಗದ್ಗುರು ಅನ್ನದಾನೇಶ್ವರ ಸಂಸ್ಥಾನ ಮಠ, ಮುಂಡರಗಿ
ಹೂಗಾರ ಎಂ.ಬಿ.	ಶರಣರ ಆಂದೋಲನ ಹಾಗೂ ಹೊಸ ಸಮಾಜದ ಪರಿಕಲ್ಪನೆ	ವಿಮೋಚನಾ ಪ್ರಕಾಶನ, ಅಥಣಿ

ಕೋಶ ಹಾಗೂ ವಿಶ್ವಕೋಶಗಳು

ಉಡುಪ ಯಜ್ಞನಾರಾಯಣ	ಪುರಾಣ-ಭಾರತ ಕೋಶ	ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
ಜವರೇಗೌಡ ಡಿ. (ಸಂ)	ವಿಶ್ವಕೋಶ ಸಂ-೧	ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿ.ವಿ., ಮೈಸೂರು
ತರೀಕೆರೆ ರಹಮತ್	ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೩ ಧರ್ಮ	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ನರಸಿಂಹಾಚಾರ್ ಡಿ.ಎಲ್. (ಪ್ರ.ಸಂ)	ಕನ್ನಡ-ಕನ್ನಡ ನಿಘಂಟು ಸಂ-೧	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಬಸವಾರಾಧ್ಯ ಎನ್. (ಪ್ರ.ಸಂ.)	ಕನ್ನಡ-ಕನ್ನಡ ನಿಘಂಟು ಸಂ-೭	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಬಸವಾರಾಧ್ಯ ಎನ್. (ಪ್ರ.ಸಂ.)	ಕನ್ನಡ-ಕನ್ನಡ ನಿಘಂಟು ಸಂ-೮	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು
ಬಾಲಸುಬ್ರಹ್ಮಣ್ಯ ಎನ್. (ಪ್ರ.ಸಂ)	ಇಂಗ್ಲಿಷ್-ಕನ್ನಡ ನಿಘಂಟು ಸಂ-೩	ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು
ಮಲ್ಲೇಪುರಂ ಜಿ. ವೆಂಕಟೇಶ (ಸಂ)	ಭಾರತೀಯ ಕಾವ್ಯಶಾಸ್ತ್ರಪರಿಭಾಷೆ	ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ರಂಗಣ್ಣ ಎಸ್.ವ್ಹಿ (ಪ್ರ.ಸಂ)	ಇಂಗ್ಲಿಷ್-ಕನ್ನಡ ನಿಘಂಟು ಸಂ-೧	ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು
ರಂಗಣ್ಣ ಎಸ್.ವ್ಹಿ (ಪ್ರ.ಸಂ)	ಇಂಗ್ಲಿಷ್-ಕನ್ನಡ ನಿಘಂಟು ಸಂ-೨	ಪ್ರಸಾರಾಂಗ, ಮೈಸೂರು ವಿ.ವಿ., ಮೈಸೂರು
ಶಿವರುದ್ರಪ್ಪ ಜಿ.ಎಸ್. (ಸಂ)	ಕಾವ್ಯಾರ್ಥ ಪದಕೋಶ	ಬೆಂಗಳೂರು
ವಿದ್ಯಾಶಂಕರ್ ಎಸ್. (ಸಂ)	ವಚನ ಪರಿಭಾಷಾಕೋಶ	ಕನ್ನಡ ಸಂಸ್ಕೃತಿ ಇಲಾಖೆ, ಬೆಂಗಳೂರು
ವೆಂಕಟಸುಬ್ಬಯ್ಯ ಜಿ. (ಪ್ರ.ಸಂ)	ಕನ್ನಡ-ಕನ್ನಡ ನಿಘಂಟು, ಸಂಪುಟ-೬	ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಇಂಗ್ಲಿಷು ಕೃತಿಗಳು

Abhishankar K. (C.Ed)	Gazetteer of India Karnataka State Bidar District	Govt. Press, Bangalore
Chandravanshi (Ed)	Vijnaneshwar Vol.III	Chandravanshi, Allahabad
Das Gupta S.N.	Hindu Mysticism	Bombay
Hasting James (Ed)	Encyclopaedia of Religion and Ethics Vol. IX	New York Charles Scribners Sons
Happoled F.C.	Mysticism	New York Pengvin Books
Kumar Swamy	Mirror of Veerashaivism	Nava Kalyan Mantapa, Dharwad
Ranade R.D.	Pathway to God in Kannada Literature	Bharatiya Vidya Bhavan, Bombay
William Bentonlonda	Encyclopaedia of Britannica Vol. XII	London


****




ಕಲ್ಯಾಣ ಚಾಳುಕ್ಯರ ಲಾಂಛನ



ಕಳಚೂರಿಗಳ ಲಾಂಛನ


ಕಲ್ಯಾಣ ಚಾಲುಕ್ಯ ಚಕ್ರಾಧಿಪತ್ಯ
ಭೃಗುಕಚ್ಛ
ನವಸಾರಿಕಾ
ಕಲ್ಯಾಣ
ಓರಂಗಲ್
ಮಂಗಳವೇಢ
ಮಿರಿಂಜ್
ಬಾಗೇವಾಡಿ
ಕೂಡಲಸಂಗಮ
ಅಣ್ಣಿಗೆರೆ
ಇಟಗಿ
ಲಕ್ಕುಂಡಿ
ಕುರವತ್ತಿ
ಬನವಾಸಿ
ಹರಿಹರ
ಬಳ್ಳಿಗಾವೆ
ಅರಬ್ಬೀ ಸಮುದ್ರ
ಬಂಗಾಳ ಕೊಲ್ಲಿ
0 100 200
ಮೈಲಿಗಳು
24°
20°
16°
12°
8°
76°
80°
84°



ಕೃತಿಕಾರರ ಪರಿಚಯ



ಹೆಸರು : ಡಾ. ಬಸವರಾಜ ಬಲ್ಲೂರ

ತಾಯಿ : ನಾಗಮ್ಮ / ಮಲ್ಲಶೆಟ್ಟಿ ಉದ್ಗೀರೆ

ಶೈಕ್ಷಣಿಕ ವಿದ್ಯಾರ್ಹತೆ : ಎಂ.ಎ., ಎಂ.ಫಿಲ್,
ಪಿಎಚ್.ಡಿ,ಪಿ.ಜಿ.ವಚನ ಡಿಪ್ಲೊಮ.

ಸಂಶೋಧನೆ : ಎಂ.ಫಿಲ್: ಅನುಭವ ಮಂಟಪ ಒಂದು ಅಧ್ಯಯನ - ಸಂಶೋಧನೆ ಕಿರು ಪ್ರಬಂಧ - ೧೯೯೬, ಪಿಎಚ್.ಡಿ : ಅನುಭಾವ ಮಂಟಪ ಒಂದು ಅಧ್ಯಯನ - ಸಂಶೋಧನಾ ಮಹಾ ಪ್ರಬಂಧ - ೨೦೦೨

ಸಂಪಾದಿತ ಕೃತಿಗಳು : ದರಿನಾಡ ಸಿರಿ, ಗುರುಕುಲ ದರ್ಶನ, ಕಲ್ಯಾಣ ಪಣತೆ

ಪ್ರಕಟಿತ ಲೇಖನಗಳು : ಅನುಭವ ಮಂಟಪ ಮತ್ತು ಕಾಯಕ, ದಾಸೋಹ ತತ್ವ ಶಿಕ್ಷಣ ಹಾಗೂ ಶರಣ ಸಾಹಿತ್ಯದ ಬಗ್ಗೆ ಇವೆ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಇವರು ಬರೆದ ಹಲವಾರು ಲೇಖನಗಳು ವಿವಿಧ ಪ್ರಸಿದ್ಧ ಪತ್ರಿಕೆಗಳಲ್ಲಿ, ಪುಸ್ತಕಗಳಲ್ಲಿ ಪ್ರಕಟವಾಗಿವೆ.

ಪ್ರಬಂಧ ಮಂಡನೆ: ವಿವಿಧ ಪ್ರತಿಷ್ಠಿತ ಸಂಘ-ಸಂಸ್ಥೆಗಳು ಏರ್ಪಡಿಸಿದ ಸಭೆ, ಸಮಾರಂಭ, ವಿಚಾರ ಸಂಕಿರಣ, ಸಂಶೋಧನಾ ಕಮ್ಮಟಗಳಲ್ಲಿ ಭಾಗವಹಿಸಿ, ಉಪನ್ಯಾಸ ನೀಡುವುದರ ಜೊತೆಗೆ ಅರ್ಥಪೂರ್ಣ ಪ್ರಬಂಧಗಳನ್ನು ಮಂಡಿಸಿದ್ದಾರೆ. ಕನ್ನಡ ಭಾಷೆ, ಸಂಸ್ಕೃತಿ, ಜಾಗತೀಕರಣ, ಜನಪದ ಕಲೆ, ರಾಷ್ಟ್ರ ನಿರ್ಮಾಣ ಯುವ ಸಂಘಟನೆ. ಇವೆ ಮೊದಲಾದ ವಿಷಯಗಳಲ್ಲಿ ಹೆಚ್ಚಿನ ಆಸಕ್ತಿಯುಳ್ಳವರಾಗಿದ್ದಾರೆ.

ವಿಳಾಸ : ಡಾ. ಬಸವರಾಜ ಬಲ್ಲೂರ
"ಕೂಡಲ ಸಂಗಮ"
ನಂ. ೧೨-೧-೫೬೩/೧
ಚೆನ್ನಬಸವ ಕಾಲೋನಿ
ಕರ್ನಾಟಕ ಕಾಲೇಜ್ ಹಿಂದೆ
ದೂರವಾಣಿ: ೦೮೪೮೨-೨೯೩೧೮೨

ಕನ್ನಡ ಸಂಸ್ಕೃತಿಯ ವಿಕಾಸ ಪ್ರಕ್ರಿಯೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಕಳೆದ ತೊಂಬತ್ತು ವರ್ಷಗಳಿಂದ ತೊಡಗಿ ಕೊಂಡಿರುವ ರೀತಿ ಅನನ್ಯ. ಹತ್ತು ಹಲವಾರು ದಿಕ್ಕುಗಳಲ್ಲಿ ಹರಡಿರುವ ಪರಿಷತ್ತಿನ ಒಂದು ಮುಖ್ಯ ಕ್ರಿಯಾ ಯೋಜನೆ : ಪುಸ್ತಕ ಪ್ರಕಟನೆ.

ಪರಿಷತ್ತು ಹಮ್ಮಿಕೊಳ್ಳುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇಡೀ ಕನ್ನಡ ಕುಲಕೋಟಿಯ ಪಾಲಿಗೆ ಒಂದು ಸಾಂಸ್ಕೃತಿಕ ಹಬ್ಬವೇ. ವರ್ಷದುದ್ದಕ್ಕೂ ನಾವೆಲ್ಲ ಮೆಲುಕು ಹಾಕುವ ಸಂದರ್ಭವಿದು.

ಬೀದರಿನಲ್ಲಿ ನಡೆಯಲಿರುವ ಅಖಿಲ ಭಾರತ ೭೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸವಿನೆನಪಿಗೆಂದು ಪರಿಷತ್ತು ಹೊರತಂದಿರುವ ೭೮ ಪುಸ್ತಕಗಳು, ಮುಖ್ಯವಾಗಿ ಸೃಜನೇತರ ವಲಯದ ವೈವಿಧ್ಯಮಯ ವಿಷಯಗಳನ್ನು ಒಳಗೊಂಡಿದ್ದು, ಕನ್ನಡ ಸಾಹಿತ್ಯ ಭಂಡಾರಕ್ಕೆ ಅಮೂಲ್ಯ ಸೇರ್ಪಡೆಗಳಾಗಿವೆ.



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೧೮